ವಿಜಯನಗರ ಅಧ್ಯಯನ

ಸಂಪುಟ 2

ಹಂಪಿ ಉತ್ಸವ 1996ರಲ್ಲಿ ಮಂಡಿಸಿದ ಪ್ರಬಂಧಗಳು

ಸಂಪಾದಕರು

ಎಂ.ಎಲ್. ಶಿವಶಂಕರ

ಚನ್ನಬಸಪ್ಪ ಎಸ್. ಪಾಟೀಲ



ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

1997

ವಿಜಯನಗರ ಅಧ್ಯಯನ

ಸಂಪುಟ 2

ಹಂಪಿ ಉತ್ಸವ 1996ರಲ್ಲಿ ಮಂಡಿಸಿದ ಪ್ರಬಂಧಗಳು

ಕರ್ನಾಟಕ ಸರ್ಕಾರ

ವಿಜಯನಗರ ಅಧ್ಯಯನ

ಸಂಪುಟ 2

ಹಂಪಿ ಉತ್ಸವ 1996ರಲ್ಲಿ ಮಂಡಿಸಿದ ಪ್ರಬಂಧಗಳು

ಸಂಪಾದಕರು

ಎಂ.ಎಲ್. ಶಿವಶಂಕರ

ಚನ್ನಬಸಪ್ಪ ಎಸ್. ಪಾಟೀಲ

1997

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಪ್ರಥಮ ಮುದ್ರಣ: 1000 ಪ್ರತಿಗಳು

ಬೆಲೆ: ರೂ. 85.00

ಡಿ.ಟಿ.ಪಿ. ಅಕ್ಷರ ಜೋಡಣೆ: ಕಾಂಪ್ಟೆಕ್ ಕಂಪ್ಯೂಟರ್ ಸಿಸ್ಟಂಮ್ಸ್, ಮೈಸೂರು
ಮುದ್ರಣ: ಎಫ್‌ಓಎಸ್‌ಟಿಆಯ್‌ಎಸ್, ಸಿಎಫ್‌ಟಿಆರ್‌ಆಯ್, ಮೈಸೂರು

ಪ್ರಸ್ತಾವನೆ

''ಕೆರೆಯಂ ಕಟ್ಟಿಸು ಬಾವಿಯಂ ಸವಸು ದೇವರಗಾರಮಂ
ಮಾಡಿಸಜ್ಜೆರೆಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯಿ
ನಂಬಿದರ್ಗ್ಗೆರೆವೆಟ್ಟಾಗಿರು ಶಿಷ್ಟರಂ ಪೊರೆಯನುತ್ತಿಂತೆಲ್ಲವಂ
ಪಿಂದೆ ತಾಂಯೆರದಲ್ಪಾಲೆರವಂದು ತೊಟ್ಟು ಕಿವಿಯೊಳ್
ಲಕ್ಷ್ಮೀಧರಾಮಾತ್ಯನಾ ।''

ಹೀಗೆ ಹಾಡಿದವಳು ವಿಜಯನಗರ ಅರಸ ಪ್ರೌಢ ಪ್ರತಾಪ ದೇವರಾಯನ ಮಂತ್ರಿಯಾದ ಲಕ್ಷ್ಮೀಧರನ ತಾಯಿ. ಲಕ್ಷ್ಮೀಧರನು ಮಗುವಾಗಿದ್ದಾಗಲೇ ಆತನು ಮಾಡಬೇಕಾದ ಜನಪರ ಕೆಲಸಗಳತ್ತ ಗಮನ ಸೆಳೆದಳೆಂದು ಹಂಪಿಯಲ್ಲಿರುವ ಶಾಸನವೊಂದು ತಿಳಿಸುತ್ತದೆ. ವಿಜಯನಗರ ಅರಸರು, ಮಂತ್ರಿಗಳು, ಅಧಿಕಾರಿಗಳು ಮತ್ತು ಇತರರು ಅನೇಕ ಜನಪರ ಕಾರ್ಯಗಳನ್ನು ಕೈಗೊಂಡಿದ್ದಾರೆ. ಆದರೆ ಇವೆಲ್ಲವೂ ಕಾಲಾಂತರದಲ್ಲಿ ಈಗಿನ ಹಾಳು-ಹಂಪೆಯಲ್ಲಿ ಲೀನವಾಗಿವೆ.

ವಿಜಯನಗರದಲ್ಲಿ ಗತವೈಭವವು ಕಣ್ಣಿಗೆ ಗೋಚರಿಸುವಂತೆ ಮಾರ್ಪಡಿಸುವುದಕ್ಕಾಗಿ ಕರ್ನಾಟಕ ಸರ್ಕಾರವು ಹಂಪಿ ಪುನರುತ್ಥಾನ ಯೋಜನೆಯನ್ನು ಪ್ರಾರಂಭಿಸಿದೆ. ಈ ಯೋಜನೆಯಡಿಯಲ್ಲಿ ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ವ್ಯಾಪಕವಾದ ಸಂಶೋಧನೆ, ಉತ್ಖನನ ಮತ್ತು ಸ್ಮಾರಕಗಳ ಸಂರಕ್ಷಣೆಯನ್ನು ಮಾಡುತ್ತಿದೆ. ಸಂಶೋಧನೆಯ ಫಲಿತಾಂಶವನ್ನು ವಿವಿಧ ಸಂಪುಟಗಳಲ್ಲಿ ಪ್ರಕಟಿಸಲಾಗುತ್ತಿದೆ.

ಹಂಪಿಯ ಸ್ಮಾರಕಗಳ ಪುನರುಜ್ಜೀವನವಾಗುವಂತೆ ಕರ್ನಾಟಕ ಸರ್ಕಾರವು ಹಂಪಿ ಉತ್ಸವವನ್ನು ಪ್ರತಿ ವರ್ಷ ಮೂರು ದಿನಗಳ ಕಾಲ ಆಚರಿಸುತ್ತಿದೆ. ಈ ಉತ್ಸವದ ಅಂಗವಾಗಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ವಿಜಯನಗರ ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ವಿಚಾರ ಸಂಕಿರಣವನ್ನು ನಡೆಸುತ್ತಿದೆ. ಕಳೆದ ವರ್ಷ ಅಂದರೆ 1996 ನವೆಂಬರ್ 3 ಮತ್ತು 4 ರಂದು ನಡೆದ ವಿಚಾರ ಸಂಕಿರಣದಲ್ಲಿ ಮಂಡಿಸಲಾದ 26 ಪ್ರಬಂಧಗಳನ್ನು ''ವಿಜಯನಗರ ಅಧ್ಯಯನ: ಸಂಪುಟ 2'' ರಲ್ಲಿ ಪ್ರಕಟಿಸಲಾಗಿದೆ. ಈ ಸಂಪುಟವನ್ನು ವಿದ್ವಾಂಸರ ಮತ್ತು ಸಾರ್ವಜನಿಕರ ಮುಂದಿಡಲು ಸಂತೋಷ.

ಈ ಪುಸ್ತಕದಲ್ಲಿಯ ಪ್ರಬಂಧಗಳನ್ನು ಶ್ರೀಮತಿ ಎಂ. ಚಂದ್ರಮ್ಮ, ಶ್ರೀಮತಿ ಕೆ.ಆರ್. ಶೋಭಾ ಮತ್ತು ಶ್ರೀ ಎನ್. ಸುಬ್ರಹ್ಮಣ್ಯ ಅವರು ಅಂದವಾಗಿ ಬೆರಳಚ್ಚು ಮಾಡಿದ್ದಾರೆ. ಕೇಂದ್ರೀಯ ಆಹಾರ ವಿಜ್ಞಾನ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ವಿ. ಪ್ರಕಾಶ್ ಅವರು ಈ ಪುಸ್ತಕದ ಮುದ್ರಣವನ್ನು ಸಂತೋಷದಿಂದ ಒಪ್ಪಿ, ಶ್ರೀ ಕೆ.ಎ. ರಂಗನಾಥ, ಮುಖ್ಯಸ್ಥರು, ಎಫ್ಓಎಸ್ಟಿಆಯ್ಎಸ್ ಮತ್ತು ಶ್ರೀ ಎಸ್. ಉಮೇಶ್, ತಾಂತ್ರಿಕ ಅಧಿಕಾರಿ ಅವರಿಂದ ಅತ್ಯಂತ ಕಡಿಮೆ ಸಮಯದಲ್ಲಿ ಆಕರ್ಷಕವಾಗಿ ಮುದ್ರಿಸಿಕೊಟ್ಟಿರುವರು. ಈ ಎಲ್ಲ ಮಹನೀಯರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಎಂ.ಎಲ್. ಶಿವಶಂಕರ
ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ
ನಿರ್ದೇಶನಾಲಯ

ಮೈಸೂರು
21-10-97

ಪ್ರಬಂಧ ಮಂಡಿಸಿದವರು

1. ಡಾ. ಎನ್. ಸರಸ್ವತಿ
ಅಧ್ಯಾಪಕರು, ಇತಿಹಾಸ ವಿಭಾಗ,
ಮಾನಸ ಗಂಗೋತ್ರಿ,
ಮೈಸೂರು-570 006.

2. ಶ್ರೀ ಆರ್.ಎಚ್. ಕುಲಕರ್ಣಿ
ಸಂಶೋಧಕರು,
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ,
ಮಾನಸ ಗಂಗೋತ್ರಿ,
ಮೈಸೂರು-570 006.

3. ಶ್ರೀ ಲ.ನ. ಶಾಸ್ತ್ರಿ
160/1, ನಾರಾಯಣಶಾಸ್ತ್ರಿ ರಸ್ತೆ,
ಮೈಸೂರು-570 024.

4. ಶ್ರೀ ಟಿ.ಎಂ. ಮಂಜುನಾಥಯ್ಯ
ಪುರಾತತ್ವ ಸಹಾಯಕರು,
ಹಂಪಿ ಸಂಶೋಧನಾ ಯೋಜನೆ,
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ
ನಿರ್ದೇಶನಾಲಯ,
ಕಮಲಾಪುರ-583 221, ಬಳ್ಳಾರಿ ಜಿಲ್ಲೆ.

5. ಡಾ. ಚನ್ನಬಸಪ್ಪ ಎಸ್. ಪಾಟೀಲ
ಉಪ ನಿರ್ದೇಶಕರು,
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ
ನಿರ್ದೇಶನಾಲಯ,
ಅರಮನೆ ಆವರಣ, ಮೈಸೂರು-570 001.

6. ಶ್ರೀ ಸಿ.ಟಿ.ಎಂ. ಕೊಟ್ರಯ್ಯ
340, ಎಂ ಬ್ಲಾಕ್, ಕುವೆಂಪುನಗರ,
ಮೈಸೂರು-570 023.

7. ಡಾ. ಶ್ರೀನಿವಾಸ ವಿ. ಪಾಡಿಗಾರ
ರೀಡರ್,
ಪ್ರಾಚೀನ ಭಾರತೀಯ ಇತಿಹಾಸ ಮತ್ತು
ಶಾಸನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ,
ಪಾವಟೆನಗರ, ಧಾರವಾಡ-580 003.

8. ಶ್ರೀ ಡಬ್ಲ್ಯು.ವಿ.ಎಸ್. ನರಸಿಂಹಮ್
ಅಸಿಸ್ಟಂಟ್ ಆರ್ಕಿಯಾಲಜಿಸ್ಟ್
ಭಾರತೀಯ ಪುರಾತತ್ವ ಸರ್ವೇಕ್ಷಣ,
ಕಮಲಾಪುರ-583 221, ಬಳ್ಳಾರಿ ಜಿಲ್ಲೆ.

9. ಡಾ. ಎಂ.ಬಿ. ಪದ್ಮ
ಪ್ರಾಂಶುಪಾಲರು,
ಮಹಾರಾಜ ಕಾಲೇಜು,
ಮೈಸೂರು-570 005.

10. ಡಾ. ಬಿ. ವಸಂತ ಶೆಟ್ಟಿ
ಪ್ರಾಂಶುಪಾಲರು,
ಎಸ್.ಎಂ.ಎಸ್. ಕಾಲೇಜು,
ಬ್ರಹ್ಮಾವರ-576 213, ದಕ್ಷಿಣ ಕನ್ನಡ ಜಿಲ್ಲೆ.

11. ಡಾ. ಎಂ.ಎಸ್. ಕೃಷ್ಣಮೂರ್ತಿ
ಪ್ರಾಧ್ಯಾಪಕರು,
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ,
ಮಾನಸ ಗಂಗೋತ್ರಿ,
ಮೈಸೂರು-570 006.

12. ಶ್ರೀ ಹೆಚ್.ಟಿ. ತಳವಾರ್
ಸಹಾಯಕ ನಿರ್ದೇಶಕರು,
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ
ನಿರ್ದೇಶನಾಲಯ,
ಅರಮನೆ ಆವರಣ,
ಮೈಸೂರು-570 001.

13. ಡಾ. ವಿ.ಎಸ್. ಸಂಪತ್ಕುಮಾರಾಚಾರ್ಯ
927/1, 'ಶ್ರೀಘನಶ್ಯಾಂ'
1ನೇ ಮುಖ್ಯ ರಸ್ತೆ, ಲಕ್ಷ್ಮೀಪುರಂ,
ಮೈಸೂರು-570 004.

14. ಪ್ರೊ. ಎಂ.ವಿ. ಶ್ರೀನಿವಾಸ
ದಾರಿದೀಪ ಹೈಸ್ಕೂಲ್ ಪಕ್ಕ,
ಬೋಗಾದಿ ಬಡಾವಣೆ, 2ನೇ ಹಂತ,
ಮೈಸೂರು-570 006.

15. ಡಾ. ಬಿ.ಎಸ್.ನಾಗರಾಜ್
ಪ್ರಾಂಶುಪಾಲರು,
ಕಮಲಾ ನೆಹರು ಕಾಲೇಜು,
ಶಿವಮೊಗ್ಗ.

16. ಡಾ. ಸಿ.ಎಸ್. ವಾಸುದೇವನ್
ಅಧ್ಯಾಪಕರು, ಪುರಾತತ್ವ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ, ಕಮಲಾಪುರ-583 221.
ಬಳ್ಳಾರಿ ಜಿಲ್ಲೆ.

17. ಡಾ. ಸಿ. ಮಹಾದೇವ
ರೀಡರ್, ಪುರಾತತ್ವ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ, ಕಮಲಾಪುರ-583 221.
ಬಳ್ಳಾರಿ ಜಿಲ್ಲೆ.

18. ಡಾ. ದೇವರಕೊಂಡಾರೆಡ್ಡಿ
ರೀಡರ್, ಶಾಸನಶಾಸ್ತ್ರ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ, ಕಮಲಾಪುರ-583 221.
ಬಳ್ಳಾರಿ ಜಿಲ್ಲೆ.

19. ಡಾ. ಕೆ. ವೆಂಕಟೇಶ್
ಕ್ಯುರೇಟರ್,
ಕೆಳದಿ ವಸ್ತುಸಂಗ್ರಹಾಲಯ,
ಕೆಳದಿ-577 401, ಸಾಗರ ತಾಲೂಕ,
ಶಿವಮೊಗ್ಗ ಜಿಲ್ಲೆ.

20. ಡಾ. ಸೂರ್ಯನಾಥ ಕಾಮತ್
798, 'ಕೀರ್ತಿ' 11ನೇ ಮುಖ್ಯರಸ್ತೆ, 6ನೇ ತಿರುವು,
ಹನುಮಂತನಗರ,
ಬೆಂಗಳೂರು-560 019.

21. ಡಾ. ಎ. ಸತ್ಯನಾರಾಯಣ
627, 3ನೇ ಮುಖ್ಯರಸ್ತೆ,
ಕೆಂಗೇರಿ ಉಪನಗರ,
ಬೆಂಗಳೂರು-560 060.

22. ಪ್ರೊ. ಎಚ್. ಶ್ರೀಶೈಲ ಆರಾಧ್ಯ
ಸರ್ಕಾರಿ ವಿಜ್ಞಾನ ಕಾಲೇಜು,
ಚಿತ್ರದುರ್ಗ.

23. ಡಾ. ಕೆ.ಜಿ. ವಸಂತಮಾಧವ
ಇತಿಹಾಸ ಪ್ರಾಧ್ಯಾಪಕ (ICHR)
'ಆರಾಧನಾ', ಪಾವಂಜೆ,
ಹಳೆಯಂಗಡಿ-574 144.
ದಕ್ಷಿಣ ಕನ್ನಡ ಜಿಲ್ಲೆ.

24. ಡಾ. ಕೆ.ಎಸ್. ಶಿವಣ್ಣ
ಪ್ರಾಧ್ಯಾಪಕರು, ಇತಿಹಾಸ ವಿಭಾಗ,
ಮಾನಸ ಗಂಗೋತ್ರಿ, ಮೈಸೂರು-570 006.

25. ಶ್ರೀ ವೈ.ಆರ್. ಪಾಟೀಲ
ಡಿ.ಐ.ಜಿ. ಆಫ್ ಪೊಲೀಸ್,
ದಾವಣಗೆರೆ ವಲಯ,
ದಾವಣಗೆರೆ.

26. ಡಾ. ಸಿಂದಗಿ ರಾಜಶೇಖರ
ಪ್ರಾಧ್ಯಾಪಕರು, ಇತಿಹಾಸ ಮತ್ತು ಪುರಾತತ್ವ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ,
ಪಾವಟೆನಗರ, ಧಾರವಾಡ-580 003.

ಪರಿವಿಡಿ

ಸಂಕ್ಷೇಪಗಳು

ಆರಿಇಂಎ	:	ಆನುವಲ್ ರಿಪೋರ್ಟ್ ಆನ್ ಇಂಡಿಯನ್ ಎಪಿಗ್ರಾಫಿ
ಆರಿಎ	:	ಆನುವಲ್ ರಿಪೋರ್ಟ್ ಆನ್ ಎಪಿಗ್ರಾಫಿ
ಆರಿಸೌಇಂಎ	:	ಆನುವಲ್ ರಿಪೋರ್ಟ್ ಆನ್ ಸೌತ್ ಇಂಡಿಯನ್ ಎಪಿಗ್ರಾಫಿ
ಇಂಆರಿ	:	ಇಂಡಿಯನ್ ಆರ್ಕಿಯಾಲಜಿ - ಎ ರಿವ್ಯೂ
ಇಂಎಂ	:	ಇಂಡಿಯನ್ ಎಂಟಿಕ್ವೇರಿ
ಎಇಂ	:	ಎಪಿಗ್ರಾಫಿಯ ಇಂಡಿಕ
ಎಕ	:	ಎಪಿಗ್ರಾಫಿಯ ಕರ್ನಾಟಿಕ
ಕಇ	:	ಕರ್ನಾಟಕ ಇನ್ಸ್‌ಕ್ರಿಪ್ಶನ್ಸ್
ಕ್ವಾಜಮಿಸೊ	:	ಕ್ವಾರ್ಟರ್ಲಿ ಜರ್ನಲ್ ಆಫ್ ದಿ ಮಿಥಿಕ್ ಸೊಸಾಯಿಟಿ
ಜಎಸೊಇಂ	:	ಜರ್ನಲ್ ಆಫ್ ದಿ ಎಪಿಗ್ರಾಫಿಕಲ್ ಸೊಸಾಯಿಟಿ ಆಫ್ ಇಂಡಿಯ
ಜಬಾಬ್ರಾಂರಾಏಸೊ	:	ಜರ್ನಲ್ ಆಫ್ ದಿ ಬಾಂಬೆ ಬ್ರಾಂಚ್ ಆಫ್ ದಿ ರಾಯಲ್ ಏಷಿಯಾಟಿಕ್ ಸೊಸಾಯಿಟಿ
ಮೈಆರಿ	:	ಆನುವಲ್ ರಿಪೋರ್ಟ್ ಆಫ್ ದಿ ಮೈಸೂರು ಆರ್ಕಿಯಾಲಜಿಕಲ್ ಡಿಪಾರ್ಟ್‌ಮೆಂಟ್
ವಿಪ್ರೊರೀ	:	ವಿಜಯನಗರ: ಪ್ರೊಗ್ರೆಸ್ ಆಫ್ ರೀಸರ್ಚ್
ಸೌಇಂಇ	:	ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಶನ್ಸ್

1. ವಿಜಯನಗರ ಕಾಲದ ಶಿಲ್ಪದಲ್ಲಿ ಸ್ತ್ರೀಯರು

ಎನ್. ಸರಸ್ವತಿ

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಮಹಿಳೆ ಯಾವ ರೀತಿ ಎಲ್ಲಾ ರಂಗಗಳಲ್ಲೂ ಪಾತ್ರವಹಿಸುತ್ತಿದ್ದಳು ಎಂಬುದನ್ನು ನಾವು ಶಿಲ್ಪಗಳ ಮೂಲಕ ತಿಳಿಯಬಹುದು. ಹಂಪಿಯ ಹಜಾರ ರಾಮಸ್ವಾಮಿ ದೇವಾಲಯ, ವಿಜಯ ವಿಠಲಸ್ವಾಮಿ ದೇವಾಲಯ, ಅಚ್ಯುತರಾಯ ದೇವಾಲಯ, ವಿರೂಪಾಕ್ಷ ದೇವಾಲಯ, ಮಹಾನವಮಿ ದಿಬ್ಬಗಳಲ್ಲಿರುವ ಶಿಲ್ಪ ಕಲಾಕೃತಿಗಳು ಮಹಿಳೆಯರನ್ನು ಹೋರಾಟಗಾರ್ತಿಯರಾಗಿ, ಕುಸ್ತಿಪಟುಗಳಾಗಿ, ಅಂಗರಕ್ಷಕರಾಗಿ, ನೃತ್ಯಗಾರ್ತಿಯರಾಗಿ, ಸಂಗೀತಗಾರ್ತಿಯರಾಗಿ, ಹಬ್ಬ ಹರಿದಿನ ಆಚರಣೆ ಮಾಡುವುದು ಇತ್ಯಾದಿಯಾಗಿ ಚಿತ್ರಿಸಲಾಗಿದೆ. ಇದರೊಂದಿಗೆ ಅವರ ಉಡುಪು, ಒಡವೆ, ಸೌಂದರ್ಯವರ್ಧಕಗಳು, ಅಲಂಕಾರ ಮುಂತಾದವುಗಳ ಅಧ್ಯಯನವನ್ನು ಇಲ್ಲಿ ಮಾಡಲಾಗಿದೆ.

ಹೋರಾಟಗಾರ್ತಿಯಾಗಿ ಮಹಿಳೆ:

ನಾವು ವಿಜಯನಗರ ಸಾಮ್ರಾಜ್ಯ ಕಾಲದ ಶಿಲ್ಪಗಳನ್ನು, ಕೂಲಂಕಷವಾಗಿ ಅವಲೋಕಿಸಿದಾಗ ಮಹಿಳೆಯರಿಗೆ ಕುದುರೆ ಸವಾರಿ ಗೊತ್ತಿದ್ದುದಲ್ಲದೆ, ಆನೆ ಸವಾರಿ ಮತ್ತು ಒಂಟೆ ಸವಾರಿ ಸಹ ಗೊತ್ತಿತ್ತು ಎಂಬುದು ತಿಳಿಯುತ್ತದೆ. ಹಜಾರರಾಮ ದೇವಾಲಯದ ಪ್ರಾಕಾರದ ಮೇಲಿನ ಒಂದು ಶಿಲ್ಪದಲ್ಲಿ ಮಹಿಳೆ ಕುದುರೆಯ ಮೇಲೆ ಕುಳಿತಿದ್ದಾಳೆ. ಕುದುರೆಯ ಮುಂದಿರುವ ಮತ್ತೊಬ್ಬ ಮಹಿಳೆ ಉದ್ದವಾದ ಭರ್ಜಿಯನ್ನು ಹಿಡಿದಿದ್ದಾಳೆ (ಚಿತ್ರ 1). ಅಲ್ಲಿರುವ ಮತ್ತೊಂದು ಶಿಲ್ಪದಲ್ಲಿ ಆನೆಗಳ ಸಾಲು ಇದೆ. ಪ್ರತಿಯೊಂದು ಆನೆಯ ಮೇಲೆ ಒಬ್ಬ ಪುರುಷ ಮತ್ತು ಅವನ ಹಿಂದುಗಡೆ ಮಹಿಳೆ ಕುಳಿತಿದ್ದಾರೆ (ಚಿತ್ರ 2). ಈ ಶಿಲ್ಪಗಳಿಂದ ಮಹಿಳೆಯರು ಒಳ್ಳೆಯ ಸವಾರರಾಗಿದ್ದರೆಂಬುದು ತಿಳಿಯುತ್ತದೆ. ಬೆಂಗಳೂರಿನ ವಸ್ತು ಸಂಗ್ರಹಾಲಯದಲ್ಲಿರುವ ಒಂದು ಶಿಲ್ಪದಲ್ಲಿ ಮಹಿಳೆಯರು ಯುದ್ಧರಂಗಕ್ಕೆ ಹೋಗುವ ದೃಶ್ಯವಿದೆ. ಇಲ್ಲಿ ಶಿಲ್ಪಿಯು ಯುದ್ಧಕ್ಕೆ ಅವಶ್ಯಕವಾದ ಬಲ ಮತ್ತು ಯುದ್ಧ ಪ್ರಾವೀಣ್ಯತೆಗಿಂತ ಸ್ತ್ರೀಯರ ಸೌಂದರ್ಯ, ಅವರ ಉಡುಪು, ಆಭರಣ ಮುಂತಾದವುಗಳನ್ನು ಸುಂದರವಾಗಿ ಚಿತ್ರಿಸುವ ಕಡೆ ಹೆಚ್ಚು ಗಮನ ಕೊಟ್ಟಿದ್ದಾನೆ (ಚಿತ್ರ 3).


ಮಹಿಳೆಯರು ಮತ್ತು ಮಲ್ಲಯುದ್ಧ:

ವಿಜಯನಗರಕ್ಕೆ ಭೇಟಿ ನೀಡಿದ ಪೋರ್ಚುಗೀಸ್ ಪ್ರವಾಸಿ ಫರ್ನಾವೊ ನ್ಯೂನಿಜ್‌ನು ಮಹಿಳೆಯರಿಗೆ ಮಲ್ಲಯುದ್ಧ ಗೊತ್ತಿತ್ತೆಂದು ತಿಳಿಸುತ್ತಾನೆ. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿರುವ ವೀರಗಲ್ಲಿನ ಮೇಲಿನ ಕ್ರಿ.ಶ. 1446ರ ಶಾಸನವು ಈ ಅಂಶವನ್ನು ದೃಢೀಕರಿಸುತ್ತದೆ. ನಾಗಗೌಡನ ಮಗ ಮಾದಿಗೌಡನು ಕುಸ್ತಿಯಾಡುತ್ತಿರುವಾಗ ಮರಣಹೊಂದಿ ಸ್ವರ್ಗ ಸೇರಿದನು. ಆತನ ಮಗಳು ಹರಿಯಕ್ಕ ತನ್ನ ತಂದೆಯನ್ನು ಕೊಂದ ಕುಸ್ತಿಪಟುಗಳೊಂದಿಗೆ ಕಾದು ತಾನೂ ಸ್ವರ್ಗ ಸೇರಿದಳೆಂದು ಶಾಸನವು ತಿಳಿಸುತ್ತದೆ.[1] ಈ ಹರಿಯಕ್ಕನ ವೀರಗಲ್ಲನ್ನು ಅವರ ಚಿಕ್ಕಪ್ಪ ಚೆನ್ನ ನಿಲ್ಲಿಸಿದನು. ವೀರಗಲ್ಲಿನ ಮೇಲಿನ ಶಿಲ್ಪದ ಬಲಭಾಗದಲ್ಲಿ ಒಬ್ಬ ಕುಸ್ತಿಪಟು ನಿಂತಿದ್ದಾನೆ. ಅವನ ಎದುರಿಗೆ ನಿಂತಿರುವ ಹರಿಯಕ್ಕ ಎಡಗೈಯಲ್ಲಿ ಅವನ ಜುಟ್ಟು ಹಿಡಿದು ಬಲಗೈಯಲ್ಲಿಯ ಖಡ್ಗದಿಂದ ಅವನನ್ನು ಇರಿಯುತ್ತಿದ್ದಾಳೆ.[2] ಹರಿಯಕ್ಕ ವಿಜಯನಗರ ಕಾಲದಲ್ಲಿ ಪ್ರಖ್ಯಾತ ಕುಸ್ತಿಪಟುವಾಗಿದ್ದಳು.

ಅಂಗರಕ್ಷಕಳಾಗಿ ಸ್ತ್ರೀ:

ಡಾಮಿಂಗೋ ಪಾಯಸ್‌ನು ಮಹಿಳಾ ಅಂಗರಕ್ಷಕರ, ರಾಣಿಯರ ಸೇವಕಿಯರ ಮತ್ತು ಆಸ್ಥಾನದ ಸ್ತ್ರೀಯರ ಬಗ್ಗೆ ವಿವರಿಸಿದ್ದಾನೆ. ಇವನ ಅಭಿಪ್ರಾಯದಲ್ಲಿ ಪ್ರತಿಯೊಬ್ಬ ಸ್ತ್ರೀಯು ಒಂದೊಂದು ಮನೆಯನ್ನು ಹೊಂದಿದ್ದು, ಜೊತೆಗೆ ಅವಶ್ಯಕವಿದ್ದ ಇತರ ಎಲ್ಲಾ ಮಹಿಳಾ ಸೇವಕಿಯರನ್ನು ಮತ್ತು ಮಹಿಳಾ ಅಂಗರಕ್ಷಕರನ್ನು ಹೊಂದಿದ್ದಳು. ಇಲ್ಲಿಗೆ ಯಾವೊಬ್ಬ ಪುರುಷನೂ ಬರುತ್ತಿರಲಿಲ್ಲ.

ಹಜಾರರಾಮ ದೇವಾಲಯ, ಹಂಪಿ




1. ಹೋರಾಟಗಾರ್ತಿಯಾಗಿ ಮಹಿಳೆ




2. ಹೋರಾಟಗಾರ್ತಿಯಾಗಿ ಮಹಿಳೆ



3. ಹೋರಾಟಗಾರ್ತಿಯಾಗಿ ಮಹಿಳೆ, ಸರ್ಕಾರಿ ವಸ್ತು ಸಂಗ್ರಹಾಲಯ, ಬೆಂಗಳೂರು



4. ಅಂಗರಕ್ಷಕಳಾಗಿ ಸ್ತ್ರೀ, ಮಹಾನವಮಿ ದಿಬ್ಬ, ಹಂಪಿ



5. ಕುಟುಂಬ ಜೀವನ, ಹಜಾರರಾಮ ದೇವಾಲಯ, ಹಂಪಿ



6. ಸತಿಕಲ್ಲು, ಹಂಪಿ



೭ ವೀರ-ಸತಿಕಲ್ಲು, ಹಂಪಿ



8. ವೀರ-ಸತಿಕಲ್ಲು, ಹಂಪಿ



9. ವೀರ-ಸತಿಕಲ್ಲು, ಹಂಪಿ

ಅಂಗರಕ್ಷಕರು ಯಾವುದೇ ಘಟನೆ ಸಂಭವಿಸಿದರೂ ಅದಕ್ಕೆ ತಾವೇ ಹೊಣೆಯಾಗುವ ಕರ್ತವ್ಯವನ್ನು ಹೊಂದಿದ್ದರು. ಇವರು ಮುಖ್ಯದ್ವಾರಗಳಲ್ಲಿ ಪ್ರವೇಶಿಸುವ ಜನರ ಚಲನವಲನಗಳ ಬಗ್ಗೆ ಗಮನವಿಡಬೇಕಾಗಿತ್ತು. ಇದಲ್ಲದೆ ಅವರು ಕಳ್ಳರಿಂದ ಕಳುವಾದ ವಸ್ತುಗಳ ಬಗ್ಗೆ ವರದಿ ನೀಡಬೇಕಿತ್ತು. ಈ ರಾಜ್ಯದಲ್ಲಿ ಮಹಿಳಾ ಅಂಗರಕ್ಷಕರಿಗೆ ಪ್ರತ್ಯೇಕವಾದ ಮನೆಗಳಿದ್ದವು. ಹಂಪೆಯ ಮಹಾನವಮಿ ದಿಬ್ಬದಲ್ಲಿರುವ ಶಿಲ್ಪವೊಂದು ಮಹಿಳಾ ಅಂಗರಕ್ಷಕರ ಬಗ್ಗೆ ವಿವರಗಳನ್ನು ನೀಡುತ್ತದೆ. ಈ ಶಿಲ್ಪವು ಕುಳಿತಿರುವ ರಾಜನನ್ನು ಮತ್ತು ಅವನ ಹಿಂಭಾಗದಲ್ಲಿ ಎಡಗೈಯಲ್ಲಿ ಕತ್ತಿಯನ್ನು ಹಿಡಿದು ನಿಂತಿರುವ ಮಹಿಳಾ ಅಂಗರಕ್ಷಕರನ್ನು ತೋರಿಸುತ್ತದೆ. ಈ ಮಹಿಳಾ ಅಂಗರಕ್ಷಕರು ರಾಜ ಎಲ್ಲಿಗೆ ಹೋದರೂ ಅವನ ಜೊತೆ ಇರುತ್ತಿದ್ದರು. ಇವರು ಉತ್ತಮವಾದ ವೇತನ ಪಡೆಯುತ್ತಿದ್ದರು. ಈ ಮಹಿಳೆಯರು ಅಂದವಾದ ಉಡುಪುಗಳನ್ನು ಧರಿಸುತ್ತಿದ್ದರು. ಅವರು ಶಿರಾಭರಣ, ಬಳೆ, ಸೊಂಟಾಭರಣ, ಉಂಗುರ, ತೋಳುಬಂದಿ, ಕಂಠಹಾರ ಮುಂತಾದವುಗಳನ್ನು ಧರಿಸುತ್ತಿದ್ದರು (ಚಿತ್ರ 4).

ಕುಟುಂಬ ಜೀವನ:

ಹಜಾರರಾಮ ದೇವಾಲಯದ ಗೋಡೆಯ ಮೇಲಿನ ಶಿಲ್ಪವೊಂದರಲ್ಲಿ ತಾಯಿಯು ತನ್ನ ಸೊಂಟದಲ್ಲಿ ಮಗುವನ್ನು ಎತ್ತಿಕೊಂಡು ನಿಂತಿದ್ದಾಳೆ. ಈ ಶಿಲ್ಪವು ಸಂಸಾರಿಕ ಜೀವನದ ಸ್ವಾಭಾವಿಕ ಮತ್ತು ಮಾನವೀಯ ಲಕ್ಷಣವನ್ನು ಎತ್ತಿ ತೋರಿಸುತ್ತದೆ (ಚಿತ್ರ 5).

ಸ್ಮಾರಕ ಶಿಲೆಗಳು ಅಥವಾ ಮಹಾಸತಿ ಕಲ್ಲುಗಳು:

ಸತಿ ಸಹಗಮನ ಪದ್ಧತಿಯು ಹಿಂದೂ ಸಂಸ್ಕೃತಿಯ ಒಂದು ಸಾಮಾಜಿಕ ಸಂಪ್ರದಾಯವಾಗಿದ್ದು ವಿಧವೆಯರು ಮರಣ ಹೊಂದಿದ ತಮ್ಮ ಪತಿಯ ಚಿತೆಗೆ ಹಾರಿ ತಾವೂ ಪ್ರಾಣತ್ಯಾಗ ಮಾಡುವ ಪದ್ಧತಿಯಿತ್ತು. ಇದನ್ನೇ ಸತಿ ಪದ್ಧತಿ ಎಂದು ಕರೆಯಲಾಗುತ್ತಿತ್ತು. ಸ್ತ್ರೀಯು ತನ್ನ ಪತಿಯ ಮೇಲಿದ್ದ ಗಾಢವಾದ ಪ್ರೀತಿ ಮತ್ತು ವಾತ್ಸಲ್ಯ ಇವುಗಳಿಂದ ಆತ ಮಡಿದಾಗ ತಾನೂ ಸಹ ಆತನ ಚಿತೆಗೆ ಹಾರಿ ಪ್ರಾಣತ್ಯಾಗ ಮಾಡುತ್ತಿದ್ದಳು. ಈ ಪದ್ಧತಿಯು ಹಿಂದೂ ಸಮಾಜದಲ್ಲಿನ ಮೇಲ್ವರ್ಗಕ್ಕೆ ಮಾತ್ರ ಸೀಮಿತವಾಗಿತ್ತು. ಕೆಳವರ್ಗಕ್ಕೆ ಸೇರಿದ ಸ್ತ್ರೀಯರು ಸಾಮಾನ್ಯವಾಗಿ ಈ ಪದ್ಧತಿಯನ್ನು ಅನುಸರಿಸುತ್ತಿರಲಿಲ್ಲ. ಈ ಸತಿ ಪದ್ಧತಿಯು ವಿಜಯನಗರ ಕಾಲದಲ್ಲಿ ಪ್ರಬಲವಾಗಿ ಆಚರಣೆಯಲ್ಲಿತ್ತು.

ಹಂಪೆಯಲ್ಲಿರುವ ಒಂದು ಸತಿಕಲ್ಲಿನ ಬಲಭಾಗದಲ್ಲಿ ಒಂದು ಸ್ತಂಭವಿದೆ. ಅದರಿಂದ ಮುಂದೆ ಚಾಚಿದ ಬಲಗೈ ಮೇಲೆದ್ದಿದೆ. ಅದರ ಪಕ್ಕದಲ್ಲಿ ವೀರನು ಎಡಕ್ಕೆ ಮುಖಮಾಡಿ ಕೂತಿದ್ದಾನೆ. ಅವನ ಮುಂದೆ ಸತಿ ನಿಂತಿದ್ದಾಳೆ. ಮೇಲೆತ್ತಿದ ವೀರನ ಬಲಗೈ ಮತ್ತು ಸತಿಯ ಎಡಗೈಗಳು ಅವರು ಸಂಭಾಷಣೆಯಲ್ಲಿ ತೊಡಗಿರುವುದನ್ನು ಸೂಚಿಸುತ್ತವೆ. ಕೆಳಭಾಗದಲ್ಲಿ ಒಂದು ಕುದುರೆ ಮತ್ತು ಒಬ್ಬ ಪುರುಷನನ್ನು ಕೆತ್ತಲಾಗಿದೆ (ಚಿತ್ರ 6). ಹಂಪೆಯಲ್ಲಿರುವ ಮತ್ತೊಂದು ಸತಿಕಲ್ಲಿನಲ್ಲಿ ಸತಿಯು ಸಮಭಂಗಿಯಲ್ಲಿ ನಿಂತಿದ್ದಾಳೆ. ಅವಳ ಉಡುಗೆ, ಕೇಶಾಲಂಕಾರ, ಕುತ್ತಿಗೆಯ ಪದಕ, ಸೊಂಟ ಪಟ್ಟಿ (ಡಾಬು), ಕೈಬಳೆ, ಕಾಲಂದಿಗೆ ಮುಂತಾದ ಆಭರಣಗಳನ್ನು ಸುಂದರವಾಗಿ ಕೆತ್ತಲಾಗಿದೆ (ಚಿತ್ರ 7). ಅದೇ ಊರಲ್ಲಿರುವ ಮೂರನೆಯ ಸತಿಕಲ್ಲಿನಲ್ಲಿ ಸತಿಯು ಎಡಭಾಗದಲ್ಲಿ ಬಲಗೈಯನ್ನು ಮೇಲಕ್ಕೆತ್ತಿ ನಿಂತಿದ್ದಾಳೆ. ಅವಳ ಎಡಕ್ಕೆ ಅವಳ ಗಂಡನಾದ ವೀರನು ನಿಂತಿದ್ದಾನೆ. ಅವನ ಎಡಕ್ಕೆ ಅವರ ಮಗನು ನಿಂತಿದ್ದಾನೆ (ಚಿತ್ರ 8). ಅದೇ ಊರಲ್ಲಿನ ನಾಲ್ಕನೆಯ ಸತಿಕಲ್ಲಿನ ಎಡಭಾಗದಲ್ಲಿ ವೀರನು ಕೈಮುಗಿದು ನಿಂತಿದ್ದಾನೆ. ಅವನ ಎಡಕ್ಕೆ ಅವನ ಸತಿ ಬಲಗೈಯನ್ನು ಮೇಲಕ್ಕೆತ್ತಿ ನಿಂತಿದ್ದಾಳೆ. ಅವಳ ಎಡಗೈಯಲ್ಲಿ ನೀರಿನ ಪಾತ್ರೆ ಇದೆ. ಶಿಲ್ಪದ ಮೇಲ್ಭಾಗದಲ್ಲಿ ಒಬ್ಬ ಪುರುಷನು ಲಿಂಗ ಮತ್ತು ನಂದಿಯನ್ನು ಪೂಜಿಸುತ್ತಿದ್ದಾನೆ (ಚಿತ್ರ 9).

ನೃತ್ಯ:

ವಿಜಯನಗರದ ಅರಸರ ಕಾಲದಲ್ಲಿ ಸಂಗೀತ ಮತ್ತು ನೃತ್ಯಗಳು ರಾಜಾಶ್ರಯ ಪಡೆದುಕೊಂಡಿದ್ದವು. ಇತರರಿಂದಲೂ ಮನ್ನಣೆ ಪಡೆದುಕೊಂಡಿದ್ದವು. ಈ ನೃತ್ಯವನ್ನು ರಾಜಕುಮಾರಿ ಮತ್ತು ಜನಸಾಮಾನ್ಯರು ಸಹ ಅಭ್ಯಾಸ ಮಾಡುತ್ತಿದ್ದರು. ಇವುಗಳನ್ನು ವಿವಿಧ ಶಿಲ್ಪಗಳಲ್ಲಿ ಗುರ್ತಿಸಬಹುದಾಗಿದೆ.

ಹಂಪೆಯಲ್ಲಿ ಮಹಾನವಮಿ ದಿಬ್ಬ, ಹಜಾರರಾಮಸ್ವಾಮಿ ಮತ್ತು ಅಚ್ಯುತರಾಯ ದೇವಾಲಯಗಳ ಮೇಲೆ ಕಂಡುಬರುವ ಶಿಲ್ಪಗಳಲ್ಲಿ ವಿವಿಧ ಭಂಗಿಗಳು, ಜನರು ಬಳಸುತ್ತಿದ್ದ ಕೋಲಾಟ ಮತ್ತು ಇತರ ಆಟಗಳ ಭಂಗಿಗಳು ಸಹ ನೃತ್ಯ ವೈಖರಿಯನ್ನು ಪ್ರತಿನಿಧಿಸುತ್ತವೆ. 'ಸ್ತ್ರೀ' ನರ್ತನದ ಸುತ್ತ ಕಂಡುಬರುವ ನುಡಿಸುತ್ತಿರುವ ಮೃದಂಗ, ತಬಲ, ಮದಗ, ಇತ್ಯಾದಿ ಸಂಗೀತ ವಾದ್ಯಗಳು ಸಹ ಶಿಲ್ಪಗಳಲ್ಲಿ ಕಂಡುಬರುತ್ತವೆ (ಚಿತ್ರಗಳು 10-19).

ಹಜಾರ ರಾಮಸ್ವಾಮಿ ದೇವಸ್ಥಾನದ ಗೋಡೆಯ ಮೇಲೆ ವಿವಿಧ ಭಂಗಿಯ ನೃತ್ಯ ಶೈಲಿಗಳು, ಆ ನೃತ್ಯಗಾರರು ತಮ್ಮ ವಾದ್ಯಗಳ ಜೊತೆ ಹೆಜ್ಜೆ ಹಾಕುತ್ತಾ, ವಾದ್ಯಗಳನ್ನು ನುಡಿಸುತ್ತಾ ವಿವಿಧ ನೃತ್ಯ ಭಂಗಿಯಲ್ಲಿ ಮುಂದೆಸಾಗಿ ಹೋಗುವ ದೃಶ್ಯ ಕಂಡುಬರುತ್ತದೆ. ಈ ದೇವಸ್ಥಾನದ ಮೇಲುಭಾಗದಲ್ಲಿ ವಿವಿಧ ವಾದ್ಯಮೇಳದ ಮಧ್ಯೆ ನೃತ್ಯಗಾರರ ವಿವಿಧ ಸಮೂಹ, ಭಂಗಿಗಳು, ಜೊತೆ ಜೊತೆಯಾಗಿ ಹಾಡು ಕುಣಿಯುತ್ತಾ ಸಾಗುವ ದೃಶ್ಯ ಸಹ ಕಂಡುಬರುತ್ತದೆ (ಚಿತ್ರಗಳು 15-16).

ಪ್ರಾಥಮಿಕ ಹಂತದ ನೃತ್ಯವನ್ನು ಎರಡು ಭಾಗವಾಗಿ ವಿಂಗಡಣೆ ಮಾಡುತ್ತಿದ್ದರು. ಶಾಸ್ತ್ರೀಯ ನೃತ್ಯ ಶೈಲಿ, ಇದು ನಾಟ್ಯಶಾಸ್ತ್ರದ ಪರಂಪರೆಯನ್ನು ಉಳಿಸಿಕೊಂಡುಬಂದ ಒಂದು ನೃತ್ಯಭಾಗವಾಗಿತ್ತು (ಚಿತ್ರ 13). ಕೋಲಾಟ ಒಂದು ಜನಪದ ಶೈಲಿಯ ನೃತ್ಯವಾಗಿತ್ತು. ಅದು ವಿವಿಧ ಭಂಗಿಯಲ್ಲಿ ಮೆಚ್ಚುಗೆ ಗಳಿಸಿತ್ತು. ಕೆಲವೊಂದು ದೇವಸ್ಥಾನದ ಗೋಡೆಗಳ ಮೇಲೆ ಈ ಕೋಲಾಟದ ಭಂಗಿಯನ್ನು ಬಿಡಿಸಲಾಗಿದೆ (ಚಿತ್ರಗಳು 14-16). ಅಂದು ಸಾಮಾನ್ಯ 'ಸ್ತ್ರೀ' ಸಹ ಕೋಲಾಟ ಆಡಬಲ್ಲವಳಾಗಿದ್ದಳು. ಎರಡು ಕೋಲು ಬಳಸಿ ನಡೆಯುತ್ತಿದ್ದ ನೃತ್ಯಭಂಗಿಯ ಕೋಲಾಟ ಒಂದು ಆಕರ್ಷಣೆಯ ಸಾಂಸ್ಕೃತಿಕ ಚಟುವಟಿಕೆಯಾಗಿತ್ತು.


ಭರತನಾಟ್ಯ ಸಹ ಒಂದು ಖ್ಯಾತ ನೃತ್ಯ ಆಗಿತ್ತು. ಇಲ್ಲಿ ಶಾಸ್ತ್ರೀಯ ನೃತ್ಯಗಾತಿಯ ವರ್ಣನೆ ಇದೆ. ಆಕೆ 'ಧರ್ಮಿಲ್ಲಾ, ಅರ್ಧ ಭಂಗಿಗಳನ್ನು', ಸುಂದರ ಮೋಹಕ ಆಭರಣಗಳು, ಕತ್ತಿನ ಪದಕ, ತಲೆಯ ವಸ್ತ್ರ, ಮುಂತಾದ ಆಭರಣವನ್ನು ಧರಿಸುತ್ತಿದ್ದರು. ನೃತ್ಯ ಮಂದಿರಕ್ಕೆ ಆಕೆ ಬಂದಾಗ ದೇವಲೋಕದ ದೇವತೆಯಂತೆ ಕಂಗೊಳಿಸುವಂತೆ ಕಾಣುತ್ತಿದ್ದಳು (ಚಿತ್ರ 13).

ಹೋಳಿ ಹಬ್ಬದ ಕಾಲದಲ್ಲಿ ನೃತ್ಯ ವೈಖರಿಯ ಭಂಗಿಗಳು, ಅದರ ಆಚರಣೆ, ಮುಂತಾದವು ಸಹ ಇವೆ. ಹಬ್ಬದ ದಿನದಲ್ಲಿ ಇಬ್ಬರು ಸ್ತ್ರೀಯರು ಬಣ್ಣದ ನೀರಿನಿಂದ ನೆನೆದು, ನೃತ್ಯ ಮಾಡುವ ದೃಶ್ಯ, ಒರಟಾದ ಕಲ್ಲಿನಿಂದ ಮೂಡಿ ಬಂದಿದೆ. ಇಂತಹ ನೃತ್ಯಗಳು ಹೋಳಿ, ಸಭೆ ಸಮಾರಂಭಗಳಲ್ಲಿ ನಡೆಯುತ್ತಿದ್ದವು ಎಂದು ತಿಳಿದುಬರುತ್ತದೆ.


ನೃತ್ಯಭಂಗಿಯ ಶಿಲಾ ವಿನ್ಯಾಸದಲ್ಲಿ ಕೊರವಂಜಿಯ ನೃತ್ಯ ಶೈಲಿಯನ್ನು ಸೆರೆ ಹಿಡಿಯಲಾಗಿದೆ. ಆಕೆಯು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅಲೆಯುತ್ತಾ ಹಾಡುತ್ತಾ ಹಾಗೂ ಹಣವನ್ನು ಬೇಡುತ್ತಾ, ಭವಿಷ್ಯ (ಜೋತಿಷ್ಯ) ಹೇಳಲು ಮುಂದೆ ಸಾಗುತ್ತಾಳೆ. ಒಂದು ಬುಟ್ಟಿಯನ್ನು ಹಿಡಿದು ವಿವಿಧ ಭಂಗಿಯಲ್ಲಿ ಆಕೆ ಶಾಸ್ತ್ರ ಹೇಳುವ ವಿನ್ಯಾಸ ಸಹ ಕಂಡುಬಂದಿದೆ (ಚಿತ್ರ 12).

ಚಿನ್ನಾದೇವಿ ಅಮ್ಮನ್ ಮತ್ತು ತಿರುಮಲದೇವಿ ಅಮ್ಮನ್ ಅವರ ಲೋಹದ ಪ್ರತಿಮೆಗಳು:

ವಿಜಯನಗರ ಸಾಮ್ರಾಜ್ಯದ ಸುಪ್ರಸಿದ್ಧ ಚಕ್ರವರ್ತಿ ಕೃಷ್ಣದೇವರಾಯನ ಇಬ್ಬರು ಪತ್ನಿಯರಾದ ಚಿನ್ನಾದೇವಿ ಅಮ್ಮನ್ ಮತ್ತು ತಿರುಮಲದೇವಿ ಅಮ್ಮನ್ ಇವರ ಲೋಹದ ಪ್ರತಿಮೆಗಳನ್ನು ನಾವು ತಿರುಪತಿಯಲ್ಲಿ ಕಾಣಬಹುದು. ಈ ಪ್ರತಿಮೆಗಳಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ ಪ್ರತಿಮೆಯ ಆಭರಣಗಳು ಮತ್ತು ಸೌಂದರ್ಯವನ್ನು ಹೆಚ್ಚಿಸಿಕೊಳ್ಳಲು ಅವರು ಯಾವ ರೀತಿಯಲ್ಲಿ ಕೇಶ ಶೃಂಗಾರ ಮಾಡಿಕೊಳ್ಳುತ್ತಿದ್ದರು, ಯಾವ ಯಾವ ಆಭರಣಗಳನ್ನು ತೊಡುತ್ತಿದ್ದರು ಎಂಬುದಾಗಿದೆ.



10. ನೃತ್ಯ, ಮಹಾನವಮಿ ದಿಬ್ಬ, ಹಂಪಿ




11. ನೃತ್ಯ, ಮಹಾನವಮಿ ದಿಬ್ಬ, ಹಂಪಿ



12. ಕೊರವಂಜಿ




13. ನೃತ್ತ



14. ಕೋಲಾಟ, ಮಹಾನವಮಿ ದಿಬ್ಬ, ಹಂಪಿ



15. ಕೋಲಾಟ, ಹಜಾರರಾಮ ದೇವಾಲಯ, ಹಂಪಿ



16. ನೃತ್ಯ, ಹಜಾರರಾಮ ದೇವಾಲಯ, ಹಂಪಿ



17. ನೃತ್ತ



18. ನೃತ್ತ



19. ನೃತ್ತ



20. ಬೇಟೆಗಾರ್ತಿ



21. ಮರಕ್ಕೆ ಒರಗಿ ನಿಂತ ಮಹಿಳೆ



22. ಸ್ತ್ರೀಯ ಪೋಷಾಕು, ಅಚ್ಯುತರಾಯ ದೇವಾಲಯ, ಹಂಪಿ

ಆ ಪ್ರತಿಮೆಗಳಲ್ಲಿ ಪ್ರತಿ ಕೈಯಲ್ಲಿಯೂ ಮೂರು ಬಳೆಗಳಿವೆ. ಒಂದು ತೋಳ್ಬಂದಿ, ಒಂದು ಕಡಗ, ಬೆರಳುಗಳಲ್ಲಿ ಉಂಗುರಗಳು ಇವೆ. ದೇಹದ ಮೇಲಿನ ಭಾಗವನ್ನು ಕುಪ್ಪಸ ಆವರಿಸಿದೆ. ನಡುಪಟ್ಟಿಯಲ್ಲಿ (ಒಡ್ಯಾಣ) ಮೂರು ಅಮೂಲ್ಯ ರತ್ನಗಳಿವೆ. ಹಾಗೆಯೆ ಕಿವಿಯ ಓಲೆಗಳು, ಮೂಗುತಿ, ಮಾಂಗಲ್ಯ ಹಾಗೂ ಕಾಲಂದಿಗೆಗಳನ್ನು ಕಾಣಬಹುದು. ಈ ಪ್ರತಿಮೆಗಳು ಅಂಜಲಿಮುದ್ರೆಯಲ್ಲಿ ನಿಂತಿವೆ.[3]

ಅಚ್ಯುತರಾಯನ ರಾಣಿ ವರದಾಜ ಅಮ್ಮನ್‌ಳ ಲೋಹದ ಪ್ರತಿಮೆ:

ಈ ಪ್ರತಿಮೆಯಲ್ಲಿ ಶಿಲ್ಪಿ ಮೂಡಿಸಿರುವ ಆಭರಣ-ವಸ್ತ್ರಗಳೆಂದರೆ, ಕೈಗಳಲ್ಲಿ ಬಳೆಗಳು, ಬೆರಳಿನಲ್ಲಿ ಉಂಗುರಗಳು, ಮೇಲ್ಭಾಗದಲ್ಲಿ ಕುಪ್ಪಸವಿದ್ದು, ಕೊರಳಿನಲ್ಲಿ ಕಂಠೀಹಾರವು, ನಡುವಿನಲ್ಲಿ ಒಡ್ಯಾಣವು, ತೋಳ್ಬಂದಿ, ಕಾಲಂದಿಗೆಗಳೂ ಸಹ ಕಂಡುಬರುತ್ತವೆ. ತಲೆಯಲ್ಲಿ ಅನೇಕ ಒಡವೆಗಳನ್ನುಳ್ಳ ಈ ಪ್ರತಿಮೆಯು ಅಂಜಲಿಮುದ್ರೆಯಲ್ಲಿದೆ.[4]

ತಿರುಮಲರಾಯನ ರಾಣಿ ವೆಂಗಲಾಂಬೆಯ ಪ್ರತಿಮೆ:

ಈ ಪ್ರತಿಮೆಯೂ ಸಹ ಮೇಲಿನ ಪ್ರತಿಮೆಯ ಭಂಗಿಯಲ್ಲಿ ನಿಂತಿದ್ದು ಎದೆಯ ಭಾಗ ಕುಪ್ಪಸದಿಂದ ಮುಚ್ಚಿದೆ. ನಡುವಿನಲ್ಲಿ ಡಾಬು, ಕೊರಳಿನಲ್ಲಿ ಕಂಠೀಹಾರ, ಮೂಗಿನ ಮೂಗುತಿ, ತೋಳ್ಬಂದಿ, ಕಾಲಂದಿಗೆ, ಕಿವಿಯಲ್ಲಿ ಓಲೆಗಳು ಮುಂತಾದವುಗಳನ್ನು ನಾವು ಕಾಣಬಹುದು.[5]

ಪೋಷಾಕು ಅಥವಾ ಉಡುಗೆ-ತೊಡುಗೆಗಳು:

ವಿಜಯನಗರ ಸಾಮ್ರಾಜ್ಯವು ಉತ್ತುಂಗದಲ್ಲಿದ್ದ ಸಮಯದಲ್ಲಿ ಸಾಂಪ್ರದಾಯಿಕ ಹಿಂದೂ ವಸ್ತ್ರ ಉಡುಪುಗಳನ್ನು ಉಪಯೋಗಿಸುತ್ತಿದ್ದರು. ಇವುಗಳ ಬಗ್ಗೆ ವಿದೇಶಿ ಯಾತ್ರಿಕರ ಬರವಣಿಗೆಗಳಲ್ಲಿ ಹಾಗೂ ಅಂದಿನ ಸಂಸ್ಕೃತಿಯನ್ನು ಪ್ರತಿನಿಧಿಸುವ ಸ್ತ್ರೀಯರ ಮತ್ತು ಪುರುಷರ ಶಿಲ್ಪಗಳಲ್ಲಿ ಕಾಣಬಹುದು.

ಅಂದಿನ ಶಿಲ್ಪಿಗಳು ಸಹ ಅಂದಿನ ಕಾಲದ ಉಡುಗೆ ತೊಡುಗೆಗಳು ಅಷ್ಟೊಂದು ಭಾರವಾಗಿರಲಿಲ್ಲ ಎಂಬುದನ್ನು ತಮ್ಮ ಶಿಲ್ಪಗಳಲ್ಲಿ ತೋರಿಸಿದ್ದಾರೆ. ನೃತ್ಯಗಾರ ನೃತ್ಯಗಾರ್ತಿಯರು ತಮ್ಮ ಕಾಲುಗಳಿಗೆ ಬಿಗಿಯಾದ ಕಾಲು ಕುಪ್ಪಸಗಳನ್ನು ಅಥವ ಚಲ್ಲಣಗಳನ್ನು ಧರಿಸುತ್ತಿದ್ದರು. ಸ್ತ್ರೀಯರು ತಮ್ಮ ಎದೆ ಭಾಗಕ್ಕೆ ಮೊಲೆಗಟ್ಟು ಎಂಬ ಬಿಗಿಯಾದ ರವಿಕೆಯನ್ನು ತೊಡುತ್ತಿದ್ದರು. ಬಟ್ಟೆಯಿಂದ ಮಡಿಕೆ ಮಾಡಿದ ಸೊಂಟ ಪಟ್ಟಿಯನ್ನು ಕಟ್ಟಿಕೊಂಡು ಅದರ ಸುತ್ತ ಹೊಳೆಯುವ ಗರಿಗಳನ್ನು ಹಾಗೂ ಕಾಲಿಗೆ ಗೆಜ್ಜೆಗಳನ್ನು ಕಟ್ಟಿಕೊಳ್ಳುತ್ತಿದ್ದರು. ಆದರೆ ನೃತ್ಯ ಕಲಿಸುವ ಗುರುಗಳು ಮಾತ್ರ ದೂಡಾ ಮುಂಡಾಸು ಎಂಬ ಹೊಳೆಯುವ ದೊಡ್ಡದಾದ ಟೊಪ್ಪಿಯಾಕಾರದ ಪೇಟವನ್ನು ಧರಿಸುತ್ತಿದ್ದರು ಹಾಗೂ ಕೈಯಲ್ಲಿ ಒಂದು ದಂಡವನ್ನು ಹಿಡಿದುಕೊಳ್ಳುತ್ತಿದ್ದರು. ಜೊತೆಗೆ ವಿವಿಧ ರೀತಿಯ ಡೋಲು ಬಾರಿಸುವವರು ಬೇಟೆಗಾರ್ತಿಯರು (ಚಿತ್ರ 20) ಮತ್ತು ಸೇವಕಿಯರು - ಇವರನ್ನೆಲ್ಲಾ ನಾವು ಶಿಲ್ಪಗಳಲ್ಲಿ ಕಾಣಬಹುದು.

ವಿಜಯನಗರದ ಕಾಲದ ಶಿಲ್ಪಗಳಿಂದ ವಿವಿಧ ರೀತಿಯಲ್ಲಿ ಸೀರೆ ಉಡುತ್ತಿದ್ದರೆಂದು ತಿಳಿದುಬರುತ್ತದೆ (ಚಿತ್ರ 21). ಸೀರೆಯು ಮೂರು-ನಾಲ್ಕು ಸುತ್ತು ಕೆಳಗೆ ಬಂದು ಎರಡು ಕಾಲುಗಳಲ್ಲಿ ಬಿಗಿಯಾಗಿ ಸುತ್ತಿಕೊಂಡು ಪುನಃ ಮೇಲೆ ಬಂದು ಹೊಕ್ಕಳಿನ ಕೆಳಭಾಗದಿಂದ ನೆರಿಗೆಯಾಗಿ ಕೆಳಗೆ ಬಂದು ಎರಡೂ ಕಾಲುಗಳ ನಡುವೆ ನೆರಿಗೆಯಾಗಿ ಅರ್ಧ ಚಂದ್ರಾಕೃತಿಯಲ್ಲಿ ಜೋತುಬಿದ್ದು ನೋಡಲು ಮನೋಹರವಾಗಿ ಕಾಣುವಂತೆ ಇದ್ದು ಅದರ ಇನ್ನೊಂದು ತುದಿಯು ಸೊಂಟದ ಸುತ್ತ ಸುತ್ತಿಕೊಂಡಿರುತ್ತಿತ್ತು. ಹೀಗೆ ನೃತ್ಯಗಾರ್ತಿಯರು, ಡೊಂಬರು, ಮನರಂಜನಾಕಾರರು ಸೀರೆಯನ್ನು ಉಡುವ ತಂತ್ರವನ್ನು ಅಭಿವೃದ್ಧಿಪಡಿಸಿಕೊಂಡಿದ್ದರು.

ಸ್ತ್ರೀಯರು ಅದರಲ್ಲಿಯೂ ಆಸ್ಥಾನದವರು ಹಾಗೂ ಶ್ರೀಮಂತರ ಪತ್ನಿಯರು ಸಿರಿವಂತಿಕೆಯನ್ನು ಎತ್ತಿ ತೋರಿಸುವ ವಸ್ತ್ರ ಉಡುಪುಗಳನ್ನು ಧರಿಸುತ್ತಿದ್ದರು. ಉದಾ: ಅಚ್ಯುತರಾಯನ ದೇವಸ್ಥಾನದಲ್ಲಿ ಕೆತ್ತಿರುವ ನೃತ್ಯಭಂಗಿಯಲ್ಲಿರುವ ಹುಡುಗಿಯು ತೊಟ್ಟಿರುವ



23. ಶುಕಭಾಷಿಣಿ, ಅಚ್ಯುತರಾಯ ದೇವಾಲಯ, ಹಂಪಿ



24. ರಾಜಮನೆತನದ ಸ್ತ್ರೀ, ಪುರಾತತ್ವ ಸಂಗ್ರಹಾಲಯ, ಹಂಪಿ

ಉಡುಗೆಯು ಸೂಕ್ಷ್ಮವಾಗಿ ನೇಯ್ದಿದ್ದು ಅತ್ಯಂತ ಬೆಲೆ ಬಾಳುವುದೆಂದು ತಿಳಿದುಬರುತ್ತದೆ. ಇದರಿಂದ ನಮಗೆ ತಿಳಿದುಬರುವುದೇನೆಂದರೆ ಅಂದಿನ ನೃತ್ಯಗಾರ್ತಿಯರು ಸಹ ಅತ್ಯಂತ ಬೆಲೆ ಬಾಳುವ ಒಡವೆ ವಸ್ತ್ರಗಳನ್ನು ಧರಿಸುತ್ತಿದ್ದರೆಂಬುದಾಗಿದೆ.

ವಿಜಯ ವಿಠ್ಠಲಸ್ವಾಮಿ ದೇವಾಲಯದಲ್ಲಿರುವ ಕೃಷ್ಣದೇವರಾಯನ ರಾಣಿಯರ ಶಿಲ್ಪಗಳಲ್ಲಿ ಶಿಲ್ಪಿಯ ಸೊಗಸಾದ ಕೆತ್ತನೆ ಕಂಡುಬರುತ್ತಿದೆ. ಈ ರಾಣಿಯರ ಶಿಲ್ಪದ ಎರಡು ಕಾಲಿನ ನಡುವೆ ಅರ್ಧ ಚಂದ್ರಾಕೃತಿಯಲ್ಲಿ ನೆರಿಗೆ ತುಂಬಿರುವ ವಸ್ತ್ರವನ್ನು ನೋಡಬಹುದು. ಇದು ಅತ್ಯಂತ ಮನೋಹರವಾಗಿದೆ. ಹಿಂದೂ ಸಂಸ್ಕೃತಿಯಲ್ಲಿನ ಸೀರೆ ಉಡುವ ಜೀವಂತ ಸೌಂದರ್ಯವನ್ನು ನಾವು ಕೃಷ್ಣದೇವರಾಯನ ರಾಣಿಯರ ಉಡುಗೆಗಳಲ್ಲಿ ಕಾಣಬಹುದು.

ಹೀಗೆ ರಾಣಿಯರು ಮತ್ತು ಸಾಮಾನ್ಯ ಸ್ತ್ರೀಯರು ತಮ್ಮ ತಮ್ಮ ಸ್ಥಾನಮಾನಕ್ಕೆ ತಕ್ಕಂತೆ ಒಡವೆಗಳು, ಆಭರಣಗಳು, ಬೆಲೆ ಬಾಳುವ ವಸ್ತ್ರ-ಉಡುಗೆ-ತೊಡುಗೆಗಳನ್ನು ತೊಟ್ಟು, ಹಬ್ಬ ಜಾತ್ರೆ ಮುಂತಾದ ಪ್ರಮುಖ ಸಂದರ್ಭಗಳಲ್ಲಂತೂ ಸಾಮಾನ್ಯ ಸ್ತ್ರೀಯರೂ ಚೆನ್ನಾಗಿ ಅಲಂಕರಿಸಿಕೊಂಡು ನಲಿದಾಡುತ್ತಿದ್ದರೆಂದು ತಿಳಿದುಬರುತ್ತದೆ.

ಅಚ್ಯುತರಾಯ ದೇವಾಲಯದಲ್ಲಿಯ ಒಂದು ಶಿಲ್ಪವು ಒಬ್ಬ ಶ್ರೀಮಂತ ಮಹಿಳೆಯದಾಗಿದೆ. ಇವಳನ್ನು ಶುಕಭಾಷಿಣಿ ಎಂದು ನಾವು ಕರೆಯಬಹುದು. ಇದರಲ್ಲಿಯ ಗಮನ ಸೆಳೆಯುವ ವಸ್ತುಗಳೆಂದರೆ - ಅವಳ ಬಲಗೈಯಲ್ಲಿ ಒಂದು ಗಿಳಿಯನ್ನು ಹಿಡಿದಿರುವುದು, ಅವಳ ಕೇಶ ಸೌಂದರ್ಯ, ತಲೆಯ ಮೇಲಿರುವ ಒಂದು ಕುಲಾವಿಯಾಕಾರದ ವಸ್ತ್ರ, ಕೊರಳಿನ ಹಾರ, ಕಿವಿಯಲ್ಲಿನ ಓಲೆ, ಮೂಗುತಿ, ತೋಳ್ಬಂದಿ ಮತ್ತು ಕಾಲಂದಿಗೆ. ಆದರೆ ಇದರಲ್ಲಿ ಮೇಲ್ಭಾಗದ ತೊಡುಗೆ ಇಲ್ಲವಾಗಿದೆ. ಇವಳು ತನ್ನ ಎಡಗೈಯನ್ನು ಸೊಂಟದ ಮೇಲಿಟ್ಟಿದ್ದಾಳೆ. ಬಲಗೈಯನ್ನು ಸ್ವಲ್ಪ ಮೇಲೆತ್ತಿದ್ದಾಳೆ. ಇದು ಸ್ವಸ್ತಿಕ್ ಆಕೃತಿಯಂತೆ ಕಾಣುತ್ತಿದ್ದು, ಇದಕ್ಕೆ ಸ್ವಸ್ತಿಕ ಮುದ್ರೆ ಎಂತಲೇ ಕರೆಯಲಾಗಿದೆ (ಚಿತ್ರ 23).

ಹಂಪೆಯಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣೆಯ ಸಂಗ್ರಹಾಲಯದಲ್ಲಿರುವ ಒಂದು ಶಿಲ್ಪವು ನಿಂತಿರುವ ಭಂಗಿಯಲ್ಲಿದೆ. ಇದರ ತಲೆ ಮತ್ತು ಪಾದಗಳು ಭಿನ್ನವಾಗಿವೆ. ಆದ್ದರಿಂದ ಇವಳು ಯಾರೆಂದು ತಿಳಿಯುವುದು ಕಷ್ಟವಾಗಿದೆ. ಆದರೆ ಅವಳ ಆಭರಣಗಳು ಮತ್ತು ವಸ್ತ್ರಗಳನ್ನು ನೋಡಿ ಇವಳು ರಾಜಮನೆತನದವಳೆಂದು ಊಹಿಸಬಹುದು. ಇವಳು ಎರಡು ಕೈಗಳನ್ನು ಜೋಡಿಸಿದ್ದು ದೇವರ ಆರಾಧನೆಯಲ್ಲಿ ಮಗ್ನಳಾಗಿರುವಂತೆ ಕಾಣುತ್ತಿದ್ದು ಕುತ್ತಿಗೆಯಲ್ಲಿ ಕಂಠೀಹಾರ, ಕೈಗಳಲ್ಲಿ ಬಳೆಗಳು, ಕಡಗ ಹಾಗೂ ನಡುವಿನಲ್ಲಿ ಒಡ್ಯಾಣ ಸಹ ಇದೆ. ಸೀರೆಯು ಎರಡೂ ಕಾಲುಗಳಿಗೆ ಸುರುಳಿಯಂತೆ 3-4 ಸುತ್ತು ಕೆಳಗೆ ಬಂದಿದೆ ಮತ್ತು ಎರಡೂ ಪಾದಗಳ ನಡುವೆ ನೆರಿಗೆ ತುಂಬಿ ಅರ್ಧ ಚಂದ್ರಾಕೃತಿಯಲ್ಲಿ ಕಂಗೊಳಿಸುವ ವಸ್ತ್ರವು ಮನೋಹರವಾಗಿದೆ (ಚಿತ್ರ 24).

ಅಚ್ಯುತರಾಯ ದೇವಾಲಯದ ಕಂಬದ ಮೇಲಿರುವ ಒಂದು ಶಿಲ್ಪವೂ ಸಹ ಸ್ತ್ರೀಯದಾಗಿದ್ದು ಸೊಗಸಾಗಿ ಅಲಂಕಾರ ಮಾಡಿಕೊಂಡಿರುವುದು ಕಂಡುಬರುತ್ತದೆ. ಅವಳ ಉಡುಗೆ ತೊಡುಗೆಗಳು ಸುಂದರವಾದದ್ದು ಹಾಗೂ ಅತ್ಯಂತ ಬೆಲೆ ಬಾಳುವಂತಹದ್ದೂ ಆಗಿದ್ದು, ಸೀರೆಯನ್ನು ಲಂಗದ ರೀತಿ ಮೊಳಕಾಲಿನವರೆಗೆ ಉಟ್ಟಿದ್ದಾಳೆ. ಈ ಸೀರೆಗೆ ಅಂಚಿನಲ್ಲಿ ಹಾಗೂ ಮಧ್ಯಭಾಗದಲ್ಲಿ ಕಸೂತಿಯಿಂದ ಜಡಿಸಿರುವ ಚಿತ್ರಗಳು ಸೊಗಸಾಗಿವೆ, ಹಾಗೂ ಹೊಳೆಯುತ್ತಿರುವ ಎಳೆಯಿಂದ ಜೋಡಿಸಿದ್ದು, ನೆರಿಗೆಯಿಂದ ಕೂಡಿದೆ. ಇವಳು ತನ್ನ ಸೆರಗಿನಿಂದ ಎಡದಿಂದ ಬಲಕ್ಕೆ ತನ್ನ ತಲೆಯನ್ನು ಮುಚ್ಚಿಕೊಂಡಿದ್ದಾಳೆ ಹಾಗೂ ಸೆರಗಿನ ಅಂಚನ್ನು ಬಲಗೈಯಲ್ಲಿ ಹಿಡಿದುಕೊಂಡಿದ್ದಾಳೆ. ಇತರ ಶಿಲ್ಪಗಳಂತೆ ಇದೂ ಸಹ ಬಳೆಗಳು, ಕಾಲಂದಿಗೆ, ತೋಳ್ಬಂದಿ, ನಡುಪಟ್ಟಿ, ಓಲೆ, ಮೂಗುತಿ ಹಾಗೂ ತಲೆಯ ಆಭರಣಗಳನ್ನು ಹೊಂದಿರುವುದನ್ನು ನಾವು ಕಾಣಬಹುದು (ಚಿತ್ರ 22). ಈ ದೇವಾಲಯದಲ್ಲಿ ನೃತ್ಯದ ಭಂಗಿಯಲ್ಲಿರುವ ಒಂದು ಶಿಲ್ಪವಿದೆ. ಇಲ್ಲಿ ಸ್ತ್ರೀಯು ಸೂಕ್ಷ್ಮ ನೇಯ್ಗೆಯ ಲಂಗವನ್ನು ಧರಿಸಿದ್ದು ನೃತ್ಯದ ಸಮಯದಲ್ಲಿ ಕೈಗಳ ಸಹಜ ಲಾಸ್ಯ, ವಸ್ತ್ರ ಮತ್ತು ಒಡವೆಗಳ ಸಹಜ ಚಲನವಲನಗಳನ್ನು ಈ ಶಿಲ್ಪದಲ್ಲಿ ಶಿಲ್ಪಿ ಸೂಕ್ಷ್ಮವಾಗಿ ಚಿತ್ರಿಸಿದ್ದಾನೆ.[6]

ಸೌಂದರ್ಯ ಸಾಧನಗಳು:

ಸೌಂದರ್ಯ ಸಾಧನಗಳನ್ನು ಬಳಸುವುದು ಹಿಂದೂ ಸಂಸ್ಕೃತಿಯಲ್ಲಿ ಒಂದು ಸಾಂಪ್ರದಾಯಿಕ ಚಿಹ್ನೆಯಾಗಿದೆ. ಇದು ಎಲ್ಲಾ ಜನಾಂಗ ಮತ್ತು ಎಲ್ಲಾ ದೇಶಗಳಲ್ಲಿಯೂ ಬಿಡಲಾಗದ ಕ್ರಿಯೆಯಾಗಿದೆ. ಸಮಕಾಲೀನ ಸಾಹಿತ್ಯ ಗ್ರಂಥಗಳು ವಿವಿಧ ರೀತಿಯ ಸೌಂದರ್ಯ ಸಾಧನಗಳು ಮತ್ತು ಅವುಗಳನ್ನು ಬಳಸುತ್ತಿದ್ದ ರೀತಿ ಮುಂತಾದ ವಿಷಯಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತವೆ. ಸಾಮಾನ್ಯವಾಗಿ ಸ್ತ್ರೀಯರು ಸೌಂದರ್ಯ ಸಾಧನಗಳನ್ನು ಇಷ್ಟಪಡುವುದು ಹೆಚ್ಚು. ಅವರು ಪ್ರೌಢಾವಸ್ಥೆಗೆ ಕಾಲಿಟ್ಟ ಮೇಲೆ ಅದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಾರೆ. ಈ ಸೌಂದರ್ಯ ಸಾಧನಗಳನ್ನು ತಮ್ಮ ಮುಖ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಲು ಬಳಸುತ್ತಾರೆ. ಆದರೆ ತಮ್ಮ ಮೈಕಾಂತಿಯನ್ನು ಹೆಚ್ಚಿಸಿಕೊಳ್ಳಲು ಹಾಗೂ ತಮ್ಮ ಮನಸ್ಸಿಗೆ ಆಹ್ಲಾದವನ್ನು ಪಡೆಯಲು ಗಂಧದ ತೈಲ, ಕಸ್ತೂರಿ, ಪುನುಗು, ಪರಿಮಳ ದ್ರವ್ಯ, ಕಾಶ್ಮೀರಮು, ಪನ್ನೀರು, ಕರ್ಪೂರ ಮತ್ತು ಅರಿಸಿನ ಪುಡಿ ಮುಂತಾದವುಗಳನ್ನು ಉಪಯೋಗಿಸುತ್ತಿದ್ದರು ಎಂಬುದು ತಿಳಿದುಬರುತ್ತದೆ.

ಒಬ್ಬ ಸ್ತ್ರೀಯು ಎಡಗೈಯಲ್ಲಿ ಕನ್ನಡಿಯನ್ನು ಹಿಡಿದುಕೊಂಡು ಬಲಗೈನ ಬೆರಳಿನಿಂದ ಸಿಂಧೂರವನ್ನು ಇಟ್ಟುಕೊಳ್ಳುತ್ತಿರುವ ಶಿಲ್ಪವನ್ನು ವಿಜಯನಗರ ಸಾಮ್ರಾಜ್ಯದ ಪಳೆಯುಳಿಕೆಯಾಗಿ ನಿಂತಿರುವ ಹಂಪೆಯಲ್ಲಿ ಕಾಣಬಹುದು.[7] ಹಾಗೆಯೇ, ಕಲ್ಯಾಣ ಮಂಟಪದ ಒಂದು ಕಂಬದಲ್ಲಿರುವ ಶಿಲ್ಪದಲ್ಲಿ ತನ್ನ ದಿನಚರಿಯನ್ನು ಮುಗಿಸಿ ಕೊನೆಯಲ್ಲಿ ಹಣೆಗೆ ತಿಲಕವಿಡುತ್ತಿರುವುದನ್ನು ಕಾಣಬಹುದು.

ಕೇಶ ಶೃಗರಿಸಿಕೊಳ್ಳುವ ಶೈಲಿ:

ಕೇಶ ಶೃಂಗಾರಕ್ಕೆ ಸಂಬಂಧಿಸಿದ ವಿಧಿಗಳ ಬಗ್ಗೆ ದೇವಸ್ಥಾನಗಳ ರಂಗಮಂಟಪಗಳು, ಕಲ್ಯಾಣ ಮಂಟಪಗಳು ಹಾಗೂ ಇತರೆ ಸ್ಥಳಗಳಲ್ಲಿರುವ ಸ್ತ್ರೀ ಹಾಗೂ ಪುರುಷ ವಿಗ್ರಹಗಳಲ್ಲಿ ನಾವು ನೋಡಬಹುದು. ಅದರಲ್ಲಿ ಹೆಚ್ಚಾಗಿ ಸ್ತ್ರೀಯ ಕೂದಲಿನ ಬೆಳವಣಿಗೆ ಮತ್ತು ರಕ್ಷಣೆಯ ಬಗ್ಗೆ ವಿವರಣೆ ಇದೆ. ಸ್ತ್ರೀಯರು ಹೆಚ್ಚಾಗಿ ತಲೆಯ ಕೂದಲನ್ನು ಹಿಂದಕ್ಕೆ ಬಾಚಿ, ನೀಳವಾಗಿ ಕೆಳಕ್ಕೆ ಇಳಿಬಿಡುವುದು, ಇಲ್ಲವೆ ಎಣೆದು ಹಿಂದಕ್ಕೆ ಗಂಟುಹಾಕಿಕೊಳ್ಳುವುದು (ಇದಕ್ಕೆ ಎಣೆಗಂಟು ಎಂದು ಹೆಸರು). ಕೆಲವು ಸ್ತ್ರೀಯರು ತಮ್ಮ ಜಡೆಯನ್ನು ತಮ್ಮ ಎದೆ ಮಧ್ಯ ಬಿಟ್ಟುಕೊಳ್ಳುತ್ತಾರೆ. ಹಾಗೆಯೇ ಅನೇಕ ರೀತಿಯ ತಲೆಯ ಆಭರಣಗಳನ್ನು ನಾವು ಶಿಲ್ಪಗಳಲ್ಲಿ ಕಾಣಬಹುದು.

ಉಪಸಂಹಾರ:

ಈ ಸಮಯದ ಶಿಲ್ಪಕಲೆಯನ್ನು ಪರಿಶೀಲಿಸಿದಾಗ ನಾವು ಈ ರೀತಿ ಹೇಳಬಹುದು.

1. ಸ್ತ್ರೀಯರು ಸಮಾಜದಲ್ಲಿ ಉನ್ನತ ಸ್ಥಾನವನ್ನು ಹೊಂದಿದ್ದರು.
2. ರಾಜನಿಂದ ಸ್ತ್ರೀಯರಿಗೆ ಸಮಾಜದಲ್ಲಿ ಪುರುಷರಂತೆ ಸಮಾನ ರೀತಿಯಲ್ಲಿ ಹಕ್ಕುಗಳನ್ನು ನೀಡಲಾಗಿತ್ತು. ಅಂಗರಕ್ಷಕರು, ಲೆಕ್ಕ ಪರಿಶೋಧಕರು, ಹೋರಾಟಗಾರರು ಹಾಗೂ ಗೂಢಾಚಾರರ ವಿಭಾಗಗಳಲ್ಲಿ ಸ್ತ್ರೀಯರಿದ್ದರು.
3. ಸಾಮಾನ್ಯ ರೀತಿಯಲ್ಲಿ ತಯಾರಿಸಿದ ಬಟ್ಟೆಯನ್ನು ಸ್ತ್ರೀಯರು ಧರಿಸುತ್ತಿರಲಿಲ್ಲ. ಏಕೆಂದರೆ ಬಟ್ಟೆಯ ಮೇಲಿನ ಕಸೂತಿಯು ಉನ್ನತ ಮಟ್ಟದಲ್ಲಿ ಇತ್ತು.
4. ಬೇರೆ ಬೇರೆ ರೀತಿಯ ಅಲಂಕಾರ ವಸ್ತುಗಳನ್ನು ನೋಡಿದಾಗ, ಉದಾ: ಕಿವಿಯ ಉಂಗುರ, ಕೈಗಡಗ, ಕಾಲಗಡಗ, ಸ್ತ್ರೀಯರು ಉಳಿದ ಲೋಹಗಳಿಗಿಂತ ಹೆಚ್ಚಿನ ರೀತಿಯಲ್ಲಿ ಬಂಗಾರವನ್ನು ಬಳಸುತ್ತಿದ್ದರು.
5. ವಿವಿಧ ರೀತಿಯ ಕೇಶ ಶೃಂಗಾರ ಮಾಡುತ್ತಿದ್ದರು ಹಾಗೂ ಅದರಲ್ಲಿ ಪರಿಣಿತರಾಗಿದ್ದರು.

6. ಭರತನಾಟ್ಯವು ಪ್ರಸಿದ್ಧವಾದ ನೃತ್ಯವಾಗಿತ್ತು ಹಾಗೂ ಹೆಚ್ಚು ವ್ಯಯದ (ಖರ್ಚಿನ) ನೃತ್ಯವಾಗಿತ್ತು. ಹೆಚ್ಚಿನ ಬೆಲೆಯ ಅಲಂಕಾರದ ವಸ್ತು ಹಾಗೂ ವಸ್ತ್ರಗಳು ಇದಕ್ಕೆ ಬೇಕಾಗಿತ್ತು. ಶ್ರೀಮಂತ ಹಾಗೂ ಉತ್ತಮ ವರ್ಗದ ಸ್ತ್ರೀಯರು ಇದನ್ನು ಕಲಿಯುತ್ತಿದ್ದರು. ಆದ್ದರಿಂದ ಸಾಮಾನ್ಯ ವರ್ಗದ ಸ್ತ್ರೀಯರು ಅಥವಾ ಸಾಮಾನ್ಯ ಸ್ತ್ರೀಯರು ಕೋಲಾಟವನ್ನು ಅಭ್ಯಾಸ ಮಾಡುತ್ತಿದ್ದರು. ಕೋಲಾಟ ಸರಳ, ಕಡಿಮೆ ಖರ್ಚಿನ ನೃತ್ಯ. ಇದಕ್ಕೆ ಕೇವಲ ಎರಡು ಕೋಲುಗಳು ಮಾತ್ರ ಅವಶ್ಯಕ. ಕೋಲಾಟವು ಒಂದು ಬಹಳ ಪ್ರಸಿದ್ಧ ನೃತ್ಯವಾಗಿತ್ತು ಎಂಬುದು ಪರಿಶೀಲನೆಯಿಂದ ತಿಳಿಯುತ್ತದೆ.

7. ಶಿಲ್ಪಗಳಲ್ಲಿ ಸ್ತ್ರೀಯರು ಹೆಚ್ಚಿನ ಸಂಖ್ಯೆಯಲ್ಲಿ ನೃತ್ಯ ಮಾಡುವುದು ಕಂಡುಬರುತ್ತದೆ. ಆದ್ದರಿಂದ, ಸ್ತ್ರೀಯರು ವಿನೋದಕ್ಕಾಗಿ ಹೆಚ್ಚಿನ ಸಂಖ್ಯೆಯಲ್ಲಿ ನೃತ್ಯ ಹಾಗೂ ಸಂಗೀತದಲ್ಲಿ ಭಾಗಿಯಾಗಿದ್ದರು ಎಂಬುದನ್ನು ಹೇಳಬಹುದು. ಆ ಸಮಯದಲ್ಲಿ ಪುರುಷರು ಬಹಳ ಕಡಿಮೆ ಸಂಖ್ಯೆಯಲ್ಲಿ ನೃತ್ಯ ಭಾಗಿಯಾಗುತ್ತಿದ್ದರೆಂಬುದು ತಿಳಿಯುತ್ತದೆ.

8. ಪ್ರತಿಯೊಂದು ದೇವಾಲಯದಲ್ಲಿ ನಾವು ರಂಗಮಂಟಪವನ್ನು ನೋಡುತ್ತೇವೆ. ಈ ರಂಗಮಂಟಪದಲ್ಲಿ ನೃತ್ಯಕ್ಕೆ ಅವಕಾಶ ಕಲ್ಪಿಸಲಾಗುತ್ತಿತ್ತು. ಕೆಲವು ಸ್ತ್ರೀಯರು ಕಾಯಂ ನೃತ್ಯ ಉದ್ಯೋಗಿಯಾಗಿದ್ದರು.

9. ಶಿಲ್ಪಕಲೆಯಲ್ಲಿ ಹರಡಿರುವ ದೃಶ್ಯಗಳು ಕುಸ್ತಿ, ಬೇಟೆ, ಹೋಳಿ ಹಬ್ಬ, ಹಾವಿನಾಟ, ಡೊಂಬರಾಟದವು ಮತ್ತು ಸತಿಕಲ್ಲು, ವೀರಗಲ್ಲುಗಳಾಗಿವೆ. ವಿಜಯನಗರದ ಶಿಲ್ಪಕಲೆಯನ್ನು ಇವು ಉತ್ತಮ ರೀತಿಯಲ್ಲಿ ಪ್ರತಿನಿಧಿಸುತ್ತವೆ.

10. ಶಿಲ್ಪಕಲೆಯಲ್ಲಿ ನೃತ್ಯಗಾತಿಯರಿಂದ ನೃತ್ಯಗಾರಿಯರು ಹೊಂದಿಸಿಕೊಂಡಿರುವ ಬಟ್ಟೆ, ನಯ ನಾಜೂಕತೆಯಿಂದ ಚಾಂಚಲ್ಯ ಜಾರಿ ಹೋಗುತ್ತಿರುವ ಸ್ಥಿತಿ (ಭಂಗಿ), ನಾಜೂಕಾದ ರಚನೆ, ವಿಶೇಷವಾಗಿ ಅವರ ಉಡುಪು, ಅಲಂಕಾರ ಹಾಗೂ ಆಶ್ಚರ್ಯಕರವಾದ ಹೊಂದಾಣಿಕೆ, ರೂಪಗಳು ಪ್ರತಿಬಿಂಬಿಸುತ್ತವೆ.

11. ಎಲ್ಲ ಚಟುವಟಿಕೆಗಳಲ್ಲಿಯೂ ಪುರುಷರು ಭಾಗಿಯಾಗಿರುತ್ತಿದ್ದರು. ಸ್ತ್ರೀಯರು ಸಹ ಅವರಿಗಿಂತ ಕಡಿಮೆ ಇರಲಿಲ್ಲ. ಸ್ತ್ರೀಯರು ಕುದುರೆ ಸವಾರಿ, ಆನೆ ಸವಾರಿ, ಹಾಗೂ ಒಂಟೆ ಸವಾರಿ ಮಾಡುತ್ತಿದ್ದರು. ಇದು ಶಿಲ್ಪಕಲೆಯಲ್ಲಿ ಚಿತ್ರಿತವಾಗಿದೆ. ಸ್ತ್ರೀಯರು ರಾಜನ ಜೊತೆಯಲ್ಲಿ ಯುದ್ಧದಾಂಗಣದಲ್ಲಿ ಶಕ್ತಿ ಸಾಮರ್ಥ್ಯ ತೋರಿಸುತ್ತಿದ್ದರು.

12. ಯಜ್ಞೋಪವೀತವು ಚಿನ್ನಾದೇವಿ ಅಮ್ಮನ್, ತಿರುಮಲದೇವಿ ಅಮ್ಮನ್ ಶಿಲ್ಪಗಳಲ್ಲಿ ಚಿತ್ರಿಸಲ್ಪಟ್ಟಿದೆ.

ಟಿಪ್ಪಣಿಗಳು

1. ಎಕ, VII, ಶಿಕಾರಿಪುರ 2, ಪು. 39.
2. ಸರಸ್ವತಿ ನಾಣಯ್ಯ ಎನ್., 1992, *ದಿ ಪೊಜಿಷನ್ ಆಫ್ ವುಮೆನ್ ಡ್ಯುರಿಂಗ್ ವಿಜಯನಗರ ಪಿರಿಯಡ್ (1336-1646)*, ಮೈಸೂರು, ಚಿತ್ರ 5.
3. *ತಿರುಪತಿ ತಿರುಮಲೈ ದೇವಸ್ಥಾನಂ ಇನ್ಸ್‌ಕ್ರಿಪ್ಷನ್ಸ್*, ಸಂ. 4.
4. *ಅದೇ.*
5. *ಅದೇ.*
6. ಸರಸ್ವತಿ, *ಪೂರ್ವೋಕ್ತ*, ಚಿತ್ರ 26.
7. *ಅದೇ*, ಚಿತ್ರಗಳು 27-28.

2. ಮೈಸೂರಿನ ದೇವಾಲಯಗಳಲ್ಲಿಯ ಭಿತ್ತಿ ಚಿತ್ರಗಳು ಮತ್ತು ಅವುಗಳ ಮೇಲೆ ವಿಜಯನಗರ ಶೈಲಿಯ ಪ್ರಭಾವ

ಆರ್.ಎಚ್. ಕುಲಕರ್ಣಿ

ಹಿನ್ನೆಲೆ

ಭಾರತದಲ್ಲಿ ಮೊಟ್ಟ ಮೊದಲಿಗೆ ವಿಶಿಷ್ಟವಾದ ಭಿತ್ತಿ ಚಿತ್ರಗಳ ಪರಂಪರೆ ಪ್ರಾರಂಭವಾದದ್ದು ಅಜಂತಾದ ಗುಹೆಗಳಲ್ಲಿ ಎನ್ನಬಹುದು. ಇವುಗಳು ಕ್ರಿ.ಪೂ. 1 ನೇ ಶತಮಾನದಿಂದ ಹಿಡಿದು ಕ್ರಿ.ಶ. 5 ನೇ ಶತಮಾನದವರೆಗಿನ ಅವಧಿಯಲ್ಲಿ ಬೆಳೆದವು. ಇವುಗಳ ಶೈಲಿಯು ಇದೇ ಕಾಲಕ್ಕೆ ಪರಿಪೂರ್ಣತೆಯನ್ನು ಹೊಂದಿ ಇನ್ನಿತರ ಕಡೆಗೆ ಪ್ರಸರಿಸಿತು. ರೇಖಾ ವಿನ್ಯಾಸ, ವರ್ಣಸಂಯೋಜನೆ, ರಚನಾ ವಿಧಾನದ ತಾಂತ್ರಿಕತೆ ಇವೆಲ್ಲ ಅಂಶಗಳಿಂದ ಅಜಂತಾದ ಭಿತ್ತಿ ಚಿತ್ರಗಳು ಭಾರತದಲ್ಲಿ ಅತ್ಯಂತ ಪ್ರಮುಖ ಉದಾಹರಣೆಗಳಾಗಿವೆ.

ಕರ್ನಾಟಕದಲ್ಲಿ ಪ್ರಾಚೀನತಮ ಭಿತ್ತಿಚಿತ್ರಗಳು ಕಂಡು ಬಂದರೂ ಅಜಂತಾದ ಭಿತ್ತಿಚಿತ್ರಗಳಂತೆ ಪರಿಪೂರ್ಣತೆಯನ್ನು ಹೊಂದಿದ ಒಂದು ಶೈಲಿಯು ಕಂಡುಬರುವುದು ಬಾದಾಮಿ ಚಾಲುಕ್ಯರ ಕಾಲದ ವೈಷ್ಣವ ಗುಹೆಯಲ್ಲಿ[1] (ಈಗ ಈ ಭಿತ್ತಿಚಿತ್ರಗಳು ಭಾಗಶಃ ಹಾಳಾಗಿವೆ). ಬಾದಾಮಿಯ ಚಿತ್ರಗಳಲ್ಲಿ ರಚಿತವಾದ ವಿಷಯಗಳು ವೈದಿಕ ಧರ್ಮಕ್ಕೆ ಸಂಬಂಧಿಸಿದವು. ಅಂದರೆ, ಅಂದಿನ ಕಾಲದ ಧಾರ್ಮಿಕ ಸಂವೇದನೆಗಳನ್ನು ಮೈಗೂಡಿಸಿಕೊಂಡು ಶಿಲ್ಪಗಳ ಜೊತೆಯಲ್ಲೇ ಈ ಚಿತ್ರಗಳು ಬೆಳವಣಿಗೆ ಹೊಂದಿದವು. ಅಜಂತಾದಲ್ಲಿರುವಂತೆ, ಬಾದಾಮಿಯಲ್ಲಿನ ಭಿತ್ತಿಚಿತ್ರಗಳಲ್ಲಿ ರೇಖಾ ವಿನ್ಯಾಸ - ನೀಳವಾದ ಬಾಹ್ಯ ರೇಖೆಗಳು, ವರ್ಣಸಂಶೋಜನೆಗಳಿಗೆ ಪ್ರಾಮುಖ್ಯತೆ ನೀಡಿರುವುದನ್ನು ಗಮನಿಸಬಹುದು.

ಬಾದಾಮಿ ಚಾಲುಕ್ಯರ ಕಾಲದ ನಂತರದಲ್ಲಿ ಭಿತ್ತಿ ಚಿತ್ರಗಳ ಪರಂಪರೆ ಕರ್ನಾಟಕದಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ. ಇವರ ನಂತರದ ಅರಸು ಮನೆತನಗಳಾದ ರಾಷ್ಟ್ರಕೂಟರ ಕಾಲದಲ್ಲಿ ಎಲ್ಲೋರದ ಕೈಲಾಸನಾಥ ದೇವಾಲಯದಲ್ಲಿ ಭಿತ್ತಿ ಚಿತ್ರಗಳಿದ್ದುದರ ಬಗ್ಗೆ ತಿಳಿದುಬರುತ್ತದೆ. ಅದರಂತೆ ತಮಿಳು ನಾಡಿನಲ್ಲಿ ಪಲ್ಲವ, ಚೋಳರ ಕಾಲದಲ್ಲಿಯೂ ಕೂಡಾ ಭಿತ್ತಿ ಚಿತ್ರಗಳು ಹಲವಾರು ಸ್ಥಳಗಳಲ್ಲಿ ಕಂಡು ಬರುತ್ತವೆ.

ಈ ಮೇಲೆ ಹೇಳಿದ ಕಾಲಗಳ ನಂತರ ಹೆಚ್ಚು ಕಡಿಮೆ ವಿಜಯನಗರದ ಕಾಲದವರೆಗೆ ಅಂತಹ ಪ್ರಮುಖ ಭಿತ್ತಿ ಚಿತ್ರಗಳ ಉದಾಹರಣೆಗಳು ಕಂಡು ಬರುವುದಿಲ್ಲ. ಈ ಕಾಲದಲ್ಲೇ ಮೊಟ್ಟಮೊದಲ ಬಾರಿಗೆ ಚಿತ್ರಗಳು ತಾಳೆಗರಿಗಳ ಮೇಲೆ ಗುಜರಾತ್, ರಾಜಾಸ್ಥಾನ, ಒರಿಸ್ಸಾ ಮತ್ತು ಕರ್ನಾಟಕಗಳಲ್ಲಿ ಸಮಕಾಲೀನವಾಗಿ ಪ್ರಾರಂಭವಾದವು.[2] ಬಹುಶಃ ಇವುಗಳಿಂದಲೇ ಮಿನಿಯೇಚರ್ ಶೈಲಿಗಳು ಬೆಳೆದವು; ಇವುಗಳು ಪ್ರಮುಖವಾಗಿ ರಾಜಾಸ್ಥಾನಿ ಮತ್ತು ಮೊಗಲ್ ಸಾಂಪ್ರದಾಯಿಕ ಚಿತ್ರ ಶೈಲಿಗಳು.

ಭಿತ್ತಿ ಚಿತ್ರಗಳ ಪರಂಪರೆಗೆ ಮತ್ತೊಂದು ಬಾರಿ ಪ್ರಾಮುಖ್ಯತೆ ಬಂದದ್ದು ವಿಜಯನಗರದ ಅರಸರ ಕಾಲದಲ್ಲಿ. ಇವರ ಕಾಲದಲ್ಲಿ ಕಲೆಗೆ ವಿಶೇಷ ಪ್ರೋತ್ಸಾಹ ದೊರೆತು ಹಲವಾರು ಕಡೆಗಳಲ್ಲಿ ಭಿತ್ತಿಚಿತ್ರಗಳು ರಚನೆಯಾದವು. ಮುಖ್ಯವಾಗಿ ಹಂಪೆಯ ವಿರೂಪಾಕ್ಷ ದೇವಾಲಯ ಮತ್ತು ಲೇಪಾಕ್ಷಿಯ (ಆಂಧ್ರಪ್ರದೇಶ) ವೀರಭದ್ರ ದೇವಾಲಯದಲ್ಲಿನ ಭಿತ್ತಿ ಚಿತ್ರಗಳು.[3] ಇವು ಶ್ರೀ ಕೃಷ್ಣದೇವರಾಯ ಮತ್ತು ಅಚ್ಯುತದೇವರಾಯರ ಕಾಲದಲ್ಲಿ ರಚಿತವಾದವು. ವಿಜಯನಗರದ ಭಿತ್ತಿಚಿತ್ರಗಳು ಸುಮಾರು 1500 ರಿಂದ 1540 ರ ಮಧ್ಯೆ ರಚಿತವಾಗಿವೆ. ಈ ಭಿತ್ತಿಚಿತ್ರಗಳು ನಂತರದ ಶೈಲಿಗಳಿಗೆ ಪ್ರೇರಣೆಯಾದವು. ಅವುಗಳಿಂದ ಪ್ರಭಾವವನ್ನು ಹೊಂದಿ ರಚಿತವಾದ ಚಿತ್ರಶೈಲಿಗಳು ತಂಜಾವೂರು ಮತ್ತು ಮೈಸೂರುಗಳಲ್ಲಿ ಕಂಡುಬರುತ್ತದೆ.

ವಿಜಯನಗರದ ಪತನದ ನಂತರದ ಕಾಲದಲ್ಲಿನ ಚಿತ್ರಕಲೆಯ ಬಗ್ಗೆ ನಮಗೆ ಸರಿಯಾಗಿ ತಿಳಿದುಬರುವುದಿಲ್ಲ.[4] ಅಂದು ಕಲಾವಿದರು ಬಹುಶಃ ಹಲವಾರು ಸ್ಥಳಗಳಿಗೆ ಹೊಸ ಆಶ್ರಯಗಳನ್ನು ಹುಡುಕಿಕೊಂಡು ಹೋಗಿರಬಹುದು. ಈ ವಲಸೆಯಿಂದಲೇ ವಿಜಯನಗರದಲ್ಲಿ ಅಂದು ಪ್ರಚಲಿತದಲ್ಲಿದ್ದ ಚಿತ್ರಶೈಲಿಗಳು ಬೇರೆ ಬೇರೆ ಕಡೆ ಪ್ರಸರಿಸಲು ಸಾಧ್ಯವಾಯಿತು. ಇದಕ್ಕೆ ಪ್ರಮುಖ ಉದಾಹರಣೆಗಳೆಂದರೆ ಮೈಸೂರಿನ ಚಿತ್ರಶೈಲಿ ಮತ್ತು ತಂಜಾವೂರಿನ ಚಿತ್ರಶೈಲಿಗಳು. ಇವೆರಡು ಸ್ಥಳಗಳು ವಿಜಯನಗರದ ಅರಸರ ಕಾಲದಲ್ಲೇ ಕಲಾ ಚಟುವಟಿಕೆಗಳ ಕೇಂದ್ರಗಳಾಗಿದ್ದವು. ನಂತರದಲ್ಲಿ ಅಂದರೆ, ವಿಜಯನಗರದ ಪತನದ ನಂತರ ಈ ಚಟುವಟಿಕೆಗಳು ತೀವ್ರಗೊಂಡು ಸುಮಾರು 1800 ರಲ್ಲಿ ಹಲವು ಅತ್ಯುತ್ತಮ ಭಿತ್ತಿ ಚಿತ್ರಗಳ ನಿರ್ಮಾಣಕ್ಕೆ ಪ್ರೇರಣೆಯಾಯಿತು.

ಮೈಸೂರಿನ ದೇವಾಲಯಗಳಲ್ಲಿ ಭಿತ್ತಿ ಚಿತ್ರಗಳು

ಮೈಸೂರಿನ ಇತಿಹಾಸದಲ್ಲೀ ಕಲೆ ಮತ್ತು ಸಂಸ್ಕೃತಿಗೆ ಹೆಚ್ಚಿನ ಪ್ರೋತ್ಸಾಹ ದೊರೆತಿದ್ದು ನಮಗೆ ಇತಿಹಾಸ ಪುಟಗಳಿಂದ ತಿಳಿದು ಬರುತ್ತದೆ. ರಾಜಒಡೆಯರ ಕಾಲದಲ್ಲಿ (ಕಿ.ಶ. 1617) ಶ್ರೀರಂಗಪಟ್ಟಣದಿಂದ ರಾಜಧಾನಿಯನ್ನು ಮೈಸೂರಿಗೆ ಸ್ಥಳಾಂತರಿಸಿದ ನಂತರ ಇಲ್ಲಿ ಕಲಾತ್ಮಕ ಚಟುವಟಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಅಂದು ವಿಜಯನಗರದಲ್ಲಿದ್ದ ಕೆಲವು ಕಲಾವಿದರು ಇಲ್ಲಿಗೆ ಬಂದಿರುವ ಸಾಧ್ಯತೆ ಇದೆ. ಆದರೆ, ಭಿತ್ತಿ ಚಿತ್ರಗಳ ಪರಿಪೂರ್ಣವಾದ ಶೈಲಿಯ ಬೆಳವಣಿಗೆ ಆದದ್ದು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ. ಇವರ ಕಾಲದಲ್ಲಿ ಪ್ರಸ್ತುತ ಅರಮನೆಯ ಆವರಣದಲ್ಲಿನ ಹಲವಾರು ದೇವಾಲಯಗಳು ನಿರ್ಮಾಣವಾದವು. ಅವುಗಳಲ್ಲಿ ಕೆಲವು ದೇವಾಲಯಗಳಲ್ಲಿ ಪ್ರಮುಖ ಭಿತ್ತಿಚಿತ್ರಗಳಿರುವುದು ವಿಶೇಷ.

ಶ್ರೀ ಶ್ವೇತವರಾಹಸ್ವಾಮಿ ಮತ್ತು ಶ್ರೀ ಅಮೃತವಲ್ಲಿ ಅಮ್ಮನವರ ದೇವಸ್ಥಾನ್ ಮತ್ತು ಶ್ರೀ ಪ್ರಸನ್ನ ಕೃಷ್ಣಮಂದಿರ (ಕ್ರಿ.ಶ. 1829)ಗಳಲ್ಲಿ ಭಿತ್ತಿ ಚಿತ್ರಗಳು ರಚನೆಯಾದವು. ಇವಲ್ಲದೇ ದೇವಾಂಬ ಅಗ್ರಹಾರದಲ್ಲಿನ ಶ್ರೀ ಪ್ರಸನ್ನ ವೆಂಕಟರಮಣ ದೇವಾಲಯ (ಸು. 1825-30) ದಲ್ಲಿ ಒಡೆಯರುಗಳ ಮತ್ತು ಇನ್ನಿತರರ ಸುಂದರ ಭಾವ ಚಿತ್ರಗಳು ಭಿತ್ತಿಚಿತ್ರಗಳಲ್ಲಿ ರಚನೆಗೊಂಡಿವೆ.


ಈ ಮೇಲಿನ ದೇವಾಲಯಗಳಲ್ಲಿ. ಭಿತ್ತಿ ಚಿತ್ರಗಳ ವಿಷಯವು ಸಾಮಾನ್ಯವಾಗಿ ''ಕೃಷ್ಣಲೀಲೆ'' (ಭಾಗವತ) ಮತ್ತು ''ರಾಮಾಯಣ''ಕ್ಕೆ[6] ಸಂಬಂಧಿಸಿದ್ದಾಗಿದೆ. ಇವುಗಳಲ್ಲಿ ಹಲವು ಪ್ರಮುಖ ಘಟನೆಗಳನ್ನೂ ಆಧರಿಸಿ ಸಂಕ್ಷೇಪವಾಗಿ ಚಿಕಣಿ ಚಿತ್ರಗಳ ಮಾದರಿಯಲ್ಲಿ (miniature style) ಗೋಡೆಯನ್ನೇ ವಿಭಿನ್ನ ಭಾಗಗಳನ್ನಾಗಿಸಿ ಚಿತ್ರಿಸಿರುವುದು ಗಮನಾರ್ಹ ಸಂಗತಿ. ಇವುಗಳಲ್ಲಿ ಕಂಡುಬರುವ ಸಾಮಾನ್ಯ ರೇಖಾವಿನ್ಯಾಸ, ವರ್ಣಸಂಯೋಜನೆ ಮತ್ತು ಆಕೃತಿಗಳ ಸಂಯೋಜನೆಯನ್ನು ಹಲವು ಉದಾಹರಣೆಗಳೊಂದಿಗೆ ಗಮನಿಸಬಹುದು.

ಶ್ರೀ ಶ್ವೇತವರಾಹಸ್ವಾಮಿ ದೇವಸ್ಥಾನ ಮತ್ತು ಶ್ರೀ ಅಮೃತವಲ್ಲಿ ಅಮ್ಮನವರ ದೇವಸ್ಥಾನ

ಇವೆರಡೂ ದೇವಸ್ಥಾನಗಳೂ ಒಂದೇ ಪ್ರಾಕಾರದಲ್ಲಿರುವುದರಿಂದ ಮತ್ತು ಇವುಗಳಲ್ಲಿನ ಭಿತ್ತಿ ಚಿತ್ರಗಳ ವಿಷಯವ್ಯಾಪ್ತಿಗಳೂ ಒಂದೇ ಆಗಿರುವುದರಿಂದ ಇವೆರಡನ್ನೂ ಒಟ್ಟಿಗೆ ನೋಡಬಹುದು.

ಶ್ರೀ ಶ್ವೇತವರಾಹಸ್ವಾಮಿ ದೇವಸ್ಥಾನದಲ್ಲಿ ಭಿತ್ತಿ ಚಿತ್ರಗಳನ್ನು ನವರಂಗದ ಒಳಬದಿಯ ಗೋಡೆಯ ಮೇಲೆ ರಚಿಸಿದ್ದಾರೆ. ಎಡಪಾರ್ಶ್ವದಲ್ಲಿನ ಗೋಡೆಯ ಮೇಲೆ ಕೃಷ್ಣಲೀಲೆಗೆ ಸಂಬಂಧಿಸಿದ ಚಿತ್ರಗಳಿದ್ದರೆ ಬಲಪಾರ್ಶ್ವದ ಗೋಡೆಯ ಮೇಲೆ ರಾಮಾಯಣಕ್ಕೆ ಸಂಬಂಧಿಸಿದ ರಾಮ-ರಾವಣ ಯುದ್ಧದ ದೃಶ್ಯಗಳಿವೆ.

ಈ ದೇವಸ್ಥಾನದ ಭಿತ್ತಿ ಚಿತ್ರಗಳಲ್ಲಿನ ಆಕೃತಿಗಳು ಸಾಮಾನ್ಯವಾಗಿ ಒಂದೇ ತೆರನಾಗಿ ಇವೆ. ಇವುಗಳ ಬಾಹ್ಯರೇಖೆಗಳು ಮತ್ತು ವರ್ಣ ಸಂಯೋಜನೆಯು ಕೂಡ ಸಾಮ್ಯತೆ ಹೊಂದಿದೆ. ಕೆಂಪು (ಚಪ್ಪಟೆ ಎನ್ನಿಸುವಂತಹ) ಬಣ್ಣವನ್ನು ಎಲ್ಲಾ ಚಿತ್ರಗಳಲ್ಲಿ ಹಿನ್ನೆಲೆ



1. ಕೃಷ್ಣಲೀಲಾ, ಶ್ವೇತವರಾಹಸ್ವಾಮಿ ದೇವಸ್ಥಾನ



2. ಶ್ರೀ ಕೃಷ್ಣ-ರುಕ್ಮಿಣಿ ಕಲ್ಯಾಣ, ಶ್ವೇತವರಾಹಸ್ವಾಮಿ ದೇವಸ್ಥಾನ

ಬಣ್ಣವಾಗಿ ಉಪಯೋಗಿಸಿದ್ದಾರೆ. ಇವುಗಳ ಮೇಲೆ ಕಥಾನಕ ವಸ್ತುಗಳನ್ನು ಚಿತ್ರಿಸಿದ್ದಾರೆ. ಚಿತ್ರಗಳನ್ನು ವಿಭಿನ್ನ ರೀತಿಯ ಸಂಯೋಜನೆಯಿಂದ ತೋರಿಸಲಾಗಿದೆ. ಅಂದರೆ, ಆಯಾ ದೃಶ್ಯಕ್ಕೆ ಒಂದು ಚೌಕಟ್ಟನ್ನು ಹಾಕಿದಂತೆ ಇರುವ ಹಳದಿ ಬಣ್ಣದ ಪಟ್ಟಿಯು ಚಿತ್ರಗಳ ದೃಶ್ಯಾವಳಿಗಳನ್ನು ಭಾಗವಾಗಿಸುತ್ತದೆ. ಚಿತ್ರದ ವಿಷಯವ್ಯಾಪ್ತಿ ಸ್ವಲ್ಪ ಹೆಚ್ಚು ಇದ್ದಲ್ಲಿ ಅಥವಾ ಅದರ ಸಂದರ್ಭಕ್ಕೆ ಅನುಸಾರವಾಗಿ ಹಾಗೇ ಒಂದೇ ಹಂತದಲ್ಲಿ ಚಿತ್ರಿಸಿದ್ದಾರೆ. ಅಂದರೆ, ಇಲ್ಲಿ ಚಿಕ್ಕಭಾಗಗಳನ್ನು ಮಾಡಿರುವುದಿಲ್ಲ. ಉದಾಹರಣೆಗೆ ರಾಮಾಯಣದ ಚಿತ್ರಗಳನ್ನು ಇಲ್ಲಿ ಅಡ್ಡವಾಗಿ ಚಿತ್ರಿಸಿದ್ದಾರೆ. ಏಕೆಂದರೆ ಇಲ್ಲಿ ಯುದ್ಧದ ಸನ್ನಿವೇಶಗಳಿದ್ದು, ವಾನರ ಸೈನ್ಯ ಮತ್ತು ರಾಕ್ಷಸರ ಸೈನ್ಯಗಳಲ್ಲಿ ವಿವಿಧ ಅಂಶಗಳನ್ನು ಎಡಬದಿಯ ಗೋಡೆಯಮೇಲೆ ಇರುವ ಭಾಗವತದ ಕಥೆಯಂತೆ ಚಿತ್ರಿಸಲು ಸಾಧ್ಯವಿಲ್ಲ. ಆದ್ದರಿಂದ ಇಲ್ಲಿ ಇಡಿಯಾಗಿ ಗೋಡೆಯನ್ನು ಆವರಿಸಿರುವಂತೆ ಆಕೃತಿಗಳನ್ನು ಅಡ್ಡವಾಗಿ ಚಿತ್ರಿಸಿದೆ.

ಕೃಷ್ಣಲೀಲೆಗಳಲ್ಲಿ ಹಲವಾರು ದೃಶ್ಯಗಳಿವೆ (ಚಿತ್ರ 1). ಪ್ರಾರಂಭದಲ್ಲಿ ಶ್ರೀ ವಿಷ್ಣುಶೇಷಶಾಯಿಯ ದೃಶ್ಯವಿದ್ದರೆ, ನಂತರದಲ್ಲಿ ವಸುದೇವ-ದೇವಕಿಯರ ವಿವಾಹವನ್ನು ತೋರಿಸುವ ಚಿತ್ರಣವಿದೆ. ಶ್ರೀ ವಿಷ್ಣುಶೇಷಶಾಯಿಯ ಚಿತ್ರದ ಪ್ರಾರಂಭದಲ್ಲಿ ಶಿವ ಪಾರ್ವತಿಯರು ನಿಂತಿದ್ದು, ಬ್ರಹ್ಮ ವಿಷ್ಣುವಿನ ತಲೆಯ ಭಾಗದಲ್ಲಿ ಕೈಜೋಡಿಸಿಕೊಂಡು ನಿಂತಿದ್ದಾನೆ. ಶ್ರೀದೇವಿ-ಭೂದೇವಿಯರು ವಿಷ್ಣುವಿನ ಕಾಲು ಒತ್ತುತ್ತಿದ್ದಾರೆ. ಈ ದೃಶ್ಯ ಬಹುಶಃ ಭೂಲೋಕದಲ್ಲಿ ಜನ್ಮವೆತ್ತಬೇಕಾದ ಕೃಷ್ಣನ ಮೂಲವಾದ ವಿಷ್ಣುವನ್ನು ತೋರಿಸಲು ಮತ್ತು ಈ ಕಾರ್ಯಕ್ಕೆ ಕಾರಣೀಭೂತರಾದ ದೇವಕಿ-ವಸುದೇವರ ಮದುವೆಯ ಸಂದರ್ಭಗಳನ್ನು ತೋರಿಸಿರುವುದರಿಂದ ತುಂಬಾ ಅರ್ಥಗರ್ಭಿತವಾಗಿ ಕಾಣಿಸುತ್ತದೆ.


ಈ ಚಿತ್ರದ ನಂತರದಲ್ಲಿ ಕಂಸನು ದೇವಕಿ-ವಸುದೇವರ ಮಕ್ಕಳನ್ನು ಕೊಲ್ಲುವ ಚಿತ್ರವೂ ಇದೆ. ಇದರ ನಂತರ, ಶ್ರೀಕೃಷ್ಣನ ಜನನ ಮತ್ತು ಅವನ ಬಾಲ್ಯದಲ್ಲೇ ಅತೀವ ಶಕ್ತಿಯಿಂದ ಮೆರೆದ ಕಾರ್ಯಗಳನ್ನು ತೋರಿಸುವ (ಪೂತನೀ ವಧೆ) ಚಿತ್ರಗಳಿವೆ. ಅಲ್ಲದೇ, ಕೃಷ್ಣನ ಶೃಂಗಾರ ಚಿತ್ರಗಳಾದ ಗೋಪಿಕಾ ವಸ್ತ್ರಾಪಹರಣ ಮತ್ತು ಇನ್ನಿತರ ಚಿತ್ರಗಳಾದ ಗೋವರ್ಧನಗಿರಿ ಎತ್ತಿರುವ ಚಿತ್ರ, ಕಂಸವಧೆ, ಕಾಳೀಯದಮನ ಮತ್ತು ಕೊನೆಯದಾಗಿ ರುಕ್ಮಿಣಿ ಕಲ್ಯಾಣ - ಅಪಹರಣದ ಚಿತ್ರಗಳೂ ಚಿತ್ರಣಗೊಂಡಿವೆ.

ಈ ಎಲ್ಲಾ ಚಿತ್ರಗಳಲ್ಲಿ ರೇಖೆಯು ಪ್ರಧಾನವಾಗಿದೆ. ಬಣ್ಣಗಳನ್ನೂ ಕೂಡ ವಿವಿಧತೆಯಿಂದ ತೋರಿಸಲಾಗಿದೆ. ಶ್ರೀಕೃಷ್ಣನಿಗೆ ಸಾಮಾನ್ಯವಾಗಿ ನೀಲಿ ಬಣ್ಣವನ್ನೇ ಉಪಯೋಗಿಸಿದೆ. ಚಿತ್ರಗಳಲ್ಲಿ ಹಿನ್ನೆಲೆಯಾಗಿ ಕೆಂಪು ಬಣ್ಣವು ಇದೆ. ಇದರ ಮೇಲೆ ವಿವಿಧ ದೃಶ್ಯಾವಳಿಗಳನ್ನು ಸಂಕ್ಷೇಪವಾಗಿ (minimal) ತೋರಿಸಿ - ಎರಡು ಅಥವಾ ಮೂರು ಆಕೃತಿಗಳಲ್ಲಿ ಸಂಪೂರ್ಣ ಕಥೆಯನ್ನಾಗಿ ರೂಪಿಸುವ ಜಾಣ್ಮೆ ಕಲಾವಿದನದು. ಇಲ್ಲಿ ಕಲಾವಿದ ಚಿತ್ರದಲ್ಲಿ ದೃಶ್ಯಾಂತರವನ್ನು (visual perspective) ತೋರಿಸಲು ಆಕೃತಿಗಳನ್ನು ಹಿಂದೆ-ಮುಂದೆ ಕಾಣುವಂತೆ ಚಿತ್ರಿಸಿದ್ದಾನೆ. ಉದಾಹರಣೆಗೆ: ಗೋಪಿಕಾ ವಸ್ತ್ರಾಪಹರಣ ಚಿತ್ರದಲ್ಲಿ ನೀರು-ಮರ-ಮತ್ತು ಹಿನ್ನೆಲೆಗಳನ್ನು ಅತ್ಯಂತ ಅರ್ಥಗರ್ಭಿತವಾಗಿ ಯಥಾವತ್ತಾಗಿ ಚಿತ್ರಿಸಿದ್ದಾನೆ ಮತ್ತು ಶ್ರೀ ಕೃಷ್ಣ ರುಕ್ಮಿಣಿಯರ ವಿವಾಹದ ದೃಶ್ಯದಲ್ಲಿ ಈ ದೃಶ್ಯಾಂತರದ ಉಪಯೋಗ ಹೆಚ್ಚು ಸ್ಪಷ್ಟವಾಗಿ ಮತ್ತು ಇದರಲ್ಲಿ ಅರಮನೆ-ಹಿನ್ನೆಲೆ-ಮುನ್ನೆಲೆಗಳನ್ನು ಕಣ್ಣೆಲೆಯಿಂದ ನೈಜವಾಗಿ ಕಾಣುವಂತೆ ಕಲಾವಿದ ಚಿತ್ರಿಸಿದ್ದಾನೆ (ಚಿತ್ರ 2). ಈ ಚಿತ್ರಗಳು ಒಂದು ಕ್ಷಣ ರಾಜಸ್ಥಾನಿ ಶೈಲಿಯಲ್ಲಿನ ಜಯಪುರ-ಉದಯಗಿರಿ ಚಿಕಣಿ ಚಿತ್ರಗಳನ್ನು (miniature painting) ಜ್ಞಾಪಕಕ್ಕೆ ತರದೆ ಇರುವುದಿಲ್ಲ.

ಬಲಗೋಡೆಯ ಚಿತ್ರದಲ್ಲಿ ಹನುಮಂತನು ಲಕ್ಷ್ಮಣನನ್ನು ಹೆಗಲ ಮೇಲೆ ಹೊತ್ತು ವಾನರ ಸೈನ್ಯದೊಂದಿಗೆ ಮುನ್ನುಗ್ಗುತ್ತಿರುವ ದೃಶ್ಯ, ಕೆಳಗಡೆಯ ಸ್ತರಗಳಲ್ಲಿ ರಾಮನು ರಥದಲ್ಲಿ ಕುಳಿತು ಯುದ್ಧಮಾಡುತ್ತಿರುವಂತೆ ತೋರಿಸಲಾಗಿದೆ (ಚಿತ್ರ 3). ಇವರ ವಿರುದ್ಧವಾಗಿ ರಾಕ್ಷಸ ಸೈನ್ಯವನ್ನು ಇದಕ್ಕೆ ಹೊಂದಿಕೊಂಡಿರುವ ಪಕ್ಕದ ಗೋಡೆಯಲ್ಲಿ ಚಿತ್ರಿಸಲಾಗಿದೆ. ಇವುಗಳಲ್ಲಿ ಕುಂಭಕರ್ಣ, ಇಂದ್ರಜಿತ್ ಮತ್ತು ದಶಮುಖ ರಾವಣನು ರಥದಲ್ಲಿ ಕುಳಿತು ರಾಮನಿಗೆ ಇದಿರಾಗಿ ಯುದ್ಧ ಮಾಡುವಂತೆ ಇದೆ. ಇವುಗಳಲ್ಲಿ ವಿಶೇಷವಾಗಿ ವರ್ಣಗಳ ಉಪಯೋಗವನ್ನು ಗಮನಿಸಬೇಕು. ಕಾಲಾವಿದ ವಿವಿಧ ಆಕೃತಿಗಳನ್ನು ಒಂದರಿಂದ ಇನ್ನೊಂದನ್ನು ವಿಭಜಿಸಲು ಮತ್ತು ಅವುಗಳ ನಡುವಿನ ಅಂತರವನ್ನು ತೋರಿಸಲು ವಿವಿಧ ವರ್ಣಗಳನ್ನು ಉಪಯೋಗಿಸಿದ್ದಾನೆ.



3. ರಾಮಾಯಣ, ರಾಮನು ಯುದ್ಧ ಮಾಡುವ ಚಿತ್ರ, ಶ್ವೇತವರಾಹಸ್ವಾಮಿ ದೇವಸ್ಥಾನ



4. ಶ್ರೀ ಕೃಷ್ಣ-ರುಕ್ಮಿಣಿ ಕಲ್ಯಾಣ. ಅಮೃತವಲ್ಲಿ ಅಮ್ಮನವರ ದೇವಸ್ಥಾನ

ಸ್ಥೂಲವಾಗಿ ಈ ಭಿತ್ತಿ ಚಿತ್ರಗಳಲ್ಲಿ ಕಂಡುಬರುವ ಸಾಮಾನ್ಯ ಅಂಶ ಎಂದರೆ, ಸಾಮಾನ್ಯವಾಗಿ ಎಲ್ಲಾ ಆಕೃತಿಗಳನ್ನೂ ಒಂದೇ ತಳರೇಖೆಯ ಮೇಲೆ ವಿವಿಧ ಭಂಗಿಗಳಲ್ಲಿ ಚಿತ್ರಿಸಿರುವುದು, ಆಕೃತಿಗಳಿಗೆ ವಿವಿಧ ಭಂಗಿಗಳನ್ನು ನೀಡಿ ಅವುಗಳಲ್ಲಿ ನಾಟಕೀಯವಾದ (dramatic) ಜೀವವನ್ನು ತುಂಬಿ ದೃಶ್ಯದಲ್ಲಿ ಸಂಯೋಜನೆಗೆ ಅರ್ಥಬರುವಂತೆ ಮಾಡುವುದು. ಇನ್ನು ಇವುಗಳ ಬಾಹ್ಯರೇಖೆಗಳು ಲೇಪಾಕ್ಷಿಯ ಚಿತ್ರಗಳ ಹಾಗೆ ಕೊರೆದು ಮಾಡಿದಂತೆ ಕಾಣಿಸುತ್ತವೆ. ಆದರೂ ಅವುಗಳಲ್ಲಿನ ನೀಳವಾದ ಉಬ್ಬು ತಗ್ಗುಗಳು, ಮುಖದ ಹಲವು ಭಾಗಗಳು ಚೆನ್ನಾಗಿ ಮೂಡಿ ಬಂದಿವೆ. ಆದರೆ ಹಂಪೆ ಮತ್ತು ಲೇಪಾಕ್ಷಿಗಳಲ್ಲಿಯ ಭಿತ್ತಿಚಿತ್ರಗಳಲ್ಲಿರುವ ನೈಜತೆ ಮತ್ತು ಭಾವುಕತೆ ಇಲ್ಲಿ ಅಷ್ಟಾಗಿ ಕಾಣಬರುವುದಿಲ್ಲ.

ಶ್ರೀ ಅಮೃತವಲ್ಲಿ ಅಮ್ಮನವರ ದೇವಸ್ಥಾನದಲ್ಲಿನ ಭಿತ್ತಿ ಚಿತ್ರಗಳಲ್ಲಿ ಮಿನಿಯೇಚರ್ ಶೈಲಿಯ ಪ್ರಭಾವ ಕಂಡುಬರುತ್ತದೆ. ಬಹುಶಃ ಇದು ದಖ್ಖನಿ ಮತ್ತು ಮೈಸೂರ ಶೈಲಿಯ ಪ್ರಭಾವವಿರಬೇಕು. ಏಕೆಂದರೆ ಇಲ್ಲಿನ ಚಿತ್ರಗಳಲ್ಲಿ ಆಕೃತಿಗಳ ಬಾಹ್ಯರೇಖೆಗಳು ಮತ್ತು ಅವುಗಳಿಗೆ ಉಪಯೋಗಿಸಿದ ನೈಜ ಬಣ್ಣಗಳು ಅತ್ಯಂತ ಜಾಗರೂಕತೆಯಿಂದ ಉಪಯೋಗಿಸಿದಂತೆ ತೋರುತ್ತದೆ. ಶ್ರೀ ಶ್ವೇತವರಾಹಸ್ವಾಮಿ ದೇವಾಲಯದಲ್ಲಿನ ಚಿತ್ರಗಳ ಸಂಯೋಜನೆಯ ಹಾಗೆ ಇಲ್ಲೂ ಕೂಡ ಚಿತ್ರಗಳನ್ನು ವಿಭಿನ್ನ ಭಾಗಗಳಾಗಿ ಚಿತ್ರಿಸಲಾಗಿದೆ. ಇಲ್ಲಿಯೂ ಕೂಡ ಕೃಷ್ಣಲೀಲೆ ಮತ್ತು ಶ್ರೀ ರಾಮ ಪಟ್ಟಾಭಿಷೇಕದ ಮತ್ತು ಇನ್ನಿತರ ಚಿತ್ರಗಳಿವೆ. ಇಲ್ಲಿನ ಗೋಡೆಯಲ್ಲಿ ಸೇರಿರುವ ಕನ್ನಡಿಯ ಬಾಗಿಲುಗಳ ಒಳ ಮತ್ತು ಹೊರ ಭಾಗಗಳಲ್ಲಿ ಕೃಷ್ಣಲೀಲೆಯ ಚಿತ್ರಗಳಿವೆ. ಇವುಗಳಲ್ಲಿ ಗೋವರ್ಧನ, ಕಂಸವಧೆ, ರುಕ್ಮಿಣಿ ಕಲ್ಯಾಣ ಇತ್ಯಾದಿಗಳು ಮುಖ್ಯ ಉದಾಹರಣೆಗಳು. ಈ ದೇವಸ್ಥಾನದಲ್ಲಿನ ರುಕ್ಮಿಣಿ ಕಲ್ಯಾಣದ ಚಿತ್ರವನ್ನು ಶ್ರೀ ಶ್ವೇತವರಾಹಸ್ವಾಮಿ ದೇವಾಲಯದಲ್ಲಿ ಇಂತಹದೇ ಉದಾಹರಣೆಗೆ ಹೋಲಿಸಿದಾಗ ಇದು ಸ್ಪಷ್ಟವಾಗಿ ಅದಕ್ಕಿಂತ ನೈಜತೆಯನ್ನು ತೋರಿಸುತ್ತದೆ. ಅಂದರೆ ರೇಖೆಗಳ, ಬಣ್ಣಗಳ, ಚಿತ್ರದಲ್ಲಿನ ಆಕೃತಿಗಳ ಮತ್ತು ಇನ್ನಿತರ ಅಂಶಗಳನ್ನು ವಾಸ್ತವಿಕವಾಗಿ ತೋರಿಸುತ್ತದೆ (ಚಿತ್ರ 4).

ಈ ಚಿತ್ರಗಳನ್ನು ಒಟ್ಟಾಗಿ ಗಮನಿಸಿದಾಗ ಹಂಪೆಯ ವಿರೂಪಾಕ್ಷ ದೇವಾಲಯದ ಭಿತ್ತಿ ಚಿತ್ರಗಳ ಜ್ಞಾಪಕ ಬರುತ್ತದೆ. ಅಲ್ಲಿಯೂ ಕೂಡ ವಿವಿಧ ದೃಶ್ಯಾವಳಿಗಳನ್ನು ಚಿಕ್ಕ ಚಿಕ್ಕ ಚೌಕಾಕಾರದ ಭಾಗಗಳಲ್ಲಿ ಚಿತ್ರಿಸಿದ್ದಾರೆ. ಮಧ್ಯಭಾಗದಲ್ಲಿ ಪ್ರಮುಖ ವಿಷಯವನ್ನು ಕೇಂದ್ರವಾಗಿಟ್ಟುಕೊಂಡು ಸುತ್ತಲೂ ಹಲವು ಉಪಕತೆಗಳು ಅಥವಾ ಇನ್ನಿತರ ಆಕೃತಿಗಳ ರಚನೆ ಮಾಡುತ್ತಿದ್ದರು. ಇದು ಬಹುಶಃ ವಿಷಯಗಳನ್ನು ಸಂಕ್ಷೇಪವಾಗಿ ನಿರೂಪಿಸುವ ತಾಂತ್ರಿಕತೆ ಇರಬಹುದು ಅಥವಾ ಅಂದು ಪ್ರಚಲಿತದಲ್ಲಿದ್ದ ಚಿಕಣಿ ಚಿತ್ರಗಳ ಪರೋಕ್ಷ ಪ್ರಭಾವ ಕಲಾವಿದರ ಮೇಲೆ ಆಗಿದ್ದಿರಬಹುದು ಅಥವಾ ಅದಕ್ಕೆ ಸಮಾನಾಂತರವಾಗಿ ಇಲ್ಲಿನ ಕಲಾವಿದರು ಇದನ್ನು ಬೆಳಸಿರಲೂಬಹುದು.


ಇವೆರಡೂ ದೇವಾಲಯಗಳಲ್ಲಿನ ಚಿತ್ರ ಸಂಯೋಜನೆಯಲ್ಲಿ ಕೆಲವು ವಿಶೇಷಗಳಿವೆ. ಆಕೃತಿಗಳು ಚಿತ್ರದ ಮುಂದೆ ಬಂದಂತೆ ಇರುವುದು. ಕೆಲವೊಮ್ಮೆ ಕಟ್ಟಡದ ಚಿತ್ರವಿದ್ದರೆ ಕಲ್ಲುಗಳಿಂದ ''ಇಂಗ್ಲೀಷ್ ಬಾಂಡ್'' ರೀತಿಯಲ್ಲಿ ಜೋಡಿಸಿದಂತೆ ಚಿತ್ರಿಸಿರುವುದು ಕಂಡು ಬರುತ್ತದೆ. ಕೆಲವೊಮ್ಮೆ ಆಕೃತಿಗಳಲ್ಲಿ ಅಂತರವನ್ನು ಕಣ್ಣೆಲೆಗಳಿಂದ (perspective) ತೋರಿಸಲು ಪ್ರಯತ್ನಿಸಿ, ಕಟ್ಟಡದ ಒಳ ಮತ್ತು ಹೊರಾಂಗಣ ವಿಷಯಗಳನ್ನು ಏಕ ಕಾಲದಲ್ಲಿ (multiple angle) ತೋರಿಸಲು ಹಾವ, ಭಾವ ಮತ್ತು ಸಂಯೋಜನೆಯಲ್ಲಿ ಚಲನೆಯನ್ನು (movements) ಆಕೃತಿಗಳಲ್ಲಿ ಬಳಸಿಕೊಂಡಿರುವುದನ್ನು ಗಮನಿಸಬಹುದು. ಇದು ಕೂಡ ವಿಜಯನಗರ ಕಾಲದಿಂದ ಬೆಳೆದುಬಂದ ಚಿತ್ರಶೈಲಿಯ ಪ್ರಮುಖ ಅಂಗವಾಗಿದೆ. ಈ ತಂತ್ರದಿಂದ ಪ್ರಸ್ತುತ ಭಿತ್ತಿ ಚಿತ್ರಗಳಲ್ಲಿ ಭಾವಾಭಿವ್ಯಕ್ತಿ ಸಾಧ್ಯವಾಗಿದೆ.

ಶ್ರೀ ಪ್ರಸನ್ನ ಕೃಷ್ಣಮಂದಿರ (1829)

ಈ ದೇವಾಲಯವು ಕೂಡ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲೇ ನಿರ್ಮಾಣವಾಯಿತು. ಇಲ್ಲಿ ಪ್ರಮುಖವಾಗಿ, ಕೃಷ್ಣಲೀಲೆಗಳಿಗೆ ಸಂಬಂಧಿಸಿದ ಚಿತ್ರಗಳೇ ಇವೆ. ಇಲ್ಲಿಯೂ ಕೂಡಾ ಆಕೃತಿಗಳ ರಚನೆ ಶ್ರೀ ಶ್ವೇತವರಾಹಸ್ವಾಮಿ ದೇವಸ್ಥಾನದ ಭಿತ್ತಿ ಚಿತ್ರಗಳಂತೆ ಇದೆ. ಆದರೆ ಇಲ್ಲಿ ಚಿತ್ರಗಳ ಹಿನ್ನೆಲೆ ಹಳದಿ ಆಗಿದೆ. ಇದರ ಮೇಲೆ ಚೌಕಾಕಾರದ ಪಟ್ಟಿಗಳಿಗೆ ವಿವಿಧ ಸುಳುವಿನ ಚಿತ್ರಗಳ (floral designs) ವಿನ್ಯಾಸವನ್ನು ಮಾಡಿ, ಅವುಗಳ ಒಳಗಡೆ ಚಿತ್ರಗಳನ್ನು ರಚಿಸಿದ್ದಾರೆ. ಇಲ್ಲಿನ ಪ್ರಾಮುಖ್ಯತೆಯನ್ನು ಅವುಗಳ ದೃಶ್ಯ



5. ಕೃಷ್ಣಲೀಲಾ, ಪ್ರಸನ್ನ ಕೃಷ್ಣಮಂದಿರ



6. ಮೈಸೂರು ಒಡೆಯರ ಭಾವಚಿತ್ರಗಳು, ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ

ಸಂಯೋಜನೆಯಿಂದ (visual composition) ಗುರುತಿಸಬಹುದು. ಅಲ್ಲದೇ ಇಲ್ಲಿ ಕಲಾವಿದ ಆಕೃತಿಗಳಲ್ಲಿ ನೆರಳು-ಬೆಳಕಿನ (shade and light) ಸಂಯೋಜನೆಯನ್ನು ಮಾಡುವತ್ತ ಪ್ರಯತ್ನಿಸಿರುವುದು ಮತ್ತು ಆಕೃತಿಗಳಲ್ಲಿ ಘನರೂಪನ್ನು (three dimensionality) ತೋರಿಸುವ ಪ್ರಯತ್ನವನ್ನು ಸ್ಪಷ್ಟವಾಗಿ ಗಮನಿಸಬಹುದು.

ಶ್ರೀ ಪ್ರಸನ್ನ ಕೃಷ್ಣಮಂದಿರದ ವಿಶಾಲವಾದ ಒಳಗೋಡೆಗಳು ವಿವಿಧ ವರ್ಣಚಿತ್ರಗಳಿಂದ ಅಲಂಕಾರಗೊಂಡಿವೆ. ಶ್ರೀ ಕೃಷ್ಣಲೀಲೆಯೇ ಪ್ರಧಾನವಾದ ವಿಷಯವಾಗಿ ಚಿತ್ರಣಗೊಂಡಿದ್ದು, ಅದಕ್ಕೆ ಸಂಬಂಧಿಸಿದ ವಿವಿಧ ಕಥೆಗಳನ್ನು ನೈಜವಾಗಿ ಚಿತ್ರಿಸಲಾಗಿದೆ. ಉದಾಹರಣೆಗೆ: ಚಿತ್ರ 5 ರಲ್ಲಿನ ವಿವಿಧ ಕಥೆಗಳನ್ನು ಗಮನಿಸಬಹುದು. ಮಧ್ಯದಲ್ಲಿ (ದ್ವಾರದ ಮೇಲೆ) ಅಂಬೆಗಾಲು ಬೆಣ್ಣೆ ಕೃಷ್ಣನನ್ನು ಮರಕ್ಕೆ ಕಟ್ಟಿಹಾಕಿದೆ. ಅವನು ಮರವನ್ನು ತನ್ನ ಅಗಾಧ ಶಕ್ತಿಯಿಂದ ಎಳೆಯುತ್ತಿರುವಂತೆ ತೋರಿಸಲಾಗಿದೆ. ಮರ, ಮರದಲ್ಲಿನ ಪುಷ್ಪಕ ವಿಮಾನದ ತರಹ ಕಾಣುವ ವಸ್ತು ಮತ್ತು ಬದಿಗಳಲ್ಲಿ ನಿಂತ ಯಶೋದ-ಬಲರಾಮ ಹಾಗೂ ಕೃಷ್ಣನ ಬೆನ್ನಿನ ಮೇಲ್ಭಾಗದಲ್ಲಿನ ಯಮಳಾರ್ಜುನ ಮರಗಳನ್ನು ತೋರಿಸಿದೆ. ''ಯಮಳಾರ್ಜುನ ಭಂಜನವೆಂದು'' ಈ ಚಿತ್ರವನ್ನು ಗುರುತಿಸಬಹುದು. ಇದರ ಪಾರ್ಶ್ವದಲ್ಲಿ ಬ್ರಹ್ಮನು ಗೋವು ಮತ್ತು ಗೋಪಾಲಕರನ್ನು ಬಚ್ಚಿಟ್ಟದ್ದು - ಮತ್ತು ವೀರಾಸುರ ಸಂಹಾರದ ಕಥೆಗಳು ಇವೆ. ಇವುಗಳ ಕೆಳಗೆ ಬಕಾಸುರವಧೆ - ಮತ್ತು ಪ್ರಲಂಬಾಸುರ-ವಧೆಯ ಚಿತ್ರಗಳು ಇವೆ. ಇವುಗಳಲ್ಲಿ ಕಂಡುಬರುವ ನಾಟಕೀಯತೆಯನ್ನು ನೆನಪಿಸುವ ಸಂಯೋಜನೆ - ವರ್ಣವಿನ್ಯಾಸ ಮತ್ತು ಹಿನ್ನೆಲೆಯಲ್ಲಿರುವ ನೀರಿನ ಅಥವಾ ಮೋಡಗಳನ್ನು ಚಿತ್ರಿಸಿರುವ ರೀತಿ ವಾಸ್ತವಿಕತೆ ಮತ್ತು ಸ್ಥಳೀಯತೆಯನ್ನು ಮೇಳೈಸುತ್ತದೆ.

ಇಲ್ಲಿ ಚಿತ್ರವೊಂದರಲ್ಲಿ ಕೃಷ್ಣ ಕಂಸವಧೆಗೆ ಮೊದಲು, ಮಥುರೆಯ ಜಟ್ಟಿಗಳೊಡನೆ ಸೆಣಸುತ್ತಿರುವ ದೃಶ್ಯವು ವಿಶಾಲ ಸ್ಥಳದಲ್ಲಿ ನಡೆಯುತ್ತಿರುವಂತೆ ತೋರಿಸಲಾಗಿದೆ. ಇದರಲ್ಲಿ ಕೃಷ್ಣ, ಬಲರಾಮರು ಜಟ್ಟಿಗಳೊಂದಿಗೆ ಕುಸ್ತಿಯಾಡಿ ನಂತರ ಕಂಸನನ್ನು ಕೊಲ್ಲುವ ದೃಶ್ಯವಿದೆ. ಇದೇ ರೀತಿಯ ಹಲವಾರು ಚಿತ್ರಗಳನ್ನು ಈ ದೇವಾಲಯದಲ್ಲಿ ರಚಿಸಲಾಗಿದೆ.

ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯ

ಈ ದೇವಾಲಯದ ಭಿತ್ತಿ ಚಿತ್ರಗಳು ಸುಮಾರು 1830ರಲ್ಲಿ ರಚಿತವಾಗಿರಬೇಕು. ಇಲ್ಲಿನ ಮೇಲ್ಮನೆಯಲ್ಲಿ ಅತ್ಯಂತ ಪ್ರಮುಖವಾದ ಮೈಸೂರು ಒಡೆಯರ ಭಾವಚಿತ್ರಗಳಿವೆ. ಇಲ್ಲಿನ ಚಿತ್ರಗಳಲ್ಲಿ ಸಾಕಷ್ಟು ಪರಿಪೂರ್ಣತೆ ಎದ್ದು ಕಾಣುತ್ತದೆ. ಇಲ್ಲಿನ ಚಿತ್ರಗಳಲ್ಲಿನ ಆಕೃತಿಗಳ ರೇಖಾವಿನ್ಯಾಸ ಮತ್ತು ವರ್ಣಸಂಯೋಜನೆಯನ್ನು ಗಮನಿಸಿದಾಗ, ಈ ಮೊದಲು ನೋಡಿದ ಶೈಲಿಗಳಿಂದ ಇದು ಬೆಳೆದುಬಂದುದನ್ನು ಗುರುತಿಸುತ್ತ ಇದರ ಪ್ರೌಢಿಮೆಯನ್ನು ನೋಡಬಹುದು. ಬಹುಶಃ ಇವು ಮೈಸೂರು ಅರಸರ ಚಿತ್ರಗಳಾದ್ದರಿಂದ ಅತ್ಯಂತ ಜಾಗರೂಕತೆಯಿಂದ ಈ ಚಿತ್ರಗಳನ್ನು ರಚಿಸಿರುವುದು ಕಂಡುಬರುತ್ತದೆ. ಇವುಗಳ ಜೊತೆಯಲ್ಲಿ ಮರದ ಹಲಗೆಯ ಮೇಲೆ ರಚಿಸಿದ ಚಾಮುಂಡೇಶ್ವರಿ ಚಿತ್ರ (ಈಗ ಒಡೆದು ಹಾಳಾಗಿದೆ) ಮತ್ತು ಒಡೆಯರ ಭಾವಚಿತ್ರಗಳ ಪಕ್ಕದಲ್ಲೇ ಇರುವ ತ್ರಿವಿಕ್ರಮ ಮತ್ತು ಇನ್ನೂ ಹಲವಾರು ಚಿತ್ರಗಳು ಭಿತ್ತಿ ಚಿತ್ರಗಳ ಶೈಲಿಯಲ್ಲಿ ಪರಿಪೂರ್ಣತೆಯನ್ನು ಹೊಂದಿದ ಉದಾಹರಣೆಗಳಾಗಿವೆ.

ನಾಲ್ಕು ತಲೆಮಾರಿನ ಒಡೆಯರನ್ನು ತೋರಿಸುವ ಚಿತ್ರಗಳಲ್ಲಿ (ಚಿತ್ರ 6) ಎಲ್ಲರೂ ಸಿಂಹಾಸನಾರೂಢರಾಗಿದ್ದು ಅವರ ಮುಂದೆ ಆಸ್ಥಾನದ ಉಡುಗೆಯಲ್ಲಿರುವ ಅವರ ಸಹಾಯಕರು ಕೈಮುಗಿದು ನಿಂತಿದ್ದಾರೆ. ಹಿಂದಿನಿಂದ ಚಾಮರಧಾರಿಗಳು ಚಾಮರ ಬೀಸುತ್ತಿದ್ದಾರೆ. ಚಿತ್ರದಲ್ಲಿನ ಆಕೃತಿಗಳು ಧರಿಸಿರುವ ಉಡುಗೆಗಳನ್ನು ಗಮನಿಸಿದರೆ ಆ ಕಾಲದ ವೇಷ-ಭೂಷಣಗಳ ಬಗ್ಗೆ ತಿಳಿದುಬರುತ್ತದೆ. ಚಿತ್ರದಲ್ಲಿನ ಹಿನ್ನೆಲೆ ಸಂಪೂರ್ಣ ಚಪ್ಪಟೆಯಾಗಿರದೆ ಇಲ್ಲಿ ಅರಮನೆಯ ವಿವಿಧ ಭಾಗಗಳನ್ನು ಚಿತ್ರಿಸಲಾಗಿದೆ. ಅತ್ಯಂತ ಕೆಳಸ್ತಳಗಳಲ್ಲಿ ಒಳಗೆ ಚಾಚಿಕೊಂಡಂತಿರುವ ಬಾಗಿಲು ಮತ್ತು ಅದರ ಎರಡೂ ಬದಿಗೆ ಶ್ವೇತಗಜಗಳು ಮಾವುತರೊಂದಿಗೆ ಸೊಂಡಿಲು ಎತ್ತಿದಂತೆ ತೋರಿಸಿದೆ. ಇವುಗಳನ್ನು ಕೆಂಪು ಹಿನ್ನೆಲೆಯಲ್ಲಿರುವ ಗೋಡೆಯ ಚಿತ್ರಣದ ಮೇಲೆ ಅಲಂಕಾರಿಕವಾಗಿ ಚಿತ್ರಿಸಿದಂತೆ ಇದೆ. ಈ ಎರಡೂ ಜೊತೆ

ಆನೆಗಳು-ದ್ವಾರಗಳು ಮೇಲಿನ ರಾಜರುಗಳ ಚಿತ್ರಗಳನ್ನು ಅರಮನೆಯಲ್ಲಿವೆ ಎಂದು ತೋರಿಸಲು ಮುನ್ನೆಲೆಯಾಗಿ ಬಳಸಿಕೊಳ್ಳಲಾಗಿದೆ ಎನಿಸುತ್ತದೆ.

ಮೈಸೂರಿನ ಭಿತ್ತಿ ಚಿತ್ರಗಳನ್ನು ಒಟ್ಟಾರೆಯಾಗಿ ತೆಗೆದುಕೊಂಡರೆ ವಿಜಯನಗರದ ಭಿತ್ತಿ ಚಿತ್ರ ಪರಂಪರೆಯನ್ನು ಇವು ಮುಂದುವರಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಇವುಗಳಲ್ಲಿನ ಕಥಾ ನಿರೂಪಣಾ ಶೈಲಿ ಮತ್ತು ಅಂದಿನ ಶೈಲಿಯಲ್ಲಿ ಸಾಕಷ್ಟು ಸಾಮ್ಯತೆ ಇದೆ. ಆದಾಗ್ಯೂ ಕೆಲವೊಂದು ಬದಲಾವಣೆಗಳನ್ನು ಈ ಚಿತ್ರಗಳಲ್ಲಿ ನಾವು ನೋಡಬಹುದು. ವಿಜಯನಗರದ ಚಿತ್ರಗಳಲ್ಲಿ ಆಕೃತಿಗಳು, ಜೈನಮಾನಸ ಪ್ರತಿಗಳಲ್ಲಿ ಇರುವ ಹಾಗೆ, ಒಂದೇ ತಳರೇಖೆಯ ಮೇಲೆ ರಚನೆ ಆಗಿವೆ. ಆಕೃತಿಯು ಯಾವಾಗಲೂ ಒಂದೇ ಪಾರ್ಶ್ವದಿಂದ ಕಾಣುವಂತೆ ಮುಖವನ್ನು ಹೊಂದಿದ್ದು ದೇಹವನ್ನು ಮುಂದಿನಿಂದ ನೋಡುತ್ತಾ ಇರುವಂತೆ ಕಂಡುಬರುತ್ತದೆ. ಅಲ್ಲದೆ ಮೂಗು ಚೂಪಾಗಿದ್ದು ಚಿಕ್ಕ ತುಟಿ ಮತ್ತು ಗದ್ದಗಳು ಮುಖದ ಆಕರ್ಷಣೆಗಳಾಗಿವೆ. ಒಂದು ಕಣ್ಣು ಸಂಪೂರ್ಣವಾಗಿ ಕಾಣುವಂತೆ ಇದ್ದು, ಇನ್ನೊಂದನ್ನು ಪಕ್ಕದಿಂದ ಕಾಣುವ ಹಾಗೆ ಮುಖದಿಂದ ಹೊರಗೆ ರಚಿಸಿರುತ್ತಾರೆ. ಇದೂ ಕೂಡ ಜೈನ ಚಿತ್ರಗಳಲ್ಲಿ ಮತ್ತು 1500-25 ರ ಸುಮಾರಿಗೆ ರಚಿತವಾದ ಚೌರಪಂಚಾಸಿಕ ಚಿತ್ರಗಳಲ್ಲಿ ಮತ್ತು ರಾಜಸ್ಥಾನ ಮಿನಿಯೇಚರ್‌ಗಳಲ್ಲಿ ಕಂಡುಬರುತ್ತದೆ. ಗಾಢವಾದ ಹಿನ್ನೆಲೆ ಬಣ್ಣ ಮತ್ತು ಹೊಳಪುಳ್ಳ ಮೈಬಣ್ಣಗಳು, ಕೊರೆದಂತೆ ಕಾಣುವ ಆಕೃತಿಗಳ ಬಾಹ್ಯ ರೇಖೆಗಳು ವಿಜಯನಗರದಲ್ಲಿ ಪ್ರಧಾನವಾಗಿದ್ದರೆ, ಇವನ್ನೇ ಸ್ವಲ್ಪ ಬದಲಾವಣೆಗಳೊಂದಿಗೆ ಮೈಸೂರಿನ ಭಿತ್ತಿ ಚಿತ್ರಗಳಲ್ಲಿ ಮುಂದುವರಿಸಿಕೊಂಡು ಬರಲಾಗಿದೆ.

ಮೈಸೂರಿನ ಭಿತ್ತಿ ಚಿತ್ರಗಳಲ್ಲೂ ಆದಷ್ಟು ನೈಜತೆಯನ್ನು ತರುವ ಪ್ರಯತ್ನ ಕಲಾವಿದರದು, ಆದರೆ ಆಕೃತಿಗಳ ರೂಪರೇಷೆಗಳಲ್ಲಿ ಹೆಚ್ಚಿನ ಬದಲಾವಣೆ ಕಾಣುವುದಿಲ್ಲ. ಕೊಂಚ ಕುಳ್ಳ ಎನಿಸುವಂತಹ ದೇಹಾಕೃತಿ, ಅಗಲವಾದ ಎದೆಭಾಗ, ಸ್ತ್ರೀಯಾಗಿದ್ದರೆ ದುಂಡಾಗಿ, ಪುಷ್ಟವಾಗಿ ಕಾಣುವ ರೇಖೆಗಳನ್ನು ವಕ್ರವಾಗಿ-ಚೆನ್ನಾಗಿ ದುಡಿಸಿಕೊಳ್ಳುತ್ತಾರೆ. ಇವೆಲ್ಲ ರೂಪಗಳೂ ವಿಜಯನಗರದ ಭಿತ್ತಿ ಚಿತ್ರ ಪರಂಪರೆಯಿಂದಲೇ ಬಂದಿವೆ.

ಚಿತ್ರ ರಚನಾ ತಾಂತ್ರಿಕ ವಿಧಾನ

ಇನ್ನು ಕೊನೆಯದಾಗಿ ಸಂಕ್ಷಿಪ್ತವಾಗಿ ಈ ಚಿತ್ರಗಳನ್ನು ರಚಿಸಲು ತಯಾರಿಸುತ್ತಿದ್ದ ಗೋಡೆಯ, ಕಾಗದದ ಮತ್ತು ಹಲಗೆಯ ಮೇಲ್ಮೈಯನ್ನು ಗಮನಿಸಬೇಕು. ಸಾಮಾನ್ಯವಾಗಿ ಯಾವುದೇ ಚಿತ್ರವನ್ನು ತಯಾರಿಸಲು ಮೊದಲು ತಳಹದಿಯನ್ನು ತಯಾರಿಸಬೇಕು (ground for painting). ಇದಕ್ಕೂ ಮೊದಲು ಚಿತ್ರಣಗೊಳ್ಳುವ ಭಿತ್ತಿ ಚಿತ್ರವನ್ನು ಯಾವ ಪದ್ಧತಿಯಲ್ಲಿ ಚಿತ್ರಿಸುತ್ತಿದ್ದಾರೆ ಎಂದು ತಿಳಿಯುವುದು ಅವಶ್ಯಕ. ಏಕೆಂದರೆ ಇವುಗಳಲ್ಲಿ ಫ್ರೆಸ್ಕೊ ಮತ್ತು ಸೆಸ್ಕೋ ಎಂಬ ಎರಡು ವಿಧಗಳಿವೆ. ಭಾರತದಲ್ಲಿ ಸಾಮಾನ್ಯವಾಗಿ ಎರಡನೆಯ ಪದ್ಧತಿಯಲ್ಲೇ ಹಿಂದಿನಿಂದಲೂ ಚಿತ್ರರಚನೆಯಾಗಿರುವುದು. ಮೊದಲನೆಯದು ಗೋಡೆ ಹಸಿ ಇರುವಾಗಲೇ ಚಿತ್ರರಚನೆ ಮಾಡಿ, ಬಣ್ಣ ತುಂಬಿ ಮುಗಿಸುವುದು. ಅಂದರೆ ಅಂದು ಎಷ್ಟು ಕೆಲಸವಾಗುತ್ತದೆ ಎಂಬುದನ್ನು ಲೆಕ್ಕಹಾಕಿ ಅಷ್ಟು ಗೋಡೆಯ ಮೇಲ್ಮೈಯನ್ನು ತಯಾರಿಸಿಕೊಳ್ಳುತ್ತಿದ್ದುದು ರೂಢಿ. ಇದಕ್ಕೆ ಉದಾಹರಣೆ, ಇಟಾಲಿಯನ್ ರೆನಾಸನ್ಸ್ ಕಾಲದ ಮೈಕೆಲ್ ಎಂಜೆಲೋನ ಸಿಸ್ಟೇನ್ ಚಾಪಲ್‌ನ ಭಿತ್ತಿ ಚಿತ್ರಗಳು. ಭಾರತದಲ್ಲಿ ಅಜಂತಾದಿಂದ ಹಿಡಿದು ನಮ್ಮ ಮೈಸೂರು ಭಿತ್ತಿ ಚಿತ್ರಗಳವರೆಗೆ ಎಲ್ಲಾ ಚಿತ್ರಗಳು ಸೆಸ್ಕೋ ಪದ್ಧತಿಯಲ್ಲೇ ರಚಿತವಾಗಿವೆ. ಸೆಸ್ಕೋದಲ್ಲಿ ಗೋಡೆಯ ಮೇಲ್ಮೈ ಒಣಗಿರಬೇಕು. ಇದರ ಮೇಲೆ ಮೊದಲು ರೇಖಾ ಚಿತ್ರಗಳನ್ನು ರಚಿಸಿ ನಂತರ ನೈಸರ್ಗಿಕ ಬಣ್ಣಗಳ ಜೊತೆ ಮೊಟ್ಟೆ, ಬೆಲ್ಲ, ಅಂಟು ದ್ರಾವಣ ಬೆರಸಿ ವರ್ಣ ಸಂಯೋಜನೆ ಮಾಡುತ್ತಿದ್ದ ಬಗ್ಗೆ ತಿಳಿದುಬರುತ್ತದೆ. ವರ್ಣಗಳನ್ನು ಸಾಮಾನ್ಯವಾಗಿ ನೈಸರ್ಗಿಕವಾಗಿ ದೊರೆಯುವ ವಿವಿಧ ಬಣ್ಣಗಳ ಕಲ್ಲುಗಳಿಂದ, ಹೂವುಗಳಿಂದ, ಎಲೆಗಳಿಂದ ಮತ್ತು ವಿವಿಧ ಕಲ್ಲುಪುಡಿಗಳ ಮಿಶ್ರಣದಿಂದ ತಯಾರಿಸಿಕೊಳ್ಳುತ್ತಿದ್ದರು. ಇದಕ್ಕೆ ಅಂಟು ದ್ರಾವಣವನ್ನು ಬೆರೆಸಿ ಅದು ಉಪಯೋಗಿಸಲು ಯೋಗ್ಯವಿದೆ ಎಂದಾದಮೇಲೆ ಅದನ್ನು ಉಪಯೋಗಿಸುತ್ತಿದ್ದರು. ಈ ಬಣ್ಣಗಳು ಎಷ್ಟು ವರ್ಷ ಬಿಟ್ಟರೂ ಮಸುಕಾಗದೆ ಹಾಗೇ ತಮ್ಮ ಹೊಳಪನ್ನು ಉಳಿಸಿಕೊಂಡು ಬರುತ್ತವೆ. ಇದಕ್ಕೆ ಅಜಂತಾ, ಬಾಗ್, ತಂಜಾವೂರು, ಲೇಪಾಕ್ಷಿ, ಹಂಪಿ ಹಾಗೂ ಪ್ರಸ್ತುತ ಭಿತ್ತಿಗಳು ಅತ್ಯುತ್ತಮ ಉದಾಹರಣೆಗಳಾಗಿವೆ.

ಉಪಸಂಹಾರ

ಮೈಸೂರು ಭಿತ್ತಿ ಚಿತ್ರಗಳು ಪರಂಪರಾಗತವಾಗಿ ಬಂದ ಚಿತ್ರ ಪರಂಪರೆಯಿಂದಲೇ ಬೆಳೆದವು. ಇವು ಕಾಲಮಾನದ ದೃಷ್ಟಿಯಿಂದ ಅತ್ಯಂತ ಪ್ರಮುಖ ಉದಾಹರಣೆಗಳಾಗಿವೆ. ಕೇವಲ ಮೈಸೂರೊಂದೇ ಅಲ್ಲ, ಪಕ್ಕದ ಮುಡುಕುತೊರೆ, ಶ್ರವಣಬೆಳಗೊಳದ ಜೈನ ಭಿತ್ತಿ ಚಿತ್ರಗಳು, ತುಮಕೂರು ಜಿಲ್ಲೆಯ ಸಿರಾ ಮತ್ತು ಸೀಬಿಗಳಲ್ಲಿನ ಭಿತ್ತಿಚಿತ್ರಗಳು, ಸುರಪುರ ಶೈಲಿಯಲ್ಲಿನ ಚಿತ್ರಗಳು, ವಿಜಯನಗರದ ಪತನದ ನಂತರದ ಭಿತ್ತಿ ಚಿತ್ರಗಳ ಪರಂಪರೆಗೆ ಉದಾಹರಣೆಗಳಾಗಿವೆ.

ಮೈಸೂರು ಭಿತ್ತಿ ಚಿತ್ರಗಳಲ್ಲಿ ಗಮನಿಸಬೇಕಾದ ಮತ್ತೊಂದು ಮುಖ್ಯಾಂಶ ಅಂದು ದೇಶದಲ್ಲಿ ಕ್ರಾಂತಿ ಎಬ್ಬಿಸಿದ ಪಾಶ್ಚಿಮಾತ್ಯ ಚಿತ್ರಶೈಲಿ (ಕಂಪೆನಿ ಸ್ಕೂಲ್ ಶೈಲಿ), ಬ್ರಿಟಿಷ್ ವಿಕ್ಟೋರಿಯನ್ ಶೈಲಿಯ ಪ್ರಭಾವದಿಂದ ಮುಕ್ತವಾಗಿ ವಿದೇಶಿ ಸಂವೇದನೆಗಳಿಗೆ ಮಾರುಹೋಗದೆ ನಮ್ಮ ಕಲಾವಿದರು ಇಲ್ಲಿ ಸ್ಥಳೀಯತೆಯನ್ನು ಎತ್ತಿ ಹಿಡಿದಿದ್ದಾರೆ.

ಮೈಸೂರಿನಲ್ಲಿ ಅಂದು ಇದ್ದ ಹಲವಾರು ಕಲಾವಿದರ ದೊಡ್ಡಪಟ್ಟಿಯೇ ಇದೆ: ಅವರಲ್ಲಿ ಜಾವಗಲ್ಲು ನರಸಿಂಹಯ್ಯ, ನಗುವನಹಳ್ಳಿ ನಾರಾಣಪ್ಪ, ಮಲ್ಲಯ್ಯ, ವೀರಯ್ಯ, ಅಳಸಿಂಗಯ್ಯ, ದುರ್ಗದ ಕೃಷ್ಣಪ್ಪ, ನೆಲಮಂಗಲದ ರಂಗಪ್ಪ, ಗುಡಿಗಾರ ತಿಪ್ಪಣ್ಣ, ತಂಜಾವೂರು ಕೊಂಡಯ್ಯ, ವೆಂಕಟಸುಬ್ಬು ಇತ್ಯಾದಿ. ಮೈಸೂರಿನಲ್ಲೇ ಇರುವ ಜಗನ್ಮೋಹನ ಚಿತ್ರಶಾಲೆ ಮತ್ತು ಜೆಸ್ಸೋ ಕೆಲಸದ ಚಿತ್ರಗಳನ್ನು ಕುರಿತು ರಾಜಾಶ್ರಯದಲ್ಲಿದ್ದುಕೊಂಡು ಹಲವಾರು ಚಿತ್ರಗಳನ್ನು ಈ ಮೇಲೆ ಹೆಸರಿಸಿದ ಕಲಾವಿದರು ರಚಿಸಿದರು. ಭಿತ್ತಿ ಚಿತ್ರಗಳ ಜೊತೆಗೆ ಮೈಸೂರು ಸಾಂಪ್ರದಾಯಿಕ ಶೈಲಿಯಾದ "ಜೆಸ್ಸೋ" ಕೆಲಸದ ಚಿತ್ರಗಳು ಗಾಜು ಚಿತ್ರಗಳು (glass paintings) ಬೆಳವಣಿಗೆ ಹೊಂದಿದವು. ಭಿತ್ತಿ ಚಿತ್ರಗಳಲ್ಲಿನ ಆಕೃತಿಗಳ-ವರ್ಣಗಳ ಪ್ರಭಾವ ಅವುಗಳಲ್ಲಿ ಕಾಣಬಹುದು. ಪ್ರಾಯಶಃ ಈ ಒಂದು ಆರೋಗ್ಯಕರ ಸಮ್ಮಿಶ್ರಗಳು ಮೈಸೂರು ಚಿತ್ರಶೈಲಿಯನ್ನು ಹುಟ್ಟುಹಾಕಿದವು. ಕರ್ನಾಟಕದಲ್ಲಿ ವಿಜಯನಗರದ ಪತನದ ನಂತರ ರಚನೆಯಾದ ಪ್ರಮುಖ ಭಿತ್ತಿ ಚಿತ್ರಗಳಲ್ಲಿ ಪ್ರಸ್ತುತ ಉದಾಹರಣೆಗಳು ಸೇರುತ್ತವೆ.

ಮೈಸೂರಿನ ಭಿತ್ತಿ ಚಿತ್ರ ಪರಂಪರೆ ವಿಜಯನಗರದ ನಂತರ ಅದರ ಪ್ರಭಾವದಿಂದ ಬೆಳೆದ ಶೈಲಿಯಾಗಿದೆ. ಅಂದು ಇದ್ದ ಕಲಾತ್ಮಕ ಸಂವೇದನೆಗಳನ್ನು ಮೈಗೂಡಿಸಿಕೊಂಡು ಒಂದು ವಿಶಿಷ್ಟ ಪರಂಪರೆಯನ್ನೇ ಪ್ರಾರಂಭಿಸಿತು. ಉತ್ತರದ ಮೊಗಲರ ರಾಜಾಸ್ಥಾನಿ ಮತ್ತು ದಖ್ಖನ್ನಿನ ಆದಿಲ್‌ಷಾಹಿ-ಗೊಲ್ಕೊಂಡದ ಚಿತ್ರಶೈಲಿಗಳಿಗೆ ದಕ್ಷಿಣ ಭಾರತದಲ್ಲಿ ವಿಜಯನಗರದ ಶೈಲಿ ಸಮಕಾಲೀನವಾಗಿ ಬೆಳೆದು ಉಚ್ಛ್ರಾಯ ಹಂತ ತಲುಪಿತು. ಹದಿನಾಲ್ಕನೆಯ ಶತಮಾನದಲ್ಲಿನ ರಾಜಕೀಯ ಬದಲಾವಣೆ ಹೊಸ ಶೈಲಿಗಳ ಉದಯಕ್ಕೆ ನಾಂದಿಯಾಯಿತು. ಇದರ ಒಂದು ಅಂಗವೇ ಮೈಸೂರು-ತಂಜಾವೂರು ಶೈಲಿಗಳು. ಇವುಗಳ ಹೆಚ್ಚಿನ ಅಧ್ಯಯನ ಈ ದಿಶೆಯಲ್ಲಿ ಅತ್ಯಾವಶ್ಯಕವಾಗಿದೆ.

ಟಿಪ್ಪಣಿಗಳು

1. ಸಿ. ಶಿವರಾಮ ಮೂರ್ತಿ, 1968, *ಸೌತ್ ಇಂಡಿಯನ್ ಪೇಂಟಿಂಗ್ಸ್*, ಹೊಸ ದಿಲ್ಲಿ.
2. ಈ ಕಾಲದಲ್ಲಿ ಭಾರತದ ಬಹುತೇಕ ಕಡೆಗಳಲ್ಲಿ ತಾಳೆಯ ಗರಿಗಳ ಮೇಲೆ ಗ್ರಂಥಗಳನ್ನು ರಚಿಸುವಾಗ ಅವುಗಳ ಜೊತೆಯಲ್ಲೇ ಆಕೃತಿಗಳ ರಚನೆ ಪ್ರಾರಂಭವಾಯಿತು. ಪಾಲ-ಸೇನ ರಾಜಮನೆತನಗಳಲ್ಲಿ ಇತ್ತು. ಕರ್ನಾಟಕದಲ್ಲಿ ಹೊಯ್ಸಳರ ಕಾಲದ ಧವಳ ಗ್ರಂಥಗಳು (ಮೂಡಬಿದರೆ) ಅಲ್ಲದೆ ಗುಜರಾತ್‌ನ ಬರೋಡದ ಜೈನ ಹಸ್ತಪ್ರತಿಗಳು ಪ್ರಮುಖ ಉದಾಹರಣೆಗಳು.
3. ಸಿ. ಶಿವರಾಮ ಮೂರ್ತಿ, 1968, *ಸ್ಪ್ಲೆಂಡರ್ಸ್ ಆಫ್ ವಿಜಯನಗರ ಎಂಪಯರ್, ಹಂಪಿ, ಮಾರ್ಗ್*, ಬಾಂಬೆ. ಇದರಲ್ಲಿ ಹಂಪಿ ಮತ್ತು ಲೇಪಾಕ್ಷಿಗಳ ಮೇಲಿನ ಭಾಗ.

4. ಆರ್.ಹೆಚ್. ಕುಲಕರ್ಣಿ, 1992, *ಕಿನ್ನಾಳ ಚಿತ್ರಕಲೆ,* ಲಲಿತಕಲಾ ಅಕಾಡೆಮಿ, ಬೆಂಗಳೂರು. ಇದರಲ್ಲಿ ಪ್ರಸ್ತುತ ಲೇಖಕರು ವಿಜಯನಗರದ ಪತನದ ನಂತರದಲ್ಲಿನ ಚಿತ್ರಕಲೆಯ ಬೆಳವಣಿಗೆ ಕುರಿತು ಚರ್ಚಿಸಿದ್ದಾರೆ.

5. ಆರ್. ನರಸಿಂಹಾಚಾರ್, *ಮೈಆರಿ,* 1912, ಪು. 22ರಲ್ಲಿ ಶ್ರೀ ಶ್ವೇತವರಾಹಸ್ವಾಮಿಯನ್ನು ಶ್ರೀರಂಗಪಟ್ಟಣದಿಂದ ತಂದು ಪ್ರಸ್ತುತ ದೇವಾಲಯದಲ್ಲಿ ಪ್ರತಿಷ್ಠಾಪಿಸಿದ್ದರು ಎಂದು ಬರೆಯುತ್ತಾರೆ. ಅಲ್ಲದೆ ಈ ದೇವಾಲಯ ಹೊಯ್ಸಳ ವಾಸ್ತುಶಿಲ್ಪದ ಶೈಲಿಯಲ್ಲಿದೆ. ಇದನ್ನು ಶಿವಮೊಗ್ಗೆಯ ಹತ್ತಿರದ ಯಾವುದೋ (?) ಸ್ಥಳದಿಂದ ಇಲ್ಲಿಗೆ ಸ್ಥಳಾಂತರಿಸಿದ್ದಾರೆ ಎಂದು ಬರೆಯುತ್ತಾರೆ.

6. ಸಾಮಾನ್ಯವಾಗಿ ಪುರಾಣಕ್ಕೆ ಸಂಬಂಧಪಟ್ಟ ಕಥೆಗಳು ಮತ್ತು ಕೃಷ್ಣಲೀಲೆ, ರಾಮಾಯಣಕ್ಕೆ ಸಂಬಂಧಿಸಿದ ವಿಷಯಗಳು ಬಹುಶಃ ಭಕ್ತಿ ಪಂಥದ ಪರಿಣಾಮ ಇರಬೇಕು. ರಾಜಾಸ್ಥಾನಿ ಮಿನಿಯೇಚರ್‌ಗಳಲ್ಲೂ ವಿಶೇಷವಾಗಿ ಕೃಷ್ಣಲೀಲೆಗಳ ಚಿತ್ರಣವಿದೆ.

ಈ ಲೇಖನಕ್ಕೆ ಉಪಯೋಗಿಸಿದ ಛಾಯಾಚಿತ್ರಗಳನ್ನು ತೆಗೆಯಲು ಅನುಮತಿ ನೀಡಿದ ನಿರ್ದೇಶಕರು, ಪುರಾತತ್ವ ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ಇವರಿಗೆ ಮತ್ತು ಇವುಗಳನ್ನು ತೆಗೆದ ಆರ್. ಶ್ರೀಕಂಠಶರ್ಮ, ಮೈಸೂರು ಇವರಿಗೆ ನನ್ನ ಕೃತಜ್ಞತೆಗಳು.

3. ಶೃಂಗೇರಿಯ ವಿದ್ಯಾಶಂಕರ ದೇವಾಲಯ

ಲ.ನ. ಶಾಸ್ತ್ರಿ

ಈ ದೇವಾಲಯವು ವಿಜಯನಗರದ ಸಾಮ್ರಾಜ್ಯ ಸ್ಥಾಪಕರಾದ ಶ್ರೀ ವಿದ್ಯಾರಣ್ಯರ ಗುರು ಶ್ರೀ ವಿದ್ಯಾತೀರ್ಥರ ಸಮಾಧಿ, ಆಲಯ. ಶ್ರೀ ವಿದ್ಯಾತೀರ್ಥರ ಅವತಾರದಿಂದ ನಶಿಸಿ ಹೋಗುತ್ತಿದ್ದ ವೈದಿಕ ಧರ್ಮ ಮತ್ತು ಸಂಸ್ಕೃತಿ ಪುನರುಜ್ಜೀವನಗೊಂಡವು. ನವಮನ್ವಂತರವನ್ನು ಆರಂಭಿಸಿದ ಆ ಮಹಾತ್ಮರು ಅದಕ್ಕೆ ತಮ್ಮ ತಪಃಶ್ಶಕ್ತಿಯನ್ನೆಲ್ಲಾ ಧಾರೆಯೆರೆದರು. ಹೊಸ ರಾಜ್ಯವು ಉದಯಿಸುವ ಮುನ್ನವೇ ಅವರು ಗುಹಾಪ್ರವೇಶ ಮಾಡಿಬಿಟ್ಟರು. ಧರ್ಮಜಾಗೃತಿ, ಧೈರ್ಯಶಕ್ತಿ, ರಾಷ್ಟ್ರಾಭಿಮಾನ, ಕೃತಶಕ್ತಿಯನ್ನು ತುಂಬಿ ಭಾರತೀಯರನ್ನು ಎದೆಯೆತ್ತಿ, ತಲೆಯೆತ್ತಿ ನಿಲ್ಲುವಂತೆ ಮಾಡಿದರು. ಈ ಮಹನೀಯರಿಗೆ ದಿವ್ಯವೂ ಮತ್ತು ಭವ್ಯವೂ ಆದ ಸ್ಮಾರಕವೊಂದನ್ನು ನಿರ್ಮಿಸಬೇಕೆಂದು ವಿಜಯನಗರದ ಚಕ್ರವರ್ತಿ ಹರಿಹರ ಮತ್ತು ಆತನ ಸಹೋದರರು ನಿಶ್ಚಯಿಸಿದರು. ತಮ್ಮ ಅಪೇಕ್ಷೆಯನ್ನು ಗುರು ಭಾರತೀ ತೀರ್ಥರಿಗೂ, ಶ್ರೀ ವಿದ್ಯಾರಣ್ಯರಿಗೂ ಭಿನ್ನವಿಸಿದರು. ಅವರ ಅಪ್ಪಣೆಯಂತೆ ಶ್ರೀ ವಿದ್ಯಾಶಂಕರ ದೇವಾಲಯ ನಿರ್ಮಾಣಕ್ಕೆ ಸೂಕ್ತವಾದ ಏರ್ಪಾಡನ್ನು ಮಾಡಿದರು.*

ಭರತ ಖಂಡದಲ್ಲಿ ಯತಿಗಳಿಗಾಗಿ, ಸನ್ಯಾಸಿಗಳಿಗಾಗಿ ದೇವಾಲಯ, ಮಂದಿರಗಳು ಈ ಮೊದಲು ಎಲ್ಲಿಯೂ ನಿರ್ಮಾಣವಾಗಿರಲಿಲ್ಲ. ಲೋಕಪೂಜ್ಯರಾದ ಶ್ರೀ ಶಂಕರಾಚಾರ್ಯರು ಕೇದಾರನಾಥದ ಬಳಿ ಹಿಮಾಲಯ ಪರ್ವತದಲ್ಲಿ ಕಣ್ಮರೆಯಾಗಿದ್ದು ಅವರ ಸಮಾಧಿಯಾಗಲೀ, ಬೃಂದಾವನವಾಗಲೀ ಎಲ್ಲಿಯೂ ಇಲ್ಲ. ಅವರ ಭವ್ಯ ವ್ಯಕ್ತಿತ್ವ ಮತ್ತು ಮಹಾತ್ಮ್ಯಕ್ಕೆ ಹಿಮಾಲಯವೇ ಅವರ ಸಮಾಧಿಯಾಯಿತು.

ಶ್ರೀ ಶಂಕರರಿಂದ ಆರಂಭವಾಗಿ ಬಂದ ಶೃಂಗೇರಿಯ ನೇರ ಪರಂಪರೆಯಲ್ಲಿ ಅವರ ಪ್ರಥಮ ಶಿಷ್ಯರಾದ ಶ್ರೀ ಸುರೇಶ್ವರಾಚಾರ್ಯರಿಗೂ ದೇವಾಲಯ ನಿರ್ಮಾಣವಾಗಿರಲಿಲ್ಲ. ಅವರ ಸಮಾಧಿಯೆಂದು ಗುರುತಿಸಲ್ಪಟ್ಟ ಸ್ಥಳದಲ್ಲಿ ಶಿವಲಿಂಗವೊಂದಿದ್ದು ಅದಕ್ಕೆ ಪೂಜೆ ಸಲ್ಲುತ್ತಿತ್ತು. ಇತ್ತೀಚೆಗೆ ಶ್ರೀ ಸುರೇಶ್ವರರ ಸಮಾಧಿಯ ಮೇಲೆ ಶಿವಾಲಯವೊಂದು ನಿರ್ಮಿಸಲ್ಪಟ್ಟು ಅಲ್ಲಿ ಅವರ ಅಮೃತ ಶಿಲಾಮೂರ್ತಿಯು ಪ್ರತಿಷ್ಠಿತವಾಗಿದೆ.

ಅನಂತರ ಬಂದ ಆಚಾರ್ಯರಲ್ಲಿ ಏಳನೆಯವರಾದ ಶ್ರೀ ನರಸಿಂಹಗಿರಿಯವರ ಸಮಾಧಿಯು 'ಸಿಂಹಗಿರಿ' ಎಂಬ ಈಗಿನ ಶೃಂಗೇರಿಯ ನೈರುತ್ಯದಲ್ಲಿದ್ದು, ಬಹುಶಃ ಶ್ರೀ ವಿದ್ಯಾತೀರ್ಥರು ಶ್ರೀ ಸಿಂಹಗಿರಿಯವರ ಸಮಾಧಿಯ ಬಳಿಯೋ ಅಥವಾ ಮೇಲೆಯೋ ಶ್ರೀ ಚತುರ್ಮೂರ್ತಿ ವಿದ್ಯೇಶ್ವರ ಸ್ತಂಭಲಿಂಗವನ್ನು ಸ್ಥಾಪಿಸಿದರು. ಶ್ರೀ ಸಿಂಹಗಿರಿಯವರ ನಂತರ ಶ್ರೀ ಈಶ್ವರತೀರ್ಥರು, ಶ್ರೀ ನೃಸಿಂಹತೀರ್ಥರು ಇವರಿಬ್ಬರಿಗೂ ಸಹ ದೇವಾಲಯವು ನಿರ್ಮಾಣವಾಗಲಿಲ್ಲ. ಈ ಎಲ್ಲಾ ಆಚಾರ್ಯರ ಸಮಾಧಿಗಳೂ ಸಹ ಶೃಂಗೇರಿ ಅಗ್ರಹಾರಗಳಲ್ಲಿ ಹಂಚಿಹೋಗಿ, ಆ ಸಮಾಧಿ ಆಲಯಗಳೆಷ್ಟೋ ಆಯಾ ಅರ್ಚಕರ, ಮನೆತನದವರ ವಾಸಗೃಹಗಳೂ, ಆ ಲಿಂಗಗಳು ಮನೆದೇವರೂ ಆಗಿಬಿಟ್ಟಿವೆ.

ಶ್ರೀ ನೃಸಿಂಹತೀರ್ಥರ ಶಿಷ್ಯರೇ ಶ್ರೀ ವಿದ್ಯಾತೀರ್ಥರು, ಶ್ರೀ ಶಂಕರಾಚಾರ್ಯರಿಂದ ಆರಂಭಿಸಿ, ಶೃಂಗೇರಿ ಮಠದಲ್ಲಿ ಹತ್ತನೆಯವರು. ನವಯುಗ ಪ್ರವರ್ತಕರು. ಅವರ ದಿವ್ಯ ಸ್ಮರಣೆಗಾಗಿ ಮೊತ್ತಮೊದಲು ಆಲಯ ನಿರ್ಮಾಣವಾಯಿತು. ಯತಿಗಳಿಗಾಗಿ ನಿರ್ಮಿತವಾದ ದೇವಸ್ಥಾನಗಳಲ್ಲಿ ಭರತ ಖಂಡದಲ್ಲೆಲ್ಲಾ ಬಹುಶಃ ಶ್ರೀ ವಿದ್ಯಾಶಂಕರ ದೇವಾಲಯವೇ ಮೊದಲನೆಯದು.

ದೇವಾಲಯಗಳು ಯಜ್ಞಕುಂಡದ ಪ್ರತೀಕವೆಂದೂ, ಅಲ್ಲಿರುವ ದೇವಮೂರ್ತಿಗಳು ಯಜ್ಞಕುಂಡದಲ್ಲಿ ಸದಾ ಸನ್ನಿಹಿತವಾಗಿರುವ ಅಗ್ನಿಯ, ಯಜ್ಞೇಶ್ವರ ಅಥವಾ ಯಜ್ಞನಾರಾಯಣನ ಸ್ವರೂಪವೆಂದೂ, ಯಜ್ಞವು ತ್ಯಾಗದ ಸಂಕೇತವೆಂದೂ, ತ್ಯಾಗದಿಂದಲೇ ಜ್ಞಾನ

---

* ಈ ದೇವಾಲಯದ ನಿರ್ಮಾಣವು 16ನೇ ಶತಮಾನದ ಮಧ್ಯಭಾಗದಲ್ಲಿ ಆಗಿದೆಯೆಂದು ಜಾರ್ಜ್ ಮಿಶೆಲ್ ಅಭಿಪ್ರಾಯ ಪಡುತ್ತಾರೆ. ಜಾರ್ಜ್ ಮಿಶೆಲ್, 1995, ''ಡೇಟಿಂಗ್ ಆಫ್ ದಿ ವಿದ್ಯಾಶಂಕರ ಟೆಂಪಲ್ ಅಟ್ ಶ್ರಿಂಗೇರಿ'', *ಶ್ರೀ ನಾಗಾಭಿನಂದನಮ್ (ಡಾ. ಎಂ.ಎಸ್. ನಾಗರಾಜರಾವ್ ಫೆಸ್ಟ್‌ಕ್ರಿಪ್ಟ್)* (ಸಂ.) ಎಲ್.ಕೆ. ಶ್ರೀನಿವಾಸನ್, ಎಸ್. ನಾಗರಾಜು, ಬೆಂಗಳೂರು, ಪು. 269-278 (ಸಂಪಾದಕರು).

ಪ್ರಾಪ್ತಿಯೂ, ಮೋಕ್ಷವೂ ದೊರಕುವುದೆಂದೂ ವಿದ್ವಾಂಸರ ಅಭಿಪ್ರಾಯ. ಈ ತ್ಯಾಗ ಜ್ಞಾನಗಳ ಸ್ವರೂಪರಾಗಿದ್ದ ಮಹಾಯೋಗಿ ಶ್ರೀ ವಿದ್ಯಾತೀರ್ಥರ ಪವಿತ್ರ ಸಮಾಧಿಯ ಮೇಲೆ ನಿರ್ಮಿತವಾದ ಶ್ರೀ ವಿದ್ಯಾಶಂಕರ ದೇವಾಲಯವು ದಿವ್ಯವೂ, ಭವ್ಯವೂ ಆದುದು. ಭರತ ಖಂಡದಲ್ಲಿ ಇಂತಹ ಆಲಯ ಇನ್ನೊಂದಿಲ್ಲ. ಈ ದೇವಾಲಯದ ವಿನ್ಯಾಸವು ರೋಮಿನ ಟ್ರೋಜನ್ಸ್ ಬಾಸಿಲ್ಕಾವನ್ನು ಸ್ವಲ್ಪಮಟ್ಟಿಗೆ ಹೋಲುತ್ತದೆ ಎಂದು ಆರ್. ನರಸಿಂಹಾಚಾರ್ಯರು ಅಭಿಪ್ರಾಯ ಪಡುತ್ತಾರೆ.[1]

ಐಹೊಳೆಯ ಶ್ರೀ ವಿಷ್ಣುದೇವಾಲಯ, ಕನ್ಹೇರಿ, ಅಜಂತ ಮತ್ತು ಎಲ್ಲೋರೆಗಳ ಬೌದ್ಧ ಚೈತ್ಯಗಳಂತೆ ಈ ದೇವಾಲಯವೂ ಸಹ ಪೂರ್ವ ಪಶ್ಚಿಮಗಳಲ್ಲಿ ಅರ್ಧ ಗೋಲಾಕಾರವನ್ನು ಹೊಂದಿದೆ. ಎರಡು ಬಗ್ಗಿಸಿದ ಬಿಲ್ಲುಗಳನ್ನು ಅವುಗಳ ಬಾಗಿದ ಕೊನೆಗಳಿಂದ ಸೇರಿಸಿದಂತೆ [( )] ಇದೆ. ಶ್ರೀ ವಿದ್ಯಾ ಉಪಾಸಕರ ಅಭಿಪ್ರಾಯದಂತೆ ಈ ದೇವಸ್ಥಾನದ ಪೂರ್ಣ ವಿನ್ಯಾಸವು ಶ್ರೀ ಚಕ್ರದ ಮೇರು ಪ್ರಸ್ತಾರದಂತೆಯೇ ಇದೆ.

ಈ ದೇವಾಲಯದ ಬಲಭಾಗದಲ್ಲಿ ಪೂರ್ವಕ್ಕೆ ತುಂಗಾನದಿಯು ಪ್ರವಹಿಸಿ, ಮುಂಭಾಗದಲ್ಲಿ ಎಡಕ್ಕೆ ತಿರುಗಿ ಉತ್ತರವಾಹಿನಿಯಾಗಿ ಪ್ರವಹಿಸುತ್ತದೆ. ದೇವಾಲಯಕ್ಕೆ ಎದುರಾಗಿ ತುಂಗಾನದಿಯ ಪೂರ್ವಕ್ಕೆ ವನರಾಶಿಯಿಂದ ತುಂಬಿರುವ ಬೆಟ್ಟಗುಡ್ಡಗಳಿದ್ದು ಎತ್ತರದಲ್ಲಿ ಶ್ರೀ ಕಾಲಭೈರವಗುಡಿ ಇದೆ. ಈ ಸ್ಥಳದಿಂದ ನೋಡಿದಾಗ ದೇವಾಲಯವು ರಾಜಹಂಸದಂತೆ ತುಂಬ ಗಾಂಭೀರ್ಯದಿಂದ ಶೋಭಿಸುತ್ತದೆ. ಭರತ ಖಂಡದ ಸರ್ವಧರ್ಮಸಮನ್ವಯಕ್ಕೂ ಸರ್ವಮತ ಸಹಿಷ್ಣುತೆಗೂ ಸಾಂಕೇತಿಕವಾಗಿ, ಶಿಲ್ಪಕಲೆಯ ಆಗರವಾದ ಈ ದೇವಾಲಯವು ದಿವ್ಯ ಭವ್ಯವೂ, ಚಿತ್ತಾಕರ್ಷಕವೂ ಆಗಿದೆ.


ಈ ದೇವಾಲಯವು ಸಂಪೂರ್ಣವಾಗಿ ಕಣಶಿಲೆಯಿಂದ ನಿರ್ಮಿತವಾದುದು. ಈ ಸುತ್ತಮುತ್ತಲೂ - ಹೊಯ್ಸಳರ ಸಾಮ್ರಾಜ್ಯದಲ್ಲಿ - ನಿರ್ಮಿತವಾಗಿದ್ದ ದೇವಾಲಯಗಳೆಲ್ಲವೂ ಮೃದುಶಿಲೆಗಳಿಂದ, ಬಳಪದ ಕಲ್ಲಿನಿಂದ ಕಟ್ಟಲ್ಪಟ್ಟದ್ದು, ಈ ದೇವಾಲಯವು ಗಟ್ಟಿಯಾದ ಶಿಲೆಯಿಂದ ನಿರ್ಮಾಣವಾಗಿರುವುದು ವಿಶೇಷ. ಮುಂದೆ ವಿಜಯನಗರದ ಶಿಲ್ಪಿಗಳು ಈ ಕಗ್ಗಲ್ಲನ್ನೇ ದೇವಾಲಯಗಳಿಗಾಗಿ ಸಾಮ್ರಾಜ್ಯದ ಎಲ್ಲಾ ಕಡೆಯೂ ಬಳಸಿದರು. ಈ ದೇವಾಲಯದ ವಾಸ್ತು ಸಂಪ್ರದಾಯವೂ ಸಹ ವೈಶಿಷ್ಟ್ಯಪೂರ್ಣವಾದುದು.

ವಾಸ್ತು ಶಾಸ್ತ್ರಜ್ಞರು ಭರತ ಖಂಡದ ಪ್ರಾಚೀನ ಆಲಯ ವಾಸ್ತುವನ್ನು ನಾಗರ, ವೇಸರ ಮತ್ತು ದ್ರಾವಿಡ ಎಂಬುದಾಗಿ ವರ್ಗೀಕರಣ ಮಾಡಿದ್ದಾರೆ. ಉತ್ತರ ಭಾರತದಲ್ಲಿ ನಾಗರ ಸಂಪ್ರದಾಯವೂ, ಕಾವೇರಿಗೆ ದಕ್ಷಿಣದಲ್ಲಿ ದ್ರಾವಿಡ ಸಂಪ್ರದಾಯವೂ, ಇವೆರಡರ ಮಧ್ಯದಲ್ಲಿ ವೇಸರ ಸಂಪ್ರದಾಯವೂ ಇದೆಯೆಂದು ಸ್ಥೂಲವಾಗಿ ವಿಭಜಿಸಿದ್ದಾರೆ. ಮೊದಲು ದೇವಾಲಯಗಳ ನಿರ್ಮಾಣ ಪ್ರಾರಂಭವಾದುದೇ ಕರ್ಣಾಟಕದಲ್ಲಿ ಎಂದೂ ಕನ್ನಡನಾಡಿನಲ್ಲಿ ಶಾತವಾಹನರ ಕಾಲದಲ್ಲಿಯೇ ದೇವಾಲಯ ವಾಸ್ತುವಿತ್ತೆಂದೂ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಕರ್ನಾಟಕದಲ್ಲಿ ವೇಸರ ಪದ್ಧತಿಯನ್ನು ಅನುಸರಿಸಿ ದೇವಾಲಯ ನಿರ್ಮಾಣ ಪ್ರಾರಂಭವಾದುದು ಚಾಲುಕ್ಯರ ಕಾಲದಲ್ಲಿ. ಅದನ್ನು ವಿಶೇಷವಾಗಿ ಬೆಳಸಿ ಅಭಿವೃದ್ಧಿಗೆ ತಂದವರು ಹೊಯ್ಸಳರು. ದ್ರಾವಿಡ ಶೈಲಿಯಲ್ಲಿ ಆಲಯ ನಿರ್ಮಾಣ ಪ್ರಾರಂಭಿಸಿದವರು ಪಲ್ಲವರು, ನಂತರ ಪಾಂಡ್ಯರು ಮತ್ತು ಚೋಳರು. ವಿಜಯನಗರ ಸಾಮ್ರಾಜ್ಯವು ಪೂರ್ವ ಪಶ್ಚಿಮ ಸಮುದ್ರಾಂತವಾಗಿದ್ದು, ಈ ಎಲ್ಲಾ ಪ್ರದೇಶಗಳನ್ನು ಒಳಗೊಂಡಿದ್ದುದರಿಂದ ಈ ಎರಡು ಸಂಪ್ರದಾಯಗಳ ಸ್ಪಷ್ಟ ಮುದ್ರೆಯು ಈ ಭವ್ಯ ದೇವಾಲಯದಲ್ಲಿ ಮೂಡಿ ಭರತಖಂಡದಲ್ಲಿಯೇ ಇದೊಂದು ವಿಶಿಷ್ಟ ರೀತಿಯ ದೇವಾಲಯವಾಗಿದೆ.

ವಿದ್ಯಾಶಂಕರ ದೇವಾಲಯವು[2] ಅಂಡಾಕಾರವಾಗಿದ್ದು, ಎರಡು ಅಂಡಾಕಾರದ ಅರ್ಧ ವೃತ್ತಗಳನ್ನು ಪೂರ್ವ ಪಶ್ಚಿಮದಿಂದ ಬೆಸೆದಂತೆ ಕಾಣುತ್ತದೆಯಷ್ಟೆ. ಪಶ್ಚಿಮಾರ್ಧ ವೃತ್ತವು ವಿಮಾನವನ್ನು ಮತ್ತು ಗರ್ಭಗೃಹ ಸಂಕೀರ್ಣವನ್ನು ಒಳಗೊಂಡಿದೆ. ಆರು ಗರ್ಭಗೃಹಗಳು ಮತ್ತು ಉತ್ಸವ ವಿಗ್ರಹಗಳನ್ನು ಇಟ್ಟಿರುವ ಸುಖನಾಸಿಯೂ ಇಲ್ಲಿಯೇ ಇದೆ. ಪೂರ್ವಾರ್ಧವೃತ್ತವು ಮುಖಮಂಟಪವನ್ನು, ನವರಂಗವನ್ನು ಒಳಗೊಂಡಿದೆ ಮತ್ತು ಪೂರ್ವ ಪಶ್ಚಿಮಾರ್ಧ ಗೋಲಗಳೆರಡರಲ್ಲೂ ಆಯಾ ದಿಕ್ಕಿನಲ್ಲಿ ಒಂದೊಂದು ಪ್ರವೇಶ ದ್ವಾರಗಳಿವೆ.

ಹೊಯ್ಸಳ ದೇವಾಲಯಗಳಲ್ಲಿ ಸಾಮಾನ್ಯವಾಗಿ ಕಾಣುವಂತೆ ದೇವಾಲಯವು ನಾಲ್ಕು ಅಡಿ ಎತ್ತರದ ಜಗತಿಯ ಮೇಲೆ ನಿರ್ಮಾಣವಾಗಿದ್ದು ಜಗತಿಯ ಮೇಲೆಯೇ ದೇವಾಲಯವನ್ನು ಪ್ರದಕ್ಷಿಣೆ ಮಾಡಬಹುದು. ಜಗತಿಯ ಮೂಲೆಗಳಲ್ಲಿ ವಿಸ್ತಾರವಾದ



1. ವಿದ್ಯಾಶಂಕರ ದೇವಾಲಯ, ಶೃಂಗೇರಿ

ಚಪ್ಪಟೆಯಾದ ಕಲ್ಲುಹಾಸುಗಳಿವೆ. ಈ ಜಗತಿಯ ಮೇಲಕ್ಕೆ ಏರಲು ಆರು ಕಡೆಗಳಲ್ಲಿ ಆರರಂತೆ ಸೋಪಾನಗಳಿವೆ. ಈ ಜಗತಿಯನ್ನು ಏರಿ ನಿಂತರೆ ಮತ್ತೆ ಒಂದು ಉಪಪೀಠವಿದೆ. ಈ ಉಪಪೀಠದಿಂದ ದೇವಾಲಯವನ್ನು ಪ್ರವೇಶಿಸಲು, ಹೀಗೆಯೇ ಆರು ಕಡೆಗಳಲ್ಲಿ ಏಳೇಳು ಸೋಪಾನಗಳಿವೆ. ಪೂರ್ವ ಪಶ್ಚಿಮಕ್ಕೆ ಒಂದೊಂದು, ಉತ್ತರ ದಕ್ಷಿಣಕ್ಕೆ ಎರಡೆರಡು ದ್ವಾರಗಳಿವೆ. ಪೂರ್ವ, ದಕ್ಷಿಣ ಮತ್ತು ಉತ್ತರದ ಮೂರು ಪ್ರವೇಶ ದ್ವಾರಗಳೂ ನಮ್ಮನ್ನು ನವರಂಗಕ್ಕೆ ಒಯ್ಯುತ್ತವೆ. ಪಶ್ಚಿಮದ ದ್ವಾರವೂ ಅದರ ಅಕ್ಕಪಕ್ಕದ ದಕ್ಷಿಣೋತ್ತರದ ಇನ್ನೆರಡು ದ್ವಾರಗಳೂ, ಗರ್ಭಗೃಹದ ಸುತ್ತಲೂ ಇರತಕ್ಕ ಬಾಹ್ಯಭಿತ್ತಿ, ಅಂತರ್ಭಿತ್ತಿಯ ಸಾಂಧಾರ ಒಳಪ್ರಾಕಾರಕ್ಕೆ ಒಯ್ಯುತ್ತದೆ. ಗರ್ಭಗೃಹವನ್ನು ಒಳಗಿನಿಂದಲೂ ಪ್ರದಕ್ಷಿಣೆ ಮಾಡಬಹುದು.

ಜಗತಿಯ ಸೋಪಾನಗಳ ಇರ್ಕಡೆಗಳಲ್ಲಿಯೂ ಸಾಮಾನ್ಯ ಬಂಧಗಳಿದ್ದರೆ ಪೀಠದ ಎರಡು ಕಡೆಯೂ ಗಜ ಶಿಲ್ಪಗಳಿವೆ. ಉಪ ಪೀಠದ ಮೇಲಿರುವ ಅಧಿಷ್ಠಾನವು ವೃತ್ತಾಯತವಾಗಿಯೇ ಇದ್ದು ಉಪಾನ, ಜಗತಿ, ಕುಮುದ, ಕಂಠ, ಕಪೋತ, ಪಟ್ಟಿಕ ಎಂಬ ಆರು ಅಂಗಗಳಿಂದ ಕೂಡಿದೆ.

ದೇವಾಲಯದ ಹೊರ ಆವರಣದ ಸುತ್ತಲೂ ಕೆಳಗಿನಿಂದ ಮೇಲಿನವರೆಗೆ ಸಪ್ತಲೋಕಗಳಂತೆ ಏಳು ಮಜಲುಗಳಿವೆ. ಮೊದಲು ಕುದುರೆಗಳ ಸಾಲು, ನಂತರ ಆನೆಗಳ ಸಾಲು ಅದರ ಮೇಲೆ ಸಿಂಹಗಳ ಸಾಲು ಇದೆ. ನಾಲ್ಕನೆಯ ಪಂಕ್ತಿಯಲ್ಲಿ ಪೌರಾಣಿಕ ಚಿತ್ರಮಾಲಿಕೆ ಇದ್ದು ಐದನೆಯ ಸಾಲಿನಲ್ಲಿ ಕುಬ್ಜವಾಮನಮೂರ್ತಿಗಳಿವೆ. ಆರನೆಯ ಸಾಲು ದೊಡ್ಡ ವಿಗ್ರಹಗಳಿಂದ ಕೂಡಿದ್ದು ವಿಶೇಷ ಅಧ್ಯಯನಕ್ಕೆ ಅರ್ಹವಾಗಿದೆ.

ಮೊದಲ ಸಾಲಿನಲ್ಲಿರುವ ಕುದುರೆಗಳ ಸಾಲಿನಲ್ಲಿ, ಸಾಗುತ್ತಿರುವ ಅಶ್ವಗಳು, ಶಸ್ತ್ರಾಸ್ತ್ರಗಳುಳ್ಳ ಸವಾರರಿಂದ ಕೂಡಿರುವ ಅಶ್ವಗಳು, ಗಂಭೀರವಾಗಿ ಸಾಗುತ್ತಿರುವ ಹಯಗಳು, ಗೊರಸಿನಿಂದ ನೆಲವನ್ನು ಗೀರುತ್ತಿರುವ ಹಯಗಳೂ ಇವೆ. ಇದೇ ಸಾಲಿನಲ್ಲಿ ಹೆಡೆ ಬಿಚ್ಚಿದ ನಾಗ, ಹಾವಾಡಿಗ, ಒಂಟೆಗಳು, ಹುಲಿ, ಸಿಂಹಗಳೂ ಇವೆ.

ಎರಡನೆಯ ಮಜಲಿನಲ್ಲಿ ಆನೆಗಳು ಸಾಗುತ್ತಿವೆ. ಯುದ್ಧದ ಶಸ್ತ್ರಾಸ್ತ್ರಗಳು ಇವೆ. ಆನೆಗಳ ವಿವಿಧ ಭಂಗಿಗಳಿವೆ. ಮನುಷ್ಯನನ್ನು ಕೊಲ್ಲುತಿರುವುದು, ಸಿಂಹವನ್ನು ಆನೆ ಎದುರಿಸುತ್ತಿರುವುದು, ಎರಡು ಸಲಗಗಳು ಒಟ್ಟಾಗಿ ಸಿಂಹವನ್ನು ಕೊಲ್ಲುತಿರುವುದು, ಟಗರುಗಳ ಕಾದಾಟ, ಒಂಟೆಗಳು ಸಾಗುತ್ತಿರುವುದು, ಒಬ್ಬ ಕುಬ್ಜ ಮತ್ತು ಅವನ ಪ್ರೇಯಸಿ ಇತ್ಯಾದಿಗಳು ಕಂಡು ಬರುವುವು.

ಅದರ ಮೇಲೆ ಒಂದಕ್ಕೊಂದು ಹೊಸೆದ (ಬಳ್ಳಿ) ಹಗ್ಗಗಳಿದ್ದು ಮಧ್ಯದಲ್ಲಿ ಪುಷ್ಪಗಳೂ, ಮಣಿಗಳೂ ಕೊರೆಯಲ್ಪಟ್ಟಿವೆ. ಅನಂತರ ವಿವಿಧಾಕಾರಗಳ ತಾವರೆ ಪುಷ್ಪಗಳಿದ್ದು, ಅಲ್ಲಲ್ಲಿ ಯಕ್ಷ, ಯಾಳಿ, ಸರ್ಪ, ಕಪಿ ಅಥವಾ ಕರಡಿಗಳು ಕೆತ್ತಲ್ಪಟ್ಟಿವೆ. ವಿಶೇಷವೆಂದರೆ ಹೊಯ್ಸಳರ ಲಾಂಛನವಾದ ಸಳನು ಹುಲಿಯನ್ನು ಕೊಲ್ಲುತ್ತಿರುವ ಚಿತ್ರವು, ದೇವಾಲಯದ ದಕ್ಷಿಣ ಭಾಗದಲ್ಲಿ ಕೆತ್ತಲ್ಪಟ್ಟಿದೆ. ಹಾಗೆಯೇ ವಾಯುವ್ಯ ಭಾಗದಲ್ಲಿ ಸಿಂಹ ಶಿರಸ್ಸಿನ ನವಿಲು ಬಿಡಿಸಲ್ಪಟ್ಟಿದೆ. ಉದ್ದ ಸೊಂಡಿಲಿನ ಯಾಳಿ, ಉದ್ದ ಮೂತಿಯ ಸಿಂಹ, ಹುಲ್ಲೆಯನ್ನು ಕೊಲ್ಲುತ್ತಿರುವ ಹುಲಿಯ ಚಿತ್ರವೂ ಈ ಸಾಲಿನಲ್ಲಿ ಬಿಡಿಸಲ್ಪಟ್ಟಿದೆ.

ಅನಂತರದ ಸಾಲಿನಲ್ಲಿ ಸಿಂಹಗಳು ಕೆತ್ತಲ್ಪಟ್ಟಿದ್ದು, ಇದರ ಮೇಲಿನ ಕಪೋತದಲ್ಲಿ ನಾಗಿನಿಯರು, ಯಕ್ಷರು, ಕಪಿಗಳೂ ಇವೆ. ವಿವಿಧ ಆಸನಗಳಲ್ಲಿ ಇರುವ ಯೋಗಿಗಳು, ಕಪ್ಪೆಗಳು, ಎಲೆಯನ್ನು ಕಚ್ಚುತ್ತಿರುವ ಗಿಳಿ, ಹಾವಾಡಿಗ ಅವನ ಹಾವು ಮತ್ತು ಕಪಿಗಳೂ ಇದೇ ಸಾಲಿನಲ್ಲಿಯೇ ಇವೆ.


ಇದರ ಮೇಲಿನ ನಾಲ್ಕನೇ ಸಾಲಿನಲ್ಲಿ ಇರುವ ಪಟ್ಟಿಕೆಯು ಅಗಲದಲ್ಲಿ ಕಿರಿದಾದರೂ ಅದರಲ್ಲಿರುವ ಚಿತ್ರಗಳು ಗಮನಾರ್ಹವಾಗಿವೆ. ಪೂರ್ವದಿಂದ ಪ್ರದಕ್ಷಿಣಾಕಾರವಾಗಿ ಸಾಗುವ ಈ ಚಿತ್ರಮಾಲಿಕೆಯ ಸ್ಥೂಲ ಪರಿಚಯ ಹೀಗಿದೆ.

ಅಶ್ವಮೇಧದ ಕುದುರೆಯೊಂದು ವಿಜಯ ಯಾತ್ರೆ ಹೊರಟಿದೆ. ಅದರೊಡನೆ ಶಸ್ತ್ರಾಸ್ತ್ರ ಧರಿಸಿದ ಸೈನಿಕರೂ ಇದ್ದಾರೆ, ವಾದ್ಯಗಾರರೂ ಇದ್ದಾರೆ. ಪಾಲಕಿಯಲ್ಲಿ ರಾಜಪುರುಷನೋರ್ವನಿದ್ದಾನೆ. ಪಕ್ಕದಲ್ಲಿ ಒಬ್ಬ ಛತ್ರಧಾರಿ. ಆನೆಯ ಮೇಲೆ ಒಬ್ಬ ರಾಜ

ಮಹಿಳೆ ಇದ್ದಾಳೆ. ಕುದುರೆಯ ಮೇಲೆ ಕುಳಿತ ರಾಜಕುಮಾರರಿದ್ದಾರೆ. ಅವರ ಹಿಂದೆ ಕಾಲಾಳುಗಳೂ, ಕುದುರೆಗಳೂ ಮತ್ತು ಆನೆಗಳೂ ಇವೆ. ದಕ್ಷಿಣದ ಪಟ್ಟಿಕೆಯಲ್ಲಿ ಈ ಮೆರವಣಿಗೆಯು ಮುಂದುವರಿಯುತ್ತದೆ. ವೀರ ರಾಜನಿಗೆ ಭವ್ಯ ಸ್ವಾಗತವು ದೊರಕುತ್ತದೆ. ಆತನು ಸಿಂಹಾಸನಾರೂಢನಾಗುತ್ತಾನೆ. ಆತನ ಪಾದವನ್ನು ತೊಳೆಯುತ್ತಾರೆ. ಆತನು ತನ್ನ ಧನುರ್ಬಾಣಗಳನ್ನು ತೆಗೆದು ಪಕ್ಕಕ್ಕೆ ಇಡುತ್ತಾನೆ. ತ್ರಿಶಿರಗಳುಳ್ಳ ದೇವರನ್ನು ಪ್ರಾರ್ಥಿಸುತ್ತಾನೆ (ದತ್ತಾತ್ರೇಯ). ಬ್ರಹ್ಮ ಸರಸ್ವತಿಯರಿಗೆ ಸಾಷ್ಟಾಂಗ ನಮಸ್ಕಾರವೆಸಗುತ್ತಾನೆ. ಸ್ತ್ರೀಯೊಬ್ಬಳು ಬ್ರಹ್ಮನನ್ನು ಮೆಚ್ಚಿಸಿ ಆತನಿಂದ ವರವನ್ನು ಪಡೆದು ರುದ್ರವೀಣೆಯನ್ನು ನುಡಿಸುತ್ತಾಳೆ. ರಾಜ ವೀರನು ಅಶ್ವಮೇಧದ ಕುದುರೆಯನ್ನು ಹಿಂಬಾಲಿಸುತ್ತಾನೆ. ಮುಂದೆ ಸೋತು ಬಿದ್ದ ರಾಜನನ್ನು ಈ ಮಹಿಳೆ ಔಷಧವನ್ನಿತ್ತು ಎಚ್ಚರಿಸುತ್ತಾಳೆ. ಶಿವಪೂಜೆ ಮಾಡುತ್ತಿರುವ ಸ್ತ್ರೀ, ರಾಜಪುರುಷ ಮತ್ತು ಆಕೆಯ ವಿವಾಹ. ನೈಋತ್ಯ ದಿಕ್ಕಿನಲ್ಲಿ ಇರುವ ಪಟ್ಟಿಕೆಯಲ್ಲಿ ರಾಜ ಮತ್ತು ಅವನ ಪ್ರೇಯಸಿ ಈಶ್ವರ ಪ್ರಸಾದವನ್ನು ಸ್ವೀಕರಿಸಿ ಕುದುರೆಯನ್ನೇರಿ ಹೊರಡುತ್ತಾರೆ. ರಾಜ ಪುರುಷನೊಬ್ಬನು ಅವರನ್ನು ಎದುರ್ಗೊಂಡು ನಮಸ್ಕರಿಸಿ ಪಲ್ಲಕ್ಕಿಯಲ್ಲಿ ಅವರನ್ನು ಅರಮನೆಗೆ ಕರೆದೊಯ್ಯುತ್ತಾನೆ. ವಾಯುವ್ಯ ದಿಕ್ಕಿನಲ್ಲಿರುವ ಪಟ್ಟಿಕೆಯಲ್ಲಿ ಇವರನ್ನು ರಾಜ ರಾಣಿಯರು ಸ್ವಾಗತಿಸಿ ಹರಸುತ್ತಾರೆ. ಈ ದಂಪತಿಗಳು ಶತ್ರುವಿನ ಕರವಾಳಕ್ಕೆ ಸಿಕ್ಕಿದರೂ ಶ್ರೀ ನಾರಾಯಣನ ಕೃಪೆಯಿಂದ ಪಾರಾಗಿ ಉಳಿಯುತ್ತಾರೆ. ಮುಂದಿನ ಪಟ್ಟಿಕೆಯಲ್ಲಿ ಇಂದ್ರಕೀಲ ಪರ್ವತ, ಪಾಶುಪತಾಸ್ತ್ರಕ್ಕಾಗಿ ಅರ್ಜುನನ ತಪಸ್ಸು, ಅವನೆದುರಲ್ಲಿ ಹಂದಿಯನ್ನು ಓಡಿಸಿಕೊಂಡು ಬರುತ್ತಿರುವ ಕಿರಾತವೇಷಧಾರಿಯಾದ ಶಿವ, ಅರ್ಜುನ ಮತ್ತು ಕಿರಾತನ ಯುದ್ಧ ನಡೆಯುತ್ತಿದೆ. ಉತ್ತರದ ಪಟ್ಟಿಕೆಯಲ್ಲಿ ಮುಂದುವರೆದ ಯುದ್ಧ, ಈ ಯುದ್ಧವನ್ನು ಕೌತುಕದಿಂದ ನೋಡುತ್ತಿರುವ ಕಿರಾತವೇಷಧಾರಿಣಿಯಾದ ಪಾರ್ವತಿ, ಅರ್ಜುನನ ಸೋಲು. ಪುನಃ ಯುದ್ಧ ಮಾಡಿ ಜಯಗಳಿಸುವುದಕ್ಕಾಗಿ ವರವನ್ನು ಪಡೆಯಲು, ಅರ್ಜುನನು ಶಿವಪೂಜಾಮಗ್ನನಾಗುತ್ತಾನೆ. ಅರ್ಜುನನಿಗೆ ಜ್ಞಾನೋದಯ, ಕಿರಾತ ಮತ್ತು ಆತನ ಮಡದಿ ಪಾರ್ವತಿ ಮತ್ತು ಪರಮೇಶ್ವರರೇ ಎಂದರಿತು, ತನ್ನ ಅಪರಾಧಕ್ಕಾಗಿ ಪಶ್ಚಾತಾಪಪಟ್ಟು ಶಿವ-ಶಿವೆಯರ ಕಾಲಿಗೆ ಎರಗುತ್ತಾನೆ ಅರ್ಜುನ. ಸುಖಾಸನಾಸೀನರಾದ ಪಾರ್ವತಿ ಪರಮೇಶ್ವರರು ಗಣಪತಿಯೊಡನಿದ್ದು, ಅರ್ಜುನನಿಗೆ ಪಾಶುಪತಾಸ್ತ್ರವನ್ನು ಅನುಗ್ರಹಿಸುತ್ತಾರೆ. ಶಿಷ್ಯರಿಗೆ ಪ್ರವಚನ ಮಾಡುತ್ತಿರುವ ಶ್ರೀ ಶಂಕರಾಚಾರ್ಯರು ಎತ್ತರದ ಪೀಠದಲ್ಲಿ ಮಂಡಿಸಿದ್ದಾರೆ. ಅಕ್ಷಮಾಲೆ ಧರಿಸಿದ್ದಾರೆ. ಬಲಹಸ್ತ ಚಿನ್ಮುದ್ರೆಯಲ್ಲಿದೆ. ಎಡಗೈಯಲ್ಲಿ ಪುಸ್ತಕ ಧರಿಸಿದ್ದಾರೆ. ಅವರ ನಾಲ್ವರು ಶಿಷ್ಯರಾದ ಶ್ರೀ ಸುರೇಶ್ವರ, ಶ್ರೀ ಹಸ್ತಾಮಲಕ, ಶ್ರೀ ಪದ್ಮಪಾದ, ಶ್ರೀ ತೋಟಕ ಆಚಾರ್ಯರ ಇಕ್ಕೆಲೆಗಳಲ್ಲಿ ಒಬ್ಬೊಬ್ಬರಂತೆ ವ್ಯಾಸ ಪೀಠದ ಮುಂದೆ ನಮ್ರವಾಗಿ ಮಂಡಿಸಿದ್ದಾರೆ. ಆಚಾರ್ಯರ ಎಡಗಡೆಗೆ ಸಾಲಾಗಿ ಶ್ರೀ ಸುರೇಶ್ವರರಿಂದ ಆರಂಭಿಸಿ ಶ್ರೀ ವಿದ್ಯಾರಣ್ಯರವರೆಗಿನ ಶೃಂಗೇರಿ ಪೀಠದ ಹನ್ನೊಂದು ಆಚಾರ್ಯರ ಶಿಲ್ಪಗಳು ಬಿಡಿಸಲ್ಪಟ್ಟಿದೆ. ಅವರು ಕ್ರಮವಾಗಿ ಶ್ರೀ ಸುರೇಶ್ವರ, ಶ್ರೀ ನಿತ್ಯಬೋಧಘನ, ಶ್ರೀ ಜ್ಞಾನಘನ, ಶ್ರೀ ಜ್ಞಾನೋತ್ತಮ ಶಿವ, ಶ್ರೀ ಜ್ಞಾನಗಿರಿ, ಶ್ರೀ ಸಿಂಹಗಿರಿ, ಶ್ರೀ ಈಶ್ವರತೀರ್ಥ, ಶ್ರೀ ನೃಸಿಂಹತೀರ್ಥ, ಶ್ರೀ ವಿದ್ಯಾತೀರ್ಥ (ವಿದ್ಯಾಶಂಕರ), ಶ್ರೀ ಭಾರತೀತೀರ್ಥ ಮತ್ತು ಶ್ರೀ ವಿದ್ಯಾರಣ್ಯರು. ಈ ಕಡೆಯ ಈರ್ವರು ಆಚಾರ್ಯರ ಕಾಲದಲ್ಲಿಯೇ ಈ ಭವ್ಯ ದೇವಾಲಯವು ನಿರ್ಮಾಣವಾದುದು. ಶ್ರೀ ಶಂಕರಾಚಾರ್ಯರ ಬಲಗಡೆಗೆ ಗೃಹಸ್ಥ ಉಪಾಧ್ಯಾಯನೋರ್ವನು ಐದು ಜನ ಶಿಷ್ಯರಿಗೆ ಪಾಠ ಹೇಳುತ್ತಿದ್ದಾನೆ. ರಾಜಪುರುಷರು ಆತನಿಗೆ ಗೌರವ ತೋರುತ್ತಿದ್ದಾರೆ (ಶ್ರೀ ಸಾಯಣಾಚಾರ್ಯರು ವೇದ ಭಾಷ್ಯ ಪ್ರವಚನ ಮಾಡುತ್ತಿರಬಹುದು?). ಆ ಬಳಿಕ ತಾಡಪತ್ರವೊಂದು ಸಮರ್ಪಿಸಲ್ಪಡುತ್ತಿದೆ. ಈಶಾನ್ಯದ ಪಟ್ಟಿಕೆಯಲ್ಲಿ ವಿವಿಧ ಭಂಗಿಗಳಲ್ಲಿರುವ ಯೋಗಿಗಳು, ಸಿದ್ಧರು, ಮತ್ಸ್ಯ, ಕೂರ್ಮ, ವೃಶ್ಚಿಕ ಇತ್ಯಾದಿಗಳ ಮೇಲೆ ಕುಳಿತಿದ್ದಾರೆ. ಏಳನೆಯ ಪಟ್ಟಿಕೆಯಲ್ಲಿ ಶ್ರೀ ಯಂತ್ರದ ವಿವಿಧ ಮಂಡಲಗಳಿದ್ದು, ಎಂಟನೆಯ ಪಟ್ಟಿಕೆಯಲ್ಲಿ ಯಕ್ಷರು, ನರ್ತಕರು, ವಿವಿಧ ವಾದ್ಯಗಳ ಮೇಳ ಮೇಳೈಸಿವೆ.

ಈ ಚಿತ್ರ ಪಟ್ಟಿಕೆಯ ಸಾಲಿಗೂ ದೇವಸ್ಥಾನದ ಶಿಲಾ ಮೇಲ್ಛಾವಣಿಗೂ ಮಧ್ಯದಲ್ಲಿ ಬಹಳ ಆಕರ್ಷಕವಾದ ಸುಂದರವೂ, ಶಿಲ್ಪಚಾತುರ್ಯದಿಂದ ಕೂಡಿರುವಂತಹವೂ ಆದ ಸಾಲು ವಿಗ್ರಹಗಳು ಸಾಲಾಗಿ ಪ್ರದಕ್ಷಿಣಾಕಾರವಾಗಿ ಕೆತ್ತಲ್ಪಟ್ಟಿವೆ. ಅವುಗಳನ್ನು ಸ್ಥೂಲವಾಗಿ ಪರಿಚಯ ಮಾಡಿಕೊಡುವ ಪ್ರಯತ್ನವನ್ನು ಮಾಡೋಣ.

ನವರಂಗದ ಪೂರ್ವ ದ್ವಾರದಿಂದ ಆಗ್ನೇಯ ದಿಕ್ಕನ್ನು ಸುತ್ತಿಕೊಂಡು ನವರಂಗದ ದಕ್ಷಿಣ ದ್ವಾರದವರೆಗೆ: ಚತುರ್ಭುಜ ಮೂರ್ತಿಯಾದ ಇಂದ್ರ - ಅಭಯ ವರದಮುದ್ರೆ, ಉಳಿದೆರಡು ಕೈಗಳಲ್ಲಿ ಕಠಾರಿ ಮತ್ತು ಭಲ್ಲೆಗಳಿವೆ. ಅದರ ನಂತರ ಕೈಯ್ಯಲ್ಲಿ ಜಪಸರ,



2. ವಿದ್ಯಾಶಂಕರ ದೇವಾಲಯ, ಶೃಂಗೇರಿ



3. ಮಾರ್ಕಂಡೇಯ ಪ್ರಸನ್ನಮೂರ್ತಿ



4. ಮೃತ್ಯು

ಜಲಪಾತ್ರೆಯನ್ನು ಧರಿಸಿ ಚಿನ್ಮುದ್ರೆ ಮತ್ತು ವರದಹಸ್ತವನ್ನು ತೋರುತ್ತಿರುವ ಪುರುಷ ವಿಗ್ರಹವಿದೆ. ಧನುರ್ದಾರಿಯಾದ ಶ್ರೀರಾಮಚಂದ್ರ, ಧ್ಯಾನಿಯಾದ ವ್ಯಾಸಮಹರ್ಷಿಗಳು, ಶ್ರೀ ಪರಮೇಶ್ವರ - ಅಭಯ ಮತ್ತು ವರದಮುದ್ರೆ, ಇನ್ನುಳಿದ ಹಸ್ತಗಳಲ್ಲಿ ಪರಶು ಮತ್ತು ಜಿಂಕೆ, ಪೀಠದಲ್ಲಿ ನಂದಿ ಇದೆ. ನಂತರ ಸರ್ಪಭೂಷಣನಾದ ಭೈರವ ವಿಗ್ರಹ. ದಂಡ ಮತ್ತು ಭಿಕ್ಷಾಪಾತ್ರೆಯನ್ನು ಧರಿಸಿದ್ದಾನೆ. ಪೀಠದಲ್ಲಿ ವೃಶ್ಚಿಕವಿದೆ (ಚೇಳು). ಏಕಶಿರನಾದ ಬ್ರಹ್ಮ ಚತುರ್ಭುಜಗಳಿಂದ ಕೂಡಿದ್ದಾನೆ. ಎರಡು ಕೈಗಳು ಅಭಯ, ವರದ ಮುದ್ರೆಯನ್ನು ಪ್ರದರ್ಶಿಸುತ್ತಿವೆ, ಉಳಿದೆರಡು ಕೈಗಳಲ್ಲಿ ಸ್ರುಕ್ ಮತ್ತು ಸ್ರುವ (ಯಜ್ಞದಲ್ಲಿ ಬಳಸಲ್ಪಡುವ ಮರದ ಪಾತ್ರೆಗಳು). ಬ್ರಹ್ಮನ ಬಲ ಮತ್ತು ಎಡ ಭಾಗದಲ್ಲಿ ನೃತ್ಯ ಗಣಪತಿ ಮತ್ತು ಚಾಮರಧಾರಿಯಾದ ಒಂದು ವಿಗ್ರಹವಿದೆ. ಅನಂತರ ಸಿಂಹವಾಹಿನಿಯಾದ ದುರ್ಗಾ - ಚತುರ್ಭುಜ ಮೂರ್ತಿ, ತ್ರಿಶೂಲ ಚಕ್ರ, ಶಂಕ ಮತ್ತು ತರ್ಜನಿ ಮುದ್ರೆಯನ್ನು ಪ್ರದರ್ಶಿಸುತ್ತಿರುವಳು. ಮುಂದಿನದು ಶಿವಪೂಜಾ ನಿರತನಾದ ಶ್ರೀ ರಾಮಚಂದ್ರ. ಆತನ ಹಿಂದೆ ನಮ್ರನಾಗಿ ನಿಂತ ಲಕ್ಷ್ಮಣನ ಕಿರು ಮೂರ್ತಿ. ಶ್ರೀ ರಾಮೇಶ್ವರ ಕ್ಷೇತ್ರವು ಶೃಂಗೇರಿ ದಕ್ಷಿಣಾಮ್ನಾಯ ಪೀಠದ ಆಶ್ರಮ. ಅದರ ವಿಶಿಷ್ಟ ಸಂಕೇತವಾಗಿ ಈ ಮೂರ್ತಿಗಳು ಆಗ್ನೇಯದಲ್ಲಿರುವುದು ಸಹಜವಾಗಿಯೇ ಇದೆ. ರಾಮೇಶ್ವರ ಕ್ಷೇತ್ರವು ಶೃಂಗೇರಿಗೆ ಆಗ್ನೇಯದಲ್ಲಿಯೇ ಇದೆ. ತರುವಾಯ ಚತುರ್ಭುಜನಾದ ನಗ್ನ ಶನೀಶ್ವರ - ತ್ರಿಶೂಲಧಾರಿ, ಬಾಣ ಧನುಸ್ಸುಗಳೂ ಇವೆ, ಇನ್ನೊಂದು ವರದ ಹಸ್ತ. ಆ ಬಳಿಕ ಇರುವುದು ದ್ವಿಬಾಹು ಮೃತ್ಯುಂಜಯ ಮೂರ್ತಿ. ಐದು ಹೆಡೆಗಳುಳ್ಳ ಸರ್ಪಗಳು ಇಕ್ಕಡೆಗಳಲ್ಲಿಯೂ ಇವೆ. ಮುಂದೆ ತ್ರಿಶೂಲ ಖಡ್ಗ, ಪಾಶ ಮತ್ತು ವರದ ಹಸ್ತವುಳ್ಳ ನಿಂತಿರುವ ಶಿವಮೂರ್ತಿ, ಪೀಠದಲ್ಲಿ ಪದ್ಮ ಲಾಂಛನವಿದೆ. ಅನಂತರ ಚಿತ್ರಗುಪ್ತ ವಿಗ್ರಹ - ದ್ವಿಬಾಹು ಪುಸ್ತಕ ಮತ್ತು ಅಂಕುಶಗಳನ್ನು ಧರಿಸಿದ್ದಾನೆ. ತರುವಾಯ ಚತುರ್ಭುಜ ಮೂರ್ತಿಯಾದ ಯಮ - ಸರ್ಪಪಾಶ ಮತ್ತು ಗದೆ, ಉಳಿದೆರಡು ಕೈಗಳಲ್ಲಿ ವರದ, ಅಭಯ ಮುದ್ರೆಯನ್ನು ಪ್ರದರ್ಶಿಸುತ್ತಿದ್ದಾನೆ. ಎರಡು ಪಕ್ಕಗಳಲ್ಲಿಯೂ ಧರ್ಮ ಮತ್ತು ಮೃತ್ಯುವನ್ನು ಸಂಕೇತಿಸುವ ಶ್ವಾನಗಳಿವೆ. ಪೀಠದಲ್ಲಿ ಯಮನ ವಾಹನ ಕೋಣ ಇದೆ.

ನವರಂಗದ ದಕ್ಷಿಣ ಪಾರ್ಶ್ವದಿಂದ ಪ್ರದಕ್ಷಿಣ ಪಥದ ದಕ್ಷಿಣ ದ್ವಾರದವರೆಗೆ ಶಿಲ್ಪ ಸಿರಿಯು ಹೀಗೆ ಹಬ್ಬಿದೆ: ದ್ವಿಬಾಹು ಮೃತ್ಯುದೇವತೆ - ಹಸ್ತಗಳಲ್ಲಿ ಸರ್ಪ ಮತ್ತು ಪಾಶಗಳಿವೆ. ಸರ್ಪದ ಏಳು ಹೆಡೆಗಳು ಮೇಲಕ್ಕೆ ಎದ್ದಿವೆ. ಅನಂತರ ತ್ರಿಮೂರ್ತಿಗಳಾದ ಶ್ರೀಲಕ್ಷ್ಮೀನೃಸಿಂಹ, ದ್ವಾರಪಾಲಕರು ಅಕ್ಕಪಕ್ಕದಲ್ಲಿ, ಶ್ರೀ ಉಮಾಮಹೇಶ್ವರ - ಪೀಠದಲ್ಲಿ ನಂದಿ, ಬಲಕ್ಕೆ ಆಂಜನೇಯ, ಶ್ರೀವಾಣೀ ಹಿರಣ್ಯಗರ್ಭರು - ಪೀಠದಲ್ಲಿ ಹಂಸ, ಗರುಡವಿಗ್ರಹ. ಇಲ್ಲಿರುವ ಹಿರಣ್ಯಗರ್ಭ ಬ್ರಹ್ಮನಿಗೆ ಗಡ್ಡವಿರುವುದೊಂದು ವೈಶಿಷ್ಟ್ಯ. ಆ ಬಳಿಕ ಚತುರ್ಭುಜನಾದ ದಕ್ಷಿಣಾಮೂರ್ತಿ - ಚಿನ್ಮುದ್ರೆ ಮತ್ತು ಅಕ್ಷಮಾಲೆ ಒಂದು ಕೈಯಲ್ಲಿ, ಉಳಿದವುಗಳಲ್ಲಿ ಪದ್ಮ, ಕಲಶ ಮತ್ತು ಪುಸ್ತಕವನ್ನು ಧರಿಸಿದ್ದಾನೆ. (ಇದು ಶ್ರೀ ಶಾರದೆಯ ಸ್ವರೂಪವೇ ಅಲ್ಲವೇ ?). ಆತನ ಪಾದವೊಂದು ಅಪಸ್ಮಾರ ಪುರುಷನ ಮೇಲಿದೆ. ಅಕ್ಕಪಕ್ಕದಲ್ಲಿ ತಾಳೆಯ ಪತ್ರವನ್ನೂ ಕಂಠವನ್ನೂ ಹಿಡಿದು ಬರೆಯಲು ಸಿದ್ಧರಾದ ಶಿಷ್ಯರಿದ್ದಾರೆ. ಪೀಠದಲ್ಲಿ ವೃದ್ಧ ಶಿಷ್ಯರ ಮೂರ್ತಿಗಳಿವೆ. ಅದರ ಮುಂದಿನದು ಸೂರ್ಯಮಂಡಲ. ಅದರಲ್ಲಿ ನಾಲ್ಕು ಶಿರಗಳು ಮತ್ತು ದಶಭುಜಗಳುಳ್ಳ ಸವಿತೃದೇವತೆ (ಸಾವಿತ್ರೀ, ಗಾಯತ್ರೀ). ಪಂಚ ಶಿರಗಳೆಂದು ಧ್ಯಾನ ಸ್ತುತಿಯಲ್ಲಿ ಇದ್ದರೂ ಇಲ್ಲಿ ಒಂದು ಶಿರವು ಅವ್ಯಕ್ತವಾಗಿದೆ ಅಥವಾ ಹಿಂಬದಿಯಲ್ಲಿ ಇರುವುದೆಂದು ಊಹಿಸಿಕೊಳ್ಳಬೇಕು. ದೇವತೆಯು ಪದ್ಮಾಸನಸ್ಥಳಾಗಿದ್ದಾಳೆ. ದಶಭುಜಗಳಲ್ಲಿ ಕ್ರಮವಾಗಿ, ಅಭಯ, ಅಂಕುಶ, ತ್ರಿಶೂಲ, ಚಕ್ರ, ಪದ್ಮ, ಶಂಖ, ಕಪಾಲ, ನಾಗ, ವರದಹಸ್ತ (ಇನ್ನೊಂದರಲ್ಲಿ ಪದ್ಮ ಗದೆ, ಕಶಾ). ಆಕೆ ಏಕ ಚಕ್ರ ರಥದಲ್ಲಿ ಮಂಡಿಸಿದ್ದಾಳೆ. ಎರಡು ಸಿಂಹಗಳು ರಥವನ್ನು ಎಳೆಯುತ್ತಿವೆ. ರಥದ ಬುಡದಲ್ಲಿ ಇಬ್ಬರು ಭಕ್ತರಿದ್ದಾರೆ. ಚಕ್ರದ ಎಡಬದಿಯಲ್ಲಿ ಇಬ್ಬರು ನರ್ತಕರಿದ್ದಾರೆ. ಇವೆಲ್ಲವೂ ಒಂದು ಚಕ್ರಾಕಾರವಾದ ಮಂಡಲದಲ್ಲಿದ್ದು ಅದರ ಎರಡು ಬದಿಗೂ ದ್ವಾರಪಾಲಕರಿದ್ದಾರೆ. ಅನಂತರ ಸೂರ್ಯನಿಗೆ ಅರ್ಘ್ಯ ಕೊಡುತ್ತಿರುವ ದೇವತಾ ಮೂರ್ತಿಯೊಂದಿದೆ. ಬಲಗಡೆಗೆ ಇಬ್ಬರು ಬ್ರಹ್ಮರು ಇದ್ದಾರೆ. ಅವರ ಪೀಠದಲ್ಲಿ ನವಿಲಿದೆ. (ಬ್ರಹ್ಮನೂ ಸುಬ್ರಹ್ಮಣ್ಯನೇ ?). ಸಾವಿತ್ರಿಯ ನಾಲ್ಕು ಶಿರಗಳಲ್ಲಿ ಮೂರು ಒಂದು ಸಾಲಿನಲ್ಲಿದ್ದು, ಒಂದು ಮೇಲಕ್ಕಿದೆ. ಇನ್ನೊಂದು ಅವ್ಯಕ್ತವಾಗಿದ್ದು ಇಂತಹ ಈ ಶಿಲ್ಪವು ಅತ್ಯಪೂರ್ವದ್ದಾಗಿದೆ.

ಪ್ರದಕ್ಷಿಣಾಪಥದ ದಕ್ಷಿಣದ ಬಾಗಿಲಿನಿಂದ ಪಶ್ಚಿಮ ದ್ವಾರದವರೆಗೆ (ನೈಋತ್ಯ ದಿಕ್ಕಿನಿಂದ) ಇರುವ ಶಿಲ್ಪಗಳು ಹೀಗಿವೆ: ಇವುಗಳಲ್ಲಿ ಏಳು ಪ್ರಜಾಪತಿ ಮೂರ್ತಿಗಳು. ಅನಂತರ ಕಲ್ಕಿ ಮೂರ್ತಿ - ಅಶ್ವಾರೂಢನಾಗಿದ್ದು ಒಂದು ಕೈಯಲ್ಲಿ ಕುದುರೆಯ ಕಡಿವಾಣ



ಹಯಗ್ರೀವ



6. ಶಂಕರಾಚಾರ್ಯರು ಶಿಷ್ಯರಿಗೆ ಉಪದೇಶ ನೀಡುತ್ತಿರುವುದು.

ಇನ್ನೊಂದು ಕೈಯಲ್ಲಿ ಕರವಾಳವಿದೆ. ಇದರ ಪಾದಪೀಠದಲ್ಲಿ ಕತ್ತಿಯನ್ನು ಹಿಡಿದ ಸೈನಿಕರ ಚಿತ್ರವಿದೆ. ಆ ಬಳಿಕ ನಗ್ನನಾಗಿರುವ ಬುದ್ಧಮೂರ್ತಿ - ಪಾದ ಪೀಠದಲ್ಲಿ ನಾಲ್ವರು ಶಿಷ್ಯರಿದ್ದಾರೆ (ಬುದ್ಧನಿಗೆ ಆರು ಜನ ಪ್ರಮುಖ ಶಿಷ್ಯರು - ಕೊಂಡಣ, ಭಡ್ಡಿಯ, ವೆಪ್ಪ, ಮಹಾನಾಮ, ಅಸ್ಸಜಿ ಮತ್ತು ಯಶ. ಈ ಶಿಲ್ಪದಲ್ಲಿ ನಾಲ್ಕೇ ಜನರಿರುವುದು ಒಂದು ವಿಶೇಷ). ಈ ಬುದ್ಧ ವಿಗ್ರಹವು, ಜಿನ ವಿಗ್ರಹದಂತೆ ನಗ್ನವಾಗಿರುವುದು, ವೈದಿಕ ಮತದಲ್ಲಿ ಈ ಎರಡೂ ಮತಗಳು ಆಶ್ರಯ ಪಡೆದಿರುವುದರ ಸಂಕೇತ ಎನ್ನಬಹುದು. ಅನಂತರ ರುಕ್ಮಿಣೀ ಸತ್ಯಭಾಮೆಯರೊಡಗೂಡಿದ ವೇಣುಗೋಪಾಲ (ಇಂತಹ ಶಿಲ್ಪವು ಚಿಕ್ಕಮಗಳೂರಿನ ಬಳಿ ಇರುವ ಅಂಬಳೆ ಗ್ರಾಮದಲ್ಲಿಯೂ ಇದೆ. ಆ ಮೂರ್ತಿಗಳು ಐದು ಅಡಿ ಎತ್ತರವಾಗಿದ್ದು ಸುಂದರವಾದ ಹೊಯ್ಸಳ ಶಿಲ್ಪಗಳು). ಪೀಠದಲ್ಲಿ ತಲೆಬಾಗಿ ಕುಳಿತ ಗರುಡ, ವೇಣು ನಾದದಿಂದ ಮುಗ್ಧವಾದ ಗೋವೃಂದವಿದೆ. ತರುವಾಯ ಹಲ ಮತ್ತು ಗದಾಧರನಾದ ಬಲರಾಮ ಮೂರ್ತಿ - ಪೀಠದಲ್ಲಿ ಕರವಾಳವನ್ನು ಹಿಡಿದ ಸೈನಿಕರು. ಬಲಕ್ಕೆ ಪದ್ಮಧಾರಿಯಾದ ಓರ್ವ ಋಷಿಯಿದ್ದಾರೆ. ಅನಂತರ ಸೀತಾ ಲಕ್ಷ್ಮಣ ಸಮೇತನಾದ ಶ್ರೀರಾಮ - ಕೋದಂಡಧಾರಿ, ಪೀಠದಲ್ಲಿ ಕಪಿ ಮತ್ತು ಕರಡಿಗಳು. ಸೀತಾದೇವಿಯು ಶ್ರೀ ರಾಮನ ಭುಜದ ಎತ್ತರವನ್ನು ಸಮೀಪಿಸುವ ಚಿಕ್ಕಮೂರ್ತಿಯಾಗಿರುವುದು ಒಂದು ಶಿಲ್ಪಶಾಸ್ತ್ರದ ವೈಶಿಷ್ಟ್ಯ. ಅದರ ಮುಂದಿನದು ಧನುರ್ಬಾಣಧಾರಿಯಾದ ಪರಶುರಾಮ - ಪೀಠದಲ್ಲಿ ಗರುಡ ಮತ್ತು ಸರ್ಪ. ಇಲ್ಲಿ ಪರಶುರಾಮ ಪರಶು (ಕೊಡಲಿ) ರಹಿತನಾಗಿರುವುದು, ಧನುರ್ಬಾಣಸಹಿತನಾಗಿರುವುದು ಬಹುಶಃ ಶ್ರೀ ಸೀತಾ ಸ್ವಯಂವರದ ನಂತರ ಅಯೋಧ್ಯೆಗೆ ಹಿಂತಿರುಗುತ್ತಿದ್ದ ಶ್ರೀ ರಾಮ ಪರಶುರಾಮರ ಸಮಾಗಮ ಸನ್ನಿವೇಶದ ಚಿತ್ರಣವಿರಬಹುದು.

ಮುಂದೆ ಪ್ರದಕ್ಷಿಣಾಪಥದ ಪಶ್ಚಿಮ ದ್ವಾರದಿಂದ (ವಾಯುವ್ಯ) ಪ್ರದಕ್ಷಿಣಾಪಥದ ಉತ್ತರ ದ್ವಾರದವರೆಗಿನ ಶಿಲ್ಪವಿಶೇಷವು ಹೀಗಿದೆ: ಛತ್ರಧಾರಿಯಾದ ವಾಮನಮೂರ್ತಿ ಬಲಿಯ ದಾನವನ್ನು ಸ್ವೀಕರಿಸುತ್ತಿದ್ದಾನೆ. ಆ ಬಳಿಕ ಹಿರಣ್ಯ ಕಶ್ಯಪುವನ್ನು ಸಂಹಾರಮಾಡಿ ಕರುಳನ್ನು ಬಗೆಯುತ್ತಿರುವ ಉಗ್ರ ನರಸಿಂಹ ಮೂರ್ತಿ. ಎಡ ಪಾರ್ಶ್ವದಲ್ಲಿ ಚತುರ್ಭುಜೆಯಾದ ಲಕ್ಷ್ಮೀದೇವಿ. ಬಲಕ್ಕೆ ಅಂಜಲೀಬದ್ಧನಾಗಿ ನಿಂತಿರುವ ವಿನೀತ ಪ್ರಹ್ಲಾದ. ಪಾದಪೀಠದಲ್ಲಿ ಯುದ್ಧಮಾಡುತ್ತಿರುವ ರಾಕ್ಷಸ (ಇಂತಹ ಪೂರ್ಣ ಪ್ರಮಾಣದ ಮೂರ್ತಿಯನ್ನು ಮಂಡ್ಯ ಜಿಲ್ಲೆಯ ಮದ್ದೂರಿನಲ್ಲಿರುವ ದೇವಸ್ಥಾನದಲ್ಲಿ ದರ್ಶಿಸಬಹುದು). ತರುವಾಯ ಭೂವರಾಹಸ್ವಾಮಿ - ಚತುರ್ಭುಜಮೂರ್ತಿ, ಶಂಖ, ಚಕ್ರ, ಅಭಯಹಸ್ತ, ವಾಮಾಂಕದಲ್ಲಿರುವ ಲಕ್ಷ್ಮಿಯನ್ನು ವಾಮ ಕರದಿಂದ ಆಲಂಗಿಸಿದ್ದಾನೆ. ಪೀಠದಲ್ಲಿ ಮೃತನಾದ ಹಿರಣ್ಯಾಕ್ಷ. ಆ ಬಳಿಕ ಕೂರ್ಮಾವತಾರ ಮೂರ್ತಿ ಆಮೆಯ ರೂಪದಲ್ಲಿಯೇ ಇದ್ದಾನೆ. ಅದಾದನಂತರ ಮತ್ಸ್ಯಾವತಾರಮೂರ್ತಿ ಮೀನಿನ ರೂಪದಲ್ಲೇ ಇದ್ದಾನೆ. ಇಲ್ಲಿಯ ವಿಶೇಷವೆಂದರೆ, ಪ್ರದಕ್ಷಿಣಾಪಥವನ್ನು ಬಳಸಿಕೊಂಡು ಬಂದಾಗ ಅವತಾರಗಳು ಮತ್ಸ್ಯಾವತಾರದಿಂದ ಕಲ್ಕ್ಯಾವತಾರದವರೆಗೆ ಅನುಕ್ರಮವಾಗಿರದೆ, ಕಲ್ಕಿಯಿಂದ ಮತ್ಸ್ಯದ ವರೆಗೆ ಹಿಮ್ಮುಖವಾಗಿರುವುದು. ಇದು ವಿಶೇಷವಾಗಿ ವರ್ತಮಾನ ಕಾಲಕ್ಕೆ ಸಮೀಪರಾದ ಕಲ್ಕಿ, ಬುದ್ಧರಿಂದ ಕ್ರಮವಾಗಿ ಹಿಂದಕ್ಕೆ ಹೋಗುವ ವಿಧಾನ. ನಮ್ಮ ಪೂರ್ವಜರನ್ನು ನಮ್ಮಿಂದ ಕ್ರಮವಾಗಿ ತಂದೆ, ತಾತ, ಮುತ್ತಾತ ಎಂದು ಹಿಂದಕ್ಕೆ ಗುರುತಿಸುತ್ತಾ ಹೋಗುವ ರೂಢಿಯಂತಿದೆ. ಮತ್ತು ಇಲ್ಲಿ ದಶಾವತಾರಗಳಿಗೆ ಬದಲಾಗಿ ಏಕದಶಾವತಾರಗಳಿವೆ. ಶ್ರೀ ಕೃಷ್ಣಾವತಾರವನ್ನು ಪೂರ್ಣಾವತಾರವಾಗಿ ಪರಿಗಣಿಸಿದರೆ ಉಳಿದ ಹತ್ತು ಅಂಶಾವತಾರಗಳಾಗುತ್ತವೆ (ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಪರಶುರಾಮ, ಬಲರಾಮ, ರಾಮ, ಶ್ರೀ ಕೃಷ್ಣ, ಬುದ್ಧ ಮತ್ತು ಕಲ್ಕಿ). ಬುದ್ಧಾವತಾರವನ್ನು ದಶಾವತಾರದಲ್ಲಿ ಸೇರಿಸಿಕೊಂಡಿರುವುದು, ಬೌದ್ಧ ಮತವು ವೈದಿಕ ಮತದ ಶಾಖೆ ಎಂಬುದನ್ನು, ಅಂತಿಮವಾಗಿ ಅದು ವೈದಿಕ ಮತದಲ್ಲಿ ಮಿಳಿತವಾದುದನ್ನು (integration) ಸೂಚಿಸುತ್ತದೆ.

ಇಲ್ಲಿಂದ ಮುಂದಕ್ಕೆ ಶಿವಮೂರ್ತಿಗಳನ್ನು ಕಾಣುತ್ತೇವೆ. ಮೊದಲು ಶಂಕರನಾರಾಯಣ ಅಥವಾ ಹರಿಹರಮೂರ್ತಿ - ಚತುರ್ಭುಜ, ಅಭಯ ಹಸ್ತ, ತ್ರಿಶೂಲ, ಚಕ್ರ ಮತ್ತು ಪಕ್ಷಿಧರನಾಗಿದ್ದಾನೆ. ಅನಂತರ ಚತುರ್ಭುಜನಾದ ಕಾಲಸಂಹಾರಮೂರ್ತಿ - ಶಿವನ ಪಾದವನ್ನು ಅಪ್ಪಿರುವ ಮಾರ್ಕಂಡೇಯ, ಯಮಪಾಶ, ಶಿವನು ಯಮನನ್ನು ತ್ರಿಶೂಲದಿಂದ ತಿವಿಯುತ್ತಿರುವುದು, ಬಲಪಾದದಿಂದ ಯಮನನ್ನು ತಳ್ಳುತ್ತಿರುವುದು. ಸಾಮಾನ್ಯವಾಗಿ ಬಹು ಕಡೆಗಳಲ್ಲಿ ನಾವು ಕಾಣುತ್ತಿರುವಂತೆ ಶಿವಲಿಂಗವನ್ನು ಇಲ್ಲಿ ಕಾಣಲಾರೆವು. ಮಾರ್ಕಂಡೇಯನು ಸಾಕ್ಷಾತ್ ಶಿವನ ಪಾದವನ್ನೇ ಅಪ್ಪಿದ್ದಾನೆ, ಶಿವಲಿಂಗವನ್ನಲ್ಲ. ಆ ಬಳಿಕ ಸೋಮಸ್ಕಂದ ಮೂರ್ತಿಯಾದ ಶಿವ. ಶಿವ ಉಮೆಯರ ಮಧ್ಯದಲ್ಲಿ ಸ್ಕಂದನಿದ್ದಾನೆ. ಪೀಠದಲ್ಲಿ ಬಸವನಿದ್ದಾನೆ. ಅದಾದ ಬಳಿಕ ಅರ್ಧನಾರೀಶ್ವರ ಮೂರ್ತಿ. ವರದ ಅಭಯ

ಹಸ್ತಗಳು, ತ್ರಿಶೂಲ ಮತ್ತು ಸರ್ಪಧರನಾಗಿದ್ದಾನೆ. ಮುಂದಿನ ಶಿಲ್ಪ ತ್ರಿಪುರಸಂಹಾರ ಮೂರ್ತಿ ಶಿವ - ತ್ರಿಪುರಾಸುರನ ಮೂರು ನಗರಗಳು ಸಾಂಕೇತಿಕವಾಗಿ ಮೂರು ಗೋಪುರಗಳಾಗಿವೆ. ಪಾರ್ವತಿ ಮತ್ತು ಬ್ರಹ್ಮರು ಶಿವನಿಗೆ ಸಹಾಯವಾಗಿ ನಿಂತಿದ್ದಾರೆ. ಇಲ್ಲಿ ಈಶ್ವರನ ಬಾಣದ ಕೊನೆಯಲ್ಲಿ ಬುದ್ಧನೂ ಅಂಚಿನಲ್ಲಿ ವಿಷ್ಣುಮೂರ್ತಿಯೂ ಇರುವುದೊಂದು ವಿಶೇಷ. ಇದಕ್ಕೆ ತಾತ್ವಿಕ ಅರ್ಥವುಂಟು. ಬುದ್ಧನು ವೈರಾಗ್ಯದ, ವಿಷ್ಣುವು ಜ್ಞಾನದ ಸಂಕೇತ. ತ್ರಿಪುರಗಳು ಅವಸ್ಥಾ ತ್ರಯದ ಸಂಕೇತ. ತ್ರಿಕರಣ ಶುದ್ಧನಾಗಿ (ವಾಕ್, ಮನ, ದೇಹ), ಜ್ಞಾನ, ವೈರಾಗ್ಯದಿಂದ ತ್ರಿಕರಣಗಳನ್ನು ಗೆದ್ದವನಿಗೆ ಆತ್ಮದರ್ಶನವಾಗುತ್ತದೆ. ಅನಂತರ ಚತುರ್ಭುಜನಾದ ಶ್ರೀ ಚಂದ್ರಶೇಖರಮೂರ್ತಿ - ವರದ, ಅಭಯ, ಪರಶು ಮತ್ತು ಮೃಗಧರನಾಗಿದ್ದಾನೆ. ತರುವಾಯ ತಪೋನಿರತನಾದ ಶಿವನಿಗೆ ಮನ್ಮಥನು ಪುಷ್ಪಬಾಣಗಳನ್ನು ಬಿಡುತ್ತಿದ್ದಾನೆ.

ಪ್ರದಕ್ಷಿಣಾಪಥದ ಉತ್ತರ ದ್ವಾರದಿಂದ ನವರಂಗದ ಉತ್ತರ ದ್ವಾರದವರೆಗೆ ಶಿಲ್ಪ ವೈವಿಧ್ಯ ಹೀಗಿದೆ: ತಾಂಡವೇಶ್ವರ ಶಿವ (ಅಂಧಕಾಸುರ ಸಂಹಾರ?). ವಿಷಕಂಠೇಶ್ವರ ಅಥವಾ ಶ್ರೀಕಂಠಶಿವ - ಚತುರ್ಭುಜ, ವಿಷಜ್ವಾಲೆ, ತ್ರಿಶೂಲ, ಡಮರುಗ ಮತ್ತು ವರದಮುದ್ರೆ. ಬಲಮುಂಗೈ ವಿಷಪಾತ್ರೆಯನ್ನು ಬಾಯ ಸಮೀಪಕ್ಕೆ ಒಯ್ಯುತ್ತಿದೆ. ಅನಂತರ ವೀರಭದ್ರಮೂರ್ತಿ - ಚತುರ್ಭುಜ, ಕತ್ತಿ, ತ್ರಿಶೂಲ, ಗದೆ, ಈಟಿಯನ್ನು ಧರಿಸಿದ್ದಾನೆ. ಆತನ ಬಲಗಡೆ ಹನುಮಂತನಿದ್ದಾನೆ. ಶಿವಗಣನೊಡನೆ ಆಂಜನೇಯನಿರುವುದೊಂದು ವಿಶೇಷವಾಗಿದೆ. ಮುಂದಿನದು ಚಂದ್ರಮಂಡಲ. ದಕ್ಷಿಣದಲ್ಲಿ ಸೂರ್ಯಮಂಡಲವಿದ್ದಂತೆ ಉತ್ತರದಲ್ಲಿ ಚಂದ್ರಮಂಡಲವಿದೆ. ಪದ್ಮಾಸನಸ್ಥನಾದ ಚಂದ್ರ - ಚತುರ್ಭುಜಗಳಿವೆ, ಕಲಶ, ಅಕ್ಷಮಾಲೆ, ಘಂಟಾ, ಘಂಟಾ, ಕಲಶ, ಪುಸ್ತಕ, ಕಲಶ, ಕಲಶ, ವರದಾಭಯಹಸ್ತಮುದ್ರೆಯಿದೆ. ಅನಂತರ ಭೈರವಮೂರ್ತಿ - ಚತುರ್ಭುಜ ಅಭಯ, ಪರಶು, ಡಮರುಗ ಮತ್ತು ವರದಮುದ್ರೆಯನ್ನು ಪ್ರದರ್ಶಿಸುತ್ತಿದ್ದಾನೆ. ಆ ಬಳಿಕ ಗಜಾಸುರ ಸಂಹಾರಮುರ್ತಿಯಾದ ಶಿವ ಶಿಲ್ಪವಿದೆ. ತರುವಾಯ ಹಯಗ್ರೀವಮೂರ್ತಿ - ಪದ್ಮಾಸನಸ್ಥ, ಚತುರ್ಭುಜ, ಅಕ್ಷಮಾಲೆ, ಶಂಖ, ಚಕ್ರ ಮತ್ತು ಪುಸ್ತಕ ಧರಿಸಿದ್ದಾನೆ. ಅಕ್ಕಪಕ್ಕದಲ್ಲಿ ವೈಷ್ಣವ ದ್ವಾರಪಾಲಕರು, ಎರಡು ಕಡೆಯೂ ಭಕ್ತವೃಂದ ಇದ್ದಾರೆ. ಅಕ್ಷಮಾಲೆ ಮತ್ತು ಪುಸ್ತಕಗಳು ಶ್ರೀ ಶಾರದ ಮತ್ತು ಶ್ರೀ ದಕ್ಷಿಣಾಮೂರ್ತಿಯ ಲಾಂಛನಗಳೂ ಹೌದು. ಅದರ ಮುಂದಿನ ಶಿಲ್ಪ ಅನ್ನಪೂರ್ಣಾದೇವಿ - ದ್ವಿಬಾಹು, ಸೌಟು ಮತ್ತು ಪಾಯಸಪಾತ್ರೆಯನ್ನು ಧರಿಸಿದ್ದಾಳೆ. ಅನಂತರ ಶ್ರೀ ರಾಜರಾಜೇಶ್ವರಿ ಶಿಲ್ಪ. ಅಕ್ಕಪಕ್ಕದಲ್ಲಿ ದ್ವಾರಪಾಲಕಿಯರು, ಎಡಬಲದಲ್ಲಿ ಸರಸ್ವತಿ ಮತ್ತು ಲಕ್ಷ್ಮಿ. ಸರಸ್ವತಿ ಮೂರ್ತಿಯ ಸಮೀಪದಲ್ಲಿ ಸಂತಾನಲಕ್ಷ್ಮಿ ಮೂರ್ತಿ ಚಿಕ್ಕದಾಗಿದೆ. ಮುಂದಿನದು ನಿಂತಿರುವ ಲಕ್ಷ್ಮೀದೇವಿ - ಚತುರ್ಭುಜೆ, ಅಭಯ, ಚಕ್ರ, ಶಂಖ ಮತ್ತು ದಾನ ಮುದ್ರೆಯನ್ನು ತೋರುತ್ತಿದ್ದಾಳೆ. ಅನಂತರ ಬರುವುದು ಭಿಕ್ಷಾಟನಾಮೂರ್ತಿ ಶಿವ - ಚತುರ್ಭುಜ-ಕರವಾಳ, ತ್ರಿಶೂಲ, ಡಮರು ಮತ್ತು ಭಿಕ್ಷಾಪಾತ್ರೆಯನ್ನು ಹಿಡಿದಿದ್ದಾನೆ.

ನವರಂಗದ ಉತ್ತರ ದ್ವಾರದಿಂದ ಪೂರ್ವ ದ್ವಾರದವರೆಗೆ ಈಶಾನ್ಯದಲ್ಲಿ ಈ ಚಿತ್ರಮಾಲಿಕೆಯಿದೆ : ಉತ್ತರ ದಿಕ್ಪಾಲಕನಾದ ಕುಬೇರ - ಚತುರ್ಭುಜ ಮೂರ್ತಿ - ಅಭಯ, ಗದೆ, ಕಲಶ ಮತ್ತು ವರದಮುದ್ರೆ. ಪೀಠದಲ್ಲಿ ಅಶ್ವವಿದೆ. ಅದಾದ ಬಳಿಕ ಬ್ರಹ್ಮನ ಶಿರಸ್ಸನ್ನು ತರಿದ ಶಿವ - ಚತುರ್ಭುಜಮೂರ್ತಿ - ಕರವಾಳ, ತ್ರಿಶೂಲ, ಡಮರುಗ ಮತ್ತು ಕಪಾಲವನ್ನು ಧರಿಸಿದ್ದಾನೆ, ಬ್ರಹ್ಮಶಿರವೂ ಅದೇ ಹಸ್ತದಲ್ಲಿದೆ. ಪೀಠದಲ್ಲಿ ಬಸವನಿದ್ದಾನೆ. ಎಡಕ್ಕೆ ತ್ರಿಶೂಲ ಮತ್ತು ಕಪಾಲಧಾರಿಯಾದ ಭದ್ರಕಾಳಿ ಇದ್ದಾಳೆ. ಇಬ್ಬರೂ ರುಂಡಮಾಲಾಧಾರರು. ತರುವಾಯ ಬರುವುದು ಭೃಂಗಿಯ ಶಿಲ್ಪ. ಕೃಷಿಕಾಯನು ತಿಪಾದಿಯೂ ಆದ ಭೃಂಗಿಯು ನೃತ್ಯಭಂಗಿಯಲ್ಲಿದ್ದಾನೆ. ಬಲಗೈಯಲ್ಲಿ ತ್ರಿಶೂಲ ಧರಿಸಿ ಎಡಗೈಯನ್ನು ಮೇಲಕ್ಕೆ ಎತ್ತಿದ್ದಾನೆ. ಮುಂದಿರುವುದು ಕಾಲಭೈರವ, ಪೀಠದಲ್ಲಿ ವೃಶ್ಚಿಕವಿದೆ.

ಅನಂತರ ವೀರಭದ್ರಮೂರ್ತಿ - ಚತುರ್ಭುಜನಾಗಿದ್ದಾನೆ, ಬಲಕ್ಕೆ ದಕ್ಷಪ್ರಜಾಪತಿ, ಪಾದದಲ್ಲಿ ನಂದಿಕೇಶ್ವರನಿದ್ದಾನೆ. ಮುಂದಿರುವುದು ನಿಂತಿರುವ ಚತುರ್ಭಾಹುಮೂರ್ತಿ ಶಿವ - ಅಭಯ, ತ್ರಿಶೂಲ, ಡಮರು ಮತ್ತು ವರದಹಸ್ತ. ಪೀಠದಲ್ಲಿ ನಂದಿ ಇದೆ. ತರುವಾಯ ಉಮಾಸಹಿತನಾದ ಮಹೇಶ್ವರ ನಿಂತಿದ್ದಾನೆ - ಚತುರ್ಭುಜ - ಅಭಯ, ಅಂಕುಶ, ಡಮರುಗ ಮತ್ತು ದಾನಮುದ್ರೆ. ಉಮಾದೇವಿ ವಾಮಭಾಗದಲ್ಲಿದ್ದು ಪಾದಪೀಠದಲ್ಲಿ ಬಸವ ಇದೆ. ಆ ಬಳಿಕ ಶ್ರೀ ವೆಂಕಟೇಶ್ವರಮೂರ್ತಿ - ಚತುರ್ಭಾಹುಯುಕ್ತ ವರದ, ಚಕ್ರ, ಶಂಖ ಮತ್ತು ಕಟಿ ಹಸ್ತ. ಶ್ರೀ ಲಕ್ಷ್ಮೀ ದೇವಿಯು ಬಲಕ್ಕಿದ್ದು, ಪೀಠದಲ್ಲಿ ಗರುತ್ಮಂತನಿದ್ದಾನೆ. ಅದಾದನಂತರ ಶ್ರೀ ವ್ಯಾಸಮಹರ್ಷಿ-

ದ್ವಿಬಾಹುಯುಕ್ತಮೂರ್ತಿ, ಚಿನ್ಮುದ್ರೆ ಮತ್ತು ಕಟಿಹಸ್ತ. ಕಿರೀಟದಂತಹ ಶಿರೋಭೂಷಣ, ಯಜ್ಞೋಪವೀತ ಧರಿಸಿ, ಸೊಂಟಕ್ಕೆ ಸಣ್ಣವಸ್ತ್ರವನ್ನು ಸುತ್ತಿದ್ದಾರೆ. ಮುಂದಿರುವುದು ಶ್ರೀ ಶಂಕರಾಚಾರ್ಯ ಮೂರ್ತಿ - ಬಲಗೈ ವರದಮುದ್ರೆ (ವ್ಯಾಖ್ಯಾನಮುದ್ರೆ?), ಎಡಗೈಯಲ್ಲಿ ಪುಸ್ತಕ ಧರಿಸಿದ್ದಾರೆ, ಮುಂಡನವಾದ ಶಿರಸ್ಸು. ಅನಂತರ ವೀಣಾಧಾರಿಯಾದ ವೀರಭದ್ರಮೂರ್ತಿ. ಎಡಗೈಯಲ್ಲಿ ವೀಣೆ ಇದೆ. ಏನನ್ನೋ ಕೇಳುತ್ತಿರುವಂತೆ ಬಲಗೈಯಿದೆ. ಆತನ ಪಕ್ಕದಲ್ಲಿ ಎಡಕ್ಕೆ ದ್ವಿಬಾಹು ಮೂರ್ತಿಯೊಂದು ಚಿನ್ಮುದ್ರೆಯನ್ನೂ, ಕಟಿಹಸ್ತವನ್ನೂ ಪ್ರದರ್ಶಿಸುತ್ತಿದೆ. ಬಹುಶಃ ಗುರುವು ಶಿಷ್ಯನಿಗೆ ಭೋದಿಸುತ್ತಿರುವ ದೃಶ್ಯವಿದು. ಮುಂದಿನದು ನೃತ್ಯ ಗಣಪತಿ. ಪೀಠದಲ್ಲಿ ಮೂಷಕವಿದೆ. ಕಡೆಯದಾಗಿ ನಿಂತಿರುವ ಶಣ್ಮುಖಸ್ವಾಮಿ ಚತುರ್ಭುಜಮೂರ್ತಿ, ಅಭಯ ಶಕ್ತ್ಯಾಯುಧ, ಕುಕ್ಕುಟ ಮತ್ತು ವರದಮುದ್ರೆಯನ್ನು ತೋರುತ್ತಿದ್ದಾನೆ. ಪಾದದಲ್ಲಿ ಯಾವ ಸಂಕೇತವೂ ಕಾಣುವುದಿಲ್ಲ.

ಈವರೆಗೆ ವಿವರಿಸಿದ ಈ ಭಿತ್ತಿ ಶಿಲ್ಪಗಳೆಲ್ಲವೂ ದೇವಕೋಷ್ಠಗಳಲ್ಲಿ ಅಥವಾ ಪುಟ್ಟದಾದ ಆವರಣದಲ್ಲಿರುವ ತೋರಣ, ಪಾದಪೀಠ, ಅಕ್ಕಪಕ್ಕದ ಪುಟ್ಟ ಸ್ಥಂಭಗಳ ಮಧ್ಯದಲ್ಲಿ ನಿರ್ಮಿತವಾದ ಸುಂದರ ಶಿಲ್ಪಗಳು.

ಆಲಯವನ್ನು ಪ್ರವೇಶಿಸಲು ಪೂರ್ವ ಪಶ್ಚಿಮದಲ್ಲಿ ಒಂದೊಂದು, ದಕ್ಷಿಣೋತ್ತರಗಳಲ್ಲಿ ಎರಡೆರಡರಂತೆ ದ್ವಾರಗಳಿವೆಯಷ್ಟೇ? ಉಪಪೀಠವನ್ನು ಏರಲು ಏಳು ಹಂತಗಳಿದ್ದು ಹೊಸ್ತಿಲ ಹತ್ತಿರ ನಿಂತರೆ ಅಕ್ಕಪಕ್ಕದ ಬಾಗಿಲುವಾಡದ ತೋಳ್ಗಂಬಗಳು ಮತ್ತು ಮೇಲ್ಭಾಗದ ಹಾಸುಗಲ್ಲನ್ನು ಕಾಣುತ್ತೇವೆ. ಮೇಲಿನ ಹಾಸುಗಲ್ಲಿನಲ್ಲಿ ಗಜಲಕ್ಷ್ಮಿಯನ್ನು ಬಿಡಿಸಿದ್ದಾರೆ. ದೇವಾಲಯದ ಸುತ್ತಲೂ ಗೋಡೆಯ ಮೇಲೆ ಮುಂಚಾಚಿರುವ ಚಾವಣಿಯ ಭಾಗವೂ, ಅದರ ತಳಭಾಗವೂ, ತುಂಬ ಅಲಂಕಾರಿಕವಾಗಿ ಬಿಡಿಸಲ್ಪಟ್ಟಿವೆ. ದ್ವಾರ ಬಂಧದ ಎರಡು ತೋಳುಗಳಲ್ಲಿ ಮಕರ ವಾಹನೆಯಾದ ಗಂಗಾದೇವಿಯ ಮೂರ್ತಿಯನ್ನು ಬಿಡಿಸಿದ್ದಾರೆ. ಎರಡು ಕಡೆಗಳಲ್ಲಿ ನಿಂತಿರುವ ದ್ವಾರಪಾಲಕದಲ್ಲಿ ಶೈವ, ಶಾಕ್ತ ಮತ್ತು ವೈಷ್ಣವ ಮೂರ್ತಿಗಳಿದ್ದು ಈ ಮತಗಳ ಐಕ್ಯಮತ್ಯಕ್ಕೆ ಸಂಕೇತವಾಗಿವೆ.

ವಿಮಾನವನ್ನು ಧರಿಸಿರುವ ಮತ್ತು ಗರ್ಭಗೃಹ ಸಮುಚ್ಚಯವನ್ನು ಮುಖಮಂಟಪ ಮತ್ತು ಸುಖನಾಸಿಯನ್ನು ಮುಚ್ಚಿರುವ ಮೇಲ್ಚಾವಣಿಯು ಸುತ್ತಲೂ ಇಳಿಜಾರಾಗಿದೆ. ವಿಮಾನ ಅಥವಾ ಗೋಪುರವು ಈ ಚಾವಣಿಯಿಂದ ಮೇಲಕ್ಕೆ ಕ್ರಮವಾಗಿ ಮೂರು ಅಂತಸ್ತುಗಳಲ್ಲಿ ಮಂಡಲಾಕಾರದಲ್ಲಿ ಮೇಲು ಮೇಲಕ್ಕೆ ಏರುತ್ತಾ, ಸಣ್ಣದಾಗುತ್ತಾ, ಕಿರೀಟಾಕೃತಿಯಲ್ಲಿ ನಿಂತಿದೆ. ಈ ಗೋಪುರದ ತಳಭಾಗವು ಸುಖನಾಸಿಯವರೆಗೂ ಹರಡಿದ್ದು ಒಂದೊಂದು ಹಂತದಲ್ಲಿಯೂ ಅಟ್ಟವಿದ್ದು ಸಣ್ಣ ಜಾಲಂದ್ರಗಳನ್ನು ಸುತ್ತಲೂ ಕೊರೆದಿದೆ. ಚಾವಣಿಯು ಅಡಿಯಿಂದ ಮೇಲಕ್ಕೇರಿ ಸುತ್ತಲೂ ಮುಂಚಾಚಿರುವ ಕಪೋತಗಳಲ್ಲಿ ಕೆಳಗಿನಿಂದ ಮೇಲಕ್ಕೆ ಏಳು, ಐದು, ಮೂರು ಸಾಲುಗಳಿದ್ದು ಗುಂಗುರು ಗುಂಗುರಾದ ಕುಸುರಿಗಳಿಂದ ಕೂಡಿವೆ.

ಶಿಖರದ ಗೃಹಪಿಂಡಿಯಲ್ಲಿ ನಾಲ್ಕು ದಿಕ್ಕುಗಳಲ್ಲಿಯೂ ನಂದಿ ಮುಖವಿದೆ. ಗೃಹ ಪಿಂಡಿಯ ಮಧ್ಯದಿಂದ ಮೇಲಕ್ಕೆ ಹೊರಟಿರುವ ಗ್ರೀವದ ಮೇಲೆ ವರ್ತುಲಾಕಾರದಲ್ಲಿ ಬಿಂದಿಗೆಯನ್ನು ಮಗುಚಿ ಹಾಕಿದಂತೆ ಶಿಖರವಿದೆ. ಈ ಶಿಖರದ ಮಧ್ಯಭಾಗದಲ್ಲಿ ಪ್ರಧಾನ ಕಲಶವೂ, ನಾಲ್ಕು ದಿಕ್ಕುಗಳಲ್ಲಿ ಉಪಕಲಶಗಳೂ ಇದ್ದು, ಇದು ದಿವ್ಯ ವಿಮಾನವೆಂಬ ಹೆಸರನ್ನು ಪಡೆದಿದೆ.

ವಿಮಾನದ ಮುಂಭಾಗವು ಸುಖನಾಸಿಯವರೆಗೆ ಗುಮ್ಮಟಾಕಾರದಲ್ಲಿ ಚಾಚಿಕೊಂಡಿದ್ದು ಅದರ ಮುಂಭಾಗವು ತೋರಣದ ಮುಖಪಟ್ಟಿಯನ್ನು ಹೊಂದಿದೆ. ಅದರ ತಳದಲ್ಲಿ ಸಮಚತುರಸ್ರಾಕಾರದ ಪ್ರವೇಶ ದ್ವಾರವಿದ್ದು ಅದು ವಿಮಾನದ ಮೂಲ ತಲಕ್ಕೆ ಒಯ್ಯುವುದು. ಈ ಪ್ರವೇಶ ದ್ವಾರದ ಮೇಲ್ಭಾದಲ್ಲಿ ಕಮಾನಿನಾಕಾರದ ಗೂಡಿನ ಒಳಗಡೆ ತಾಂಡವೇಶ್ವರ ಮೂರ್ತಿಯನ್ನು ನಿಲ್ಲಿಸಿದ್ದಾರೆ.

ನವರಂಗದ ಮೇಲ್ಚಾವಣಿಯು ಎರಡು ಮಜಲುಗಳಲ್ಲಿ ಮೇಲೇರಿದ್ದು ಸುತ್ತಲೂ ಇಳಿಜಾರಾಗಿದೆ. ಮಲೆನಾಡು ಮತ್ತು ಮಳೆಯ ನಾಡಾದ ಈ ಪ್ರದೇಶದಲ್ಲಿ ಬೀಳುವ ಸತತವಾದ ಮತ್ತು ಅಧಿಕವಾದ ಮಳೆಯಿಂದ ರಕ್ಷಿಸಲ್ಪಡುವಂತೆ ಈ ಮೇಲ್ಚಾವಣಿಯನ್ನು ನಿಯೋಜಿಸಿ ನಿರ್ಮಿಸಿದ್ದಾರೆ. ಹೊರಗೋಡೆಯ ಸುತ್ತಲೂ ಚಾಚಿರುವ ಕಪೋತಗಳಲ್ಲಿ ಅಲ್ಲಲ್ಲಿ ಶಿಲೆಯಲ್ಲಿಯೇ ಬಿಡಿಸಿದ ಸರಪಳಿಗಳು ತೂಗಾಡುತ್ತಿವೆ.

ದೇವಾಲಯದ ಹೊರಭಾಗದಷ್ಟೇ ಒಳಭಾಗವೂ ಸಹ ಸುಂದರವೂ, ಚಿತ್ತಾಕರ್ಷಕವೂ ಆಗಿದೆ. ಪೂರ್ವದ್ವಾರದಿಂದ ಆಲಯವನ್ನು ಪ್ರವೇಶಿಸಿದರೆ ವಿಸ್ತಾರವಾದ ನವರಂಗವನ್ನು ಕಾಣುತ್ತೇವೆ. ಒಳಗೆ ನೆಲದಮೇಲೆ ವಿಸ್ತಾರವಾದ ಹಾಸುಗಲ್ಲು ಇದ್ದು ಕೇಂದ್ರಭಾಗದಲ್ಲಿ ವರ್ತುಲಾಕಾರವಾಗಿ ಸ್ವಲ್ಪ ಉಬ್ಬಿದಂತೆ ಕಾಣುತ್ತದೆ. ನವರಂಗವು ಹನ್ನೆರಡು ಕಂಬಗಳುಳ್ಳ ವಿಶಾಲವಾದ ಹಜಾರವಾಗಿದೆ. ಪ್ರತಿ ಮೂಲೆಯಲ್ಲಿಯೂ ಮೂರು ಮೂರರಂತೆ ಕಂಬಗಳಿದ್ದು ಮಧ್ಯ ಭಾಗ ತುಂಬ ವಿಸ್ತಾರವಾಗಿದೆ. ಈ ಕಂಬಗಳು ದ್ರಾವಿಡ ಶೈಲಿಯನ್ನು ಹೋಲುತ್ತವೆ. ಪ್ರತಿ ಕಂಬವೂ ಕೆತ್ತನೆಗಳಿಂದ ಕೂಡಿದ್ದು, ಕಂಬಗಳಲ್ಲಿ ಮುಂಗಾಲುಗಳನ್ನು ಮೇಲಕ್ಕೆತ್ತಿ ನಿಂತಿರುವ ಸಿಂಹಗಳಿವೆ (ವ್ಯಾಳಿ?). ಅವುಗಳ ಮೇಲೆ ಸವಾರರಿದ್ದಾರೆ. ಅವರ ಉಡುಗೆಗಳಲ್ಲಿ ವೈವಿಧ್ಯವಿದೆ. ನಾಲ್ಕು ದಿಕ್ಕಿನ ಮೂಲೆಗಂಬಗಳಲ್ಲಿ - ಆಗ್ನೇಯ, ನೈರುತ್ಯ, ವಾಯುವ್ಯ ಮತ್ತು ಈಶಾನ್ಯ - ಎರಡೆರಡು ಸಿಂಹಗಳೂ ಸವಾರರೂ ಇದ್ದಾರೆ. ಪ್ರತಿ ಸಿಂಹದ ಬಾಯಿಯಲ್ಲಿಯೂ ಚಂಡಿನಾಕಾರದ ಗುಂಡು ಇದ್ದು, ಅವುಗಳನ್ನು ಕೈಯಿಂದ ಅಲುಗಿಸಬಹುದು, ಹೊರಕ್ಕೆ ತೆಗೆಯಲಾಗುವುದಿಲ್ಲ. ಪ್ರತಿ ಕಂಬದ ಹಿಂಭಾಗದಲ್ಲಿ ಸುರ್ಯಾದಿ ಗ್ರಹಗಳು ಚಲಿಸುವ ದ್ವಾದಶ ರಾಶಿಗಳ ಸಂಕೇತವಾದ ಮೇಷ, ವೃಷಭಾದಿ ಚಿಹ್ನೆಗಳನ್ನು ಕೆತ್ತಿದ್ದಾರೆ ಮತ್ತು ಆಯಾ ರಾಶಿಗೆ ಅಧಿಪತಿಯಾದ ಗ್ರಹವನ್ನು ಸಹ ಬಿಡಿಸಿದ್ದಾರೆ. ಸೂರ್ಯನು ಎಲ್ಲಾ ಗ್ರಹಗಳಿಗೂ ಒಡೆಯನಾದ್ದರಿಂದ ಕಂಬಗಳೆಲ್ಲದರ ಮೇಲೂ ಸೂರ್ಯನನ್ನು ಕಾಣಬಹುದು. ದ್ವಾದಶ ಸಂಕ್ರಮಣಗಳ ದಿನಗಳಂದು ಸೂರ್ಯನು ಕ್ರಮವಾಗಿ ಆಯಾ ರಾಶಿಯನ್ನು ಪ್ರವೇಶಿಸುವಾಗ - ಸಂಕ್ರಮಿಸುವಾಗ - ಸೂರ್ಯಕಿರಣವು ಆಯಾ ರಾಶಿ ಕಂಬಗಳ ಮೇಲೆ ಬೀಳುತ್ತದೆ. ಸೂರ್ಯನ ರಶ್ಮಿಯು ನೆಲದ ಮೇಲೆ ಹಾದು ಹೋಗುವ ರೇಖೆಯನ್ನು ಸಹ ಶಿಲ್ಪಿಯು ಕೊರೆದಿದ್ದಾನೆ. ಕಂಬಗಳು ಅಡಿಯಿಂದ ಮುಡಿಯವರೆಗೆ ಅಲಂಕೃತವಾಗಿದ್ದು ಚಾವಣಿಯನ್ನು ಧರಿಸಿ ಬೋದಿಗೆ, ತೊಲೆಗಳೂ ಸುಂದರವಾಗಿವೆ.

ನವರಂಗವು ಹದಿನೆಂಟು ಅಡಿ ಎತ್ತರವಿದೆ. ಚಾವಣಿಯ ಮಧ್ಯಭಾಗದ ಶಿಲಾಫಲಕವು ಎಂಟು ಅಡಿ ಚದರ ಉಳ್ಳದ್ದಾಗಿದೆ. ಅದರಲ್ಲಿ ಅತಿ ಮೋಹಕವಾದ ಭುವನೇಶ್ವರಿಯನ್ನು ಬಿಡಿಸಿದ್ದಾರೆ. ಭುವನೇಶ್ವರಿಯಲ್ಲಿ ಐದು ಸುತ್ತಿನ (ಪಂಚ ಕೋಶ?) ಕಮಲದ ಮೊಗ್ಗು ಇದೆ. ಅದರ ಸುತ್ತಲೂ ನಾಲ್ಕು ಶುಕಪಕ್ಷಿಗಳು, ಪದ್ಮಕೋಶವನ್ನು ಬಿಡಿಸಿ, ಮಕರಂದಾಸ್ವಾದ ಮಾಡಲು ಹವಣಿಸುತ್ತಿರುವಂತಿದೆ. ಮಧ್ಯಭಾಗದಲ್ಲಿರುವ ಕಮಲಗಳು ಶ್ರೀ ಶಂಕರಾಚಾರ್ಯರನ್ನೂ, ಸುತ್ತಲೂ ಇರುವ ಗಿಳಿಗಳು ಶ್ರೀ ಸುರೇಶ್ವರ, ಶ್ರೀ ಪದ್ಮಪಾದ, ಶ್ರೀ ತೋಟಕ ಮತ್ತು ಹಸ್ತಾಮಲಕರನ್ನು ಸಂಕೇತಿಸುತ್ತವೆಯೆಂದು ವಿದ್ವಾಂಸರು ಅಭಿಪ್ರಾಯಪಡುವರು. ಈ ಪದ್ಮವನ್ನು ಪರಬ್ರಹ್ಮ ಪ್ರತೀಕವೆಂದೂ, ಶುಕಪಕ್ಷಿಗಳನ್ನು ಸನತ, ಸನಾತನ, ಸನಂದನ, ಸನತ್ಕುಮಾರ ಮತ್ತು ಸನತ್ಸುಜಾತರೆಂದೂ ಸಹ ಹೇಳಬಹುದು. ಇವರೆಲ್ಲರೂ ಸದಾತ್ಮಾಧ್ಯಾನನಿಷ್ಠರಷ್ಟೇ.

ನವರಂಗದಿಂದ ಅರ್ಧಮಂಟಪಕ್ಕೆ ಪ್ರವೇಶಿಸಲು ಪೂರ್ವದಿಕ್ಕಿನಿಂದ ಮೂರು ದ್ವಾರಗಳಿವೆ. ಈ ದ್ವಾರ ಬಂಧಗಳೂ, ಅವುಗಳ ಗೋಡೆಯೂ ಆಲಯವನ್ನು ಪೂರ್ವ ಪಶ್ಚಿಮವಾಗಿ ಮಧ್ಯದಲ್ಲಿ ಪ್ರತ್ಯೇಕಿಸುತ್ತವೆ. ದಕ್ಷಿಣ ಪಾರ್ಶ್ವದಲ್ಲಿ, ಮಧ್ಯದಲ್ಲಿ ಮತ್ತು ಉತ್ತರ ಪಾರ್ಶ್ವದಲ್ಲಿವೆ ಈ ಮೂರು ದ್ವಾರಬಂಧಗಳು. ದಕ್ಷಿಣ ದ್ವಾರದಿಂದ ಅರ್ಧಮಂಟಪಕ್ಕೆ ಬಂದಾಗ, ನಮ್ಮೆದುರಿನಲ್ಲಿ ಪುಟ್ಟದಾದ ಗರ್ಭಗೃಹದಲ್ಲಿ ಮಂಡಿಸಿರುವ ಶ್ರೀ ವಿದ್ಯಾಗಣಪತಿಯ ದರ್ಶದ ಲಭ್ಯವಾಗುತ್ತದೆ. ಆ ಗರ್ಭಗೃಹದ ಬಲಕ್ಕೆ ಪೂರ್ವಾಭಿಮುಖವಾಗಿಯೇ ದ್ವಾರವಿದ್ದು ಅದು ನಮ್ಮನ್ನು ಸಾಂಧಾರ ಪ್ರದಕ್ಷಿಣ ಮಾರ್ಗಕ್ಕೆ ಒಯ್ಯುತ್ತದೆ. ಅಲ್ಲಿ ನಮ್ಮ ಬಲಕ್ಕೆ ಮೊದಲು ಸಿಗುವುದು ಶ್ರೀ ವಾಣೀ ಹಿರಣ್ಯಗರ್ಭರು ಮಂಡಿಸಿರುವ ಗರ್ಭಗೃಹ. ಈ ಮೂರ್ತಿಗಳು ದಕ್ಷಿಣಾಭಿಮುಖವಾಗಿದ್ದು, ಪಶ್ಚಿಮಾರ್ಧಭಾಗದ ದಕ್ಷಿಣ ದ್ವಾರವು ಈ ಗರ್ಭಗೃಹಕ್ಕೆ ಎದುರಾಗಿದೆ. ಅನಂತರ ಬಲಬಂದು ಸ್ವಲ್ಪ ನಿಂತರೆ ಇನ್ನೊಂದು ಗರ್ಭಗೃಹ ನಮ್ಮ ದೃಷ್ಟಿಗೆ ಗೋಚರವಾಗುತ್ತದೆ. ಅದೇ ಶ್ರೀ ಲಕ್ಷ್ಮೀನಾರಾಯಣ ಸನ್ನಿಧಿ. ಈ ಮೂರ್ತಿಗಳು ಪಶ್ಚಿಮ ದ್ವಾರಕ್ಕೆ ಎದುರಾಗಿವೆ. ಹಾಗೆಯೇ ಮುಂದುವರಿದು ಬಲಬಂದು ನಿಂತರೆ ನಮಗೆ ಇನ್ನೊಂದು ಗರ್ಭಗೃಹ ಗೋಚರವಾಗುತ್ತದೆ. ಇಲ್ಲಿಯೇ ಜಗತ್ಪಿತರಾದ ಶ್ರೀ ಪಾರ್ವತೀ ಪರಮೇಶ್ವರರು ಸನ್ನಿಹಿತರಾಗಿರುವುದು.

ಈ ದಿವ್ಯಮೂರ್ತಿಗಳು ಉತ್ತರಾಭಿಮುಖವಾಗಿದ್ದು ಅದರೆದುರಿನಲ್ಲಿ ಪಶ್ಚಿಮಾರ್ಧಗೋಲದ ಉತ್ತರದ ದ್ವಾರವಿದೆ. ಲೋಕದ ಮಾತಾಪಿತರಾದ ಈ ಉಮಾಮಹೇಶ್ವರರನ್ನು ವಂದಿಸಿ ಪೂರ್ವಕ್ಕೆ ಸಾಗಿದರೆ ಅಲ್ಲೊಂದು ದ್ವಾರವಿದೆ. ಅದನ್ನು ದಾಟದರೆ

ಮುಖಮಂಟಪಕ್ಕೆ ಬರುತ್ತೇವೆ. ಮುಖಮಂಟಪದಿಂದ ಮುಂದೆ ನವರಂಗದ ದ್ವಾರಕ್ಕೆ ಬರುವ ಮೊದಲು,. ಬಲಕ್ಕೆ ತಿರುಗಿದರೆ ಲೋಕರಕ್ಷಕಿಯಾದ ಶ್ರೀ ದುರ್ಗಾಮಾತೆಯೂ ಶ್ರೀ ಕಾಲಭೈರವ ಸ್ವಾಮಿಯೂ ದರ್ಶನ ನೀಡುತ್ತಾರೆ. ಅವರನ್ನು ನಮಸ್ಕರಿಸಿ, ಮುಖಮಂಟಪದ ದ್ವಾರವನ್ನು ದಾಟಿ ನವರಂಗಕ್ಕೆ ಬರಬೇಕು. ಅಲ್ಲಿಂದ ಎರಡು ಹೆಜ್ಜೆ ಬಲಕ್ಕೆ ಬರಬೇಕು. ಅಲ್ಲಿಯೇ ಮುಖಮಂಟಪದ ಮಧ್ಯ ದ್ವಾರವಿರುವುದು. ಅದಕ್ಕೆ ಎದುರಾಗಿ ಅರ್ಧಮಂಟಪ ದ್ವಾರವು ಅರ್ಧ ಮಂಟಪದ ಪಶ್ಚಿಮಕ್ಕೆ ಶ್ರೀ ಗುರು ವಿದ್ಯಾತೀರ್ಥರ ಸನ್ನಿಧಿ ಇರುವ ಗರ್ಭಗೃಹವು ಗೋಚರಿಸುತ್ತವೆ. ಇಲ್ಲಿರುವ ದಿವ್ಯಲಿಂಗದಲ್ಲಿಯೇ ಶ್ರೀ ವಿದ್ಯಾತೀರ್ಥರೆಂದು ಖ್ಯಾತರಾದ ಶ್ರೀ ವಿದ್ಯಾಶಂಕರರು ಸದಾ ಸನ್ನಿಹಿತರಾಗಿದ್ದು ಮುಮುಕ್ಷುಗಳಿಗೆ ಅನುಗ್ರಹ ಮಾಡುತ್ತಿದ್ದಾರೆ. ಅವರು ಶಿವ ವಿಷ್ಣು ರೂಪವೆಂಬುದಕ್ಕೆ ಸಾಕ್ಷಿಯಾಗಿ ಆ ಗರ್ಭಗೃಹದ ದ್ವಾರವನ್ನು ಒಂದು ಕಡೆ ಭೃಂಗಿಯೂ ಇನ್ನೊಂದು ಕಡೆ ಆಂಜನೇಯನೂ ಕಾಯುತ್ತಿದ್ದಾರೆ. ವಿಷ್ಣು ಶಿವರಲ್ಲಿ ಭೇದವಿಲ್ಲ. ಶ್ರೀ ವಿದ್ಯಾತೀರ್ಥ ಗುರುವಿಗೆ ನಮಸ್ಕಾರ, ವಿದ್ಯಾತೀರ್ಥಾಯ ಗುರವೇ ಪರಸ್ಮೈ ತೇಜಸೇ ನಮಃ. ಈ ದೇವಸ್ಥಾನವು ಪಂಚಾಯತನ ಪೂಜಾ ಮತ್ತು ಷಣ್ಮತ ಸಮನ್ವಯದ ಪ್ರತೀಕವಾಗಿದೆ.

ಶ್ರೀ ಶಂಕರಾಚಾರ್ಯರು ದೇವದೇವಿಯರಲ್ಲಿ ಜನರು ಇಟ್ಟಿದ್ದ ಉಚ್ಚ ನೀಚ ಭಾವವನ್ನು ಖಂಡಿಸಿ, ಎಲ್ಲಾ ದೇವತೆಗಳೂ ಪರಬ್ರಹ್ಮವಸ್ತುವಿನ ಪ್ರತೀಕವೆಂದೂ, ಆದ್ದರಿಂದ ದೇವದೇವಿಯರಲ್ಲಿ ಭೇದಭಾವವಿಡಬಾರದೆಂದೂ ಬೋಧಿಸಿ ಪಂಚಾಯತನ ಪೂಜಾ ಪದ್ಧತಿಯನ್ನು ರೂಢಿಗೆ ತಂದರು. ಆ ಪಂಚಾಯತನಗಳ ಸನ್ನಿಧಿಗೆ ಈ ಆಲಯವು ದಿವ್ಯ ನಿದರ್ಶನವಾಗಿದೆ. ಪೃಥ್ವಿ (ನೆಲ), ಅಪ್ (ಜಲ), ತೇಜ (ಬೆಳಕು), ವಾಯು (ಗಾಳಿ), ಆಕಾಶ (ಆವರಣ space) ಇವೇ ಪಂಚಭೂತಗಳು. ಈ ಪಂಚಭೂತ ತತ್ವಗಳನ್ನು ಕ್ರಮವಾಗಿ ಗಣಪತಿ, ವಿಷ್ಣು, ಸೂರ್ಯ, ದೇವಿ ಮತ್ತು ಶಿವ ದೇವತೆಗಳು ಸಂಕೇತಿಸುತ್ತಾರೆ. ಅವ್ಯಕ್ತನೂ, ರೂಪರಹಿತನೂ, ಅವಾಙ್ಮಾನಸ ಗೋಚರನೂ, ಸರ್ವವ್ಯಾಪಿಯೂ ಆದ ಪರಮಾತ್ಮನನ್ನು ಈ ಪ್ರತೀಕಗಳ ಮೂಲಕ ಧ್ಯಾನಿಸಿ, ಸಾಧನೆ ಮಾಡಿ, ಸಾಕ್ಷಾತ್ಕರಿಸಿಕೊಳ್ಳಲು ಸಹಾಯವಾಗುವುದೇ ಮೂರ್ತಿಪೂಜೆಯಲ್ಲಡಗಿರುವ ಉದ್ದೇಶ. ಈ ಮೂರ್ತಿ ಪೂಜೆಯು ಇಂದ್ರಿಯ, ಮನಸ್ಸು ಮತ್ತು ಬುದ್ಧಿಗಳಿಗೆ ಶಿಕ್ಷಣವನ್ನು ಕೊಡಲು ಸುಲಭವಾಗಿ ಇರುವ ಸಮರ್ಥ ಸಾಧನವಾಗಿದೆ.

ಆಲಯದ ಗರ್ಭಗುಡಿಗಳನ್ನು ಪ್ರದಕ್ಷಿಣಾಕಾರವಾಗಿ ಬಂದಾಗ, ಗಣಪತಿ (ಸರಸ್ವತಿ, ಬ್ರಹ್ಮ), ಲಕ್ಷ್ಮೀನಾರಾಯಣ, ಉಮಾಮಹೇಶ್ವರ, ದುರ್ಗೆ ಕಾಲಭೈರವ ಮತ್ತು ಭುವನೇಶ್ವರಿಯ ಪದ್ಮಕೋಶವೂ ಪ್ರತಿನಿಧಿಸುವ ಸೂರ್ಯ ಇವು ಪಂಚಾಯತನದ ದ್ಯೋತಕವಾಗಿವೆ.

ಶ್ರೀ ಶಂಕರಾಚಾರ್ಯರು ಷಣ್ಮತ ಸ್ಥಾಪನಾಚಾರ್ಯರೆಂದು ಖ್ಯಾತರಾಗಿದ್ದಾರೆ. ಅವರು ಸಾಧಿಸಿದ ಮತ ಸಮನ್ವಯದ ನಿದರ್ಶನವಾಗಿ ಈ ದೇವಾಲಯದಲ್ಲಿ, ಶೈವ, ವೈಷ್ಣವ, ಕುಮಾರ (ಬ್ರಹ್ಮ?) ಗಾಣಪತ್ಯ, ಕಾಪಾಲಿಕ ಮತ್ತು ಶಾಕ್ತ ಮತಗಳನ್ನು ಪ್ರತಿನಿಧಿಸುವ ಮೂರ್ತಿಶಿಲ್ಪಗಳಿವೆ. ಮಾನವನ ಪೂರ್ವಸಂಸ್ಕಾರ, ವಾಸನೆ, ಅಭ್ಯಾಸ, ಗುಣ, ಕರ್ಮ ಮತ್ತು ಬುದ್ಧಿಶಕ್ತಿಗೆ ಅನುಗುಣವಾಗಿ ವಿವಿಧ ಇಷ್ಟದೇವತೆಗಳ ಕಲ್ಪನೆ ನಮ್ಮ ಧರ್ಮದಲ್ಲಿ ತೋರಿದೆ. ಪೂರ್ಣನೂ, ಸರ್ವವ್ಯಾಪಕನೂ ಆದ ಪರಮಾತ್ಮನನ್ನು ನಾವು ಈ ದೇವತೆಗಳ ಸ್ವರೂಪದಲ್ಲಿ ಧ್ಯಾನಿಸಿ, ಪೂಜಿಸಿ, ಮನಶ್ಶುದ್ಧಿಯನ್ನು ಸಂಪಾದಿಸಬೇಕು. ಇವುಗಳ ಮೂಲಕ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. ಇವುಗಳಲ್ಲಿ ಒಂದು ಶ್ರೇಷ್ಠ, ಇನ್ನೊಂದು ಮಧ್ಯಮ, ಮತ್ತೊಂದು ಕನಿಷ್ಠ ಎಂಬ ತಾರತಮ್ಯ ಭೇದಭಾವನೆಯು ತಪ್ಪು. ಇದು ಆಧ್ಯಾತ್ಮ ಮತ್ತು ಧರ್ಮ ಸಾಧನೆಗೆ ದೊಡ್ಡ ಅಡ್ಡಿ. ಈ ಎಲ್ಲಾ ದೇವತಾಮೂರ್ತಿಗಳೂ ಆಯಾ ಮತದ ಸಾಧಕರಿಗೆ ದಾರಿದೀಪಗಳಂತಿದ್ದು, ಈ ದೇವಾಲಯಗಳಲ್ಲಿ ಬೆಳಗುತ್ತಿವೆ. ಇದು ಮತ ಸಮನ್ವಯಕ್ಕೆ ಅತ್ಯಂತ ಸೂಕ್ಷ್ಮ ಸ್ಪಷ್ಟ ನಿದರ್ಶನವಾಗಿದೆ. ಆಲಯದ ಆರು ದ್ವಾರಗಳು ಷಣ್ಮತಗಳ ಸಂಕೇತವಾಗಿದ್ದು, ಯಾವ ಮತದ ಮೂಲಕವಾದರೂ ಸಾಧನೆಯನ್ನು ಆರಂಭಿಸಿ, ಬ್ರಹ್ಮತ್ವವನ್ನು ಅನುಸಂಧಾನ ಮಾಡಬಹುದು ಎಂಬುದಕ್ಕೆ ಈ ಆಲಯ ದಿವ್ಯ ನಿದರ್ಶನವಾಗಿದೆ.

ಈ ದೇವಸ್ಥಾನದ ಕಟ್ಟಡವು ಸಪ್ತಹಂತಗಳಲ್ಲಿರುವ ಸೂರ್ಯನ ರಥದಂತೆಯೂ ಇದೆ. ಸೂರ್ಯನನ್ನು ಜಗತ್ತಿನ ಸೃಷ್ಟಿಯ ಆತ್ಮವೆಂದೂ - (ಸೂರ್ಯ ಆತ್ಮಾ ಜಗತಸ್ತುಷಶ್ಚ) ಆತನು ಸೃಷ್ಟಿ, ಸ್ಥಿತಿ, ಲಯ, ತತ್ವಗಳ ಸ್ವರೂಪನೆಂದೂ ಬ್ರಹ್ಮವಿಷ್ಣು ಸ್ವರೂಪನೆಂದೂ

ವಿದ್ವಾಂಸರು ಹೇಳುತ್ತಾರೆ. ''ತ್ರಯೀಮಯಾಯ ತ್ರಿಗುಣಾತ್ಮ ಧಾರಿಣೇ, ವಿರಿಂಚಿ ನಾರಾಯಣ ಶಂಕರಾತ್ಮನೇ'' ಸೂರ್ಯನು ಸಾಕ್ಷಾತ್ ಪರಬ್ರಹ್ಮದ ಪ್ರತೀಕ. ದ್ವಾದಶ ಸ್ಥಂಭಗಳಲ್ಲಿರುವ ನವಗ್ರಹಗಳು ಸೌರವ್ಯೂಹವನ್ನು ಸಂಕೇತಿಸಿದರೆ ಪದ್ಮಕೋಶವು - ಪರಮಾತ್ಮತತ್ವ - ಈ ಎಲ್ಲಕ್ಕೂ ಆಧಾರಭೂತವಾದುದು, ಕಾರಣವಾದುದು ಎಂಬುದನ್ನು ಸಾರುತ್ತದೆ. ಬ್ರಹ್ಮ, ವಿಷ್ಣು, ಮಹೇಶ್ವರರು ಪರಬ್ರಹ್ಮದ ವ್ಯಕ್ತ ಸ್ವರೂಪದ ಸಂಕೇತವಾದರೆ ಶ್ರೀ ವಿದ್ಯಾತೀರ್ಥಲಿಂಗವು ಪರಮಾತ್ಮನ ಅವ್ಯಕ್ತ ಸ್ವರೂಪದ ಸಂಕೇತವಾಗಿದೆ. ಈ ಲಿಂಗದ ಪೀಠಭಾಗವು ಬ್ರಹ್ಮತತ್ವವನ್ನೂ, ಪಾಣಿಪೀಠ - ಸೋಮಸೂತ್ರ - ಭಾಗವು ವಿಷ್ಣುತತ್ವವನ್ನು ಲಿಂಗವು ಈಶ್ವರತತ್ವವನ್ನೂ ಪ್ರತಿನಿಧಿಸುತ್ತವೆ.

ಈ ದೇವಾಲಯದಲ್ಲಿ ದಕ್ಷಿಣ ಪಶ್ಚಿಮ ಮತ್ತು ಉತ್ತರ ದಿಕ್ಕಿನಲ್ಲಿರುವ ಬ್ರಹ್ಮ, ವಿಷ್ಣು ಶಿವಾಲಯಗಳು ಪ್ರಸಿದ್ಧವಾದ ಗುರುತತ್ವಕ್ಕೂ ಸಂಕೇತವಾಗಿವೆ. ''ಗುರುರ್ಬ್ರಹ್ಮ, ಗುರುರ್ವಿಷ್ಣು, ಗುರುರ್ದೇವೋ ಮಹೇಶ್ವರಃ ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ'' ಎಂಬ ಗುರು ಗೀತಾ ತತ್ವಕ್ಕೆ ಅನುಸಾರವಾಗಿ ಬ್ರಹ್ಮ, ವಿಷ್ಣು, ಶಿವ ಸನ್ನಿಧಿಯೂ, ಸಾಕ್ಷಾತ್ ಪರಬ್ರಹ್ಮದ ಸಂಕೇತವಾಗಿ ಶ್ರೀ ವಿದ್ಯಾಶಂಕರ ಲಿಂಗವೂ ಇರುವುದು ವೈಶಿಷ್ಟ್ಯಪೂರ್ಣವಾಗಿದೆ. ಹಳೆಯ ಶೃಂಗೇರಿಯಲ್ಲಿರುವ ಚತುರ್ಮೂರ್ತಿ ವಿದ್ಯೇಶ್ವರ ಲಿಂಗವೂ ಹೀಗೆಯೇ ಇದ್ದು ಜಗದ್ಗುರು ಶ್ರೀ ವಿದ್ಯಾತೀರ್ಥರು ಸಾಕ್ಷಾತ್ ಶ್ರೀ ದತ್ತಾತ್ರೇಯರೇ ಎಂಬುದಕ್ಕೆ ನಿದರ್ಶನವಾಗಿದೆ.

ಧರ್ಮ ಸಾಧನೆಗೆ ಅಗತ್ಯವಾದುದು ಷಡ್ಗುಣಗಳು - ಶಾಂತಿ, ದಾಂತಿ, ವಿರಕ್ತಿ, ಕ್ಷಾಂತಿ, ಏಕಾಗ್ರತೆ ಮತ್ತು ಶ್ರದ್ಧೆ. ಇವುಗಳನ್ನು ರೂಢಿಸಿಕೊಂಡವನು ಧರ್ಮ ಸಾಧನೆಗೆ ಅರ್ಹ, ಯೋಗ್ಯ. ಈ ದೇವಾಲಯದ ಆದಿ ಪೀಠಕ್ಕೆ ಏರಲು ಇರುವ ಆರು ಮೆಟ್ಟಿಲುಗಳು ಈ ಸಂಕೇತವನ್ನು ಹೊಂದಿವೆ. ಆದಿಪೀಠ ಅಥವಾ ಜಗತಿಯನ್ನೇರಿ ಆಲಯನ್ನು ಬಲಬಂದು, ಎಂದರೆ, ಧರ್ಮಸಾಧನೆ ಮಾಡಿದನಂತರ ಅಧ್ಯಾತ್ಮ ಸಾಧನೆಗೆ ಅರ್ಹತೆಯನ್ನು ಪಡೆಯಬಹುದು. ಈ ಆರು ಮೆಟ್ಟಿಲುಗಳ ಸಾಧಕನಿಗೆ ಇರಬೇಕಾದ ಷಟ್ಸಂಪತ್ತಿಯನ್ನು ಸೂಚಿಸುತ್ತವೆ. ಶಮ, ದಮ, ಉಪರತಿ, ತಿತಿಕ್ಷೆ, ಶ್ರದ್ಧಾ ಮತ್ತು ಸಮಾಧಾನ ಇವು ಮುಮುಕ್ಷುವಿನ ಲಕ್ಷಣಗಳು.

ಆದಿಪೀಠದಿಂದ ಉಪಪೀಠವನ್ನೇರಲು ಇರುವ ಏಳು ಮೆಟ್ಟಿಲುಗಳು, ಆಧ್ಯಾತ್ಮ ಸಾಧಕನು ಏರುವ ಸಪ್ತ ಭೂಮಿಕೆಗಳನ್ನು ಸಂಕೇತಿಸುತ್ತವೆ. ಶುಭೇಚ್ಛೆ, ವಿಚಾರ, ಇಂದ್ರಿಯಾರ್ಥದಲ್ಲಿ ಅನಾಸಕ್ತಿ, ಸತ್ವಾಪತ್ತಿ, ಅಹಲಸಕ್ತಿ, ಆತ್ಮನಲ್ಲಿ ವಿಶ್ರಾಂತಿ ಅಂತಿಮವಾಗಿ ತುರ್ಯಗಾ, ಈ ಏಳನೆಯ ಭೂಮಿಕೆಯಲ್ಲಿರುವವನು ಸದಾ ಸ್ವಸ್ವರೂಪದಲ್ಲಿರುತ್ತಾನೆ. ಇವು ಕ್ರಮವಾಗಿ ಕುಂಡಲಿನೀ ತತ್ವದ ಮೂಲಾಧಾರ, ಸಾಧಿಷ್ಠಾನ, ಮಣೀಪೂರ, ಅನಾಹುತ, ವಿಶುದ್ಧಾ, ಆಜ್ಞಾ ಮತ್ತು ಸಹಸ್ರಾರಗಳನ್ನು ಸಂಕೇತಿಸುತ್ತವೆ. ದೇವಾಲಯದ ಮಧ್ಯದಲ್ಲಿರುವ ಪರಂಜ್ಯೋತಿ ಸ್ವರೂಪರಾದ ಶ್ರೀ ವಿದ್ಯಾತೀರ್ಥರು ಅಂತಹ ಜ್ಯೋತಿ ಸ್ವರೂಪರು. ಸಾಧಕರನ್ನು ತಮ್ಮಂತಹ ದಿವ್ಯಸ್ಥಿತಿಗೆ ಕರೆದೊಯ್ಯುವ ಜಗದ್ಗುರುಗಳು.

ಮೊದಲೇ ಹೇಳಿದಂತೆ ಭರತ ಖಂಡದ ಎಲ್ಲಾ ವಾಸ್ತುಪದ್ಧತಿಗಳೂ ಇಲ್ಲಿ ಸಹಜವಾಗಿ ಮೇಳೈಸಿದ್ದು, ಈ ದೇವಾಲಯವು ಶಿಲ್ಪಕಲೆಯ ಸಂಗ್ರಹಾಲಯ ಆಗಿರುವಂತೆಯೇ ಧಾರ್ಮಿಕ, ಆಧ್ಯಾತ್ಮಿಕ, ಸಾಧಕರ ಉಪಾಸಕರ ತಾಣವೂ ಆಗಿದ್ದು ಜಾಗೃತಸ್ಥಾನವಾಗಿದೆ.

ಶೃಂಗೇರಿಯ ಪೀಠದ ಮತ್ತು ಉಪಮಠದ ವ್ಯವಹಾರಗಳೆಲ್ಲವೂ ಶ್ರೀ ವಿದ್ಯಾಶಂಕರ ಎಂಬ ದಿವ್ಯ ನಾಮದಲ್ಲಿಯೇ ನಡೆಯುತ್ತಿವೆ. ಈ ಮಠಗಳ ಯತಿಗಳು ಚಾತುರ್ಮಾಸ್ಯ ಸಂಕಲ್ಪ ಮಾಡುವಾಗ ನಡೆಸುವ ವ್ಯಾಸಪೂಜೆಯಲ್ಲಿ ಶ್ರೀ ವಿದ್ಯಾಶಂಕರರಿಗೂ ವಿಶೇಷ ಪೂಜೆಯನ್ನು ಸಲ್ಲಿಸುತ್ತಾರೆ. ಶೃಂಗೇರಿ ಮಠದಲ್ಲಿ ಇಂದಿಗೂ ಸಹ ವ್ಯವಹಾರವೆಲ್ಲವೂ ಅಲ್ಲಿರುವ ಪೀಠಾಧಿಪರ ಹೆಸರಿನಲ್ಲಿ ನಡೆಯದೆ ಶ್ರೀ ವಿದ್ಯಾಶಂಕರರ ಹೆಸರಿನಲ್ಲಿಯೇ ನಡೆಯುತ್ತಿದೆ.

ಶೃಗೇರಿಯಂತೆಯೇ ಶ್ರೀ ವಿದ್ಯಾತೀರ್ಥರು ತಪಸ್ಸು ಮಾಡುತ್ತಿದ್ದ ಸ್ಥಳದಲ್ಲಿ, ಶೃಂಗೇರಿಗೆ ದಕ್ಷಿಣಕ್ಕಿರುವ ವಿದ್ಯಾರಣ್ಯಪುರದಲ್ಲಿ ಶ್ರೀ ವಿದ್ಯಾತೀರ್ಥರ ಇನ್ನೊಂದು ದೇವಾಲಯವಿದೆ. ಅಲ್ಲಿಯೂ ಅವರ ಮೂರ್ತಿ ಇದೆ.

ಟಿಪ್ಪಣಿಗಳು

1. *ಮೈ ಆರಿ,* 1916, ಪು. 12-17.

2. *ಅದೇ,* 1931, ಪು. 14-16; 1936, ಪು. 25-35.


4. ಅನಂತಾಪುರದ ಮಲ್ಲಿಕಾರ್ಜುನ ದೇವಾಲಯ

ಟಿ.ಎಂ. ಮಂಜುನಾಥಯ್ಯ


ಮಲ್ಲಿಕಾರ್ಜುನ ದೇವಾಲಯವು ವಿಜಯನಗರದ ಸಂಗಮ ವಂಶದ ಅರಸರ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯಗಳಲ್ಲಿ ಒಂದಾಗಿದೆ. ಇದು ಕಮಲಾಪುರ - ನಲ್ಲಾಪುರ ರಸ್ತೆಯಲ್ಲಿ ಕಮಲಾಪುರದ ಪೂರ್ವದಿಕ್ಕಿಗೆ ನಾಲ್ಕು ಕಿಲೋಮೀಟರುಗಳ ಅಂತರದಲ್ಲಿ ಮತ್ತು ಈಗಿನ ಸೀತಾರಾಮ ತಾಂಡದ ಪಶ್ಚಿಮ ದಿಕ್ಕಿಗಿದೆ. ವಿಜಯನಗರ ಕಾಲದಲ್ಲಿ ಈ ಪ್ರದೇಶವನ್ನು ಅನಂತಾಪುರ ಎಂಬ ಹೆಸರಿನಿಂದ ಕರೆಯುತ್ತಿದ್ದು, ಆವಿನಮಡುವೆಂಬ ಸ್ಥಳದಲ್ಲಿದ್ದ ಈ ದೇವಾಲಯದ ಜೀರ್ಣೋದ್ಧಾರ ಕಾರ್ಯವನ್ನು ದೇವಾಲಯದ ಪ್ರಾಕಾರದಲ್ಲಿರುವ ಶಿಲಾಶಾಸನವು ಈ ರೀತಿ ಉಲ್ಲೇಖಿಸುತ್ತದೆ:[1] ಶಕ ವರ್ಷ 1468 ರ ಪ್ಲವಂಗ ಸಂವತ್ಸರದ ಆಷಾಢ ಬಹುಳ 3 (ಕ್ರಿ.ಶ. 1547, ಜುಲೈ 5, ಮಂಗಳವಾರ) ರಲ್ಲಿ ಪೆನುಗೊಂಡೆ ರಾಜ್ಯದ ಅನಂತಾಪುರದ ಆವಿನಮಡುವಿನ ಸ್ಥಳದಲ್ಲಿ ಗ್ರಾಮದ ಗಉಡ, ಸೇನಬೋವ ಮತ್ತು ಊರ ಪ್ರಜೆಗಳೆಲ್ಲರೂ ಅಧಿಷ್ಠಾನದವರೆಗೂ ಬಿದ್ದು ಹೋದ ದೇವಾಲಯವನ್ನು ಜೀರ್ಣೋದ್ಧಾರ ಮಾಡುವ ಸಮಯಕ್ಕೆ ಕಂಮಾರ ತಿಂಮ ದಾಸರಿ ಎಂಬುವನು ತನ್ನ ಪೂರ್ವಜರು ಈ ಗುಡಿಯನ್ನು ಕಟ್ಟಿಸಿದ್ದಾಗಿಯೂ ಆದುದರಿಂದ ಗುಡಿಯನ್ನು ತಾನೇ ಜೀರ್ಣೋದ್ಧಾರ ಮಾಡಿಸುವುದಾಗಿ ಹೇಳಿಕೊಂಡಿದ್ದರಿಂದ ಊರಿನ ಪ್ರಮುಖರು, ಪ್ರಜೆಗಳು ಸೇರಿ ಕಂಮಾರ ತಿಂಮ ದಾಸರಿಯಿಂದ ದೇವಾಲಯವನ್ನು ಕ್ರಯಕ್ಕೆ ತೆಗೆದುಕೊಂಡು ಸಾರ್ವಜನಿಕವಾಗಿ ದೇವಾಲಯವನ್ನು ಅಧಿಷ್ಠಾನದಿಂದ ಜೀರ್ಣೋದ್ಧಾರ ಮಾಡಿ ಮಲ್ಲಿಕಾರ್ಜುನ ದೇವರ ಪ್ರತಿಷ್ಠೆಯನ್ನು ಮಾಡಿರುವುದಾಗಿಯೂ, ಮುಂದೆ ದೇವಾಲಯವು ಸಾರ್ವಜನಿಕವಾಗಿರುವುದೆಂದೂ ತಿಳಿಸುತ್ತದೆ. ಇದೇ ಪ್ರಾಕಾರದಲ್ಲಿರುವ ಇನ್ನೊಂದು ಶಿಲಾ ಶಾಸನವು ಶಾಲಿವಾಹನ ಶಕ ವರ್ಷ 1473, ವಿರೋಧಿಕೃತ ಸಂವತ್ಸರದ ಆಷಾಢ ಶು. 12 (ಕ್ರಿ.ಶ. 1551, ಜೂನ್ 15) ರಂದು ವಿಜಯನಗರದ ಶ್ರೀ ರಾಮರಾಜ ತಿರುಮಲ್ಲಯ್ಯನವರ ಕುಮಾರ ವಿಠಲರಾಜಯ್ಯ ಎಂಬುವರು ದೇವಾಲಯದ ಪಕ್ಕದಲ್ಲಿದ್ದ ತೆಂಗು, ಹಲಸು, ಮಾವು, ನಿಂಬೆ, ನೇರಳೆ ತೋಟವನ್ನು ಶ್ರೀ ಮಲ್ಲಿಕಾರ್ಜುನ ದೇವರ ಅಮೃತಪಡಿ ನೈವೇದ್ಯಕ್ಕೆ ಶ್ರೀ ವೀರ ಪ್ರತಾಪ ಸದಾಶಿವದೇವ ಮಹಾರಾಯರಿಗೆ ಧರ್ಮವಾಗಬೇಕೆಂದು ವಕಲುಪಾಲು, ರಾಜಪಾಲು, ಕುಳ ಬಿರಾಡ ಮುಂತಾದವುಗಳನ್ನು ದೇವಾಲಯಕ್ಕೆ ಬಿಟ್ಟಿರುವುದಾಗಿ ತಿಳಿಸುತ್ತದೆ.[2]

ಈ ದೇವಾಲಯವು ಪೂರ್ವಾಭಿಮುಖವಾಗಿದೆ (ಚಿತ್ರ 1). ಸುತ್ತಲೂ ಪ್ರಾಕಾರದ ಗೋಡೆಯನ್ನು ಒಳಗೊಂಡಿತ್ತೆಂಬುದಕ್ಕೆ ಪೂರ್ವ ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಶಿಥಿಲಗೊಂಡ ಪ್ರಾಕಾರ ದ್ವಾರಗಳಿವೆ (ಚಿತ್ರ 2). ಕದಂಬ ನಾಗರ (ಕಳಿಂಗ) ಶೈಲಿಯ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ, ನವರಂಗ (ರಂಗಮಂಟಪ), ಮತ್ತು ನವರಂಗದ ಮೂರು ದ್ವಾರಗಳ ಎದುರಿಗೆ ಮೂರು ಮಂಟಪಗಳಿವೆ. ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕುಗಳ ದ್ವಾರಗಳಲ್ಲಿ ಶೈವ ದ್ವಾರಪಾಲಕರಿದ್ದಾರೆ. ಗರ್ಭಗೃಹದ ಬಾಗಿಲ ಚೌಕಟ್ಟಿನಲ್ಲಿ ಗಜಲಕ್ಷ್ಮಿಯಿದ್ದು, ದ್ವಾರದ ಎಡಬಲಗಳಲ್ಲಿ ಶೈವ ದ್ವಾರಪಾಲಕರಿದ್ದಾರೆ. ಗರ್ಭಗೃಹದಲ್ಲಿ ಪಾಣಿಪೀಠ ಮಾತ್ರ ಇದೆ. ಗರ್ಭಗೃಹದ ಮುಂಭಾಗದಲ್ಲಿ ಅಂತರಾಳವಿದ್ದು, ಸರಳ ಸುಂದರವಾಗಿದೆ. ನವರಂಗವು ನಾಲ್ಕು ಶಿಲಾ ಸ್ತಂಭಗಳನ್ನೊಳಗೊಂಡಿದ್ದು, ಮೇಲ್ಛಾವಣಿಯಲ್ಲಿ ಕಮಲ ಪುಷ್ಪದ ಶಿಲ್ಪವಿದೆ. ನವರಂಗದ ಮಧ್ಯದಲ್ಲಿಯ ವೃತ್ತಾಕಾರದ ಉಬ್ಬು ಶಿಲೆಯು ಒಡೆದು ಹೋಗಿದೆ. ನವರಂಗದ ಕಂಬಗಳು ಚೌಕಾಕಾರದಲ್ಲಿದ್ದು, ಕೆಳಗೆ ಚೌಕ, ಮಧ್ಯದಲ್ಲಿ 16-8-16 ಭುಜದ ಪಟ್ಟಿಗಳು, ಮೇಲೆ ಚೌಕಾಕಾರ ಮತ್ತು ಕುಂಭಾಕಾರದ ಮೇಲ್ಭಾಗವನ್ನು ಹೊಂದಿವೆ. ಕಂಬಗಳ ಮೇಲೆ ಈ ಕೆಳಗಿನ ಶಿಲ್ಪಗಳಿವೆ.

ವಾಯುವ್ಯ ದಿಕ್ಕಿನ ಕಂಬ : ಯೋಗಿ, ಆನೆಯನ್ನು ಕಲಾತ್ಮಕವಾಗಿ ಹಗ್ಗದ ಚೌಕಟ್ಟಿನಲ್ಲಿ ಬಂಧಿಸಿರುವುದು (ರಂಗೋಲಿ ಆಕೃತಿ), ಪೂರ್ಣಕುಂಭ, ಷೋಡಶ ಭುಜಗಳುಳ್ಳ ಚಿತ್ರ ಮತ್ತು ಮತ್ಸ್ಯೇಂದ್ರನಾಥ.



1. ಸಾಮಾನ್ಯ ದೃಶ್ಯ, ದಕ್ಷಿಣದಿಂದ



2. ಸಾಮಾನ್ಯ ದೃಶ್ಯ, ಈಶಾನ್ಯದಿಂದ

ಮಲ್ಲಿಕಾರ್ಜುನ ದೇವಾಲಯ, ಅನಂತಪುರ



3. ಗರ್ಭಗೃಹದ ಮೇಲಿನ ಶಿಖರ



4. ಕಂಬ

ನೈರುತ್ಯ ದಿಕ್ಕಿನ ಕಂಬ (ಚಿತ್ರ 4): ದೀಪ ಮತ್ತು ಪುಷ್ಪಗಳನ್ನು ಕೈಗಳಲ್ಲಿ ಹಿಡಿದುಕೊಂಡಿರುವ ಸ್ತ್ರೀ, ಮತ್ಸ್ಯೇಂದ್ರನಾಥ, ಮೃದಂಗವಾದಕ, ಹಠಯೋಗಿ ಪೀಠದ ಮೇಲೆ ಕುಳಿತಿರುವುದು, ನವಿಲು ಸರ್ಪವನ್ನು ಕೊಕ್ಕಿನಲ್ಲಿ ಹಿಡಿದುಕೊಂಡಿರುವುದು, ಕಮಲ ಪುಷ್ಪ, ಮಂಗವು ತನ್ನ ಮರಿಯನ್ನು ಕೈಗಳಲ್ಲಿ ಹಿಡಿದುಕೊಂಡಿರುವುದು.

ಆಗ್ನೇಯ ದಿಕ್ಕಿನ ಕಂಬ: ಕಮಲ ಪುಷ್ಪಗಳು ಮುಂತಾದವುಗಳಿವೆ.

ಈಶಾನ್ಯ ದಿಕ್ಕಿನ ಕಂಬ: ಹುಲಿಯ ಮೇಲೆ ಕುಳಿತಿರುವ ದೇವಿ (ದುರ್ಗ), ಮತ್ಸ್ಯೇಂದ್ರನಾಥ, ಹಂಸ, ಪುಷ್ಪ, ವಿದೂಷಕ.

ದೇವಾಲಯದ ಅಧಿಷ್ಠಾನವು ಮಣ್ಣಿನಲ್ಲಿ ಮುಚ್ಚಿಹೋಗಿದೆ. ಹೊರ ಭಾಗದ ಭಿತ್ತಿಯು ಸರಳವಾಗಿದ್ದು, ಶಿಲ್ಪಗಳ ಅಲಂಕಾರವಿಲ್ಲ (ಚಿತ್ರ 1). ಗರ್ಭಗೃಹದ ಮೇಲೆ ಕದಂಬ ನಾಗರ ಶೈಲಿಯ ಶಿಖರವಿದ್ದು, ಸ್ತೂಪಿಯು ದೇವಕೋಷ್ಠಗಳ ರಚನೆಯಿಂದಾವೃತವಾಗಿದ್ದು, ಗಾರೆಯಿಂದ ಕಲಾತ್ಮಕವಾಗಿ ನಿರ್ಮಾಣವಾಗಿದೆ (ಚಿತ್ರ 3). ಗರ್ಭಗೃಹದ ಉತ್ತರ ದಿಕ್ಕಿನಲ್ಲಿ ಪ್ರಣಾಳಿಕೆಯಿದೆ. ಶಿಖರ ಭಾಗದಲ್ಲಿ ಮತ್ತು ಭಿತ್ತಿಯ ಮೇಲ್ಭಾಗದಲ್ಲಿ ಕೂಡು ಆಕಾರಗಳಿದ್ದು, ಶಿಲ್ಪಗಳ ಅಲಂಕಾರವಿಲ್ಲ. ಅಂತರಾಳದ ಮೇಲ್ಭಾಗದಲ್ಲಿ ಶಿಖರದ ಮುಂದೆ ಸುಕನಾಸಿ ಇದೆ.

ದೇವಾಲಯದ ಮುಖ್ಯ ದ್ವಾರದ ಎದುರಿನ ಮಂಟಪದಲ್ಲಿ ದೇವಿಯ ವಿಗ್ರಹ, ನೀಳವಾದ ಲಿಂಗ ಮತ್ತು ನಾಗರ ವಿಗ್ರಹಗಳಿವೆ. ಉತ್ತರ ದಿಕ್ಕಿನ ಮಂಟಪದಲ್ಲಿ ಭೈರವ ಮೂರ್ತಿಯಿದೆ. ದಕ್ಷಿಣ ದಿಕ್ಕಿನಲ್ಲಿಯೂ ಮಂಟಪವಿದ್ದು, ಕಲ್ಲು ಮಣ್ಣಿನಿಂದ ಮುಚ್ಚಿ ಹೋಗಿದೆ. ಈ ದೇವಾಲಯಕ್ಕೆ ಕ್ರಿ.ಶ. 1922 ರವರೆಗೂ ಪ್ರಾಕಾರದ ಗೋಡೆಯಿತ್ತೆಂದು ಕಾಣುತ್ತದೆ. ಕಾರಣ, ಪ್ರಾಕಾರದಲ್ಲಿ ಶಿಲಾ ಶಾಸನಗಳು ಇದ್ದ ಸ್ಥಳವನ್ನು ಶಾಸನ ಇಲಾಖೆಯ ವಾರ್ಷಿಕ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಪ್ರಾಕಾರದ ಬಾಗಿಲುಗಳು ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿವೆ. ಆದರೆ ಪ್ರಸ್ತುತ ದೇವಾಲಯದ ಸುತ್ತಲೂ ಇರವ ಭೂಮಿಯನ್ನು ಕೃಷಿ ಭೂಮಿಯನ್ನಾಗಿ ಪರಿವರ್ತಿಸಲಾಗಿದೆ.

ಈ ದೇವಾಲಯವು ವಿಜಯನಗರದ ಸಂಗಮ ವಂಶದ ಅರಸು ಮನೆತನದವರ ಕಾಲದಲ್ಲಿ ನಿರ್ಮಾಣಗೊಂಡಿರಬಹುದು. ಶಾಸನ ಉಲ್ಲೇಖಿಸುವಂತೆ ಕಂಮಾರ ತಿಂಮ ದಾಸರಿ ಎಂಬುವನು ತಮ್ಮ ಪೂರ್ವಜರು ಕಟ್ಟಿಸಿದ್ದ ದೇವಾಲಯವೆಂದು ಮತ್ತು ತನ್ನ ವೈಯಕ್ತಿಕ ಹಕ್ಕನ್ನು ರುಜುವಾತು ಪಡಿಸಿದ್ದರಿಂದ, ಅನಂತಾಪುರದ ಗ್ರಾಮದ ಪ್ರಮುಖರು ಕಂಮಾರ ತಿಂಮ ದಾಸರಿಯಿಂದ ಕ್ರಯಕ್ಕೆ ತೆಗೆದುಕೊಂಡು ಸಾರ್ವಜನಿಕ ದೇವಾಲಯವಾಗಿ ಮಾರ್ಪಡಿಸಿ ಜೀರ್ಣೋದ್ಧಾರ ಮಾಡಿಸಿದ್ದರ ಬಗ್ಗೆ ಪ್ರಚುರಪಡಿಸಿರುವುದೊಂದು ಉತ್ತಮ ನಿದರ್ಶನವಾಗಿದೆ.

ಈ ಶೈಲಿಯ ವಾಸ್ತು ಶಿಲ್ಪವನ್ನು ಹೊಂದಿರುವ ಮತ್ತು ಸಂಗಮ ವಂಶದ ಇಮ್ಮಡಿ ಹರಿಹರ, ದೇವಾರಾಯ, ಪ್ರೌಢದೇವರಾಯ, ಇಮ್ಮಡಿ ಬುಕ್ಕರಾಯರ ಶಿಲಾಶಾಸನ ಸಹಿತವಾಗಿ ಅನೇಕ ದೇವಾಲಯಗಳು ವಿಜಯನಗರ ಪಟ್ಟಣದಲ್ಲಿರುವುದನ್ನು ಗಮನಿಸಬಹುದು. ಹಜಾರ ರಾಮಚಂದ್ರ ದೇವಾಲಯ, ಆನೇ ಸಾಲಿನ ಹಿಂಭಾಗದಲ್ಲಿರುವ ಜಿನಾಲಯ, ಶಿವಾಲಯ, ಮತ್ತು ವಿಷ್ಣು ದೇವಾಲಯ, ಸಿಂಘಾರದ ಹೆಬ್ಬಾಗಿಲಿನ ಈಶಾನ್ಯ ಭಾಗದ ಕೃಷ್ಣ ದೇವಾಲಯ, ಗಾಣಗಿತ್ತಿ ಜಿನಾಲಯ, ಸೀತೆ ಸೆರಗಿನ ಬಳಿಯಲ್ಲಿರುವ ನರಸಿಂಹ ದೇವಾಲಯ, ನಿಂಬಾಪುರದ ಸೌಮ್ಯ ಸೋಮೇಶ್ವರ ದೇವಾಲಯ ಮುಂತಾದವುಗಳು ಇರುವುದರಿಂದ ಅನಂತಾಪುರದ ಮಲ್ಲಿಕಾರ್ಜುನ ದೇವಾಲಯವೂ ಸಹ ಸಂಗಮ ವಂಶದ ಅರಸರ ಕಾಲದಲ್ಲಿ ನಿರ್ಮಾಣವಾದುದೆಂಬುದರಲ್ಲಿ ಸಂದೇಹ ಕಾಣಿಸದು.

ಟಿಪ್ಪಣಿಗಳು

1. *ಆರಿಸೌಇಂಎ*, 1922-23, ಸಂ. 733; ಚನ್ನಬಸಪ್ಪ ಎಸ್. ಪಾಟೀಲ ಮತ್ತು ವಿನೋದಾ ಪಾಟೀಲ, 1997, *ಇನ್‌ಸ್ಕ್ರಿಪ್ಶನ್ಸ್ ಆಫ್ ಬಳ್ಳಾರಿ ಡಿಸ್ಟ್ರಿಕ್ಟ್*, ಮೈಸೂರು, ಸಂ. 492.
2. *ಆರಿಸೌಇಂಎ*, 1922-23, ಸಂ. 734; ಚನ್ನಬಸಪ್ಪ ಎಸ್. ಪಾಟೀಲ ಮತ್ತು ವಿನೋದಾ ಪಾಟೀಲ, 1997, *ಇನ್‌ಸ್ಕ್ರಿಪ್ಶನ್ಸ್ ಆಫ್ ಬಳ್ಳಾರಿ ಡಿಸ್ಟ್ರಿಕ್ಟ್*, ಮೈಸೂರು, ಸಂ. 493-494.

5. ಹಂಪೆಯ ವಿಠಲ ದೇವಾಲಯದಲ್ಲಿ ನಡೆಯುತ್ತಿದ್ದ ಪೂಜೆ ಮತ್ತು ಉತ್ಸವಗಳು

ಚನ್ನಬಸಪ್ಪ ಎಸ್. ಪಾಟೀಲ

ತುಂಗಭದ್ರ ನದಿಯ ದಂಡೆಯ ಮೇಲಿರುವ ವಿಠಲ ದೇವಾಲಯವು ಒಂದು ದೊಡ್ಡ ಸಂಕೀರ್ಣವಾಗಿದೆ. ಸಾಲುಗಂಬಗಳ ಮಂಟಪದ ಪ್ರಾಕಾರದ ಮಧ್ಯದಲ್ಲಿ ಮುಖ್ಯ ದೇವಾಲಯ, ಅದರ ಎದುರಿಗೆ ರಥದ ಆಕಾರದಲ್ಲಿರುವ ಗರುಡನ ಗುಡಿ, ವಾಯವ್ಯ ಮತ್ತು ನೈರುತ್ಯಕ್ಕೆ ಅಮ್ಮನವರ ಗುಡಿಗಳು, ಈಶಾನ್ಯ, ಆಗ್ನೆಯ ಮತ್ತು ದಕ್ಷಿಣಕ್ಕೆ ಮೂರು ಉತ್ಸವ ಮಂಟಪಗಳು ಇವೆ. ಪ್ರಾಕಾರದಲ್ಲಿ ಪೂರ್ವ, ದಕ್ಷಿಣ ಮತ್ತು ಉತ್ತರ ದಿಕ್ಕಿಗಿರುವ ಮಹಾದ್ವಾರಗಳ ಮೇಲೆ ರಾಯಗೋಪುರಗಳಿವೆ (ಉತ್ತರ ದಿಕ್ಕಿನ ಮಹಾದ್ವಾರದ ಮೇಲಿನ ಗೋಪುರವು ಈಗ ಬಿದ್ದುಹೋಗಿದೆ). ಮುಖ್ಯ ದೇವಾಲಯದಲ್ಲಿ ಗರ್ಭಗೃಹ, ಸುಕನಾಸಿ, ಅತರಾಳ, ಪ್ರದಕ್ಷಿಣಾಪಥ, ರಂಗಮಂಟಪ ಮತ್ತು ಮಹಾರಂಗಮಂಟಪಗಳಿವೆ. ಈ ಸಂಕೀರ್ಣದ ಮುಂದೆ ಎರಡು ಬದಿಗಳಲ್ಲೂ ಸಾಲು ಮಂಟಪಗಳಿರುವ ಉದ್ದವಾದ ತೇರು ಬೀದಿ ಇದೆ. ಇದರ ಉತ್ತರಕ್ಕೆ ಮಧ್ಯದಲ್ಲಿ ಚಿಕ್ಕ ಮಂಟಪವಿರುವ ಪುಷ್ಕರಿಣಿ ಮತ್ತು ಪೂರ್ವದ ತುದಿಗೆ ಪರಾಂಕುಶ ಮಂಟಪವಿದೆ.

ವಾಸ್ತು ಮತ್ತು ಕಲೆಯ ದೃಷ್ಟಿಯಿಂದ ಹಂಪೆಯಲ್ಲಿ ಇದೊಂದು ಅತ್ಯುತ್ತಮ ದೇವಾಲಯವಾಗಿದೆ. ಇಲ್ಲಿನ ಸಂಗೀತ ಕಂಬಗಳು ಮತ್ತು ಕಲ್ಲಿನ ರಥ ಪ್ರತಿ ದಿನ ಸಾವಿರಾರು ದೇಶ ವಿದೇಶದ ಪ್ರವಾಸಿಗರನ್ನು ಆಕರ್ಷಿಸುತ್ತವೆ. ಈ ದೇವಾಲಯದ ಶಿಥಿಲಾವಸ್ಥೆಯನ್ನು ನೋಡಿದರೆ ಹಿಂದೊಮ್ಮೆ ಇಲ್ಲಿ ಪೂಜೆ ನಡೆದಿದ್ದರ ಬಗ್ಗೆ ಸಂಶಯ ಬರುತ್ತದೆ.

ಈ ದೇವಾಲಯದ ಶಿಥಿಲಾವಸ್ಥೆಯನ್ನು ಕಂಡ ಎ.ಎಚ್. ಲಾಂಗ್‌ಹರ್ಸ್ಟ್ ಈ ದೇವಾಲಯ ಪೂರ್ಣಗೊಳ್ಳಲಿಲ್ಲ ಮತ್ತು ದೇವರ ಪ್ರತಿಷ್ಠಾಪನೆಯಾಗಲಿಲ್ಲವೆಂಬ ಅಭಿಪ್ರಾಯವನ್ನು 1917ರಲ್ಲಿ ವ್ಯಕ್ತಪಡಿಸಿದ್ದಾರೆ.[1] ಅವರ ಈ ಅಭಿಪ್ರಾಯ ಸರಿಯಲ್ಲವೆಂಬುದು ದೇವಾಲಯದಲ್ಲಿಯ ಶಾಸನಗಳನ್ನು ಗಮನಿಸಿದಾಗ ಸ್ಪಷ್ಟವಾಗುತ್ತದೆ. ಇಲ್ಲಿರುವ ಶಾಸನಗಳಲ್ಲಿ ಕೆಲವುಗಳ ಸಾರಾಂಶ ಲಾಂಗ್‌ಹರ್ಸ್ಟ್ ಅವರ ಗ್ರಂಥ ಪ್ರಕಟವಾಗುವುದಕ್ಕಿಂತ ಮುಂಚೆಯೆ ಶಾಸನ ವಿಭಾಗದ ವಾರ್ಷಿಕ ವರದಿಗಳಲ್ಲಿ ಪ್ರಕಟವಾಗಿದ್ದವು.[2] ಉಳಿದ ಶಾಸನಗಳು ನಂತರದ ವಾರ್ಷಿಕ ವರದಿಗಳಲ್ಲಿ ಪ್ರಕಟವಾಗಿವೆ.[3] ಈ ಶಾಸನಗಳ ಪಾಠ ಸೌತ್ ಇಂಡಿಯನ್ ಇನ್‌ಸ್ಕ್ರಿಪ್‌ಶನ್ಸ್ ಸಂಪುಟಗಳಲ್ಲಿ ಪ್ರಕಟವಾಗಿದೆ.[4] ವಿಠಲ ದೇವಾಲಯದ ವಿವರವಾದ ಅಧ್ಯಯನವನ್ನು ಕೈಗೊಂಡ ವಸುಂಧರಾ ಫಿಲಿಯೋಜಾ ಅವರು ದೇವಾಲಯದಲ್ಲಿಯ ಶಾಸನಗಳನ್ನು ಆಂಗ್ಲ ಭಾಷೆಗೆ ಭಾಷಾಂತರಿಸಿದ್ದಾರೆ.[5] ಸಿ.ಟಿ.ಎಂ. ಕೊಟ್ರಯ್ಯನವರು ತಮ್ಮ ಲೇಖನದಲ್ಲಿ ಇಲ್ಲಿಯ ಶಾಸನಗಳ ಕಡೆಗೆ ವಿದ್ವಾಂಸರ ಗಮನ ಸೆಳೆದಿದ್ದಾರೆ.[6] ಈ ಶಾಸನಗಳನ್ನು ಪರಿಶೀಲಿಸಿದಾಗ ವಿಠಲ ದೇವಾಲಯವು ಪ್ರಸಿದ್ಧವಾದ ಧಾರ್ಮಿಕ ಸ್ಥಳವಾಗಿರುವುದರೊಂದಿಗೆ ಒಂದು ಸಾಮಾಜಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿ ಬೆಳೆದಿತ್ತೆಂಬುದು ತಿಳಿಯುತ್ತದೆ. ಶಾಸನಗಳಲ್ಲಿ ಉಲ್ಲೇಖಗೊಂಡ ಪೂಜೆ ಮತ್ತು ಉತ್ಸವಗಳನ್ನು ಪರಿಶೀಲಿಸುವುದೇ ಈ ಪ್ರಬಂಧದ ಉದ್ದೇಶ.

ಆಡಳಿತ:

ದೇವಾಲಯದ ಕೆಲಸಕಾರ್ಯಗಳನ್ನು ನಿರ್ವಹಿಸಲು ಸ್ಥಾನದವರಿದ್ದರು. ದೇಮಯ, ನರಸಯ್ಯ, ವೀರಪ, ಚಿಕ್ಕವೀರಪ ಮತ್ತು ಪುರುಷೋತ್ತಮ ಈ ಐದು ಜನ ಸ್ಥಾನಿಕರಾಗಿದ್ದರು.[7] ಭಂಡಾರದ ಹಿರಿತಿಮ್ಮಯ್ಯ ದೇವರ ನಾನಾಭರಣಗಳನ್ನು ಮತ್ತು ದೇವಾಲಯದ ಬೀಗಮುದ್ರೆಯನ್ನು ನೋಡಿಕೊಳ್ಳುತ್ತಿದ್ದನು. ದೇವಾಲಯದ ಸಿಬ್ಬಂದಿಯಲ್ಲಿ ಸ್ಥಾನಿಕರು, ಭಂಡಾರದವರು, ವಾದ್ಯದವರು, ಪರಿಚಾರಕರು ಮುಂತಾದವರಿದ್ದರು.[8]

ಆದಾಯ:

ದೇವಾಲಯದಲ್ಲಿಯ ಪೂಜೆ ಮತ್ತು ಉತ್ಸವಗಳ ಸಲುವಾಗಿ ವಿಜಯನಗರದ ಅರಸ ಕೃಷ್ಣದೇವರಾಯ ಕ್ರಿ.ಶ. 1513ರಲ್ಲಿ ಮೂರು ಹಳ್ಳಿಗಳನ್ನು ಮತ್ತು ಭೂಮಿಯನ್ನು ದಾನವಾಗಿ ಕೊಟ್ಟನು ಮತ್ತು ಅವನ ರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲದೇವಿಯರು

ಗೋಪುರಗಳನ್ನು ಕಟ್ಟಿಸಿ 25 ಆರತಿಗಳನ್ನು ಕೊಟ್ಟರು. ಅದೇ ಅರಸನು ಅದೇ ವರ್ಷ ಇನ್ನೂ ಕೆಲವು ಹಳ್ಳಿಗಳನ್ನು ಮತ್ತು ತೆರಿಗೆಯನ್ನು ದಾನವಾಗಿ ಕೊಟ್ಟನು.[9] ಅಚ್ಯುತರಾಯನು ಕೆಲವು ಹಳ್ಳಿಗಳನ್ನು ಮತ್ತು ತೆರಿಗೆಗಳನ್ನು ಕೊಟ್ಟನು.[10] ಅದೇ ರೀತಿ ತಿರುಮಲನಾಯಕ, ತಳಪಾಕ ತಿರುಮಲಯ್ಯ, ಚಿಕ್ಕತಿಮ್ಮಪ್ಪನಾಯಕ, ವರದಪ್ಪನಾಯಕ ಮುಂತಾದವರು ದಾನಗಳನ್ನು ಮಾಡಿದರು.[11]

ಭಂಡಾರ:

ಕೆಲವರು ಹಣವನ್ನು ದಾನ ಮಾಡಿ ಅದನ್ನು ಪುಲಿವೆಟ್ಟು (ಠೇವಣಿ) ಆಗಿ ಪರಿಗಣಿಸಿ ಅದರ ಮೇಲಿನ ಬಡ್ಡಿಯನ್ನು ದೇವರ ಸೇವೆಗೆ ಉಪಯೋಗಿಸುವಂತೆ ನಿಬಂಧನೆಗಳನ್ನು ವಿಧಿಸಿದ್ದರು. ಇಂತಹ ಹಣವನ್ನು ದೇವರ ಬಂಡಾರದಲ್ಲಿಟ್ಟು ಅದನ್ನು ಸಾಲವಾಗಿ ಕೊಟ್ಟು ಬಡ್ಡಿಯನ್ನು ಗಳಿಸುತ್ತಿದ್ದರು. ಈ ವ್ಯವಹಾರದಲ್ಲಿ ದೇವಾಲಯವು ಈಗಿನ ಬ್ಯಾಂಕಿನ ಕಾರ್ಯವನ್ನು ನಿರ್ವಹಿಸುತ್ತಿತ್ತು. ಭಂಡಾರವನ್ನು ನೋಡಿಕೊಳ್ಳಲು ಭಂಡಾರದವರಿದ್ದರು. ಹಿರಿಯ ತಿಮ್ಮಯನು ದೇವರ ಭಂಡಾರದವನಾಗಿ ದೇವರ ನಾನಾ ಆಭರಣಗಳನ್ನು ಮತ್ತು ಬೀಗ ಮುದ್ರೆಯನ್ನು ಕಾಯ್ದುಕೊಂಡು ಬರುತ್ತಿದ್ದನು.[12]

ಉಗ್ರಾಣ:

ದೇವಾಲಯಕ್ಕೆ ಸಂಬಂಧಿಸಿದಂತೆ ಒಂದು ಉಗ್ರಾಣವಿತ್ತು. ಈ ಉಗ್ರಾಣದಿಂದ ದೇವರ ನೈವೇದ್ಯ ಮತ್ತು ಇತರ ಸೇವೆಗೆ ಬೇಕಾಗುವ ವಸ್ತುಗಳನ್ನು ಕೊಡುತ್ತಿದ್ದರು.[13]


ರಾಮಾನುಜಕೂಟ:

ಶ್ರೀವೈಷ್ಣವರ ಊಟಕ್ಕಾಗಿ ರಾಮಾನುಜಕೂಟವಿತ್ತು. ಇದು ವಿಠಲದೇವಾಲಯದ ಹತ್ತಿರದ ಮೊದಲಿ ಆಳ್ವಾರರ ದೇವಾಲಯದಲ್ಲಿತ್ತು. ಇದಕ್ಕೆ ಎರಡು ಹರಿವಾಣ ಪ್ರಸಾದ ವಿಠಲದೇವಾಲಯದಿಂದ ಹೋಗುತ್ತಿತ್ತು.[14]

ಪೂಜೆ:


ಪೂಜೆಯು ದೀಪ ಹಚ್ಚುವುದು, ಅಭಿಷೇಕ, ಹೂವು ಅರ್ಪಿಸುವುದು, ಅಂಗಭೋಗ, ರಂಗಭೋಗ, ನೈವೇದ್ಯ, ಆರತಿ ಬೆಳಗುವುದು ಮುಂತಾದವುಗಳನ್ನು ಒಳಗೊಂಡಿತ್ತು.[15] ಎಣ್ಣೆ ದೀವಿಗೆ, ತುಪ್ಪ ದೀವಿಗೆಗಳನ್ನು ದೇವರ ಮುಂದೆ ಹಚ್ಚುತ್ತಿದ್ದರು. ಅಂಗಭೋಗ ಎಂದರೆ ದೇವರ ವಿಗ್ರಹಕ್ಕೆ ಅಭಿಷೇಕವಾದ ಬಳಿಕ ಸುಗಂಧ ದ್ರವ್ಯ, ಕರ್ಪೂರ, ಕುಂಕುಮ, ಕೇಸರಿ ಇತ್ಯಾದಿಗಳನ್ನು ಲೇಪಿಸುವ ಉಪಚಾರ. ರಂಗಭೋಗವೆಂದರೆ ದೇವರ ವಿಗ್ರಹದ ಎದುರಿನಲ್ಲಿ ನೃತ್ಯ, ಸಂಗೀತ ಮೊದಲಾದವುಗಳ ಮೂಲಕ ಸೇವೆ ಸಲ್ಲಿಸುವುದು. ಈ ಸಂದರ್ಭದಲ್ಲಿ ತಿರುವಧ್ಯಾನ ಅಂದರೆ ಪವಿತ್ರ ಗ್ರಂಥಗಳ ಚಿಂತನೆಯೂ ನಡೆಯುತ್ತಿತ್ತು.[16] ಧ್ವಜ ಸ್ತಂಭದ ಮೇಲೆ ಧ್ವಜಾರೋಹಣ ಮಾಡಿ ನೈವೇದ್ಯ ಮಾಡುತ್ತಿದ್ದರು.[17]

ನೈವೇದ್ಯಕ್ಕೆ ಅಕ್ಕಿ, ಹೆಸರು, ಉದ್ದು, ಹೆಸರು ಬೇಳೆ, ಕಡಲೆ ಬೇಳೆ, ಉಪ್ಪು, ಮೆಣಸು, ಸಂಭಾರ (ಮಸಾಲೆ), ಮೇಲೋಗರ (ಕಾಯಿಪಲ್ಲೆ), ಬೆಲ್ಲ, ಸಕ್ಕರೆ, ಜೀರಗೆ ಮುಂತಾದ ಪಡಿತರಗಳನ್ನು, ತುಪ್ಪ, ಮೊಸರು ಮುಂತಾದವುಗಳನ್ನು ಉಪಯೋಗಿಸುತ್ತಿದ್ದರು.[18] ನೈವೇದ್ಯದ ಭಕ್ಷ್ಯಗಳಲ್ಲಿ ಎಂಣೂರಿಗೆ (ಒಬ್ಬಟ್ಟಿನಂತಹ ಸಿಹಿ ತಿಂಡಿ), ಕಜಾಯ, ದೋಸೆ, ಮೊಸರನ್ನ, ಸುಖಿ (ಅಕ್ಕಿ ಹಿಟ್ಟು, ಬೆಲ್ಲ, ತೆಂಗಿನ ಕಾಯಿ ಇತ್ಯಾದಿಗಳನ್ನು ಬೆರಸಿ ಕರಿದು ಮಾಡುವ ಸಿಹಿ ಭಕ್ಷ್ಯ ಇದ್ದವು).[19] ನೈವೇದ್ಯವನ್ನು ಚಿನ್ನದ ಹರಿವಾಣದಲ್ಲಿಟ್ಟು ಅರ್ಪಿಸುತ್ತಿದ್ದರು.[20] ಫಲನೈವೇದ್ಯಕ್ಕೆ ಎಳನೀರು, ತೆಂಗಿನಕಾಯಿ, ಬಾಳೇಹಣ್ಣು ಉಪಯೋಗಿಸುತ್ತಿದ್ದರು.[21] ನೈವೇದ್ಯವನ್ನು ಪಾಲು ಮಾಡಿ ಕೆಲವು ಭಾಗವನ್ನು ಭಂಡಾರದವರಿಗೆ, ಸ್ಥಾನಿಕರಿಗೆ, ರಾಮಾನುಜಕೂಟಕ್ಕೆ, ವ್ಯಾಸರಾಯ, ಶ್ರೀರಂಗಾಚಾರ್ಯ, ವೆಂಗಳಾಚಾರ್ಯ, ಸೇನಬೋವ ಕೋನಪ್ಪ ಅನಂತಯ ಮುಂತಾದವರಿಗೆ ಕೊಡುತ್ತಿದ್ದರು.[22] ಪುಣ್ಯ ತಿಥಿಗಳಲ್ಲಿ ಮಹಾಪೂಜೆ ಮತ್ತು ನೈವೇದ್ಯ ನಡೆಯುತ್ತಿತ್ತು.[23]




1. ವಿಠಲ ದೇವಾಲಯ, ಹಂಪಿ

ವಿಠಲ ದೇವಾಲಯ, ಹಂಪಿ



2. ಮಹಾರಂಗಮಂಟಪ



3. ಕಲ್ಲಿನ ರಥ

ಪ್ರತಿದಿನ ಬೆಳಗ್ಗೆ ದೇವರ ಪೂಜೆಯಾದ ಮೇಲೆ ಪ್ರಸಾದ, ತಿರುಮಾಲೆ, ಶಡಗೋಪವನ್ನು ಸಕಲವಾದ್ಯಸಹಿತ ನಮ್ಮಾಳ್ವರುಲು ಎಂಬ ವ್ಯಕ್ತಿಗೆ ಕಳುಹಿಸುತ್ತಿದ್ದರು. ಇದಕ್ಕಾಗಿ ಆತನು ಕ್ರಿ.ಶ. 1563ರಲ್ಲಿ 60 ಘಟ್ಟವರಹ ಮತ್ತು ಭೂಮಿಯನ್ನು ದೇವರಿಗೆ ದಾನವಾಗಿ ಕೊಟ್ಟಿದ್ದನು.[24]

ಆರತಿಗಳ ಬಗ್ಗೆ ಕೆಲವು ವಿವರಗಳಿವೆ. ಕೃಷ್ಣದೇವರಾಯನ ರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲದೇವಿಯರು ಕ್ರಿ.ಶ. 1515ರಲ್ಲಿ 25 ಆರತಿಗಳನ್ನು ಸಮರ್ಪಿಸಿದರು. ಅವು ಹೀಗಿವೆ: ನೀರಾಂಜನ ಹಲಿಗೆ 9, ಹಿರಿಯ ಆರತಿ 8, ಪುರುಷಾಮೃಗದ ಆರತಿ 3, ನಾಗಾರತಿ 1, ಧೂಪಾರತಿ 1, ಕಖಡಿ ಬರ್ತಿ 2, ಪ್ರತುಮೆ ಆರತಿ 1.[25]

ಉತ್ಸವಗಳು:

ದೇವಾಲಯದಲ್ಲಿ ನಡೆಯುತ್ತಿದ್ದ ಉತ್ಸವಗಳ ದೊಡ್ಡ ಪಟ್ಟಿಯೇ ಇದೆ. ನಿತ್ಯೋತ್ಸವ, ನೈಮಿತ್ತಿಕ, ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವ, ಮಾರ್ಕಾರ್ತಿಗೆ (ಮಹಾಕಾರ್ತಿಕ - ಕಾರ್ತಿಕ ಮಾಸದಲ್ಲಿ ಮಾಡುವ ದೀಪೋತ್ಸವ), ಪಂಚಪರ್ವ; ವೈಶಾಖ, ಮಾರ್ಗಶಿರ ಮತ್ತು ಫಾಲ್ಗುಣ ಮಾಸಗಳಲ್ಲಿ ನಡೆಯುವ ರಥೋತ್ಸವ, ರಥಸಪ್ತಮಿ.

ಉದಯಗಿರಿ ತಿಮ್ಮರಾಜಯ ಮಹಾಅರಸು ಕ್ರಿ.ಶ. 1554ರಲ್ಲಿ ಉಯ್ಯಾಲೆ ಮಂಟಪವನ್ನು ಕಟ್ಟಿಸಿ ಆ ಮಂಟಪದಲ್ಲಿ 32 ಉತ್ಸವಗಳನ್ನು ನಡೆಸಲು ಧನವನ್ನು ಪುಲಿವೆಟ್ಟಾಗಿ ಕೊಟ್ಟನು. ಈ ಉತ್ಸವಗಳಂದು ವಿಠಲದೇವರನ್ನು (ಉತ್ಸವ ವಿಗ್ರಹವನ್ನು) ಈ ಮಂಟಪದಲ್ಲಿ ತಂದು ಪೂಜಿಸುತ್ತಿದ್ದರು. ಉತ್ಸವಗಳ ವಿವರ ಹೀಗಿದೆ: ಉಯ್ಯಾಲೆ ತಿರುನಾಳು ದಿನ 5, ಕೊಡೆ ತಿರುನಾಳು ದಿನ 5, ತಿರುವಧ್ಯಾನ ದಿನ 10, ತೇರು ತಿರುನಾಳು ಧ್ವಜಾರೋಹಣ 3, ಶ್ರೀ ಪುಷ್ಪಯಾಗ 3, ಶ್ರೀರಾಮಜಯಂತಿ 1, ಶ್ರೀ ನಾರಸಿಂಹ ಜಯಂತಿ 1, ಕೃಷ್ಣಜಯಂತಿ 3, ವಾಮನ ಜಯಂತಿ 1.[26]

ರಥೋತ್ಸವದ ಸಂದರ್ಭದಲ್ಲಿ ಸತಿಗೆ (ಕೊಡೆ), ಪತಾಕೆ (ಧ್ವಜ)ಗಳನ್ನು ಒಯ್ಯುತ್ತಿದ್ದರು. ದೇವಾಲಯದ ವಾದ್ಯದವರು, ಗಂಡುಮೇಳ, ಹೆಣ್ಣುಮೇಳ, ಪರಿಚಾರಕರು ಉತ್ಸವದಲ್ಲಿ ಭಾಗವಹಿಸುತ್ತಿದ್ದರು. ತೇರನ್ನು ಸೀರೆ, ಕರೆ ಮತ್ತು ಕರಿಮಣಿಗಳಿಂದ ಸಿಂಗರಿಸುತ್ತಿದ್ದರು. ತೇರು ಬೀದಿಯ ಕೊನೆಯಲ್ಲಿರುವ ಪರಾಂಕುಶ ಮಂಟಪದ ಮುಂದೆ ಚಪ್ಪರ ಹಾಕಿ ಅದನ್ನು ಸಿಂಗರಿಸುತ್ತಿದ್ದರು. ದೇವರನ್ನು ಪರಾಂಕುಶ ಮಂಟಪಕ್ಕೆ ವರ್ಷದಲ್ಲಿ 142 ದಿನ ತೆಗೆದುಕೊಂಡು ಹೋಗುತ್ತಿದ್ದರು. ಆ ದಿನಗಳು ಹೀಗಿವೆ: ಪಂಚಪರ್ವ ದಿನ 60, ತೇರ ಉತ್ಸವ 3 ಕ್ಕೆ ದಿನ 51, ಪವಿತ್ರ ತಿರುನಾಳು ದಿನ 3, ಗೋಕುಲಾಷ್ಟಮಿ ದಿನ 2, ಉಟಿ ತಿರುನಾಳು ದಿನ 2, ವಾಮನ ಜಯಂತಿ ದಿನ 1, ಮಹರ್ನವಮಿ ವಿಜಯದಶಮಿ ದಿನ 10, ಯುಗಾದಿ ದಿನ 2, ದೀಪಾವಳಿ ದಿನ 3, ಶ್ರೀರಾಮನವಮಿ ದಿನ 1, ಕೊಡೆ ತಿರುನಾಳು ದಿನ 1, ಉಯ್ಯಾಲೆ ತಿರುನಾಳು 1, ತೆಪ್ಪ ತಿರುನಾಳು ದಿನ 3, ಮಕರ ಸಂಕ್ರಾಂತಿ ಉತ್ಸವ ದಿನ 1, ತೋಪು ತಿರುನಾಳು ದಿನ 1.[27]

ಭಕ್ಷ್ಯಗಳನ್ನು ತಯಾರಿಸಲು ಅಡುಗಬು (ಸೌದೆ) ಮತ್ತು ಅಡುಗರಿ (ಇದ್ದಲು) ಉಪಯೋಗಿಸುತ್ತಿದ್ದರು. ದೇವಾಲಯದ ಭಂಡಾರದಿಂದ ಅಡುಗರಿಸುವುದಕ್ಕೆ (ಇದ್ದಲು ಮಾಡುವುದಕ್ಕೆ), ಹಿಟ್ಟು ಕುಟ್ಟುವುದಕ್ಕೆ, ಗೋಧಿ ಬೀಸುವುದಕ್ಕೆ ಮತ್ತು ಹೊರುವುದಕ್ಕೆ ಕೂಲಿಯನ್ನು ಕೊಡುತ್ತಿದ್ದರು.[28]

ಶಾಸನಗಳಲ್ಲಿನ ಈ ವಿವರಗಳನ್ನು ಗಮನಿಸಿದಾಗ ಹಿಂದೆ ಇಲ್ಲಿ ವೈಭವಯುತವಾಗಿ ನಡೆಯುತ್ತಿದ್ದ ಪೂಜೆ ಮತ್ತು ಉತ್ಸವಗಳ ಚಿತ್ರ ಮನಸ್ಸಿನಲ್ಲಿ ಮೂಡುತ್ತದೆ. ಉತ್ಸವಗಳು ಮುಖ್ಯ ದೇವಾಲಯದಲ್ಲಿಯ ರಂಗಮಂಟಪ, ಮಹಾರಂಗಮಂಟಪ, ದೇವಾಲಯದ ದಕ್ಷಿಣಕ್ಕಿರುವ ನೂರು ಕಂಬಗಳ ಕಲ್ಯಾಣ ಮಂಟಪ, ಆಗ್ನೇಯಕ್ಕಿರುವ ಉಯ್ಯಾಲೆ ಮಂಟಪ ಮತ್ತು ಈಶಾನ್ಯಕ್ಕಿರುವ ಇನ್ನೊಂದು ಉತ್ಸವ ಮಂಟಪದಲ್ಲಿ ನಡೆಯುತ್ತಿದ್ದವು. ರಥೋತ್ಸವ ಮತ್ತು ಇತರ ಉತ್ಸವಗಳಂದು ದೇವರನ್ನು ತೇರು ಬೀದಿಯ ತುದಿಯಲ್ಲಿರುವ ಪರಾಂಕುಶಮಂಟಪಕ್ಕೆ ಒಯ್ಯುತ್ತಿದ್ದರು. ತೆಪ್ಪೋತ್ಸವವು ತೇರು ಬೀದಿಯ ಉತ್ತರಕ್ಕಿರುವ ಪುಷ್ಕರಿಣಿಯಲ್ಲಿ ನಡೆಯುತ್ತಿತ್ತು.

ಟಿಪ್ಪಣಿಗಳು

1. ಲಾಂಗ್‌ಹರ್ಸ್ಟ್ ಎ.ಎಚ್, 1981 (ಪುನರ್‌ಮುದ್ರಿತ), *ಹಂಪಿ ರೂಯಿನ್ಸ್*, ಪು. 121.
2. *ಆರಿವ,* 1889, 1904.
3. *ಅದೇ,* 1922.
4. *ಸೌಇಂಇ,* IV, IX ii, XVI.
5. ಫಿಲಿಯೋಜಾ ವಸುಂಧರಾ, 1988, *ಹಂಪಿ-ವಿಜಯನಗರ್, ದಿ ಟೆಂಪಲ್ ಆಫ್ ವಿಠಲ,* ನ್ಯೂ ಡೆಲ್ಲಿ.
6. ಕೊಟ್ರಯ್ಯ ಸಿ.ಟಿ.ಎಂ., 1990 ''ಇನ್ಸ್‌ಕ್ರಿಪ್‌ಶನ್ಸ್ ಆಫ್ ದಿ ವಿಠ್ಠಲ ಟೆಂಪಲ್ ಅಟ್ ಹಂಪಿ'', *ಇಂಡಿಯನ್ ಹಿಸ್ಟರಿ ಅಂಡ್ ಎಪಿಗ್ರಾಫಿ, ಡಾ. ಜಿ.ಎಸ್. ಗಾಯಿ ಫೆಲಿಸಿಟೇಶನ್ ವಾಲ್ಯೂಮ್,* (ಸಂ.) ಕೆ.ವಿ. ರಮೇಶ್, ಎಸ್.ಪಿ. ತಿವಾರಿ, ಎಂ.ಜೆ. ಶರ್ಮ, ಡೆಲ್ಲಿ, ಪು. 197-204.
7. *ಸೌಇಂಇ,* IX ii, 607.
8. *ಅದೇ,* 688.
9. *ಅದೇ,* IV, 273, 278, 277.
10. *ಅದೇ,* IX ii, 534.
11. *ಅದೇ,* 543, 575.
12. *ಅದೇ,* IV, 277.
13. *ಅದೇ,* 274.
14. *ಅದೇ,* IX ii, 607.
15. *ಅದೇ,* IV, 273, 278.
16. *ಅದೇ,* IX ii, 653.
17. *ಅದೇ,* 653.
18. *ಅದೇ,* 616, 653, 670, 668.
19. *ಅದೇ,* IV, 272; IX ii, 678, 653.
20. *ಅದೇ,* IV, 273, 278.
21. ಅದೇ, IX ii, 635.
22. *ಅದೇ,* IV, 275; IX ii, 607.
23. *ಅದೇ,* IV, 273, 278.
24. *ಅದೇ,* IX ii, 678
25. *ಅದೇ,* IV, 273, 278.
26. *ಅದೇ,* IX ii, 653.
27. *ಅದೇ,* 668.
28. *ಅದೇ,* 616, 678, 653.

6. ಚಾಲುಕ್ಯ ಅರಸರ ಶಾಸನಗಳು ಮತ್ತು ಹಂಪೆ

ಸಿ.ಟಿ.ಎಂ. ಕೊಟ್ರಯ್ಯ

ಹಂಪೆಯು ಪ್ರಾಗೈತಿಹಾಸಿಕ ಕಾಲದಿಂದಲೆ ಜನವಸತಿಯನ್ನು ಆಕರ್ಷಿಸುವಂತಹ ಪರಿಸರ ಮತ್ತು ಅನುಕೂಲತೆಗಳನ್ನು ಹೊಂದಿದ್ದ ತಾಣವಾಗಿತ್ತಲ್ಲದೆ, ಪುರಾಣ ಹಾಗೂ ಪ್ರಾಚೀನ ಮಹಾ ಕಾವ್ಯಗಳ ಕಾಲದಲ್ಲಿಯೂ ಅದು ಒಂದು ಪ್ರಮುಖವಾದ ಧಾರ್ಮಿಕ ಹಾಗೂ ಪವಿತ್ರ ಕ್ಷೇತ್ರವಾಗಿ ರೂಪುಗೊಂಡು ಪ್ರಸಿದ್ಧಿಗೆ ಬರುವಲ್ಲಿ ಸಫಲವಾಯಿತೆಂಬ ವಿಷಯವು ಸ್ಕಾಂದ ಪುರಾಣಾಂತರ್ಗತವಾದ ಪಂಪಾಮಹಾತ್ಮೆ, ರಾಮಾಯಣದ ಕಿಷ್ಕಿಂಧಾ ಕಾಂಡ ಮುಂತಾದ ಪ್ರಾಚೀನ ಸಾಹಿತ್ಯಾಧಾರಗಳಿಂದ ವೇದ್ಯವಾಗುತ್ತದೆ.[1] ಅದೇ ಪ್ರವೃತ್ತಿಯು ಇತಿಹಾಸದ ಕಾಲದಲ್ಲಿಯೂ ಮುಂದುವರಿದು, ಕ್ರಿ.ಶ. 1-2ನೇ ಶತಮಾನಗಳಲ್ಲಿ ಬೌದ್ಧ ಧರ್ಮದವರ ಚಟುವಟಿಗೆಗಳ ಕೇಂದ್ರವಾಗಿದ್ದಿರಬೇಕೆಂಬ ವಿಷಯವು ಈಚೆಗೆ ಹಂಪೆಯಲ್ಲಿ ಪುರಾತತ್ವ ಉತ್ಖನನದ ಸಮಯಗಳಲ್ಲಿ ದೊರೆತ ಬ್ರಾಹ್ಮಿ ಲಿಪಿಯ ಶಿಲಾ ಲೇಖನಗಳು ಮತ್ತು ಶಿಲ್ಪಾಕೃತಿಗಳಿಂದ ದೃಢಪಟ್ಟಿರುತ್ತದೆ.[2] ತದನಂತರ, ಅಂದರೆ ಶೀಘ್ರದಲ್ಲಿಯೇ, ಹಿಂದೂ ಧರ್ಮವು ಹಂಪೆಯಲ್ಲಿ ಸ್ಥಿರವಾದ ನೆಲೆಯನ್ನು ಸ್ಥಾಪಿಸಿಕೊಳ್ಳುವಂತಾದುದಲ್ಲದೆ ಹೆಚ್ಚು ಪ್ರಭಾವಶಾಲಿಯಾಗಿ, ವಿವಿಧ ಧಾರ್ಮಿಕ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುವಂತಾಯಿತು. ಮತ್ತು ಹಿಂದು ಧರ್ಮಾನುಯಾಯಿಗಳಿಗೆ ಪವಿತ್ರವಾದ ತೀರ್ಥ ಕ್ಷೇತ್ರವೆಂದು ಪ್ರಸಿದ್ಧಿ ಹಾಗೂ ಜನಾದರಣೀಯತೆಯನ್ನು ಪಡೆದುಕೊಂಡಿತು. ಮುಖ್ಯವಾಗಿ ಅದು ಒಂದು ಶೈವ ಧರ್ಮದ ಪವಿತ್ರ ಕ್ಷೇತ್ರವಾಗಿ ವರ್ಧಿಸುತ್ತಾ ಮುನ್ನಡೆಯುತ್ತಿತ್ತು. ಅಲ್ಲದೆ ಭಕ್ತಿ ಪಂಥಗಳ ಪ್ರಭಾವ, ಕಾರ್ಯ ಚಟುವಟಿಕೆಗಳು ಮತ್ತು ಧಾರ್ಮಿಕ ಮುಖಂಡರ ಪ್ರಚಾರ ಕಾರ್ಯ ಮುಂತಾದ ಶಕ್ತಿಗಳ ಸಮನ್ವಯದಿಂದಾಗಿ, ಹಂಪೆಯು ಶೈಕ್ಷಣಿಕ ಕೇಂದ್ರವಾಗಿಯೂ ಪ್ರಾಮುಖ್ಯತೆಯನ್ನು ಪಡೆಯುವಲ್ಲಿ ಯಶಸ್ವಿಯಾಯಿತು. ಆ ಎಲ್ಲಾ ಬೆಳವಣಿಗೆಗಳಿಗೆ, ಪ್ರಜೆಗಳ ಆದರ, ಅಭಿಮಾನಗಳ ಜೊತೆಗೆ, ಆಳರಸರ ಮತ್ತು ಅವರ ಅಧಿಕಾರಿಗಳ ಉದಾರತೆ, ಸಹಾಯ, ಬೆಂಬಲಗಳೂ ಮುಖ್ಯ ಹಾಗೂ ಪ್ರಬಲ ಕಾರಣಗಳಾಗಿದ್ದವು. ಈ ಚಿಕ್ಕ ಲೇಖನದಲ್ಲಿ ಕರ್ನಾಟಕದ ಇತಿಹಾಸದಲ್ಲಿ, ಮಹತ್ವದ ಒಂದು ಅಧ್ಯಾಯವನ್ನೇ ನಿರ್ಮಿಸಲು ಕಾರಣರಾದ ಚಾಲುಕ್ಯ ವಂಶದ ಅರಸರು ಮತ್ತು ಅವರ ಅಧಿಕಾರಿಗಳು ಹಂಪೆಯ ಅಭಿವೃದ್ಧಿ, ಬೆಳವಣಿಗೆಗಳಿಗೆ ಸಲ್ಲಿಸಿದ ಪ್ರೋತ್ಸಾಹ, ಸಹಾಯ ಹಾಗೂ ದಾನ ಕಾರ್ಯಗಳ ವಿವರಗಳನ್ನು ಶಾಸನಾಧಾರಗಳಿಂದ ಪ್ರಸ್ತುತ ಪಡಿಸಲಾಗಿದೆ.

ಆ ದಿಸೆಯಲ್ಲಿ ಮೊದಲನೆಯ ಶಾಸನಾಧಾರವೆಂದರೆ, ಬಾದಾಮಿ ಚಾಲುಕ್ಯ ವಂಶದ ಅರಸ ವಿನಯಾದಿತ್ಯ-ಸತ್ಯಾಶ್ರಯನ ಆಳ್ವಿಕೆಯ ಕಾಲದಲ್ಲಿ (ಕ್ರಿ.ಶ. 681-696), ಆತನ ಮಂತ್ರಿ ಮತ್ತು ಸಂಧಿವಿಗ್ರಹಿಗಳಲ್ಲೊಬ್ಬನಾದ ರಾಮಪುಣ್ಯವಲ್ಲಭನೆಂಬವನಿಂದ ಕ್ರಿ.ಶ. 689ರಲ್ಲಿ ಹೊರಡಿಸಲಾದ ತಾಮ್ರ ಪತ್ರ ಶಾಸನವು.[3] ಅದು ಸಂಸ್ಕೃತ ಭಾಷೆಯಲ್ಲಿ ಬರೆಯಲ್ಪಟ್ಟಿರುವ ಲೇಖನವಾಗಿದೆ. ಅದನ್ನು ಹೊರಡಿಸಲಾದ ಸಮಯದಲ್ಲಿ ಅರಸನು ಪಂಪಾತೀರ್ಥದ ತಟದ ಮೇಲೆ, ಎಂದರೆ ಪಂಪಾಕ್ಷೇತ್ರದ ಹತ್ತಿರದಲ್ಲಿ, ತನ್ನ ಪಾಳಯದೊಂದಿಗೆ ಬೀಡು ಬಿಟ್ಟಿದ್ದನೆಂದು ಉಲ್ಲೇಖಿತವಾಗಿದೆ. ಮತ್ತು ತಾನು ಯುದ್ಧವೊಂದರಲ್ಲಿ ಜಯಗಳಿಸಿದ ನಂತರ ವಿಜಯೋತ್ಸಾಹವನ್ನು ಆಚರಿಸಲು ಅಲ್ಲಿ ಬೀಡು ಬಿಟ್ಟಿದ್ದನೆಂದು ತಿಳಿಸುತ್ತದೆ. ಹಾಗೆ ಸಾಧಿಸಿದ ವಿಜಯದಲ್ಲಿ, ಹಂಪೆಯ ವಲಯವೂ ಆತನಿಗೆ ಲಭ್ಯವಾಗಿದ್ದಿರಬೇಕೆಂದೂ ತರ್ಕಿಸಬಹುದು. ಆ ಶಾಸನವನ್ನು ಹೊರಡಿಸಬೇಕಾದ ಮುಖ್ಯ ಉದ್ದೇಶವು ಐದು ಹಳ್ಳಿಗಳಿಗೆ ಸಂಬಂಧಿಸಿದ ಹಲವು ತೆರಿಗೆಗಳ ವಿನಾಯಿತಿಯನ್ನು ಭೀಮಶರ್ಮನೆಂಬ ಬ್ರಾಹ್ಮಣ ಪಂಡಿತ-ವಿದ್ವಾಂಸನಿಗೆ ಮತ್ತು ಆತನ ಇಬ್ಬರು ಮಕ್ಕಳಿಗೆ ನೀಡುವುದಾಗಿತ್ತು. ಇಲ್ಲಿ ಗಮನಿಸಬೇಕಾದ ಮುಖ್ಯ ವಿಷಯವೆಂದರೆ, ಕ್ರಿ.ಶ. 7ನೇ ಶತಮಾನದಲ್ಲಿಯೇ ಪಂಪಾತೀರ್ಥವು, ಎಂದರೆ ಪಂಪಾಕ್ಷೇತ್ರವು ಅಥವಾ ವಿರೂಪಾಕ್ಷ ತೀರ್ಥವು ಆಳರಸರನ್ನು ಮತ್ತು ಅವರ ಅಧಿಕಾರಿಗಳನ್ನು ಆಕರ್ಷಿಸುವಂತಹ ಪ್ರಸಿದ್ಧವಾದ ಧಾರ್ಮಿಕ ಹಾಗೂ ಪವಿತ್ರ ಯಾತ್ರಾ ನೆಲೆಯಾಗಿತ್ತೆಂಬುದು. ಇಲ್ಲಿ ಪಂಪಾತೀರ್ಥ ಮತ್ತು ವಿರೂಪಾಕ್ಷ ತೀರ್ಥವು ಬೇರಲ್ಲವೆಂಬ ಅಂಶವನ್ನು ಕ್ರಿ.ಶ. 1199ರಲ್ಲಿ ಹೊರಡಿಸಲಾದ ಕುರುಗೋಡ ಸಿಂದ ವಂಶದ ಇಮ್ಮಡಿ ರಾಚಮಲ್ಲನ ಕಾಲದ ಶಾಸನದ ಮೂಲ ಒಕ್ಕಣೆಯಿಂದ ತಿಳಿದು ಬರುತ್ತದೆ.[4] ಹಾಗಾಗಿ, ಮೇಲಿನ ಶಾಸನದ ಆ 'ಪಂಪಾತೀರ್ಥ'ವೇ ಹಂಪೆಯನ್ನು ಕುರಿತಾಗಿ ಉಲ್ಲೇಖಿತವಾಗಿದೆ ಎಂಬುದರಲ್ಲಿ ಸಂಶಯವೇ ಇರುವುದಿಲ್ಲ.

ಅಂತಹ ಪವಿತ್ರ ಕ್ಷೇತ್ರಗಳಲ್ಲಿ ಪ್ರಚಲಿತದಲ್ಲಿದ್ದ ಪದ್ಧತಿಗಳಿಗನುಗುಣವಾಗಿ, ದೇವಮಂದಿರಗಳು ಅಸ್ತಿತ್ವದಲ್ಲಿರುತ್ತಿದ್ದವು ಮತ್ತು ಆ ದೇವ ಮಂದಿರಗಳ ಜೊತೆಯಲ್ಲಿ ಧಾರ್ಮಿಕ ಸತ್ಪುರುಷರ ಮೇಲ್ವಿಚಾರಣೆಯಲ್ಲಿ, ಗುರುಕುಲಗಳು, ಆಶ್ರಮಗಳು ಅಥವಾ ಮಠಗಳು, ಶೈಕ್ಷಣಿಕ ಕಾರ್ಯಗಳಲ್ಲಿ ನಿರತವಾಗಿರುತ್ತಿದ್ದವು. ಈ ಶಾಸನದಲ್ಲಿ ಹೆಚ್ಚಿನ ವಿವರಣೆಗಳಿಲ್ಲವಾದರೂ, ಬಹು ಮುಖ್ಯ ಪ್ರತಿಭೆಯ ವಿದ್ವಾಂಸನಾದ ಭೀಮಶರ್ಮನಿಗೆ ಐದು ಹಳ್ಳಿಗಳ ದಾನ ಕೊಟ್ಟಿರುವುದರಿಂದ ಮೇಲಿನ ವಿಷಯವು ದೃಢವಾಗುತ್ತದೆ. ಹಾಗಾಗಿ ಈ ಶಾಸನದ ಸಮಯಕ್ಕಾಗಲೇ, ಹಂಪೆಯಲ್ಲಿ ಕೆಲವು ದೇವ ಮಂದಿರಗಳು ಅಸ್ತಿತ್ವದಲ್ಲಿ ಇದ್ದುವೆಂದು ಹೇಳಬಹುದು. ಈಗಲೂ, ಹಂಪೆಯಲ್ಲಿ ಮನ್ಮಥ ಹೊಂಡದ ಪಶ್ಚಿಮ ದಡದ ಮೇಲೆ ಕಾಣಬರುವ ಸರಳ ಶೈಲಿಯ ಕೆಲವು ಮರಳು ಕಲ್ಲಿನ ದೇವಾಲಯಗಳಿಂದ ಆ ವಿಷಯವು ವೇದ್ಯವಾಗುತ್ತದೆ. ಆ ಕಾರಣದಿಂದಾಗಿ ಹಂಪೆಯ ವಿರೂಪಾಕ್ಷ ದೇವಾಲಯವೂ ಸಹ ಆ ಕಾಲಕ್ಕಾಗಲೆ ಒಂದು ಚಿಕ್ಕ ಹಾಗೂ ಸರಳ ಮಂದಿರವಾಗಿ ಅಸ್ತಿತ್ವದಲ್ಲಿದ್ದಿರಬೇಕೆಂದು ತರ್ಕಿಸಬಹುದು. ಆದರೆ, ಅದು ಹಂಪೆಯ ಪ್ರಧಾನ ದೇವಾಲಯವಾಗಿದ್ದುದರಿಂದ, ಕಾಲಕಾಲಕ್ಕೆ ಮಾರ್ಪಾಟುಗಳನ್ನು ಹೊಂದಿತು, ವಿಶೇಷವಾಗಿ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ. ಹಾಗಾಗಿ ಪೂರ್ವದ ವಾಸ್ತು ವೈಶಿಷ್ಟ್ಯಗಳಾವುವೂ ಈಗ ಕಾಣಬರುತ್ತಿಲ್ಲ ಮತ್ತು ಈಗ ಕಾಣಬರುವ ಪ್ರಮಾಣದಲ್ಲಿ ನಿಶ್ಚಿತವಾಗಿಯೂ ಇರಲಿಲ್ಲ.

ತದನಂತರ, ಹಂಪೆಯನ್ನು ಕುರಿತು ಉಲ್ಲೇಖಗಳನ್ನೊಳಗೊಂಡ ಶಾಸನಗಳೆಂದರೆ, ಕಲ್ಯಾಣ ಚಾಲುಕ್ಯ ಅರಸರ ಆಳ್ವಿಕೆಯ ಕಾಲದವುಗಳಾಗಿವೆ. ಆದರೂ, ಹಂಪೆಯು, ಪರಿಸರದ ಜೌನ್ನತ್ಯದ ಕಾರಣದಿಂದಾಗಿ, ತನ್ನದೇ ಆದ ಧಾರ್ಮಿಕ ಚಟುವಟಿಕೆಗಳಲ್ಲಿ ನಿರಂತರವಾಗಿ ಮುಂದುವರೆಯುತ್ತಿದ್ದಿತೆಂದು ಹೇಳಬಹುದು. ಈ ಕಲ್ಯಾಣ ಚಾಲುಕ್ಯ ಅರಸರ ಶಾಸನಗಳಲ್ಲಿ ಹಂಪೆಗೆ ಸಂಬಂಧಿಸಿದಂತೆ, ಮೊದಲನೆಯದು ಕ್ರಿ.ಶ. 988ರಲ್ಲಿ ಹೊರಡಿಸಲಾದ ಕನ್ನಡ ಶಿಲಾಶಾಸನವಾಗಿದೆ.[5] ಅದು ತುಂಗಭದ್ರಾ ನದಿಯ ಉತ್ತರ ದಡದ ಮೇಲಿರುವ ಪಂಪಾಸರಸ್ಸಿನ, ಅಥವಾ ಪಂಪಾಸರೋವರದ ದಂಡೆಯ ಮೇಲೆ ಕಾಣಬರುತ್ತದೆ. ಅದು '. . . . . ಮಣ್ಣಮಯ್ಯ' ನೆಂಬ ಹೆಸರಿನ ಮಹಾಮಾತ್ಯನಿಗೆ, ಅರಸು ಅಹವಮಲ್ಲನಿಂದ ಕೆಲವೊಂದು ಭೂದಾನವನ್ನು ಕೊಟ್ಟ ವಿವರಗಳನ್ನು ತಿಳಿಸುತ್ತದೆ. ಹೆಚ್ಚಿನ ವಿವರಗಳು ಅಳಿಸಿಹೋಗಿವೆಯಾದರೂ, ಆ ಸ್ಥಳವನ್ನು ತುಂಗಭದ್ರೆಯ ತೆಂಕಣ ತಡಿಯ ಹಂಪೆಯೆಂದು ನೇರವಾಗಿ ಉಲ್ಲೇಖಿಸಿರುವುದನ್ನು ಗಮನಿಸಬಹುದು. ಈ ಉದಾಹರಣೆಯಲ್ಲಿಯೂ, '. . . . ಚಾಲುಕ್ಯಾಭರಣ ಶ್ರೀ ಮದಾಹವಮಲ್ಲದೇವರು ತುಂಗಭದ್ರೆಯ ತೆಂಕಣ ತಡಿಯ ಹಂಪೆಯ ಬೀಡಿನಲು . . . .' ತಂಗಿದ್ದಾಗ ಕೆಲವು ದಾನಗಳನ್ನು ಮಾಡಿದಂತೆ ತಿಳಿಯುತ್ತದೆ. ಇಲ್ಲಿಯೂ ಕೂಡ, ಹಂಪೆಯು ಪವಿತ್ರ ಕ್ಷೇತ್ರವೆಂದು ಪ್ರಸಿದ್ಧಿಯಾಗಿದ್ದುದರಿಂದ ಅರಸನು ಅಲ್ಲಿಗೆ ಬಂದು, ದಾನಕಾರ್ಯವನ್ನು ನೆರವೇರಿಸುತ್ತಾನೆ.

ಹಂಪೆಗೆ ಸಮೀಪದಲ್ಲಿ, ಗೋನಾಳು ಎಂಬ ಗ್ರಾಮದಲ್ಲಿ ದೊರೆತ ಕ್ರಿ.ಶ. 1013ರ ಕನ್ನಡ ಶಿಲಾಶಾಸನದ ಪ್ರಕಾರ, 'ಹಂಪೆಯ ಮಹಾಕಾಳ' ಎಂಬ ದೇವರಿಗೆ, ಇರಿವ ನೊಳಂಬಾಧಿರಾಜನ ಅರಸಿ ವೃದ್ಧಿಮಬ್ಬರಸಿ ಎಂಬವಳು ಕೆಲವೊಂದು ತೆರಿಗೆ (ಪನ್ನಾಸ)ಗಳನ್ನು ದಾನವಾಗಿ ಕೊಟ್ಟದನ್ನು ತಿಳಿಸುತ್ತದೆ. ಆಗ, ಚಾಲುಕ್ಯರ ಐದನೇ ವಿಕ್ರಮಾದಿತ್ಯ (ಕ್ರಿ.ಶ. 1008-15) ನ ರಾಜ್ಯಭಾರದ ಕಾಲ ಮತ್ತು ಮೇಲೆ ಹೇಳಿದ ನೊಳಂಬಾಧಿರಾಜನು ಅವನ ಸಾಮಂತರಲ್ಲೊಬ್ಬನಾಗಿದ್ದನು. ಈ ಶಾಸನದ ಬರಹವೂ ಸಹ ಬಹಳವಾಗಿ ಹಾನಿಗೊಳಗಾಗಿರುವುದರಿಂದ, ಹೆಚ್ಚಿನ ವಿವರಗಳು ಲಭ್ಯವಿರುವುದಿಲ್ಲ. ಆದರೆ, ಹಂಪೆಯಲ್ಲಿ ಮಹಾಕಾಳ (ಶಿವ)ನ ದೇವಮಂದಿರವಿದ್ದುದಾಗಿ ನೇರವಾಗಿ ತಿಳಿಸುತ್ತದೆಯಲ್ಲದೆ, ಅಲ್ಲಿಯ ದೇವ ಮಂದಿರಗಳು, ಆಳರಸರ ಧನ ಸಹಾಯ ಮತ್ತು ಅಭಿಮಾನಗಳಿಗೆ ಪಾತ್ರವಾಗಿದ್ದುವೆಂದು ವೇದ್ಯವಾಗುತ್ತದೆ.

ಮೇಲಿನ ಉದಾಹರಣೆಗಳ ನಂತರದ ಶಾಸನಾಧಾರವೆಂದರೆ ಕ್ರಿ.ಶ. 1018ರಲ್ಲಿ ಹೊರಡಿಸಲಾದುದಾಗಿದೆ. ಅದು ಕಲ್ಯಾಣ ಚಾಲುಕ್ಯ ವಂಶದ ಎರಡನೇ ಜಗದೇಕಮಲ್ಲ ಜಯಸಿಂಹದೇವನ (ಕ್ರಿ.ಶ. 1015-1042) ಸಾಮಂತನಾಗಿದ್ದು, ಕಂಪುಲಿ (ಕಂಪಲಿ) ಎಂಬ ಊರಿನಲ್ಲಿ ಅಧಿಕಾರಿಯಾಗಿದ್ದ ಉದಯಾದಿತ್ಯನ ಹೆಸರನ್ನು ಸೂಚಿಸುತ್ತದೆ. ಅದರಲ್ಲಿಯ ವಿವರಗಳ ಪ್ರಕಾರ, ಉದಯಾದಿತ್ಯನು ಮೇಲೆ ಹೇಳಿದ ವರ್ಷದಲ್ಲಿ ಪವಿತ್ರ ಶೈವ ಕ್ಷೇತ್ರವಾಗಿದ್ದ ಹಂಪೆಯನ್ನು ಸಂದರ್ಶಿಸಿದನು. ಮತ್ತು ಆ 'ಉದಯಾದಿತ್ಯ ದೇವರ್ ಪಂಪಾಪುರದ ತೀರ್ಥಕ್ಕೆ ಬಿಜಯಂಗೆಯ್ದು ತತ್ಕಾಲದೊಳ ಬಾಳ್ಗುಳಿಯ ಕಲಿದೇವ ಸ್ವಾಮಿಗೆ . . . . ಸೀಮೆಯಿಂದೊಳಗುಳ್ಳ ಭೂಮಿಯಂ ನಿವೇದ್ಯಕ್ಕಂ, ನಂದಾದೀವಿಗೆಗಂ ತಪೋಧನ ಸತ್ರಕ್ಕಂ, ಪನ್ನಿರ್ವರ್ ಸೂಳೆಯರ್ಗಂ . . . . ಛಾತ್ರ ಭೋಜನಕ್ಕ ಸಮಕಟ್ಟಿ . . . . ಸರ್ವನಮಸ್ಯೆಮಾಗಿ

ಕುಡೆ . . . . .'[7] ಎಂದು ವಿವರಿಸಲಾಗಿದೆ. ಎಂದರೆ ಬಾಳ್ಗುಳಿ (ಈಗಿನ ಹರಪನಹಳ್ಳಿ ತಾಲೂಕಿನಲ್ಲಿರುವ ಬಾಗಳಿ) ಎಂಬ ಊರಿನ ಕಲಿದೇವಸ್ವಾಮಿಯ (ಶಿವ) ದೇವಾಲಯಕ್ಕೆ ಹಲವು ದತ್ತಿಗಳನ್ನು ಕೊಟ್ಟನು. ಅವುಗಳನ್ನು ತನ್ನ ಅಧಿಕಾರಿ, ಪೆರ್ಗಡೆ ನರಸಿಂಗಯನೆಂಬವನ ಮೂಲಕ ಕೊಡಮಾಡಿಸಿದನು. ಈ ಶಾಸನದಲ್ಲಿ ಹಂಪೆಯನ್ನು 'ಪಂಪಾಪುರ' ವೆಂದು ಕರೆಯಲಾಗಿರುವುದು ಒಂದು ವಿಶೇಷ. 'ಉದಯಾದಿತ್ಯನು ತುಂಗಭದ್ರೆಯ ತಡಿಯ ಕಂಪುಲಿ ಬೀಡಿನೊಳಿಳ್ದು . . . . ರಾಜ್ಯಂಗೆಯ್ಯುತ್ತಿರೆ'' ಪಂಪಾಪುರದ ತೀರ್ಥಕ್ಕೆ ಬಹುಶಃ ಯಾತ್ರಿಕನಾಗಿ ಹೋಗಿರಬೇಕು. ಆ ಸಮಯಕ್ಕಾಗಲೇ ಪಂಪಾತೀರ್ಥವು (ಹಂಪೆಯು) ಪವಿತ್ರ ಕ್ಷೇತ್ರವೆಂದು ಬಹು ವಿಸ್ತಾರವನ್ನು ಹೊಂದಿ ಪ್ರಸಿದ್ಧಿಯಾಗಿರಬೇಕು. ಮತ್ತೊಂದು ಕಾರಣವೆಂದರೆ, ದೂರದ ಬಾಳ್ಗುಳಿಯ ದೇವಸ್ಥಾನಕ್ಕೆ ಕೊಡಬೇಕಾಗಿದ್ದ ದಾನ ಕಾರ್ಯವನ್ನು ಬಹುವಾಗಿ ಪವಿತ್ರವೆಂದು ಪರಿಗಣಿಸಲಾಗಿದ್ದು ಹಂಪೆಯಿಂದ ನೆರವೇರಿಸಲಾಯಿತು. ಹಾಗೆ ಮಾಡುವುದರಿಂದ, ಆ ಕಾರ್ಯಕ್ಕೆ ಹೆಚ್ಚಾದ ಪಾವಿತ್ರತೆ ಹಾಗೂ ಪರಿಶುದ್ಧತೆಗಳು ಉಂಟಾಗುತ್ತವೆಂದು ಪರಿಗಣಿಸಿರಲು ಸಾಕು. ಇದೇ ಧೋರಣೆಯು ಮುಂದುವರಿದು ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ವಿಪುಲವಾಗಿ ಆಚರಣೆಯಲ್ಲಿತ್ತೆಂಬ ವಿಷಯವು ಅನೇಕ ಶಾಸನಗಳಿಂದ ತಿಳಿದುಬರುತ್ತದೆ. ಅಂತಹ ಸಂದರ್ಭಗಳಲ್ಲಿ ನಮೂದಿಸಲಾದ ಪದ ವಿನ್ಯಾಸಗಳೆಂದರೆ 'ವಿರೂಪಾಕ್ಷನ ಸನ್ನಿಧಿಯೊಳ್' 'ವಿಠಲಸ್ವಾಮಿಯ ಸನ್ನಿಧಿಯೊಳ್' ಎಂದು ಮುಂತಾಗಿ.

ಈಚೆಗೆ ಹಂಪೆಯಲ್ಲಿ ನಡೆಸಲಾದ ಪುರಾತತ್ವ ಉತ್ಖನನದ ಸಮಯದಲ್ಲಿ ದೊರೆತ ಒಂದು ಶಿಲಾಶಾಸನದ ಆಧಾರದಿಂದ ಹೇಳುವುದಾದರೆ, ಕ್ರಿ.ಶ. 11ನೇ ಶತಮಾನದಲ್ಲಿ ಹಂಪೆಯು ಬಹು ಪ್ರಮುಖ ಸ್ಥಾನವನ್ನು ಪಡೆದಿದ್ದಿತೆಂಬುದು. ಅದರಲ್ಲಿ ಕಾಣಬರುವ ವಿವರಗಳು ಹೀಗಿವೆ: ಹಂಪೆಯ ಪ್ರಾಂತವು ಬಹು ಪ್ರಸಿದ್ಧಿಯಾಗಿದ್ದು ಕಲ್ಯಾಣದ ಚಾಲುಕ್ಯರ ಆರನೇ ವಿಕ್ರಮಾದಿತ್ಯನ (ಕ್ರಿ.ಶ. 1076-1126) ಸಾಮ್ರಾಜ್ಯದ ಒಂದು ಭಾಗವಾಗಿದ್ದು, ಆತನ ಮಂತ್ರಿಗಳಲ್ಲೊಬ್ಬನಾಗಿದ್ದ ಮಹಾಪ್ರಧಾನ, ದಂಡನಾಯಕ ಸೋಮೇಶ್ವರ ಭಟ್ಟೋಪಾಧ್ಯಾಯನ ಆಡಳಿತ ವ್ಯಾಪ್ತಿಗೆ ಒಳಪಟ್ಟಿತ್ತು. ಆ ಶಾಸನವನ್ನು ಕ್ರಿ.ಶ. 1076ರಲ್ಲಿ ನಳ ಸಂವತ್ಸರದಲ್ಲಿ ಹೊರಡಿಸಲಾಗಿದೆ.[8] ಅದರ ಉದ್ದೇಶವು, ಹಂಪೆಯಲ್ಲಿ ಅಸ್ತಿತ್ವದಲ್ಲಿದ್ದ ಒಂದು ಮಠದಲ್ಲಿ (ಶಾಸನವು ಬಹಳ ಸವೆದಿರುವುದರಿಂದ ಆ ಮಠದ ಹೆಸರು ತಿಳಿದು ಬರುತ್ತಿಲ್ಲ) ಪುರಾಣದ ವ್ಯಾಖ್ಯಾನ ಮಾಡುತ್ತಲಿದ್ದ ಬ್ರಾಹ್ಮಣ ಉಪಾಧ್ಯಾಯರಿಗೆ 80 ಲೊಕ್ಕಿ ಗದ್ಯಾಣಗಳ ಲೆಕ್ಕದಲ್ಲಿ ಪ್ರತಿವರ್ಷವೂ ನಡೆಯುವಂತೆ ದಾನ ಕೊಡುವಂತಹುದಾಗಿದೆ. ಆ ಶಾಸನದ ಸಮಯದಲ್ಲಿ ಹಂಪೆಯು ಶಿಕ್ಷಣಕ್ಕೆ ಸಂಬಂಧಿಸಿದ ಸಂಸ್ಥೆಗಳಿಗೆ, ಕಾರ್ಯಗಳಿಗೆ, ವಿದ್ವಾಂಸರಿಗೆ, ರಾಜಪ್ರೋತ್ಸಾಹಕ್ಕೆ ಹೆಸರಾದ ತಾಣವಾಗಿತ್ತೆಂದು ಈ ಶಾಸನದಿಂದ ಖಚಿತವಾಗಿ ತಿಳಿಯುತ್ತದೆ. ಅವುಗಳ ಜೊತೆಯಲ್ಲಿಯೇ ಧಾರ್ಮಿಕ ಸಂಸ್ಥೆಗಳೂ ಇದ್ದು ಧಾರ್ಮಿಕ ಕಾರ್ಯಗಳೂ ಜರುಗುತ್ತಿದ್ದುವು ಎಂಬ ವಿಷಯವು ಸರ್ವವಿದಿತ. ಮೇಲಿನ ಉದಾಹರಣೆಯಿಂದ ಅಂತಹ ಧಾರ್ಮಿಕ, ಶೈಕ್ಷಣಿಕ ಸಂಸ್ಥೆಗಳು ಮತ್ತು ಚಟುವಟಿಕೆಗಳು ಆ ಸಮಯಕ್ಕಿಂತಲೂ ಪೂರ್ವದಲ್ಲಿಯೇ ಶತಮಾನಗಳಷ್ಟು ಮೊದಲೇ ಇದ್ದಿರಬೇಕೆಂದೂ ತರ್ಕಿಸಬಹುದು.

ಮೇಲಿನ ವಿಷಯವನ್ನು ಸಮರ್ಥಿಸುವ ಇನ್ನೂ ಕೆಲವು ಶಾಸನಾಧಾರಗಳನ್ನು ಈಗ ಪರಿಶೀಲಿಸಬಹುದು. ಅದೇ ದಂಡನಾಯಕ ಸೋಮೇಶ್ವರ ಭಟ್ಟೋಪಾಧ್ಯಾಯನು ಕ್ರಿ.ಶ. 1088ರಲ್ಲಿ ಇನ್ನೊಂದು ಭೂದಾನ ಶಾಸನವನ್ನು ಅಂತಹುದೇ ಉದ್ದೇಶಗಳಿಗಾಗಿ ಹೊರಡಿಸಿದನು.[9] ಅದು ಹಂಪೆಯಿಂದ ಸುಮಾರು 15 ಕಿ.ಮೀ. ದೂರದಲ್ಲಿರುವ ಪುಲಿಗೆ (ವ್ಯಾಘ್ರ ಗ್ರಾಮ) ಎಂಬ ಊರಿಗೆ (ಈಗ ಅದನ್ನು ಹುಲಿಗೆ ಅಥವಾ ಮುನಿರಾಬಾದು ಎಂಬ ಹೆಸರುಗಳಿಂದ ಕರೆಯಲಾಗುತ್ತದೆ) ಸಂಬಂಧಿಸಿದುದಾಗಿದೆ. ಅಲ್ಲದೆ, ಇದೇ ಪ್ರಾಂತದ ಗದಗ ಮತ್ತು ಕುಡತಿನಿ ಎಂಬ ಊರುಗಳಲ್ಲಿ ದೊರೆತಿರುವ ಶಾಸನಗಳಲ್ಲಿ, ಆ ಸೋಮೇಶ್ವರನನ್ನು ದಂಡನಾಯಕ, ರಾಜಕೀಯ ಮುತ್ಸದ್ದಿ ಮತ್ತು ವಿದ್ವಾಂಸನೆಂದು ಗುರುತಿಸಲಾಗಿದೆ. ಅವು ಕ್ರಿ.ಶ. 1098ರಲ್ಲಿ ಹೊರಡಿಸಲಾದ ಶಾಸನಗಳಾಗಿದ್ದು, ಅವುಗಳಲ್ಲಿ ಸೋಮೇಶ್ವರ ದಂಡನಾಯಕನ ಗುಣಾವಳಿಗಳನ್ನು ಬಣ್ಣಿಸುವ ಪಾಠಾಂತರವು '. . . . ಋಗ್ವೇದಿರತ್ನಾಕರ, ಅಷ್ಟಾದಶ ಧರ್ಮಶಾಸ್ತ್ರ ಕಲ್ಪವೃಕ್ಷ . . . . ಮನುಮಾರ್ಗ ಚರಿತ, ಪಂಡಿತ ಪಾರಿಜಾತ . . . .' ಎಂದು ಹೇಳಲಾಗಿದೆ.[10] ಮತ್ತು ಆತನು ವಿದ್ಯಾ ಇಲಾಖೆಯ ಮುಖ್ಯಸ್ಥನಾಗಿದ್ದನೆಂದು ಉಲ್ಲೇಖಿಸಲಾಗಿದೆ.[11] ಇದೇ ರೀತಿ, ಮುಖ್ಯವಾಗಿ ಹಂಪೆಯಲ್ಲಿ ಮತ್ತು ಅದರ ಸುತ್ತ ಮುತ್ತ ಅಂತಹ ಸಂಸ್ಥೆಗಳು ಕೊಳಗಲ್ಲು, ಕೋಳೂರು, ಕುರುಗೋಡುಗಳಲ್ಲಿ ಶೈಕ್ಷಣಿಕ ಕಾರ್ಯಗಳಲ್ಲಿ ನಿರತವಾಗಿದ್ದಿರಬೇಕು.[12]

ಹೀಗೆ ಹಂಪೆಯು ಆರಂಭದಿಂದಲೆ ಒಂದು ಧಾರ್ಮಿಕ ಹಾಗೂ ಶೈಕ್ಷಣಿಕ ಕೇಂದ್ರವಾಗಿ ಆಳರಸರ, ಅವರ ಅಧಿಕಾರಿಗಳ, ಮತ್ತು ಗಣ್ಯ ವಿದ್ವಾಂಸರ ಗಮನ ಮತ್ತು ಆಸಕ್ತಿಗಳನ್ನು ತನ್ನೆಡೆಗೆ ಸೆಳೆಯುತ್ತಾ ಅವರಿಂದ ಧನ ಸಹಾಯ, ಭೂದಾನ, ಮನ್ನಣೆ ಮತ್ತು ಪ್ರೋತ್ಸಾಹಗಳನ್ನು ಪಡೆಯುತ್ತಾ ಅವಿರತವಾಗಿ ಮುನ್ನಡೆಯುತ್ತಿತ್ತು. ಇದು ಒಂದು ಸರಿ ಪ್ರಮಾಣದಲ್ಲಿ ಚಾಲುಕ್ಯ ಅರಸರ ಕಾಲದಲ್ಲಿ ನಡೆಯಿತೆಂಬುದು ಮೇಲಿನ ದಾಖಲೆಗಳಿಂದ ದೃಢಪಟ್ಟಂತಾಯಿತು.

ಮೇಲೆ ವಿವರಿಸಿದ ಎಲ್ಲ ಕಾರಣಗಳಿಂದಾಗಿ ಕ್ರಿ.ಶ. 11ನೆಯ ಶತಮಾನದ ಉತ್ತರಾರ್ಧದ ಸಮಯಕ್ಕೆ ಹಂಪೆಯು ಸರಿ ಪ್ರಮಾಣದ ಜನವಸತಿಯಿಂದ, ಧಾರ್ಮಿಕ ಮತ್ತು ಶೈಕ್ಷಣಿಕ ಸಂಸ್ಥೆಗಳಿಂದ, ವಿದ್ವಜ್ಜನರಿಂದ ಕೂಡಿದ್ದು, ಪ್ರಮುಖ ಅಧಿಕಾರಿಗಳ ಮತ್ತಿತರರ ವಿವಿಧ ಕಾರ್ಯ ಚಟುವಟಿಕೆಗಳಿಂದಾಗಿ ಪರಿಣಾಮಕಾರಿಯಾಗಿ ರೂಪುಗೊಳ್ಳುತ್ತಿದ್ದ ಹೆಸರಾಂತ ಪವಿತ್ರ ಸ್ಥಳವಾಗಿತ್ತು. ಮತ್ತು ಒಂದು ಮಿತ ಪ್ರಮಾಣದಲ್ಲಿ ಆ ಸಮಯಕ್ಕಾಗಲೇ ಶೈವ/ವೀರಶೈವ ಧರ್ಮದ ಅನುಯಾಯಿಗಳ ಕಾರ್ಯಕ್ಷೇತ್ರವೂ ಆಗಿದ್ದಿರಬೇಕು. ಏಕೆಂದರೆ, ನಂತರದ ಶತಮಾನದಲ್ಲಿ ಅದೇ ಕ್ಷೇತ್ರವು ಶರಣಕವಿ ಹರಿಹರದೇವ, ರಾಘವಾಂಕ, ಅವರ ಸಂಗಡಿಗರು ಮತ್ತು ಅವರ ಅನುಯಾಯಿಗಳ ತೀವ್ರತರವಾದ ತಟುವಟಿಕೆಗಳ ಕೇಂದ್ರವಾಗಿ ಬಹು ಪ್ರಸಿದ್ಧಿಗೆ ಬಂದಿತೆಂಬುದೂ ಮುಂದೆ ತಿಳಿಯುತ್ತದೆ. ಹರಿಹರದೇವನ ಸಮಯಕ್ಕೆ ಹಂಪೆಯ ವಿರುಪಾಕ್ಷಸ್ವಾಮಿ ದೇವಾಲಯವು ಬಹು ಪ್ರಮುಖವಾದ, ಪ್ರಖ್ಯಾತವಾದ ದೇವ ಮಂದಿರವೆಂದು ಜನಜನಿತವಾಗಿತ್ತು. ಹಾಗಾಗಿ ಮುಂದೆ 14ನೇ ಶತಮಾನದಲ್ಲಿ ಇದೇ ನಿವೇಶನದಲ್ಲಿ ವಿಜಯನಗರ ಪಟ್ಟಣ ಮತ್ತು ಅದರ ಸಾಮ್ರಾಜ್ಯದ ಸಂಸ್ಥಾಪನೆಗೆ ಪ್ರೋತ್ಸಾಹದಾಯಕವಾದ ಭೂಮಿಕೆಯು ಅರಿವಿಲ್ಲದಯೇ ರೂಪು ತಳೆಯುತ್ತಿತ್ತೆಂದು ಒಂದು ಅರ್ಥದಲ್ಲಿ ಹೇಳಬಹುದು.

ಟಿಪ್ಪಣಿಗಳು

1. *ಸ್ಕಂದ ಪುರಾಣ,* ಚಾಮರಾಜೇಂದ್ರ ಗ್ರಂಥಮಾಲೆ, ಸಂ. 14, ಮೈಸೂರು; ಮಖನ್‌ಲಾಲ್‌ಸೇನ್ (ಸಂ.), *ರಾಮಾಯಣ* (ಭಾಷಾಂತರ), ಕಲ್ಕತ್ತ, ಪು. 484-492.
2. *ಜಎಸೊಇಂ,* VII, ಪು. 8-11.
3. ಫ್ಲೀಟ್ ಜೆ.ಎಫ್, *ಇಂಎಂ,* VI, ಪು. 85-88.
4. *ಸೌಇಂಇ,* IV, ಸಂ. 260.
5. ಪಾಟೀಲ ಚನ್ನಬಸಪ್ಪ ಎಸ್. ಮತ್ತು ವಿನೋದಾ ಪಾಟೀಲ, 1996, *ವಿಜಯನಗರದ (ಹಂಪೆಯ) ಶಾಸನಗಳು,* ಮೈಸೂರು, ಸಂ. 45, ಪು. 13; *ಕ್ವಾಜಮಿಸೊ,* VII, ಸಂ. 1.
6. *ಆರಿಸೌಇಂಇ,* 1923, ಸಂ. ಬಿ 722, ಪು. 50.
7. *ಸೌಇಂಇ,* IX i, ಸಂ. 80, ಪು. 50-52.
8. *ಆರಿಇಂಎ,* 1975-76, ಸಂ. ಬಿ 95; *ಇಂಆರಿ,* 1975-76, ಪು. 20, 62; *ಜಎಸೊಇಂ,* X, ಪು. 63-66.
9. *ಆರಿಇಂಎ,* 1959-60, ಸಂ. ಬಿ 483, ಪು. 97.
10. *ಎಇಂ,* XV, ಪು. 348; *ಸೌಇಂಇ,* IX i, ಸಂ. 164, ಪು. 348-363.
11. ಹಿರೇಮಠ ಚನ್ನಬಸವಯ್ಯ, 1995, *ಕುರುಗೋಡು ಸಿಂದರು,* ಕೊಪ್ಪಳ, ಪು. 197.
12. *ಅದೇ.*

7. ಆನೆಗೊಂದಿ ತಾಮ್ರಪಟ ಶಾಸನ: ಒಂದು ಮರುನೋಟ

ಶ್ರೀನಿವಾಸ ವಿ. ಪಾಡಿಗಾರ

ವಿಜಯನಗರ ಸಂಶೋಧನ ಪ್ರಗತಿ 1987-88ರ ವರದಿಯಲ್ಲಿ ಸಿ.ಎಸ್.ಪಾಟೀಲರು ಪ್ರಕಟಿಸಿರುವ ಆನೆಗೊಂದಿ ತಾಮ್ರಪಟ ಶಾಸನ ನಿಜಕ್ಕೂ ಒಂದು ಅಪರೂಪದ, ಗಮನಾರ್ಹ ಶಾಸನ.[1] ಕ್ರಿ.ಶ. 13ನೇ ಶತಮಾನದ್ದಿರಬಹುದಾದ ಈ ಶಾಸನ ಐತಿಹಾಸಿಕ ವಿವರಗಳನ್ನೊಳಗೊಂಡ ಶಾಸನವಲ್ಲ. ಶಿವ-ಪಾರ್ವತೀ ಕಲ್ಯಾಣ ಮತ್ತು ದೇವಾಸುರರಿಂದ ಅಮೃತ ಮಥನ ಎಂಬ ಪೌರಾಣಿಕ ಕಥಾವಸ್ತುಗಳನ್ನು ಬಳಸಿ ರಚಿತವಾದ "ವಿವಾಹ ಪುರಾಣ", "ಅಮೃತ ಮಥನ ಪುರಾಣ" ಎಂಬೆರಡು ಕನ್ನಡ ಕಿರುಕಾವ್ಯಗಳಿದರಲ್ಲಿವೆ. "ವಿವಾಹ ಪುರಾಣ" ಕಥಾವಸ್ತುವುಳ್ಳ ಸುಮಾರು ಇದೇ ಕಾಲದ ಶಿಲಾಶಾಸನವೊಂದು ಸೊಲ್ಲಾಪುರದಲ್ಲಿ ದೊರೆತಿರುವುದನ್ನು ಶ್ರೀನಿವಾಸ ರಿತ್ತಿಯವರು ಈ ಮುಂಚೆ ಪ್ರಕಟಿಸಿದ್ದಾರೆ.[2] ಆದರೆ ಈ ಉಭಯಶಾಸನಗಳೂ "ಶಿಲೆಯ ಮೇಲೊಂದು ಕಾವ್ಯ", "ತಾಮ್ರಪಟಗಳಲ್ಲೊಂದು ಕಾವ್ಯ" ಎಂಬಂತೆ ಮಾತ್ರ ಪರಿಚಯಿಸಲ್ಪಟ್ಟಿವೆಯೇ ಹೊರತು ಅವುಗಳ ನಿಜವಾದ ಆಂತರ್ಯ, ನೆಪ, ಧ್ಯೇಯೋದ್ದೇಶ, ಅಭಿಪ್ರಾಯಗಳ ಕಡೆ ಗಮನಹರಿದಂತಿಲ್ಲ. ಪ್ರಸ್ತುತ ಪ್ರಬಂಧ ಆ ದಿಶೆಯಲ್ಲೊಂದು ಪ್ರಯತ್ನ.

ಆನೆಗೊಂದಿ ಮತ್ತು ಸೊಲ್ಲಾಪುರ ಶಾಸನಗಳನ್ನು ತುಸು ಹೋಲಿಸಿ ನೋಡಿದರೆ ಅವುಗಳ ಭಾವ, ಧಾಟಿ, ತಾತ್ಪರ್ಯ, ಧ್ಯೇಯೋದ್ದೇಶಗಳಲ್ಲಿ ಐಕ್ಯತೆಯಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಉಭಯ ಶಾಸನಗಳ ಪ್ರಾರಂಭದ ಧಾಟಿ ಒಂದೇ ಆಗಿದ್ದು, ಭಾವವಷ್ಟೇ ಅಲ್ಲದೆ ಅಲ್ಲಲ್ಲಿ ಪದಪುಂಜಗಳು ಅಕ್ಷರಶಃ ಮರುಕಳಿಸಿವೆ. "ಅವಧರಿಸಿ ಸ್ವಾಮಿಗಳಿರಾ, ಚಲವಂ ಕೊಂಡಾಡುವ ಸ್ವಾಮಿಗಳವಧರಿಸಿ, ಬಲುಹಂ ಕೊಂಡಾಡುವ ಸ್ವಾಮಿಗಳವಧಾರಿಸಿ, ಸ್ವಯಂಭು ಸೆಟ್ಟಿಗಳವಧಾರಿಸಿ, ಪಸುಂಬೆ ಸೆಟ್ಟಿಗಳವಧಾರಿಸಿ, . . . ಪಟ್ಟಣ ಸ್ವಾಮಿಗಳವಧಾರಿಸಿ, ಶ್ರೀಮನು ಮಹಾದೇವರ ಗೌರೀದೇವಿಯ ಮದುವೆ ನಿಮಿತ್ತಮಾಗಿ ಪುಟ್ಟಿದ ಸ್ವಾಮಿಗಳವಧಾರಿಸಿ . . ." ಇತ್ಯಾದಿಯಾಗಿ ಎರಡೂ ಶಾಸನಗಳು ಆರಂಭಗೊಂಡಿವೆ. "ನಿಮ್ಮ ಕುಲವೊಂದು ಪುಟ್ಟಿದ ವಿವಾಹ ಪುರಾಣಮಂ . . . ಅವಧಾರಿಸಿ" ಎಂಬೆಲ್ಲ ಹೇಳಿಕೆಗಳನ್ನು ಗಮನಿಸಿದಾಗ ವರ್ತಕರ ಗುಂಪೊಂದನ್ನು ಉದ್ದೇಶಿಸಿ ರಚಿತ ಶಾಸನವಿದು ಎಂಬುದು ಸ್ಪಷ್ಟವಾಗುತ್ತದೆ. ಕಥಾ ವಿವರಣೆಯಲ್ಲಿ ಸಾಹಿತ್ಯಿಕ ವ್ಯತ್ಯಾಸಗಳಿದ್ದರೂ ಕೂಡ ಸೊಲ್ಲಾಪುರದ ಶಾಸನದಲ್ಲಿರುವ "ಅಷ್ಟಲೋಕಪಾಲಕರೆಂಟು ದಿಕ್ಕಿನಲಿರಲು ನವಗ್ರಹಂಗಳೇಕಸ್ಥವಾಗಿರಲು ಬ್ರಹ್ಮವಿಷ್ಣುಗಳು ಸ್ತುತಿಯಿಸುತ್ತಿರಲು . . . ಮದುವೆ ಮಾಣಿಗಳಿಲ್ಲ, ಹರಿ ಹಂದರಗಳಿಲ್ಲ, ಹೂ ಬಾಸಿಗವಿಲ್ಲ ಹೂಜೆ ಸೊನ್ನಲಿಗೆಯಿಲ್ಲ . . ." ಮುಂತಾದ ಹೇಳಿಕೆಗಳು ಆನೆಗೊಂದಿ ಶಾಸನದಲ್ಲಿ ಅಕ್ಷರಶಃ ಮರುಕಳಿಸಿವೆ.

ಒಟ್ಟಾರೆ ಗಮನಿಸಿದಾಗ, ಆನೆಗೊಂದಿಯ ತಾಮ್ರಪಟ ಶಾಸನ ಹಾಗೂ ಸೊಲ್ಲಾಪುರ ಶಿಲಾಶಾಸನದ ಪಾಠ ಇವೆರಡಕ್ಕೂ ಮೂಲ ಪಾಠವೊಂದು ಲಭ್ಯವಿದ್ದಿರಬೇಕೆಂಬ ಸೂಚನೆ ಕಾಣುತ್ತದೆ. ಆನೆಗೊಂದಿ ಶಾಸನ ಸಾಹಿತ್ಯಿಕ ದೃಷ್ಟಿಯಿಂದ ಹಲವು ಬದಲಾವಣೆಗಳನ್ನು ಮಾಡಿ ತಯಾರಾದ ಮೂಲ ಪಾಠದ ವಿಸ್ತೃತ ರೂಪ ಎಂದರೆ ತಪ್ಪಾಗದು. ಸೊಲ್ಲಾಪುರ ಶಾಸನದ ಪಾಠ ಅಪೂರ್ಣವಾಗಿ ಲಭ್ಯವಾಗಿರುವುದರಿಂದ "ಅಮೃತ ಮಥನ ಪುರಾಣ"ವೂ ಅದರಲ್ಲಿ ಸೇರಿತ್ತೋ ಇಲ್ಲವೋ ಹೇಳುವುದು ಕಷ್ಟ. ಮೂಲ ಪಾಠ ಕೆಲವು ವ್ಯತ್ಯಾಸಗಳೊಂದಿಗೆ ಉದ್ದೇಶಿತ ವರ್ತಕ ಸಮುದಾಯದವರಲ್ಲಿ ಪಾರಂಪರಿಕವಾಗಿ ಮುಂದುವರೆದು ಬಂದಿರುವ ಸಾಧ್ಯತೆಯಿದೆ.

ಇವೆರಡೂ ಶಾಸನಗಳ ಉದ್ದೇಶ ಒಂದೇ; ಅದೆಂದರೆ, ಕುಂಬಾರ ಕುಲದ (ಕೋವರ ಕುಲ, ಕರಗ ವಿದ್ಯಾಧರ ಕುಲ) ಹುಟ್ಟನ್ನು ಪೌರಾಣಿಕ ಹಿನ್ನೆಲೆಯಲ್ಲಿ ವಿವರಿಸುವುದು. ಪೌರಾಣಿಕ ಕಥಾಭಿತ್ತಿ ಪಾರ್ವತೀ ಕಲ್ಯಾಣ. ಕಾವ್ಯಾತ್ಮಕ ವಿವರಗಳನ್ನು ಬದಿಗಿರಿಸಿದರೆ ಅದರ ಸಾರವಿಷ್ಟೆ: ಕೃತಯುಗದಲ್ಲಿ ಸುಶಾಶ್ವತನಪ್ಪ ಪುರುಷ ಬೇಕೆಂದು ಗಿರಿಯನೇರಿ ತಪಸ್ಸು ಮಾಡಿದ ಗಿರಿರಾಜನ ಮಗಳನ್ನು ಬೇಟೆಯಾಡಲೆಂದು ಬಂದ ಶಿವ ಮೆಚ್ಚಿ ವರಿಸಬಯಸುತ್ತಾನೆ. ವಿವಾಹ ಆರಂಭವಾದಾಗ, ಮದುವೆ ಮಂಟಪದಲ್ಲಿ "ಕೈಧಾರೆಯೆರೆಯಲು ಕಲಶ, ಜಗಲಿಗೆ ಶೋಭೆ ತರುವ ಹೂಜೆ, ಭೃಂಗಾರಿಗಳು ಆಗ ಬೇಕಲ್ಲ" ಎಂದು ಶಿವ ಕೇಳಿದಾಗ ಗಿರಿರಾಜ ತನ್ನ ದಿವ್ಯಧ್ಯಾನದಿಂದ

ವಿಷ್ಣುವಿನ ಚಕ್ರವನ್ನು ತಿಗರಿಯಾಗಿ, ಬ್ರಹ್ಮನ ವೇದಪುಸ್ತಕದ ಕಂಭಿಯನ್ನು ಕಂಭಿಯಾಗಿ, ಶಿವನ ಲಾಕುಳವನ್ನು ಕೋಲಮಾಡಿ, ಯಜ್ಞೋಪವೀತವನ್ನು ಕೊರೆದಾರ ಮಾಡಿ, ಯಮನ ಕೋಣನಿಂದ ಮಣ್ಣನ್ನು ತರಿದು ಹದಮಾಡಿ, ಮಿದಿದು ಹೂಜೆ, ಸೊನ್ನಲಿಗೆ, ಕುಂಭಾದಿ ನಾನಾ ಭಾಂಡಗಳನ್ನು ತಯಾರಿಸಿ, ಹದಗೊಳ್ಳುವವರೆಗೆ ಸುಟ್ಟು, ಹೂಜೆಗೆ ಅನೇಕ ಪ್ರಕಾರವಾಗಿ ಬಣ್ಣವಿಟ್ಟು ಶಿವನ ಅಪೇಕ್ಷೆಯನ್ನು ಪೂರೈಸುತ್ತಾನೆ. ವಿವಾಹ ನಡೆದು ಶಿವನು ಗಿರಿಜೆಯೊಂದಿಗೆ ಕೈಲಾಸಕ್ಕೆ ಹೊರಡಲು ಉದ್ಯುಕ್ತನಾದಾಗ ಗಿರಿರಾಜನನ್ನು ಕರೆದು ''ಹೂಜೆ, ಸೊಂನಲಿಗೆ ಭೃಂಗಾರಿಯನ್ನು ಮಾಡಿತಂದ ವೃತ್ತಿ ಕೆಡಲಾಗದು'' ಎಂದು ಹೇಳಿ ಅವನ ಸಂತತಿಗೆ ''ಸಾಲೆ ಸಾಸಿರ್ವರೆಂಬ ಸಮಯ''ದ ಹೆಸರು ನೀಡಿ, ನಂತರ ಚಕ್ರ, ಗಳೆಯನ್ನು ಕೊಟ್ಟು 'ಅಯಿಸಾವಂತ'ರೆಂಬ ಹೆಸರು ಕೊಟ್ಟು ಸರ್ವಪ್ರಕಾರದ ಗ್ರಾಮಗಳಲ್ಲಿ ಮೂವತ್ತಾರು ಭಾಂಡಗಳನ್ನು ಹುಟ್ಟಿಸಿ ಲೋಕಕ್ಕುಪಕಾರ ಮಾಡು'' ಎಂದು ಆದೇಶಿಸಿದ. ಹೀಗೆ ಕುಂಭಕಾರರ ಸಮಯವನ್ನು, ಅದರ ಹದಿನೆಂಟು ಪಟ್ಟಣ, ಹದಿನೆಂಟು ಯೋಗಪೀಠ, ಹದಿನೆಂಟು ಕಣಿಗಳನ್ನು ಋಷಿಸಮೂಹ ಕೊಂಡಾಡುವುದು. ಕುಂಭಕಾರರ ಹದಿನೆಂಟು ಕಣಿಗಳನ್ನು ಸಪ್ರಶಸ್ತಿ ಹೆಸರಿಸಿ, ಅವುಗಳಿಗೆ ಅಧೀಕ್ಷಕವೆನಿಸುವ 'ಮೂವತಿಛಾಸಿರಕೇಣಿ'ಯ ಪ್ರಶಸ್ತಿ ನೀಡಿದೆ. ಇಲ್ಲಿಗೆ ಒಂದು ''ಸಮಯ ಶಾಸನ ಪುರಾಣ'' ಮುಕ್ತಾಯವಾಗಿ ಇನ್ನೊಂದು ಪುರಾಣ ಆರಂಭವಾಗುತ್ತದೆ. ದೇವಾಸುರರು ಅಮೃತಮಂಥನ ಮಾಡುವುದೆಂದು ನಿರ್ಧರಿಸಿ ಹರಿಯನ್ನು ಅಮೃತ ತರಲು ಅಟ್ಟುತ್ತಾರೆ. ಆದರೆ ಅಮೃತವನ್ನು ಕಡೆಯಲು ಪಾತ್ರೆ ಬೇಕಲ್ಲ ! ದೇವಾಸುರರು ಶಿವನೆಡೆಗೆ ಓಡುತ್ತಾರೆ. ಅವನಲ್ಲಿ ತಮ್ಮಳವನ್ನು ತೋಡಿಕೊಳ್ಳುತ್ತಾರೆ. 'ಗಿರಿಜಾ ಕಲ್ಯಾಣ' ಸಂದರ್ಭದಲ್ಲಿ ಗಿರಿರಾಜ-ಕುಂಭಕಾರ ಕಲೆಯಲ್ಲಿ ನೈಪುಣ್ಯ ತೋರಿದ್ದಾನೆ. ಆದ್ದರಿಂದ ಶಿವ ದೊಡ್ಡ ಕುಂಭವನ್ನು ತಯಾರಿಸಿ ತರಲು ಗಿರಿರಾಜನಿಗೆ ಆದೇಶಿಸುತ್ತಾನೆ. ಆತ ಅಂತು ಮಾಡಿದ ಮೇಲೆ ಅಮೃತವನ್ನು ಕಡೆದಾಗ ಹಲವು ವಸ್ತು ವಿಶೇಷಗಳು ಹುಟ್ಟಿದವು. ಅವುಗಳಲ್ಲಿ ಹದಿನೆಂಟು ಪಟ್ಟಣ, ಹದಿನೆಂಟು ಜಾತಿಗಳು ಸೇರಿದ್ದವು. ದೇವತೆಗಳಿಗೆ ತಂತಮ್ಮ ಪಾಲನ್ನು ಶಿವ ಹಂಚಿದ. ಹದಿನೆಂಟು ಪಟ್ಟಣ, ಹದಿನೆಂಟು ಜಾತಿಗಳನ್ನು ಭೂಮಿಯ ಮೇಲೆ ನಿಲ್ಲಿಸಿದ. ಕುಂಭಮಾಡಿಕೊಟ್ಟುದಕ್ಕೆ ಪ್ರತಿಫಲವಾಗಿ ಗಿರಿರಾಜ ಭಲ್ಲುಕೆಗೋಲು, ಮಡಕೆ ಬೆಲ್ಲ ಕುಂಚುಳಿಕೆ, ಮೂವತ್ತಾರು ಭಾಂಡ, ಗುಡಿ (ಧ್ವಜ), ಹಾರೆಯಕೋಲು, ಪಂಚಲೋಹ ಇತ್ಯಾದಿಗಳನ್ನು ಅವುಗಳನ್ನು ಹೇರಲು ಕೋಣವನ್ನೂ ಶಿವನಿಂದ ಪಡೆದು ಗಿರಿಪುರಕ್ಕೆ ಮರಳಿ ಅಯ್ಸಾವಂತರ್ಗೆ ಕೊಟ್ಟ. ಈ ಶಾಸನವನ್ನು ಶಿವನೇ ಹೇಳಿದ, ವಿಶ್ವಾಮಿತ್ರನೇ ಬರೆದ. ಗಿರಿರಾಜ ಅದನ್ನು ಪಡೆದು ಕೋವರ ಕುಲಕ್ಕೆ ಕೊಟ್ಟ.

ಅಂತೂ ಈ ಸಮೀಕ್ಷೆಯಿಂದ ಕುಂಬಾರ ಕುಲ, ವೃತ್ತಿಗಳ ಉತ್ಪತ್ತಿಯನ್ನು ಶಿವನ ಮಾವ, ಪಾರ್ವತಿಯ ತಂದೆ ಪರ್ವತರಾಜನವರೆಗೆ ಹಿಂದೆ ಕೊಂಡೊಯ್ಯುವ, ಅದಕ್ಕೆ ಪೌರಾಣಿಕ ಹಿನ್ನೆಲೆ, ದೈವಿಕ ಅನುಮೋದನೆ, ಪ್ರಾಮಾಣ್ಯಗಳನ್ನು ನೀಡುವ ಉದ್ದೇಶ ಈ ಶಾಸನದ ರಚನೆಯಲ್ಲಿ ಅಡಗಿದೆ ಎಂಬುದು ಸುಸ್ಪಷ್ಟ. ಆದರೆ ಈ ಪ್ರವೃತ್ತಿಗೆ ಕಾರಣ ಏನಿರಬಹುದು?

ಪ್ರಾಚೀನ ಸಾಹಿತ್ಯದ ಪುರಾವೆಯನ್ನು ಗಮನಿಸಿದರೆ ಕುಂಬಾರ ವೃತ್ತಿ ಸಮಾಜದ ಅತ್ಯವಶ್ಯ ಅಂಗವೆನಿಸಿದ್ದರೂ ಕೂಡ ಆ ವೃತ್ತಿಯನ್ನವಲಂಬಿಸಿದ್ದ ಸ್ತರದ ಸ್ಥಾನಮಾನ ಸಮಾಜದಲ್ಲಿ ಉತ್ತಮವಾಗಿರಲಿಲ್ಲ ಎಂದು ಅಭಿಪ್ರಾಯವಾಗುತ್ತದೆ.[3] ಮೌರ್ಯ ಪೂರ್ವಕಾಲದಲ್ಲಿ ಕುಂಬಾರ ಉದ್ಯಮಿಗಳಲ್ಲ ಸದ್ದಾಲಪುತ್ತನಂತಹ ಕುಂಬಾರರು ಶ್ರೀಮಂತರಾಗಿ ಗೃಹಪತಿ ಸ್ಥಾನವನ್ನು ಗಿಟ್ಟಿಸಿಕೊಂಡಿದ್ದರಾದರೂ, ಸಮಾಜದ ದೃಷ್ಟಿಯಲ್ಲಿ ಕುಂಬಾರಿಕೆ, ಇತರ ಕೆಲವು ವೃತ್ತಿಗಳಂತೆ, 'ಹೀನ ಸಿಪ್ಪಾನಿ' - (ಕೆಳಮಟ್ಟದ ವೃತ್ತಿ) ಗಳಲ್ಲಿ ಒಂದಾಗಿತ್ತು. ಮೌರ್ಯಾನಂತರ ಕಾಲದಲ್ಲಿ ವ್ಯಾಪಾರ-ವಾಣಿಜ್ಯಗಳು ಉಚ್ಛ್ರಾಯ ಸ್ಥಿತಿಗೇರಿದಾಗ ಕುಂಭಕಾರ ವೃತ್ತಿ ಆರ್ಥಿಕವಾಗಿ ಸಾಕಷ್ಟು ಅಭಿವೃದ್ಧಿ ಹೊಂದಿ ಪ್ರಗತಿ ಸಾಧಿಸಿತು. ಸಾತವಾಹನರ ಕಾಲದಲ್ಲಿ ಕುಂಭಕಾರರ ಶ್ರೇಣಿಗಳಲ್ಲಿ ಹಣತೊಡಗಿಸುವ ಪ್ರವೃತ್ತಿ ಇದರ ಸೂಚನೆಯಾಗಿದೆ. ಗುಪ್ತರ ಕಾಲದಲ್ಲಿ ಕುಂಬಾರಿಕೆಯ ಮೇಲೆ ತೆರಿಗೆ ಹೇರಿರುವದು ತುಸು ಮಟ್ಟಿಗೆ ಆರ್ಥಿಕ ಪ್ರಗತಿಯ ಸೂಚನೆಯೆಂದೇ ಪರಿಗಣಿತವಾಗಿದೆ. ಸಾಮಾನ್ಯವಾಗಿ ಈ ಕಾಲದ್ದೆಂದು ಪರಿಗಣಿಸಲಾಗುವ ಕಾಮಸೂತ್ರದಲ್ಲಿ, ವಿವಿಧ ವೃತ್ತಿಗಳನ್ನವಲಂಬಿಸಿದ ಸಮಾಜದ ಕೆಳವರ್ಗದವರು ತಮ್ಮ ಗಳಿಕೆಯನ್ನು ವೃದ್ಧಿಸಿಕೊಂಡು 'ನಾಗರಕ', - ಅಂದರೆ ಮಾನ್ಯತೆ, ಪ್ರತಿಷ್ಠೆಯುಳ್ಳ 'ನಾಗರಿಕ'ನಾಗಬಹುದು ಎಂದು ಹೇಳಿದೆ. ಹೀಗಾಗಿ ಅಂತಹ ಕಸುಬುದಾರರ ಶ್ರೇಣಿಗಳು ಹೆಚ್ಚು ಗಟ್ಟಿಯಾದವು. ಆದರೆ ಗುಪ್ತಾನಂತರ ಕಾಲದಲ್ಲಿ ಮತ್ತೆ ಈ ಕಸುಬುದಾರರ ಆರ್ಥಿಕ ಪತನ ಆರಂಭವಾಯಿತೆಂದು ತೋರುತ್ತದೆ. ಆರ್ಥಿಕ ಪ್ರಗತಿ ಕುಂಠಿತವಾದಾಗ ಅವರ ಸ್ಥಾನಮಾನಗಳು ಕೂಡ ಕುಸಿದವು.

ಡೆಕ್ಕನ್ ಪ್ರದೇಶದಲ್ಲಿ ಉತ್ಪಾದಕ-ವಿನಿಮಯ ವರ್ತಕರ ಆರ್ಥಿಕ ಸ್ಥಿತಿಗತಿ ಕನಿಷ್ಠ ಪಕ್ಷ ಕಲ್ಯಾಣದ ಚಾಲುಕ್ಯರ ಕಾಲದಿಂದ ಮತ್ತೆ ಸುಧಾರಿಸತೊಡಗಿತು. ಆನೇಕ ವೃತ್ತಿ-ವರ್ತಕರ 'ಸಂಘ'ಗಳ ಉಲ್ಲೇಖ ಆ ಕಾಲದ ಶಾಸನಗಳಲ್ಲಿವೆ (ಅಯ್ಯಾವೊಳೆ-500, ತೆಲ್ಲಿಗರು, ಸಾಲೆಸಾಸಿರ್ವರು, ಉಗುರು-300, ತಾಂಬುಲಿಗರು, ಇತ್ಯಾದಿ). ಕರ್ನಾಟಕದ ವರ್ತಕರ ಬಗೆಗೆ ತಾವು ಬರೆದಿರುವ ಪುಸ್ತಕದಲ್ಲಿ ಬಿ.ಆರ್. ಹಿರೇಮಠ ಅವರು ಕುಂಬಾರರನ್ನು ಉತ್ಪಾಕದ ವಿನಿಮಯ ವರ್ತಕರ ಗುಂಪಿಗೆ ಸೇರಿಸಿ, ಅವರು 'ಸಂಘ' ರಚಿಸಿಕೊಂಡಿದ್ದ ಬಗೆಗೆ ಕಾವ್ಯ ಶಾಸನಗಳಲ್ಲಿ ಉಲ್ಲೇಖವಿಲ್ಲ ಎಂದು ನುಡಿದಿದ್ದಾರೆ.[4] ಕುಂಬಾರರ ಸರಕುಗಳ ವಿನಿಮಯದ ಮೇಲೆ ತೆರಿಗೆಯಿದ್ದ ಉಲ್ಲೇಖ ಶಾಸನಗಳಲ್ಲಿದೆ. ಅಪರೂಪಕ್ಕಾದರೂ ಕುಂಬಾರರು ದಾನ ನೀಡಿದ, ದೇವಾಲಯ ನಿರ್ಮಾಣ ಮಾಡಿದ ಸಂದರ್ಭ ಶಾಸನಗಳಲ್ಲಿ ದಾಖಲಾಗಿದೆ. ಜಿನಾಲಯವೊಂದರ ದಾನಶಾಲೆಗೆ ಕುಂಬಾರರು ಆವುಗೆಗಳನ್ನು ಬಿಟ್ಟುದು,[5] ಬಮ್ಮಣನೆಂಬ ಕುಂಬಾರ ವೀರವ್ರತವನ್ನು ಕೈಗೊಂಡು ಕುಂಭೇಶ್ವರ ದೇವಾಲಯವನ್ನು ಕಟ್ಟಿಸಿದ್ದು,[6] 'ಕರಗ ವಿದ್ಯಾಧರ'ರೆಂಬ ಕುಂಬಾರರ ಬಿರುದು, ಇತ್ಯಾದಿ ಉದಾಹರಣೆಗಳನ್ನಿಲ್ಲಿ ನೀಡಬಹುದು. ಪ್ರಸ್ತುತ ಶಾಸನದಲ್ಲಿ ಕುಂಬಾರರ ಕೇಣಿ (ಕಣಿ)ಗಳಿದ್ದ ಹದಿನೆಂಟು ಸ್ಥಳಗಳನ್ನು ಹೆಸರಿಸಲಾಗಿದ್ದು ಅದರಲ್ಲಿ ಬೋದನ, ಕಂದಾರ, ಕರಹಾಡ, ಕೊಲ್ಲಾಪುರ ಮುಂತಾದ ಮಹಾರಾಷ್ಟ್ರದ ಸ್ಥಳಗಳು, ಪಾನುಂಗಲ್ಲು, ದೋರಸಮುದ್ರ, ವುಜ್ಜೆನಿಹೊಳಲ್, ನಿಡುಗುಂದೆ ಮುಂತಾದ ಕರ್ನಾಟಕದ ಸ್ಥಳಗಳು ಸೇರಿವೆ. ಅಂದರೆ ಡೆಕ್ಕನ್ ಪ್ರದೇಶದಲ್ಲಿ 12-13ನೇ ಶತಮಾನಗಳಲ್ಲಿ ಕುಂಬಾರರ ವೃತ್ತಿಯನ್ನವಲಂಬಿಸಿದ್ದವರಲ್ಲಿ ಹಲವರು 'ಸಮಯ'ಗಳನ್ನು ರೂಪಿಸಿಕೊಂಡು ಆರ್ಥಿಕ ಯಶಸ್ಸುಗಳಿಸತೊಡಗಿದ್ದರೆಂಬುದು ಇದರಿಂದ ಸ್ಪಷ್ಟಗೊಳ್ಳುತ್ತದೆ. ಹೀಗೆ ಕಂಬಾರರ ವರ್ತಕ ಸಂಘ ಇರಲಿಲ್ಲ ಎಂಬ ಮಾತು ಸತ್ಯಕ್ಕೆ ದೂರವಾಗಿದೆ. ಪ್ರಸ್ತುತ ಆನೆಗೊಂದಿ, ಸೊಲ್ಲಾಪುರ ಶಾಸನಗಳು ಕುಂಬಾರರ ಸಂಘಗಳಿದ್ದುದಕ್ಕೆ ನಿಶ್ಚಿತ ಪುರಾವೆಗಳಾಗಿವೆ.

ಒಂದು ಕಾಲಕ್ಕೆ ಸಮಾಜದಲ್ಲಿ ಕೆಳಸ್ಥಾನಮಾನಗಳಿದ್ದ ಸಮುದಾಯ ಕಾಲಕ್ರಮೇಣ ಗಮನಾರ್ಹ ಆರ್ಥಿಕ ಪ್ರಗತಿಯಿಂದಾಗಿ ಐಶ್ವರ್ಯವಂತರಾಗತೊಡಗಿದಾಗ ಸಮಾಜದ ಕಣ್ಣಲ್ಲಿ ಮರ್ಯಾದೆ, ಪ್ರತಿಷ್ಠೆಗಳನ್ನು ಗಳಿಸುವ, ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡುವುದು ಸಹಜ. ಅಂಥ ಸಂದರ್ಭದಲ್ಲಿ ಆ ವರ್ಗದ ಆರ್ಥಿಕ ಯೋಗ್ಯತೆ, ಕುಲಶುಚಿತ್ವ, ಗುಣವಿಶೇಷ, ಗುಣಶೀಲತೆ, ಗುಣಶ್ರೀಮಂತಿಕೆ ಮುಂತಾದವು ಪ್ರಭುವರ್ಗ, ಪುರೋಹಿತವರ್ಗ, ಪ್ರಜಾವರ್ಗಗಳ ಮನ್ನಣೆ, ಅನುಮೋದನೆಗಳನ್ನು ಪಡೆಯುವುದು ಅವಶ್ಯವಾಗುತ್ತದೆ. ಆ ದಿಶೆಯಲ್ಲಿ ಆ ಸಮುದಾಯ ಕುಲಖ್ಯಾತಿಯನ್ನು ಚಿತ್ರಿಸಲು ಕಾರ್ಯೋನ್ಮುಖವಾಗುತ್ತದೆ. ಕುಲಶುಚಿತ್ವ, ವೃತ್ತಿಶುಚಿತ್ವದ ಪ್ರತಿಪಾದನೆಗೆ ಪ್ರಾಚೀನತೆಯ, ಪೌರಾಣಿಕತೆಯ ಮೊರೆಹೋಗಬೇಕಾಗುತ್ತದೆ. ಕುಲವೈಭವೀಕರಣಕ್ಕೆಳಸಬೇಕಾಗುತ್ತದೆ. ಹಾಗಾಗಿ 'ರಾಜಾವಳಿ'ಗಳಂತೆಯೇ ಕುಲ-ವೃತ್ತಿಯ ''ಪೂರ್ವಾವತಾರ'', ''ನಾಮಾವಳಿ'', ''ಪ್ರಶಸ್ತಿ'' ಮುಂತಾದವು ಸೃಜಿತವಾಗುತ್ತವೆ. ಕುಲಶುಚಿತ್ವವನ್ನು ಖ್ಯಾತಪಡಿಸುವುದಕ್ಕೋಸ್ಕರ ಕುಂಬಾರಕುಲದವರನ್ನು ಶಿವನ ಮಾವ, ಪಾರ್ವತಿಯ ತಂದೆ ಪರ್ವತರಾಜನ ಸಂತತಿಯವರನ್ನಾಗಿ ಮಾಡಲಾಗಿದೆ; ಅಂತಾಗಿ ಅವರು ಗಿರಿಜೆಯ ಸೋದರರು, ಶಿವನ ಭಾವಂದಿರು ಆಗಿಬಿಟ್ಟರು. ಕುಂಬಾರ ಕಲೆಯು ಶಿವನ ಮದುವೆಯಲ್ಲಿ ಹುಟ್ಟಿಕೊಂಡಿತು; ಅಂದರೆ ಅದರ ಹಿಂದೆ ದೈವೋದ್ದೇಶವಿತ್ತು. ಅಮೃತಮಥನಕ್ಕೆ ಕುಂಭ ಬೇಕಾಯಿತು; ಗಿರಿರಾಜ ಕುಂಭಕಾರನಾಗಿಲ್ಲದಿದ್ದರೆ ಅಮೃತಮಥನವಾಗುತ್ತಿರಲಿಲ್ಲ! ಕಸುಬಿಗೆ ದೇವಮನ್ನಣೆಯಿದೆ. ಶಾಸನ ರಚನೆಗೆ ಈ ಕುಲ-ವೃತ್ತಿ ಶುಚಿತ್ವದ ಘೋಷಣೆ ಕೇಂದ್ರಬಿಂದುವಾಗಿದೆ ಎಂಬುದನ್ನು ಶಾಸನ ರಚಿಸಿದಾತ ಆರಂಭದಲ್ಲಿಯೇ ಬಯಲುಮಾಡಿದ್ದಾನೆ: ''ಅವಧಾರಿಸಿ ಸ್ವಾಮಿಗಳಿರಾ! ಅಂಗಹೀನನುಂ ಕುಲಹೀನನಾಸ್ಥಾನಕ್ಕೆ ಹೊರಗು !'' ''ಮಹಾದೇವರಿಗಂ ಗಿರಿದೇವಿಗಂ ಮದುವೆ ನಿಮಿತ್ಯಮಾಗಿ ಪುಟ್ಟಿದ ಸ್ವಾಮಿಗಳವಧಾರಿಸಿ ! ನಿಮ್ಮ ಕುಲ ಪುಟ್ಟಿದ ವಿವಾಹ ಪುರಾಣಮಂ ಸಾವಿಸ್ತರ ಕೇಳಿ'' ಎಂದೆನ್ನುವಾಗ, ಕುಂಬಾರ ಕುಲದವರ ಅಭಿಮಾನ ಹೆಚ್ಚಿಸುವ ಹೇತುವಿದ್ದಂತೆ ಅನಿಸುತ್ತದೆ. ''ಗೋಬ್ರಾಹ್ಮಣ ಪಾದಪಂಕಜ ಭ್ರಮರರ್'' ಎಂದು ಹೇಳುವಾಗ ಪುರೋಹಿತ ವರ್ಗದ ಮನ್ನಣೆಯಿದ್ದವರು ಎಂಬುದನ್ನು ಸೂಚಿಸುವಂತಿದೆ. ಕೊನೆಯಲ್ಲಿ ಪರ್ವತರಾಜನ ಬಿನ್ನಹದ ಮೇರೆಗೆ ಸ್ವತಃ ಶಿವನೇ ಈ ಶಾಸನವನ್ನು ಹೇಳುತ್ತಾನೆ; ಸ್ವತಃ ಮುನಿಪುಂಗವ ವಿಶ್ವಾಮಿತ್ರನೇ ಅದನ್ನು ಬರೆಯುತ್ತಾನೆ; ಕೋವರ ಕುಲದವರಿಗಾಗಿ ಗಿರಿರಾಜ ಅದನ್ನು ಶಿವನಿಂದ ಪಡೆದು ತಂದು ಈ ''ಸಮಯ ಶಾಸನ''ವನ್ನು ಅಯ್ಯಾವಂತರಿಗೆ ನೀಡುತ್ತಾನೆ. ಅಂತಾಗಿ ಈ 'ಸಮಯ ಶಾಸನಕ್ಕೆ ದೈವೀಮನ್ನಣೆಯೂ ದೊರೆತಿದೆ ! ಅವರು ಪಡೆದಿರುವುದು ದೇವರು ಕೊಟ್ಟ ವಿದ್ಯೆ - ದೇವವಿದ್ಯೆ; ತಿಗರಿ, ಗಳೆ, ಕಂಚುಳಿಕೆಗಳು ಅದರ ಪ್ರತಿನಿಧಿಗಳಾಗಿ ಇಂದಿಗೂ ಉಳಿದಿವೆ !

'ಅಯ್ಯಾವಂತರ ಉಲ್ಲೇಖ ಶಾಸನಗಳಲ್ಲಿ ಕ್ರಿ.ಶ. 8ನೇ ಶತಮಾನದಿಂದ ಆಗಾಗ ಕಾಣುವುದುಂಟು. ಸದ್ಯ ಪರಿಷತ್ತಿನ ನಿಘಂಟು 'ಐದು ಸಾಮಂತರು ಎಂಬರ್ಥವನ್ನು ಆ ಪದಕ್ಕೆ ಕೊಟ್ಟಿದೆ. ಪ್ರಸ್ತುತ ಶಾಸನೋಲ್ಲೇಖದಿಂದಾಗಿ, ಆ ಪದಕ್ಕೆ ''ಕುಂಭಕಾರ - ಕುಂಬಾರ ವರ್ತಕ ಸಂಘಟನೆ'' ಎಂಬರ್ಥವನ್ನೂ ಸೇರಿಸುವುದು ಅವಶ್ಯವಾಗುತ್ತದೆ.

ಶಾಸನದಲ್ಲಿ ಕುಂಭಕಾರ ಸಮಯಕ್ಕೆ ''ಸಾಲೆ-ಸಾಸಿರ್ವರ ಸಮಯ'' ಎಂಬ ಹೆಸರನ್ನು ಒಂದೆಡೆ ಸೂಚಿಸಲಾಗಿದೆ. ನಮಗೆ ತಿಳಿದಿರುವ ಮಟ್ಟಿಗೆ ಸಾಲೆಸಾಸಿರ್ವರದು ನೇಕಾರರ ಸಂಘ. ಈ ಸಂದರ್ಭದಲ್ಲಿ ಸೊಲ್ಲಾಪುರ ಶಾಸನ ''ಸಲ್ಲೆಸಾಸಿರ್ವರು ''ಎಂಬ ಪದ ಬಳಸಿರುವುದು ಗಮನೀಯ. ಬಹಶಃ ಇದು 'ಸಲ್ಲೆ' - 'ಶಲ್ಯ' - 'ಕೋಲು' - 'ಗಳೆಯ' - ಸಾಸಿರ್ವರು ಎಂಬರ್ಥ ನೀಡುವಂತಿದೆ. 'ಕೋಲು', 'ಗಳೆ' ಅಥವಾ 'ದಂಡ' ಕುಂಬಾರರ ಹೆಗ್ಗುರುತು ಆಗಿರಬಹುದು.

ಒಟ್ಟಾರೆ ಮೇಲೆ ವಿವೇಚಿಸಿರುವ ವಿಷಯಗಳಿಂದ ಕೆಲವು ಮಹತ್ವದ ಸಂಗತಿಗಳು ಬಯಲಾಗುತ್ತವೆ. 1. 'ಆನೆಗೊಂದಿ', 'ಸೊಲ್ಲಾಪುರ', ಶಾಸನಗಳೆರಡೂ ಕುಂಬಾರ-ವರ್ತಕರಿಗೆ ಸಂಬಂಧಿಸಿದ ಸಮಯ ಶಾಸನಗಳು. 2. ಕುಂಬಾರ ಕುಲ, ವೃತ್ತಿಯ ಶುಚಿತ್ವ, ದೈವೀಮೂಲ, ದೈವೀಮನ್ನಣೆಯನ್ನು ಪ್ರಖ್ಯಾತಿಸುವುದು, ಆ ಮೂಲಕ ಕುಂಬಾರರ ಕುಲಾಭಿಮಾನ, ಆತ್ಮಾಭಿಮಾನವನ್ನು ಹೆಚ್ಚಿಸುವುದು ಮತ್ತು ಸಮಾಜದಲ್ಲಿ ಮನ್ನಣೆ, ಪ್ರತಿಷ್ಠೆಗಳನ್ನು ಗಳಿಸುವುದೇ ಮುಂತಾದವು ಈ ಶಾಸನದ ಮುಖ್ಯಗುರಿಯಾಗಿದೆ. 3. ಕುಂಬಾರ-ವರ್ತಕ ವೃತ್ತಿಯು ಮಧ್ಯಯುಗದ ಆರಂಭದಲ್ಲಿ ಆರ್ಥಿಕ ಪ್ರಗತಿ ಸಾಧಿಸಿ ಸಮಾಜದಲ್ಲಿ ಪ್ರತಿಷ್ಠಿತವಾಗಲು ಪ್ರಯತ್ನಿಸಿದ ಸೂಚನೆಯಿಲ್ಲಿದೆ. 4. ಕುಂಬಾರ-ವರ್ತಕರೂ ಇತರ ಹಲವು ವೃತ್ತಿಗಳವರಂತೆ 'ಸಮಯ' ವನ್ನು ರೂಪಿಸಿಕೊಂಡಿದ್ದರೆಂದೂ, ಅದು 'ಅಯ್ಯಾವಂತ ಸಮಯ' ವಾಗಿತ್ತೆಂದೂ ಶಾಸನ ತಿಳಿಯಪಡಿಸುತ್ತದೆ. 5. ಇಂಥ ಸಮಯ ಶಾಸನಗಳು ಆಯಾ ವೃತ್ತಿ ಸಂಘದವರಲ್ಲಿದ್ದು, ಆಗಾಗ ಸಭೆ ಸೇರಿದಾಗ ತಮ್ಮ ವೃತ್ತಿ-ಕುಲ ಶುಚಿತ್ವದ ಬಗೆಗೆ ಜಾಗೃತಿಯುಳಿಸಿಕೊಳ್ಳಲು, ಅಭಿಮಾನವುಕ್ಕೇರಿಸಲು ಇವುಗಳನ್ನು ''ಪುರಾಣ'' ಗಳೆಂಬಂತೆ ಓದಲಾಗುತ್ತಿದ್ದಿರಬೇಕು.

ಟಿಪ್ಪಣಿಗಳು

1. ಡಿ.ವಿ. ದೇವರಾಜ್, ಚನ್ನಬಸಪ್ಪ ಎಸ್. ಪಾಟೀಲ್ (ಸಂ), 1991, *ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್: 1987-88*, ಮೈಸೂರು, ಪು. 15-34.
2. ಶ್ರೀನಿವಾಸ ರಿತ್ತಿ, ಆನಂದ ಕುಂಭಾರ (ಸಂ.), 1988, *ಇನ್ಸ್‌ಕ್ರಿಪ್ಶನ್ಸ್ ಫ್ರಾಮ್ ಸೊಲಾಪುರ್ ಡಿಸ್ಟ್ರಿಕ್ಟ್*, ಧಾರವಾಡ, ನಂ. 40.
3. ಕುಂಬಾರ ವೃತ್ತಿಯ ಸ್ಥಾನಮಾನಗಳ ಇತಿಹಾಸಕ್ಕಾಗಿ ನೋಡಿ, ರಾಮ ಶರಣ ಶರ್ಮ, 1990, *ಶೂದ್ರಸ್ ಇನ್ ಏನ್ಶಿಯೆಂಟ್ ಇಂಡಿಯಾ*, ದೆಹಲಿ.
4. ಬಿ.ಆರ್. ಹಿರೇಮಠ, 1986, *ಶಾಸನಗಳಲ್ಲಿ ಕರ್ನಾಟಕದ ವರ್ತಕರು*, ಧಾರವಾಡ, ಪು. 70.
5. *ಇಂಎಂ*, XIV, ಪು. 15 (ಕ್ರಿ.ಶ. 1123-4).
6. *ಎಕ*, XI, ಹೊಳಲಕೆರೆ 68 (ಕ್ರಿ.ಶ. 1126).

8. ಜೋಗದ ತಾಮ್ರ ಶಾಸನ

ಡಬ್ಲ್ಯು.ವಿ.ಎಸ್. ನರಸಿಂಹಮ್

ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ಪರವಾಗಿ ಕೈಗೊಂಡ ಕ್ಷೇತ್ರ ಕಾರ್ಯದಲ್ಲಿ ಸೊಂಡೂರು ತಾಲೂಕಿನ ಜೋಗ ಗ್ರಾಮದಲ್ಲಿ ಜಂಗಮರ ಮನೆಯಲ್ಲಿ ಎರಡು ಬಿಡಿ ತಾಮ್ರಪಟಗಳು ಲಭ್ಯವಾಗಿದೆ. ಎರಡು ಪಟಗಳಲ್ಲೂ ಒಂದು ಕಡೆಗೆ ಮಾತ್ರ ಬರವಣಿಗೆ ಇದೆ. ಮೊದಲನೆಯ ತಾಮ್ರಪಟದ ಉದ್ದ 16.6 ಸೆಂ.ಮೀ. ಮತ್ತು ಅಗಲ 12.3 ಸೆಂ.ಮೀ. ಎರಡನೆಯ ಪಟದ ಉದ್ದ 16.8 ಸೆಂ.ಮೀ. ಅಗಲ 12.7 ಸೆಂ.ಮೀ. ಇವೆ. ಮೊದಲನೆಯ ಪಟದಲ್ಲಿ 17 ಸಾಲುಗಳು ಮತ್ತು ಎರಡನೆಯ ಪಟದಲ್ಲಿ 10 ಸಾಲುಗಳು ಇವೆ. ಅಂತ್ಯದಲ್ಲಿ ಒಂದು ಲಿಂಗವಿದ್ದು ಎರಡೂ ಕಡೆಗೆ ಒಂದೊಂದು ನಂದಿಯ ಚಿತ್ರಗಳನ್ನು ಕೆತ್ತಲಾಗಿದೆ. ಇದು ಸ್ಥಳೀಯರಿಂದ ಕೊಡಲಾದ ದಾನ ಶಾಸನ. ಇದರಲ್ಲಿ ಯಾವುದೇ ರಾಜನ ಹೆಸರಿನ ಪ್ರಸ್ತಾಪವಿಲ್ಲ. ಇದರ ಕಾಲ ಶಕ ವರ್ಷ 1467 ಹೇವಿಳಂಬಿ ನಾಮ ಸಂವತ್ಸರ, ಕಾರ್ತಿಕ ಶುದ್ಧ 5 ಎಂದು ಇದ್ದು, ಇದು ಸುಮಾರು ಕ್ರಿ.ಶ. 1545 ಕ್ಕೆ ಸರಿ ಹೊಂದುತ್ತದೆ. ಇದರ ಲಿಪಿಯು 18ನೇ ಶತಮಾನದ್ದಾಗಿ ತೋರುತ್ತದೆ. ಇದರ ತೇದಿಯನ್ನು ಲಿಪಿಶಾಸ್ತ್ರ ದೃಷ್ಟಿಯಿಂದ ಗಮನಿಸಿದಾಗ ಶಾಸನದಲ್ಲಿ ಉಲ್ಲೇಖಿಸಿದ ತೇದಿಯ ಕಾಲದ ಲಿಪಿಯು ತಾಮ್ರ ಪಟದಲ್ಲಿ ಕಂಡು ಬರುವುದಿಲ್ಲ. ಇದರಿಂದಾಗಿ ಲಿಪಿ ಸಾಮ್ಯತೆಯಿಲ್ಲದ ಕಾರಣ ಪ್ರಾಯಶಃ ಇದು ಒಂದು ನಕಲಿ ದಾನ ಶಾಸನವೆಂದು ಅಭಿಪ್ರಾಯಪಡಬಹುದು. ಮೂಲತಃ ಈ ಶಾಸನದಲ್ಲಿ ಉಲ್ಲೇಖಿತವಾಗಿರುವ ಘಟನೆಯು ಶಾಸನದಲ್ಲಿ ಉಲ್ಲೇಖಿತವಾದ ವರ್ಷದಲ್ಲಿ, ಅಂದರೆ ಕ್ರಿ.ಶ. 1545 ರಲ್ಲಿ ಜರುಗಿರಬೇಕು. ಕಾಲಾನಂತರ ಈ ದಾಖಲೆಯನ್ನು ಕ್ರಿ.ಶ. 18ನೇ ಶತಮಾನದಲ್ಲಿ ನಕಲು ಮಾಡಿರುವ ಸಾಧ್ಯತೆ ಇದೆ. ಭಾಷೆಯ ದೃಷ್ಟಿಕೋನದಿಂದ ಈ ಶಾಸನವನ್ನು ಪರಿಶೀಲಿಸಿದಾಗ, ಮೇಲೆ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ಹೆಚ್ಚು ಪುಷ್ಟಿಯನ್ನು ನೀಡುತ್ತದೆ. ಶಾಸನದಲ್ಲಿ ಕಾಗುಣಿತದ ತಪ್ಪುಗಳು ವಿಪುಲವಾಗಿ ಕಂಡು ಬರುತ್ತವೆ. ವಿಜಯನಗರ ಕಾಲದ ತಾಮ್ರ ಪಟಗಳಲ್ಲಿ ಇಂತಹ ಭಾಷಾ ಮತ್ತು ಲಿಪಿ ದೋಷಗಳು ಅಷ್ಟಾಗಿ ಕಂಡು ಬರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಗಮನಿಸಿ, ಸದರಿ ತಾಮ್ರ ಪಟ ಶಾಸನವು ನಕಲಿಯೆಂದು ಹೇಳಬಹುದು. ಆದ್ದರಿಂದ ಇದು ಮೂಲ ದಾನ ಪತ್ರದ ಒಂದು ನಕಲಾಗಿರಬೇಕು.

ಈ ಶಾಸನದ ಪ್ರಾಮುಖ್ಯತೆ ಏನೆಂದರೆ, ಇದು ವಿಜಯನಗರ ಕಾಲದ ಸಾಮಾಜಿಕ ಮತ್ತು ಧಾರ್ಮಿಕ ಜೀವನದ ಮೇಲೆ ಬೆಳಕನ್ನು ಚೆಲ್ಲುತ್ತದೆ. ಪ್ರಸ್ತುತ ಶಾಸನವು ಒಬ್ಬ ಜಂಗಮನ ಹತ್ಯೆಯನ್ನು ಉಲ್ಲೇಖಿಸುತ್ತದೆ. ಶಾಸನವು ಈ ಹತ್ಯೆಯನ್ನು ಯಾವಾಗ ಎಸಗಿದರು ಎಂಬ ಪ್ರಸ್ತಾಪವನ್ನು ಮಾಡುವುದಿಲ್ಲ. ಕುಡುತಿನಿ ತಳವಾರ ಗೊಸ ಪೆಂನ್ನಯ್ಯನು, ಬಹುಶಃ ಸಿದ್ದವೀರಪ್ಪ ಸಂಗನ ಬಸಪ್ಪ ಎಂಬ ಜಂಗಮನನ್ನು ಹತ್ಯೆ ಮಾಡಿದನು. ಇದಕ್ಕೆ ಪರಿಹಾರವನ್ನು ಕಂಡುಕೊಳ್ಳಲು ಪ್ರಾಯಶಃ ಕುಡುತಿನಿ ತಳವಾರ ಗೊಸ ಪೆಂನ್ನಯ್ಯನ ಪರವಾಗಿ ಅವನ ತಳವಾರಿಕೆಗೆ ಸೇರಿದ ಗ್ರಾಮದ ಜನ ದಾನವನ್ನು ನೀಡಿದರು. ಶಾಸನದಲ್ಲಿ ರಾಜ್ಯದ ಜನರು ತಮ್ಮ ರಾಜ್ಯದಲ್ಲಿ ಜರುಗಿದ ಜಂಗಮ ಹತ್ಯೆಗೆ ಪರಿಹಾರವನ್ನು ಕಂಡುಕೊಳ್ಳಲು ಎಲ್ಲರೂ ಒಟ್ಟುಗೂಡಿ ದಾನವನ್ನು ನೀಡಿದರು ಎಂಬುದಾಗಿ ತಿಳಿದುಬರುತ್ತದೆ. ಇದರಿಂದ ಎರಡು ವಿಷಯಗಳು ಸ್ಪಷ್ಟವಾಗುತ್ತವೆ. ಮೊದಲನೆಯದಾಗಿ ರಾಜ್ಯದಲ್ಲಿ ಅಥವಾ ತಳವಾರಿಕೆಯಲ್ಲಿ ಜರುಗಿದ ಜಂಗಮ ಹತ್ಯೆಗೆ ಎಲ್ಲಾ ಗ್ರಾಮಸ್ಥರು ಒಗ್ಗಟ್ಟಾಗಿ ಸೇರಿ ಪರಿಹಾರ ಕಂಡು ಕೊಂಡಿರುವುದು. ಎರಡನೆಯದಾಗಿ ಆ ರಾಜ್ಯದ ತಳವಾರನೇ ಈ ಹತ್ಯೆಯನ್ನು ಮಾಡಿರುವುದರಿಂದ, ಈ ಸದರಿ ವ್ಯಕ್ತಿಯು ಬಹಳ ಪ್ರಮುಖನಾಗಿದ್ದಿರಬೇಕು. ಶಾಸನದಲ್ಲಿ ರಾಜ್ಯವೆಂದು ಮಾತ್ರ ಉಲ್ಲೇಖಿಸಿದ್ದು, ರಾಜ್ಯದ ಹೆಸರನ್ನು ಉಲ್ಲೇಖಿಸಿಲ್ಲ. ದಾನವನ್ನು ಯಾರು ಪಡೆದರು ಎಂಬ ಉಲ್ಲೇಖವು ಇಲ್ಲದ ಕಾರಣ ಈ ದಾನವನ್ನು ಬಹುಶಃ ಹತ್ಯೆಗೊಳ್ಳಲ್ಪಟ್ಟ ಜಂಗಮನ ಮನೆಯವರಿಗೆ ಪರಿಹಾರವಾಗಿ ನೀಡಿರಬಹುದೆಂದು ಊಹಿಸಬಹುದು. ಈ ಶಾಸನದಲ್ಲಿ ಉಲ್ಲೇಖಿತವಾಗಿರುವ ಪರಿಹಾರಗಳೆಂದರೆ, ದರೋಜಿ ವಳಿತದಲ್ಲಿನ ಹರ್ಲಾಪುರ ಗ್ರಾಮ, ಕುಡಿತಿನಿಯಲ್ಲಿ 5 ಖಂಡುಗ ಕೃಷ್ಣ ಭೂಮಿ ಮತ್ತು ಅವುಗಳ ಮಾನ್ಯ, ಪಸಿಗೆ, ಪಳಿಗೆ, ಮಗ್ಗವ 1 ಟೆಂ, ಮದುವೆ ಊಟ ನಾಲ್ಕು ದುಡ್ಡು, ಗಾಣಕೆ ಎಣ್ಣೆಮಗೆ ಎರಡು, ಗುಡೆಕೋಟೆ,


ಸೊಂಡೂರು ರಾಜ್ಯದ ಒಳಗೆ ಹೇರು ಒಂದಕ್ಕೆ ದುಡ್ಡು ಮೆಲ್ಲುಗಾಸು, ಹೊರೆಹುಲ್ಲು, ಮೊರ ಬತ್ತ, ಮತ್ತು ಮೇಟಿ ಕೊಳಗ ಇದರೊಂದಿಗೆ ಪ್ರಾಣ ಹತ್ಯೆಗೊಳಗಾದ ಜಂಗಮನ ಪ್ರತಿಮೆಯನ್ನು ಬಂಗಾರದಲ್ಲಿ ಮಾಡಿಸಿ ಅದಕ್ಕೆ ಪ್ರಾಣ ಪ್ರತಿಷ್ಠೆ ಮಾಡಿಸುವ ಸಲುವಾಗಿ 220 ವರಾಹ ಮತ್ತು 220 ಹಚಡಗಳನ್ನು ನೀಡಿದರು. ಈ ಪರಿಹಾರಗಳು ಬಹುತೇಕವಾಗಿ ವಿಜಯನಗರ ಕಾಲದಲ್ಲಿ ಬಳಕೆಯಲ್ಲಿದ್ದಂತಹ ತೆರಿಗೆಗಳಾಗಿವೆ.

ಈ ಶಾಸನದಲ್ಲಿ ಗೋಸ ಪೆಂನ್ನಯ್ಯನ ತಳವಾರಿಕೆಗೆ ಸೇರಿದ ಗ್ರಾಮಗಳ ಹೆಸರುಗಳನ್ನು ಉಲ್ಲೇಖಿಸುವುದು ಅತ್ಯಂತ ಕುತೂಹಲಕಾರಿಯಾಗಿರುವ ವಿಷಯವಾಗಿದೆ. ಸ್ಥಳನಾಮ ಮತ್ತು ವ್ಯಕ್ತಿನಾಮಗಳ ಅಧ್ಯಯನ ನಡೆಸಲು ಈ ಮಾಹಿತಿಯು ಉಪಯುಕ್ತವಾಗಿದೆ. ಈ ಶಾಸನದಲ್ಲಿ ಕಂಡು ಬರುವ ಅನೇಕ ಗ್ರಾಮನಾಮಗಳು, ಇಂದಿನ ಬಳ್ಳಾರಿ ಜಿಲ್ಲೆಯ ಸೊಂಡೂರು, ಹೊಸಪೇಟೆ, ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ, ಇಂದಿಗೂ ಅದೇ ಹೆಸರುಗಳೊಂದಿಗೆ ಇರುವುದು ಗಮನಾರ್ಹ ಸಂಗತಿ. ಇದರಂತೆಯೇ ವ್ಯಕ್ತಿನಾಮಗಳಿಂದ ತಿಳಿಯಬಹುದಾದ ಅಂಶವೇನೆಂದರೆ, ಉಲ್ಲೇಖಿತ ವ್ಯಕ್ತಿಗಳು ಸಮಾಜದಲ್ಲಿ ಅತ್ಯಂತ ಪ್ರಮುಖರಾಗಿರಬೇಕೆಂದು ಅವರ ಹೆಸರಿನೊಂದಿಗೆ ಬಳಸಿರುವ ಗುಣವಾಚಕಗಳಿಂದ ಅರಿಯಬಹುದಾಗಿದೆ. ದಾನ ಶಾಸನದಲ್ಲಿ ಕಂಡು ಬರುವ ವ್ಯಕ್ತಿ ನಾಮಗಳು ಮತ್ತು ಸ್ಥಳ ನಾಮಗಳು ಈ ರೀತಿಯಾಗಿವೆ.

ಈ ಶಾಸನದಲ್ಲಿ ಗೋಸ ಪೆಂನ್ನಯ್ಯನ ತಳವಾರಿಕೆಗೆ ಸೇರಿದ ಗ್ರಾಮಗಳ ಹೆಸರುಗಳನ್ನು ಉಲ್ಲೇಖಿಸುವುದು ಅತ್ಯಂತ ಕುತೂಹಲಕಾರಿಯಾಗಿರುವ ವಿಷಯವಾಗಿದೆ. ಸ್ಥಳನಾಮ ಮತ್ತು ವ್ಯಕ್ತಿನಾಮಗಳ ಅಧ್ಯಯನ ನಡೆಸಲು, ಈ ಮಾಹಿತಿಯು ಉಪಯುಕ್ತವಾಗಿದೆ. ಈಶಾಸನದಲ್ಲಿ ಕಂಡು ಬರುವ ಅನೇಕ ಗ್ರಾಮ ನಾಮಗಳು, ಇಂದಿನ ಬಳ್ಳಾರಿ ಜಿಲ್ಲೆಯ ಸೊಂಡುರು, ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ, ಇಂದಿಗೂ ಅದೇ ಹೆಸರುಗಳೊಂದಿಗೆ ಇರುವುದು ಗಮನಾರ್ಹ ಸಂಗತಿ. ಇದರಂತೆಯೇ ವ್ಯಕ್ತಿನಾಮಗಳಿಂದ ತಿಳಿಯಬಹುದಾದ ಅಂಶವೇನೆಂದರೆ, ಉಲ್ಲೇಖಿತ ವ್ಯಕ್ತಿಗಳು ಸಮಾಜದಲ್ಲಿ ಅತ್ಯಂತ ಪ್ರಮುಖರಾಗಿರಬೇಕೆಂದು ಅವರ ಹೆಸರಿನೊಂದಿಗೆ ಬಳಸಿರುವ ಗುಣವಾಚಕಗಳಿಂದ ಅರಿಯಬಹುದಾಗಿದೆ. ದಾನ ಶಾಸನದಲ್ಲಿ ಕಂಡು ಬರುವ ವ್ಯಕ್ತಿ ನಾಮಗಳು ಮತ್ತು ಮತ್ತು ಸ್ಥಳನಾಮಗಳು ಈ ರೀತಿಯಾಗಿವೆ. ಇದರಲ್ಲಿ ಹಂಪಿಯ ಸ್ಥಳನಾಮಗಳಾದಂತ ಕಿಷ್ಕಿಂಧ, ಹಸ್ತಿನಾವತಿ, ಮಾತಂಗ, ಮಾಲ್ಯವಂತ, ಮುನಿಶೃಂಗ ಮತ್ತು ಹೇಮಕೂಟ ಉಲ್ಲೇಖಗೊಂಡಿವೆ. ವಿದ್ಯಾನಗರದ ಹಿರೇಮಠ, ಅದರ ಮಠಾಧಿಪತಿ, ಮಳೆ ಹಿರೆಸಿದ ವೀರಣ್ಣ ಒಡೆದೇವರು ಮತ್ತು ಹಲವಾರು ವ್ಯಕ್ತಿಗಳ ಹೆಸರುಗಳು ಕಂಡು ಬರುತ್ತವೆ. ಚಿಟಿಗ ಸಂಗನಬಸಪ್ಪನ ಶಿಷ್ಯ ಗಣಪನ್ನ ದೇವರು, ಸೊಂಡೂರ ರಾಜಪ್ಪನಾಯಕ, ಬಿಸಣ್ಣ ನಾಯಕರು, ಸೊಂಡೂರು ರಾಚನ್ನಗೌಡ, ವಡ್ಡಿನ ಚನಮಲ್ಲಗೌಡ, ಶಾನಭೋಗ ಬಿಸ್ಪಪ್ಪ, ಕುಡಿತಿನಿ ಗಂಗಣ್ಣಗೌಡ, ಪರ್ವತಗೌಡ, ಮಲ್ಲನಗೌಡ, ಚಿರತನಗುಢದ ತಿಮ್ಮನಗೌಡ, ಶಾನಭೋಗ ವಡಿಯಪ್ಪ, ಕುಡಿತಿನಿ ತಳವಾರ ಶಿರಿನಾಯಕ, ಬಿಲ್ಲಿನಾಯಕ, ದರೋಜಿ ಜಕ್ಕನಗೌಡ, ಪಟ್ಟಣಸೆಟ್ಟಿ ರಾಮಿಸೆಟ್ಟಿ, ಹೊಂನಹಳಿ ಬಸವನಗೌಡ, ಬಯಲೊದಗೆರೆ ಯಲ್ಲನಗೌಡ, ಕಮಲಾಪುರ ಬಸನಗೌಡ, ಹೊನ್ನಪ್ಪಗೌಡ, ಹೊಸೂರು ಚಿಕ್ಕನಗೌಡ, ಸೊಂಡೂರ ಪಟ್ಟಣಸೆಟ್ಟಿ, ಗುಳಸೆಟ್ಟಿ, ಲಕ್ಕಿಸೆಟ್ಟಿ, ಬಳ್ಳಾರಿ ಚೆಂನ್ನಪ್ಪ ಮತ್ತು ವಾಲೆ ಶಂಕಣ್ಣ ಇವರೆಲ್ಲಾ ಸೇರಿ ಕೊಟ್ಟ ದಾನಪತ್ರ. ಇದರಲ್ಲಿ ಉಲ್ಲೇಖಗೊಂಡ ಗ್ರಾಮಗಳು: ಸೊಂಡುರು, ವಡ್ಡು, ಕುಡಿತಿನಿ, ಚಿರತನಗುಡ್ಡ, ದರೋಜಿ, ಹೊಂನಹಳ್ಳಿ, ಬಯಲೊದಗೆರೆ, ಕಮಲಾಪುರ, ಹೊಸೂರು, ಹರ್ಲಾಪುರ, ಗುಡೇಕೋಟೆ ಮತ್ತು ವಿದ್ಯಾನಗರ.

ವಡ್ಡಿನ ಶಾನಬೋಗ ಹೊಂಚನ ಕೊಮಲೆ ಮಗ ಬಿಸ್ಪಪ್ಪನ ಸುತ ಎಂಬುವನು ಈ ದಾನ ಶಾಸನವನ್ನು ಬರೆದವನು. ಸಾಮಾನ್ಯವಾಗಿ ಶಾಸನಗಳಲ್ಲಿ ಕಂಡು ಬರುವಂತಹ ಶಾಪಾಶಯವು ಈ ಶಾಸನದಲ್ಲಿ ಕಂಡು ಬರುತ್ತದೆ. ಅದು ಈ ರೀತಿಯಾಗಿದೆ - ''ಇದಕ್ಕೆ (ಎಂದರೆ ಈ ಶಾಸನಕ್ಕೆ) ತಪ್ಪಿದರೆ ಮಾತೃಸ್ತನಕ್ಕೆ ತಪ್ಪಿದ ಹಾಗೆ, ಕಾಶಿಯಲ್ಲಿ ಗೋಹತ್ಯೆ ಮಾಡಿದ ಸಮಾನ''.

ಈ ತಾಮ್ರ ಪಟಗಳನ್ನು ಓದುವುದಕ್ಕೆ ಕೊಟ್ಟ ಶ್ರೀ ಜೆ.ಎಂ. ವೀರಯ್ಯ, ಜೋಗ, ಸಂಡೂರು ತಾಲ್ಲೂಕು, ಬಳ್ಳಾರಿಜಿಲ್ಲೆ, ಅವರಿಗೆ ಮತ್ತು ಇಲಾಖೆಗೆ ನನ್ನ ಕೃತಜ್ಞತೆಗಳು.



ಜೋಗದ ತಾಮ್ರ ಶಾಸನ

ಮೊದಲನೆಯ ಪಟ

1 ಶ್ರಿ ವಿರುಪಕ್ಷ । ಶೆಲೆವನ ಸೆಕ । 1467 ವರುಸ ಹೆಳಬಿಸಮಸಮಚ
2 ರದ । ಕರ್ತಿಕ ಸುದ್ದ । 5। ಶ್ರಿ ಮತು । ಕಿಃಕಿಂದ । ಹಸ್ತಿನಾವತಿ ಮತಂಗ
3 ಮಾಲವಂತ । ಮುನಿಸ್ರುಂಗ । ಹೇಮಕುಟ ವಿರುಪಕ್ಷ । ವಿದ್ಯನಗರದ ಹಿರೆಮ
4 ಟದ ಸಿಂಹಸ್ಸನದರೂಡರದಂತ ಮಳೆ ಹಿರೆಸಿದ ವಿರಂಣ ವಡೆ ದೇವರು ಚಿಟಿಗ ಸಂಗನ
5 ಬಸಪ್ಪ । ಶಿಸ್ಯ ಗಣಪಂಣ ದೇವರು । ಸೊಂಡುರ ರಾಜಪ್ಪ ನಾಯಕ । ಬಿಸಂಣ ನಯಕರು । ಸೊಂ
6 ಡುರ ರಾಚನಗೌಡ ವೊಡಿನ ಚನಮಲಗೌಡ । ಶೆನಬೊಗ ಬಿಷ್ಟಪ್ಪ । ಕುಡುತುನೆ ಗಂಗನಗೌಡ ।
7 ಪರುವತಗೌಡ । ಮಲನಗಾಉಡ । ಕಳಸನಗೌಡ । ಕನಕರಡಿಗೌಡ । ಚಿರತ್ತನಗುಥದ ತಿಂಮ್ಮ
8 ಂಣಗೌಡ । ಶೆನಬೊಗ ವಡಿಯಪ್ಪ । ಕುಡುತ್ನೆಂ ತಳವಾರ ಸಿಂಕಿನಾಯಕ । ಬಿಲ್ಲಿನಾಯ
9 ಕ । ದರೋಜಿ ಜಕ್ಕನಗೌಡ । ಪಟಣಸೆಟಿ ರಾಮಿಸೆಟಿ । ಹೊಂನಹಳಿ ಬಸವನಗೌಡ । ಬಯಲೊ
10 ದಗೆರೆ ಯಲ್ಲನಗೌಡ । ಕಾಮಲಪುರದ ಬಸನಗೌಡ ಹೊಂನಪಗೌಡ । ಹೊಸುರ ಚಿಕ್ಕನಗೌಡ । ಸೊಂಡುರ ಪಟ
11 ಣಸೆಟಿ । ಗುಳಸೆಟ । ಲಕ್ಕಿಸೆಟಿ । ಬಳರಿ ಚಂನ್ನಪ್ಪ । ವಾಲೆ ಶಂಕಂಣ ಮುತದವರು ಯೆ
12 ಕಸರಾಗಿ ಕೊಟದ । ನಾಪಟೆದ ಕ್ರಾಮ ಯೆಂತೆಂದರೆ ನಿಂಮ್ಮ ಗುರುದೆವರು ಸಿದವಿರ
13 ಪ್ಪ ಸಂಗನಬಸಪ್ಪ । ಕುಡುತ್ನೆ ತಳವಾರ ಗೊಸ ಪೆಂನ್ಯೆಯ್ಯನು ಪ್ರಣ ಹತೆವ ಮ
14 ಡಲಗಿ । ತಂಮ್ಮ ರಾಜೆದೊಳಗೆ ಜಂಗಮ ದ್ರೋಹದ ಪಾಪ ನಿವಾರಣವಗ ಬೆಕೆಂದು । ನಿಮಗೆ
15 ನಾವು ದಾರಗ್ರಾಹಿತವಗಿ । ದರೋಜಿ ವಳಿತಿನ ವಳಗಣ ರ್ಹರಲಪುರದ ಗ್ರಮವನು । ಕಡ
16 ರಾಂಬ ನಿರಾಂಬ ನಿದಿ ನಿಕ್ಷೆಪ ಮುಂತಗಿ ಗ್ರಾಮವನು । ಕುಡುತ್ನೆಯೆಲ್ಲು ಕ್ರಿಷ್ಣ ಭೂಮಿ ಖ 5
17 ಅಯಿಗಳದ ಮಾನ್ಯವನು ಪಸಿಗೆ ಪಳಿಗೆ ಮಗ್ಗವ । ಟೆಂ । ನಲ್ಕುದುಡು

ಎರಡನೆಯ ಪಟ

18 ಮದಿವೆ ಉಟ ನಾಕ್ಲುದುಡು । ಗಾಣಕೆ ಯಂಣೆ ಮಗೆ ಎರಡು ಗುಡೆಕೊಟೆ ಸೊಂ
19 ಡುರ ರಾಜ್ಯೆದೊಳಗೆ ಹೆರುವ 1 ಕೆ ದುಡು ಮೆಲ್ಲುಗಾಸು ಹೊರೆಹುಲು ಮೊ
20 ರ ಬತ್ತ । ಮೆಟಿ ಕೊಳಗ । ಸಹವಾಗಿ । ಯಿ ಜಂಗಮ ಹತ್ತೆಕೆ ಪ್ರಣ ಪ್ರತಿಟ್ಸಸಿ
21 । ಭಂಗಾರದ ಪ್ರತಿಮೆಗೆ ಗ 220 ಯಿನುರು ಯಿಪತು ವರಹನು । ಯಿನುರು ಯಿ
22 ಪತು ಹಚಡ ಸಹವಾಗಿ ದಾರಪುಜಿತವಾಗಿ ದಾರಿಯನೆರದು ನಿಮಗೆ । ನಾ
23 ವು ಕೊಟೆಉ ಯಂದ ಕೊಟ ದಾನ ಪಟೆಯ । ವಾ ಬರದತ ವಡಿನ ಸಿಮೆ ಶೆನಬೊ
24 ಗ ಹೂಂನೆ ಕೊಮಲೆ ಮಗ ಚಿಸ್ಟಪ್ಪನ ಸುಹ್ತ ರ್ಸುಯ್ಯ ಚದ್ರದಿಗಳುಳ್ಳ ಪರಿಯತ್ರ
25 ಉ ನಿಮಗೆರ್ದಮ ಕೊರಿಕೊಂಡು ಯಿಸ್ವಸ್ತಿ ಅನುಬವಿಸಿಕೊಂಡು ಯಿಹದು ಯೆ
26 ಂದು ಕೊಟ್ಟ ದಾನ ಪಟೆ । ಯಿದಕೆ ತೆಪಿದರೆ । ಮತ್ತು ಸ್ತನಕೆ ತೆಪಿದ ಹಗೆ ।
27 ಕಾಸಿಯೆಲ್ಲು ಗೊಹತ್ಯ ಮಡಿದ ಸಮನಉ

9. ಸೀತಾಪುರದ ಶಾಸನ: ಒಂದು ವಿಶ್ಲೇಷಣೆ

ಎಂ.ಬಿ. ಪದ್ಮ

ಮೊದಲಿನಿಂದಲೂ ಕರ್ನಾಟಕ ಒಂದು ಉತ್ತಮ ಸಾಮಾಜಿಕ ಸಂಸ್ಕೃತಿಯನ್ನು ಬೆಳಸಿಕೊಂಡು ಬಂದಿದೆ. ಅದರ ಜನ ಸಾಮಾನ್ಯರ ಬದುಕಿನಲ್ಲಿ ಪರಹಿತವೃತ್ತಿ ಹಾಗೂ ಸ್ವಸಮುದಾಯ ಹಿತವೃತ್ತಿಯ ಭಾವನೆಗಳು ಹಿಂದಿನಿಂದ ಆಳವಾಗಿ ಬೇರೂರಿಕೊಂಡು ಬಂದಿದ್ದುವು. ಅವುಗಳು ಅವರು ವೈಯಕ್ತಿಕವಾಗಿ ಹಾಗೂ ಸಾಮುದಾಯಿಕವಾಗಿ ಕೈಗೊಳ್ಳುತ್ತಿದ್ದ ಧಾರ್ಮಿಕ ಹಾಗೂ ಜನೋಪಯೋಗಿ ಕಾರ್ಯಗಳ ಮೂಲಕ ಸ್ಪಷ್ಟವಾಗಿ ವ್ಯಕ್ತವಾಗುತ್ತಿದ್ದುವು. ಇಹಲೋಕದಲ್ಲಿನ ಜೀವನ ಕ್ಷಣಿಕವಾದುದು, ಪ್ರತಿಕ್ಷಣ ವ್ಯಕ್ತಿ ಮೃತ್ಯುವಿನತ್ತ ಸಾಗುತ್ತಾ ಇರುತ್ತಾನೆ,[1] ಆದ್ದರಿಂದ ಅವನು ಧರ್ಮವನ್ನು ಅವಲಂಬಿಸಿ ಸದ್ಗತಿಯನ್ನು ಪಡೆದುಕೊಳ್ಳಬೇಕು,[2] ಮೂರು ಲೋಕಗಳನ್ನು ಬೆಳಗುತ್ತಿರುವ ದೀಪ ಧರ್ಮ,[3] ಧರ್ಮವೇ ನಿಜವಾದ ಬಂಧು,[4] ಮೊದಲು ಚಿಂತನೆ ಮಾಡಬೇಕಾದುದು ಧರ್ಮದ ಬಗ್ಗೆಯೇ - ಇವು ಜನಪದರ ಹೃನ್ಮನಗಳಲ್ಲಿ ಬೇರೂರಿದ್ದ ಭಾವನೆಗಳು. ಇಲ್ಲೆಲ್ಲಾ ಧರ್ಮ ಎಂದರೆ ಎಲ್ಲರಿಗೂ ಅನ್ವಯವಾಗುವಂತಹ, ಸರ್ವರಿಗೂ ಸಮಾನವಾದ ಹಾಗೂ ಎಲ್ಲ ಧರ್ಮಗಳು ಎತ್ತಿ ಹಿಡಿಯುವ ದಾನಕಾರ್ಯಗಳು, ಪುಣ್ಯ ಕೆಲಸಗಳು, ದೇಗುಲಗಳನ್ನು ನಿರ್ಮಿಸುವುದು; ಕೆರೆ, ಮಠ, ಸತ್ರಗಳನ್ನು ಕಟ್ಟಿಸುವುದು; ಶೈಕ್ಷಣಿಕ ಸಂಸ್ಥೆ, ಅಗ್ರಹಾರಗಳನ್ನು ಸ್ಥಾಪಿಸುವುದು; ಸಾರ್ವಜನಿಕರಿಗಾಗಿ ಆರಾಮ (ಆರವೆ), ಅಂದರೆ ಉದ್ಯಾನವನ, ತೋಡಿಕೆ ಅಥವಾ ಸಣ್ಣ ತೋಟ, ತುಡಿಕೆ ಅಥವಾ ಹೂದೋಟ, ಬೆಂಕಿಯನ್ನು ಒದಗಿಸಲು ಅಗ್ಗಿಷ್ಟಿಗೆ, ಬಾಯಾರಿದವರಿಗೆ ನೀರನ್ನು ನೀಡಿ ತಣಿಸಲು ಅರವಟ್ಟಿಗೆ ಇತ್ಯಾದಿಗಳನ್ನು ಒದಗಿಸಿ, ಅವುಗಳ ರಕ್ಷಣೆಗಾಗಿ ವಿವಿಧ ದತ್ತಿಗಳನ್ನು ನೀಡುವುದು[6] ಮುಂತಾದ ಪುಣ್ಯಕರ ಕಾರ್ಯಗಳು ಎಂದರ್ಥವಾಗುತ್ತದೆ. ಈ ಬಗೆಯ ದಾನಧರ್ಮಗಳಿಂದ ಪುಣ್ಯ ಸಿಗುವುದೆಂಬ ಧಾರ್ಮಿಕ ನಂಬಿಕೆ ಮತ್ತು ಗೌರವ-ಪ್ರತಿಷ್ಠೆಯನ್ನು ಹೊಂದಬೇಕೆಂಬ ಸಾಮಾಜಿಕ ಬಯಕೆ ಜನರು ಈ ತೆರನಾದ ಪರೋಪಕಾರದ ಕಾರ್ಯಗಳನ್ನು ಕೈಗೊಳ್ಳುವಂತೆ ಪ್ರೇರೇಪಿಸುತ್ತಿದ್ದುವು ಎನ್ನಬಹುದು. ಧಾರ್ಮಿಕ ಮೌಲ್ಯಗಳಿಂದ ಪ್ರಭಾವಿತವೂ, ನಿರ್ದೇಶಿತವೂ ಆಗಿದ್ದ ಸಾಮುದಾಯಿಕ ಹೊಣೆಗಾರಿಕೆಯ ಪ್ರಜ್ಞೆ ಮತ್ತು ಅರ್ಥಗರ್ಭಿತವಾಗಿದ್ದ, ಉತ್ತಮವಾಗಿದ್ದ ಸಮಷ್ಟಿಹಿತಾಸಕ್ತ ವರ್ತನಾ ಮಾದರಿ ಈ ಬಗೆಯ ಜನೋಪಯೋಗಿ ಕೆಲಸಗಳ ಮುಖ್ಯ ಲಕ್ಷಣಗಳಾಗಿರುತ್ತಿದ್ದುವು.[7] ಪುಟ್ಟ ಸಮುದಾಯಗಳೇ ಆಗಿರುತ್ತಿದ್ದ ಪ್ರತಿ ಅಗ್ರಹಾರ, ಪ್ರತಿ ಗ್ರಾಮದ ಸದಸ್ಯರಲ್ಲಿ ತಾವೆಲ್ಲಾ ಒಂದೇ ಸಮೂಹದವರು ಎಂಬ ಭಾವನೆ, ತಮ್ಮ ಏಕತೆಯ ಬಗ್ಗೆ ಅರಿವು ಇರುತ್ತಿದ್ದ ಕಾರಣ ಅವರು ಸರ್ವರ ಒಳಿತಿಗಾಗಿ ಕೈಗೊಳ್ಳಲಾಗುತ್ತಿದ್ದ ಸಹಕಾರಕ ಕಾರ್ಯಕಲಾಪಗಳಲ್ಲಿ, ಪೂರ್ಣ ಬೆಂಬಲ ನೀಡಿ, ಸಕ್ರಿಯವಾಗಿ ಭಾಗವಹಿಸುತ್ತಿದ್ದರು.

ಕರ್ನಾಟಕದಾದ್ಯಂತ ಹರಡಿರುವ ಅನೇಕ ಶಿಲಾಶಾಸನಗಳಲ್ಲಿ ಈ ಬಗೆಯ ಹಿತಕರ ಸಮುದಾಯ ಜೀವನದ ಮತ್ತು ಸಮೂಹ ಹಿತಾಭಿಮುಖವಾಗಿದ್ದ ಸಹಕಾರಕ ಕಾರ್ಯ ಚಟುವಟಿಕೆಗಳ ಚಿತ್ರಣವನ್ನು ನೋಡಬಹುದು. ಅವುಗಳಲ್ಲಿ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಸೀತಾಪುರ ಎಂಬ ಹೆಸರಿನ ಗ್ರಾಮದ ಆಗ್ನೇಯ ದಿಕ್ಕಿನಲ್ಲಿರುವ ಜಮೀನೊಂದರಲ್ಲಿ ಕಂಡುಬಂದಿರುವ ಎರಡು ಶಿಲೆಗಳನ್ನು ಅಲಂಕರಿಸಿರುವ ಶಾಸನವೂ ಒಂದು. ಅದರಲ್ಲಿರುವ ವಿವರಗಳನ್ನು ಈ ಪ್ರಬಂಧಕ್ಕೆ ಪ್ರಾಥಮಿಕ ಮೂಲಾಧಾರವಾಗಿ ಬಳಸಿಕೊಳ್ಳಲಾಗಿದೆ ಮತ್ತು ಐತಿಹಾಸಿಕ - ಸಮಾಜ ಶಾಸ್ತ್ರೀಯ ದೃಷ್ಟಿಕೋನವನ್ನಿಟ್ಟುಕೊಂಡು, ವಿಷಯ-ವಿಶ್ಲೇಷಣಾ ವಿಧಾನವನ್ನು ಉಪಯೋಗಿಸಿ, ಈ ಶಾಸನದ ಅಂತರ್ಗತ ಸೂಕ್ಷ್ಮಾಂಶಗಳನ್ನು ವಿವರಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಲಾಗಿದೆ.

ಈ ಶಾಸನದಲ್ಲಿ ಶಕವರ್ಷ 1390ರಲ್ಲಿ, ಅಂದರೆ ಕ್ರಿ.ಶ. 1467ರ ಆಗಸ್ಟ್ 22 ರಂದು ವಿಜಯನಗರದ ವಿರೂಪಾಕ್ಷ ಮಹಾರಾಯನ ಆಳ್ವಿಕೆಯ ಸಮಯದಲ್ಲಿ ನಾಗಮಂಗಲದ ಸಿಂಗಣ್ಣ ಒಡೆಯನ ದಾನಶೀಲ ಪುತ್ರ ದೇವರಾಜನು ಮಾಡಿದ ದಾನಗಳ ದಾಖಲೆ ಮತ್ತು ಇದಕ್ಕೆ 12 ವರ್ಷಗಳಿಗೆ ಹಿಂದೆ ಕ್ರಿ.ಶ. 1455ರ ಆಗಸ್ಟ್ 14ರಂದು ನಡೆದ ಸ್ವಾರಸ್ಯಕರವಾಗಿದ್ದ ವ್ಯವಹಾರದ ಬಗ್ಗೆ ವಿವರಗಳಿವೆ. ಈ ಎರಡು ಘಟನೆಗಳು ಸಮಷ್ಟಿ ಸ್ವರೂಪದ್ದಾಗಿದ್ದುವು.

1455ರಲ್ಲಿ ದೇವರಾಜನು ಕಾವೇರಿ ನದಿಗೆ ಅಣೆಕಟ್ಟನ್ನು ಹೊಸದಾಗಿ ಕಟ್ಟಿ, ಕಾಲುವೆಯನ್ನು ತೋಡಿದಾಗ, ಹರಹು ಗ್ರಾಮದ ಮಹಾಜನರು ಆ ಕಾಲುವೆಯನ್ನು ತಮ್ಮ ಗ್ರಾಮಕ್ಕೂ ವಿಸ್ತರಿಸುವಂತೆ ಕೇಳಿಕೊಂಡರು. ಆ ಔದಾರ್ಯಕ್ಕೆ ಪ್ರತಿಯಾಗಿ ಅವರು ಅವನಿಗೆ ತಮ್ಮ ಹಳ್ಳಿಯ ಉತ್ಪತ್ತಿಯಲ್ಲಿ ಒಂದು ಪಾಲನ್ನು ಕೊಡಲು ಒಪ್ಪಿದರು. ಅದನ್ನು ಅವನು ದೇವರಿಗೆ ಹಾಗೂ ಬ್ರಾಹ್ಮಣರಿಗೆ ಕಾಣಿಕೆಗಳನ್ನು ನೀಡುವುದಕ್ಕೆ (ದೇವದಾಯ ಹಾಗೂ ಬ್ರಹ್ಮದೇಯಕ್ಕಾಗಿ) ಬಳಸಬಹುದಾಗಿದ್ದಿತು. ಇದರೊಂದಿಗೆ ಅವರು ಯಜಮಾನ-ಭಾಗವಾಗಿ ಮತ್ತೆ ಮೂರು ಪಾಲುಗಳನ್ನು ಮತ್ತು ಹರಹು ಗ್ರಾಮದ ಹೆಬಾರುವ ಶ್ರೀರಂಗನಾಥನ ಮಗ ಯದುವಂಣನು ಬಹುಶಃ ತನ್ನ ಸ್ವತ್ತಾಗಿದ್ದ ಕುರ್ವಂಕನಾಡ ವೇಂಟೆಯದ ಹೊಸಹಳ್ಳಿ ಎಂಬ ಗ್ರಾಮವನ್ನು ಶ್ರೋತ್ರಿಯವಾಗಿ ಅನುಭೋಗಿಸಲು ಅವನಿಗೆ ವಹಿಸಿಕೊಟ್ಟರು.

ದೇವರಾಜನು ಈ ಕರಾರುಗಳಿಗೆ ಒಪ್ಪಿ ತನ್ನ ಸ್ವಂತ ಖರ್ಚಿನಲ್ಲಿ ಕಾಲುವೆಯನ್ನು ಹರಹು ಗ್ರಾಮಕ್ಕೆ ವಿಸ್ತರಿಸಿ ಆ ಗ್ರಾಮವಾಸಿಗಳಿಗೆ ಅನುಕೂಲ ಮಾಡಿಕೊಟ್ಟನು. ಹೀಗೆ ಅವನು ಹೊಸಹಳ್ಳಿಯಲ್ಲಿ ಶ್ರೋತ್ರಿಯ ಹಕ್ಕುಗಳನ್ನು ಪಡೆದು ಅನುಭೋಗಿಸಲು ಅರ್ಹನಾದನು.

ಅನಂತರ ಯದುವಂಣನು ಅದೇ ದೇವರಾಜನಿಗೆ ಹರಹು ಗ್ರಾಮದಲ್ಲಿ ತನ್ನ ಭಾಗದ ಬತ್ತದ ಇಪ್ಪತ್ತು ಸಾವಿರದ ನೂರೊಂದು ಕುಳವನ್ನು, ತೊಂಡನೂರಿನಲ್ಲಿ ತನಗಿದ್ದ ಭಾಗದ ಒಂದು ಪಾಲನ್ನು ಮತ್ತು ಕುರ್ವಂಕನಾಡ ವೇಂಟೆಯದ ತನ್ನ ಭಾಗದ ಹಳ್ಳಿಗಳೊಳಗೆ ಚಿಕ್ಕಮಳಲಿ ಗ್ರಾಮ 1, ಹೊಸಹಳ್ಳಿಯ ಗ್ರಾಮ 1 ಹಾಗೂ ಕೆಂದಣಹಾಳ ಗ್ರಾಮದೊಳಗೆ ಅರ್ಧಭಾಗವನ್ನು 400 ಹೊನ್ನಿಗೆ ಮಾರಿದನು.

ಈ ಕ್ರಯ ವ್ಯವಹಾರ ಮುಗಿದ ಕೂಡಲೇ ದೇವರಾಜ ತನ್ನ ದಾನಶೀಲ ಸ್ವರೂಪಕ್ಕೆ ಅನುಗುಣವಾಗಿ, ತನ್ನ ತಾಯಿ ಸೀತಮ್ಮನಿಗೆ ಪುಣ್ಯ ಸಿಗಲೆಂದು ಉದ್ದೇಶಿಸಿ ಆ ಹೊಸಹಳ್ಳಿ ಗ್ರಾಮವನ್ನು ಅಲ್ಲಿನ ಪ್ರಧಾನ ದೈವ ರಾಮಚಂದ್ರದೇವರಿಗೆ ಹಾಗೂ 72 ಜನ ಮಹಾಜನರಿಗೆ ಸರ್ವಮಾನ್ಯವಾಗಿ ದಾನ ಮಾಡಿದನು; ಆ ಹಳ್ಳಿಗೆ ಆ ದೇವರ ಹಾಗೂ ತನ್ನ ಜನನಿಯ ಹೆಸರಿನ ಮೇರೆಗೆ ಶ್ರೀರಾಮಸೀತಾಪುರ ಎಂಬ ಹೊಸ ಹೆಸರನ್ನಿಟ್ಟನು. ಅವನು ಕಾಲುವೆ, ಗದ್ದೆ ಬೆದ್ದಲು, ತೋಟ ತುಡಿಕೆ, ಕಳ, ಕೊಠಾರ, ಸುಂಕ, ಸುವರ್ಣಾದಾಯ, ಒಕ್ಕಲು, ವೊಳವಾರು, ಹೊರವಾರು, ಮನೆ ನಿವೇಶನ ಎಲ್ಲವನ್ನೂ ಒಳಗೊಂಡ ಆ ಹಳ್ಳಿಯನ್ನು 108 ವೃತ್ತಿಗಳಾಗಿ ಮಾಡಿ, 8 ವೃತ್ತಿಗಳನ್ನು ಶ್ರೀರಾಮಚಂದ್ರ ದೇವರಿಗೂ ಮತ್ತು ಉಳಿದ ವೃತ್ತಿಗಳನ್ನು 72 ಮಹಾಜನರಿಗೂ ಸರ್ವಮಾನ್ಯವಾಗಿ ಮಾಡಿ ವಹಿಸಿಕೊಟ್ಟನು.[9] ಇದರೊಂದಿಗೆ ಆ ಗ್ರಾಮದಲ್ಲಿ 8 ಖಂಡುಗ ಗದ್ದೆ ಪೂರ್ವ ಮರ್ಯಾದೆಯಾಗಿ ಚೆಲ್ಲಪಿಳ್ಳೆ ರಾ(ಯ) ಎಂಬಾತನಿಗೆ ಸಂದಿದ್ದರಿಂದ, ಅದಕ್ಕೆ ಬದಲಾಗಿ ದೇವರಾಜನು ತನಗೆ ಹರಹಿನ ನಾಗಪಟ್ಟಣ ಸೀಮೆಯಲ್ಲಿ ಯಜಮಾನ ಭಾಗವಾಗಿ ನೀಡಲಾಗಿದ್ದ ಗದ್ದೆಯಲ್ಲಿ 20 ಖಂಡುಗ ಗದ್ದೆಯನ್ನು ದಾನವಾಗಿ ಕೊಟ್ಟನು. ಅವನು ಆ ಗ್ರಾಮದ ಚತುಸ್ಸೀಮೆಯ ಒಳಗಿದ್ದ ನಿಧಿ ನಿಕ್ಷೇಪ ಜಲ ಪಾಷಾಣ ಅಕ್ಷಿಣಿ ಆಗಾಮಿ ಸಿದ್ಧ ಸಾಧ್ಯ ಅಷ್ಟಭೋಗ ತೇಜ ಸ್ವಾಮ್ಯಗಳೂ ಆ ಶ್ರೀರಾಮಚಂದ್ರ ದೇವರಿಗೆ ಹಾಗೂ 72 ಜನ ಮಹಾಜನರಿಗೆ ಸೇರಿದ್ದುವು ಎಂಬುದಾಗಿ ಮತ್ತು ಆ ಸ್ವತ್ತನ್ನು ಅಡ ಇಡುವ, ಮಾರುವ, ವಿನಿಮಯ ಮಾಡುವ ಅಥವಾ ದಾನ ಮಾಡುವ ಅಧಿಕಾರ ಅವರದ್ದೇ[10] ಎಂಬುದನ್ನು ಖಚಿತವಾಗಿ ತಿಳಿಸಿ ದಾಖಲಿಸಿದನು. ಅವನು ಈ ಮೊದಲೇ 208 ವೃತ್ತಿಗಳನ್ನು ದೇವರಿಗೆ ಹಾಗೂ 76 ಗಣ್ಯರಿಗೆ ನೀಡಿದ್ದನು ಎಂಬ ಸೂಚನೆ ಶಾಸನದಲ್ಲಿದೆ.[11]

ಈ ಶಾಸನದ ಈ ವಿವರಗಳು ಈ ಕಾಲದಲ್ಲೂ ಸಹ ಸಣ್ಣ ಪ್ರಮಾಣದ ಪ್ರದೇಶಗಳ ನಿವಾಸಿಗಳು ಸಾಮುದಾಯಿಕ ಜೀವನ ಹಾಗೂ ಸಾಮೂಹಿಕ ಹೊಣೆಗಾರಿಕೆ ಮತ್ತು ಹಿತಕರ ವರ್ತನಾ ಮಾದರಿಗಳ ಸುಸಂಗತ ಸಂಪ್ರದಾಯಗಳನ್ನು ಅನುಸರಿಸಿ ಮುಂದುವರಿಸಿಕೊಂಡು ಬಂದರು ಎಂಬುದನ್ನು ಸಮರ್ಥಿಸುತ್ತವೆ. ಸಮುದಾಯದ ಹಿತದ ದೃಷ್ಟಿಯಿಂದ ಈ 'ಕೊಟ್ಟು-ತೆಗೆದುಕೊಳ್ಳುವ' ವ್ಯವಹಾರದಲ್ಲಿ ಹರಹುವಿನ ಮಹಾಜನರು ಹಾಗೂ ಯದುವಂಣ ಪ್ರಧಾನ ಪಾತ್ರಧಾರಿಗಳಾಗಿದ್ದರು, ಅವರನ್ನು ಆ ಗ್ರಾಮವಾಸಿಗಳು ತಮ್ಮ ನಾಯಕರೆಂಬುದಾಗಿ ಒಪ್ಪಿ ನಂಬಿಕೊಂಡಿದ್ದರು ಮತ್ತು ತಮ್ಮ ಸಮುದಾಯದ ಒಳಿತಿಗಾಗಿ ಯಾವುದೇ ವ್ಯವಹಾರವನ್ನು ನಡೆಸುವುದಕ್ಕೆ ಹಾಗೂ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆ ಗಣ್ಯರಿಗೆ ಪೂರ್ಣ ಅಧಿಕಾರ ನೀಡಿ, ಆ ಅಧಿಕಾರವನ್ನು ಗೌರವಿಸುತ್ತಿದ್ದರು ಎಂಬುದಾಗಿ ತರ್ಕಿಸಬಹುದು. ಆ ಗಣ್ಯರು ತಮ್ಮ ಪ್ರದೇಶದ ಸಂಪತ್ತನ್ನು ವೃದ್ಧಿಪಡಿಸುವುದರಲ್ಲಿ ಮಾತ್ರ ಆಸಕ್ತರಾಗಿದ್ದ ಕಾರಣ ಅವರು ಕಾವೇರಿ ನದಿಯ ನೀರು ತಮ್ಮ ಜಮೀನುಗಳಿಗೂ ಲಭ್ಯವಾಗಿ, ಕೃಷಿಕಾರ್ಯಗಳು ಸುಗಮವಾಗಿ ನಡೆಯುತ್ತಾ ಇರಲಿ ಎಂಬ ಸದುದ್ದೇಶದಿಂದ ದೇವರಾಜನು ತೋಡಿದ ಆ ಕಾಲುವೆಯನ್ನು ತಮ್ಮ ಹಳ್ಳಿಗೂ ವಿಸ್ತರಿಸುವಂತೆ ಅವನನ್ನು ಕೇಳಿಕೊಂಡರು.

ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ಹರವುವಿನ ನಿವಾಸಿಗಳು ಆತ್ಮ ಗೌರವವುಳ್ಳವರಾಗಿದ್ದರು. ಆದ್ದರಿಂದಲೇ ಅವರು ಇನ್ನೊಂದು ಸ್ಥಳಕ್ಕೆ ಸೇರಿದ್ದ ದಾನಶೀಲ ವ್ಯಕ್ತಿಯು ಮಾಡಿದ ಉಪಕಾರಕ್ಕೆ ಕೃಜ್ಞತೆ ಸಲ್ಲಿಸದೇ, ಅವನ ಕಾರ್ಯಕ್ಕೆ ತಕ್ಕ ಪ್ರತಿಫಲ ನೀಡದೆ ಅವನಿಂದ ಏನನ್ನೂ ಉಚಿತವಾಗಿ ಪಡೆಯಲು ಇಚ್ಛಿಸಲಿಲ್ಲ. ಅವರು ತಮ್ಮ ಗಣ್ಯರ ಮೂಲಕ ದೇವರಾಜನಿಗೆ ಕೃಷಿ ಉತ್ಪನ್ನದಲ್ಲಿ ಪಾಲುಗಳನ್ನು ನೀಡುವುದರ ಮೂಲಕ ಅವನಿಗೆ ವಂದನೆಗಳನ್ನು ಸಲ್ಲಿಸಿದರಲ್ಲದೆ, ತಮ್ಮ ಘನತೆ, ಗೌರವ, ಪ್ರತಿಷ್ಠೆಗಳನ್ನು ಕಾಯ್ದುಕೊಂಡರು.

ದೇವರಾಜನು ಇನ್ನೂ ಒಂದು ಹೆಜ್ಜೆ ಮುಂದೆ ಹೋದನು ಈ ವಿಷಯದಲ್ಲಿ. ಅವನು ಕಾಲುವೆ ತೋಡಿಸಿ ಕೊಟ್ಟ ಕಾರಣ ಹೊಸಹಳ್ಳಿಯನ್ನು ಪಡೆದಿದ್ದರೂ, ಅದರ ಮೇಲಿನ ಎಲ್ಲಾ ಅಧಿಕಾರಗಳು ಮಹಾಜನರಿಗೇ ಸೇರಿದ್ದಿತು: ಅದನ್ನು ಕ್ರಯಕ್ಕೆ ಪಡೆದ ನಂತರವೇ ಅದರ ಒಡೆತನ ಅವನಿಗೆ ಲಭಿಸಿತು. ಅನಂತರ ಅವನು ಆ ಹಳ್ಳಿಯನ್ನು 108 ವೃತ್ತಿಗಳಾಗಿ ಮಾಡಿ ಆ ಗ್ರಾಮದ ಶ್ರೀ ರಾಮಚಂದ್ರ ದೇವರಿಗೆ ಮತ್ತು ವಿವಿಧ ವೇದಶಾಖೆ ಹಾಗೂ ಗೋತ್ರಗಳಿಗೆ ಸೇರಿದ್ದ ಮಹಾಜನರಿಗೆ ದಾನ ಮಾಡಿ ಬಿಟ್ಟನು. ಆ ದಾನ ಪ್ರತಿಗ್ರಹಿ ಮಹಾಜನರಲ್ಲಿ 57 ಜನ ಯಜುರ್ವೇದ ಶಾಖೆಗೂ, 10 ಮಂದಿ ಋಗ್ವೇದ ಶಾಖೆಗೂ, ಇಬ್ಬರು ಸಾಮವೇದ ಶಾಖೆಗೂ, ಮತ್ತೆ ಇಬ್ಬರು ಶುಕ್ಲ ಯಜುರ್ವೇದ ಶಾಖೆಗೂ ಸೇರಿದ್ದವರಾಗಿದ್ದರು. ಈ ಕೆಳಗಿನ ಪಟ್ಟಿಯಿಂದ ಅವರು ವಿಭಿನ್ನ ಗೋತ್ರಗಳನ್ನು ಹೊಂದಿದ್ದರು ಎಂಬುದು ತಿಳಿದು ಬರುತ್ತದೆ.

ಗೋತ್ರದ ಹೆಸರು	ಮಹಾಜನರ ಸಂಖ್ಯೆ	ಗೋತ್ರದ ಹೆಸರು	ಮಹಾಜನರ ಸಂಖ್ಯೆ
1. ಆತ್ರೇಯ	11	2. ಕಾಶ್ಯಪ	1
3. ಕೌಶಿಕ	4	4. ಕೌಂಡಿನ್ಯ	12
5. ಗರ್ಗ	2	6. ಗವಿಲದ	2
7. ಗವಿಷ್ಟಳ	1	8. ಗೌತಮ	1
9. ಭಾರದ್ವಾಜ	13	10. ರುಧಿತ	1
11. ರುಪ	1	12. ಲೋಹಿತ	2
13. ವತ್ಸ	7	14. ವಸಿಷ್ಟ	3
15. ವಾಧೂಲ	1	16. ವಿಶ್ವಾಮಿತ್ರ	2
17. ಶಠಮರ್ಷಣ	1	18. ಸರಸ್ವತಿ	1
19. ಸುವತ್ಸ	1	20. ಹಾರಿತ	5

ದಾನವನ್ನು ಸ್ವೀಕರಿಸಿದವರ ಹೆಸರುಗಳು ಹಾಗೂ ಮತ್ತಿತರ ವಿವರಗಳು ಮತ್ತು ಅವರು ಪಡೆದ ವೃತ್ತಿಗಳ ಸಂಖ್ಯೆಯ ಪಟ್ಟಿಯನ್ನು ಪರಿಶೀಲಿಸಿದರೆ, ಅವರು ಸ್ಮಾರ್ತ, ಮಾಧ್ವ, ವೈಷ್ಣವ ಹಾಗೂ ಶ್ರೀವೈಷ್ಣವ ಧಾರ್ಮಿಕ ಪಂಥಗಳಿಗೆ ಮತ್ತು ಕರ್ಣಾಟಕಕ್ಕೆ ಮಾತ್ರವಲ್ಲದೆ, ಆಂಧ್ರಪ್ರದೇಶ ಹಾಗೂ ತಮಿಳುನಾಡಿಗೆ ಸೇರಿದ್ದವರೆಂಬುದು ಗೋಚರಕ್ಕೆ ಬರುತ್ತದೆ. ಆರಾಧ್ಯರೊಬ್ಬರೂ ಸಹ ದಾನ ಪ್ರತಿಗ್ರಹಿಯಾಗಿದ್ದರೆಂಬುದು ಗಮನಾರ್ಹವಾದುದು. ಬಳೆಯ ತಿಮ್ಮಯ್ಯ ಮುಂತಾದ ಹೆಸರುಗಳನ್ನು ನೋಡಿದಾಗ ಬಹುಶಃ ದಾನ ಸ್ವೀಕರಿಸಿದವರೆಲ್ಲರೂ ಬ್ರಾಹ್ಮಣರೇ ಆಗಿರಲಿಲ್ಲ ಮತ್ತು ಆ ಗ್ರಾಮದ ವಿವಿಧ ಸಾಮಾಜಿಕ ವರ್ಗಗಳ ಮುಖ್ಯ ಸದಸ್ಯರನ್ನೆಲ್ಲಾ ಮಹಾಜನರೆಂದು ಪರಿಗಣಿಸುತ್ತಿದ್ದಿರಬೇಕು ಎಂಬುದಾಗಿ ಊಹಿಸಬಹುದಲ್ಲವೇ? ಗವಿಲದ, ಗವಿಷ್ಟಳ, ರುಧಿತ, ರುಪ ಮುಂತಾದ ಅಪರೂಪದ ಗೋತ್ರದ ಹೆಸರುಗಳನ್ನು ಮತ್ತು ಕೊಳಪರ ಅಯ್ಯರ್, ಅಪ್ಪಾರಯ್ಯ ಅಪ್ಪಯ್ಯ, ಜಂನಿಭಟ್ಟ, ಆದಿಹಲುಭಟ್ಟ ಮುಂತಾದ ವಿಲಕ್ಷಣವಾಗಿದ್ದ ವೈಯಕ್ತಿಕ ನಾಮಗಳನ್ನು ಕಾಣಬಹುದು. ಈ ದಾನ ಪ್ರತಿಗ್ರಹಿಗಳಲ್ಲಿ ಇಬ್ಬರಿಗೆ ಮಾತ್ರ ತಲಾ 3 ವೃತ್ತಿಗಳನ್ನು, ನಾಲ್ವರಿಗೆ

ತಲಾ 2 ವೃತ್ತಿಗಳನ್ನು, 7 ಜನರಿಗೆ ಒಂದೂಮುಕ್ಕಾಲು ವೃತ್ತಿಗಳನ್ನು, 26 ಮಂದಿಗೆ ತಲಾ ಒಂದೂವರೆ ವೃತ್ತಿಗಳನ್ನು, 17 ಜನರಿಗೆ ತಲಾ ಒಂದೂಕಾಲು ವೃತ್ತಿಗಳನ್ನು ಮತ್ತು 15 ಮಂದಿಗೆ ತಲಾ ಒಂದೊಂದು ವೃತ್ತಿಗಳನ್ನು ನೀಡಲಾಗಿದ್ದಿತು. ಆದರೆ ಉಳಿದ ಒಬ್ಬ ವ್ಯಕ್ತಿಗೆ ಎಷ್ಟು ವೃತ್ತಿಗಳನ್ನು ನೀಡಲಾಯಿತೆಂಬುದು ಸ್ಪಷ್ಟವಾಗಿಲ್ಲ. ಒಂದೂಮುಕ್ಕಾಲು ಹಾಗೂ ಒಂದೂಕಾಲು ವೃತ್ತಿಗಳನ್ನು ದಾನವಾಗಿ ಕೊಟ್ಟಿರುವುದು ಸ್ವಲ್ಪ ಆಶ್ಚರ್ಯವನ್ನು ಉಂಟುಮಾಡುವ ಅಂಶವೇ. ಈ ವೃತ್ತಿ ಹಂಚಿಕೆಯಲ್ಲಿ ಕಂಡುಬರುವ ಅಸಮತೆಯ ಕಾರಣ ಈ ವೃತ್ತಿಗಳನ್ನು ಆ ದಾನ ಸ್ವೀಕಾರಮಾಡಿದವರಿಗೆ ಸಮಾಜದಲ್ಲಿದ್ದ ಸ್ಥಾನಮಾನಗಳ ಶ್ರೇಣಿಗೆ ಅನುಸಾರವಾಗಿ ಹಂಚಲಾಯಿತೇನೋ ಎಂಬ ಒಂದು ಯೋಚನೆಯ ಅಲೆ ಏಳಬಹುದಲ್ಲವೇ?

ಆದರೆ ಈ ಅಸಮತೆಯ ಕಾರಣ ಆ ಜನರಲ್ಲಿ ಯಾವ ವಿಧವಾದ ನಿರಾಸೆ, ಅಸೂಯೆ, ಕೋಪ-ತಾಪಗಳು ತಲೆದೋರಲಿಲ್ಲ ಎಂಬುದು ಸ್ತುತ್ಯರ್ಹವಾದ ಅಂಶ. ಅದಕ್ಕೆ ಕಾರಣ ಅವರು ತಮ್ಮ ಸಮುದಾಯದೊಂದಿಗೆ ಸಂಪೂರ್ಣವಾಗಿ ತಾದಾತ್ಮ್ಯ ಭಾವವನ್ನು ಬೆಳಸಿಕೊಂಡಿದ್ದರು ಮತ್ತು ತಮ್ಮ ಪ್ರದೇಶದ ಸಂಪತ್ತಿನ ವೃದ್ಧಿ ಮತ್ತು ತಮ್ಮ ಸಮುದಾಯದ ಕಲ್ಯಾಣ ಸಾಧನೆ ಅವರ ಮುಖ್ಯ ಗುರಿಯಾಗಿದ್ದಿತು. ಅವರಿಗೆ ಈ ವ್ಯವಹಾರದಿಂದ ದ್ವಿಮುಖ ಲಾಭ ದೊರಕಿತು. ಕಾರಣ ಅವರಿಗೆ ಕಾಲುವೆ ವಿಸ್ತರಣೆಯಾಗಿ ಕಾವೇರಿ ನದಿ ನೀರು ಸಿಕ್ಕಿ ಕೃಷಿ ಕಾರ್ಯ ಸುಗಮವಾಯಿತು ಮತ್ತು ದೇವರಾಜನಿಗೆ ಅವನಿಂದ ಪಡೆದಿದ್ದ ಉಪಕಾರ ಸ್ಮರಣಾರ್ಥವಾಗಿ ನೀಡಲಾದ ಹಳ್ಳಿಯನ್ನು ಪುನಃ ಪಡೆದುಕೊಂಡರು. ಇದರಿಂದ ಭೂದಾನ ಮಾಡಿದರೆ ಪುಣ್ಯಾರ್ಜನೆಯಾಗುತ್ತದೆ ಎಂಬ ನಂಬಿಕೆ ದೃಢವಾಗಿದ್ದಿತು ಎಂಬುದು ದೃಢಪಡುತ್ತದೆ. ಆದ್ದರಿಂದ ಈ ಸಮಗ್ರ ವ್ಯವಹಾರವು ಧಾರ್ಮಿಕ-ಆರ್ಥಿಕ ಸ್ವರೂಪದ್ದಾಗಿತ್ತೆಂಬುದಾಗಿ ಹೇಳಬಹುದು. ದೇವರಾಜನೂ ಪ್ರಶಂಸಾರ್ಹನೇ. ಕಾರಣ ತಾನು ಮಾಡಿದ ಉಪಕಾರಕ್ಕಾಗಿ ಹರಹುವಿನ ಮಹಾಜನರು ಹಾಗೂ ಯದುವಂಣನಿಂದ ಸ್ವೀಕರಿಸಿದ್ದ ಪಾಲುಗಳನ್ನು ಪುನಃ ಅವರಿಗೆ ದಾನವಾಗಿ ಕೊಟ್ಟನಲ್ಲದೆ, ಗದ್ದೆಗಳಲ್ಲದೆ ಕ್ರಯಕ್ಕೆ ತೆಗೆದುಕೊಂಡಿದ್ದ ಹಳ್ಳಿಯನ್ನು ಸಹ ಸರ್ವಮಾನ್ಯವಾಗಿ ಅಲ್ಲಿನ ದೇವರಿಗೆ ಹಾಗೂ ಗಣ್ಯರಿಗೆ ಬಿಟ್ಟುಕೊಟ್ಟನು. ಇದರಿಂದ ವ್ಯಕ್ತಿಗಳು ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ಜನೋಪಯೋಗಿ ಕಾರ್ಯಗಳಲ್ಲಿ ವಹಿಸುತ್ತಿದ್ದ ಆಸಕ್ತಿ ಎಷ್ಟು ಅತೀವವಾಗಿದ್ದಿತೆಂಬುದು ಬಹು ಸ್ಪಷ್ಟವಾಗುತ್ತದೆ.

ಒಟ್ಟಿನಲ್ಲಿ, ಈ ಶಾಸನದಲ್ಲಿ ನಿರೂಪಿತವಾಗಿರುವ ವಿವರಗಳಿಂದ ಆ ವ್ಯವಹಾರ ಹಾಗೂ ದಾನ ಕಾರ್ಯ ಅದ್ವಿತೀಯವಾಗಿದ್ದಿತೆನ್ನಬಹುದು. ಕಾರಣ ದಾನ ನೀಡಿದವನ ಹಾಗೂ ದಾನ ಸ್ವೀಕರಿಸಿದವರ ಮತ್ತು ಸ್ಥಳೀಯ ಜನರ ಗುರಿ ಹಾಗೂ ಅವಶ್ಯಕತೆಗಳಲ್ಲಿ ಸಾಮ್ಯವಿದ್ದಿತು, ಅದರಿಂದಲೇ ಒಂದು ನಿರ್ದಿಷ್ಟ ಸನ್ನಿವೇಶಕ್ಕೆ ಸಾಮೂಹಿಕ ಪ್ರತಿಕ್ರಿಯೆ ತೋರುವುದು ಸಾಧ್ಯವಾಯಿತು. ಮಹಾಜನರಿಗೆ ಆ ಹಳ್ಳಿಯಲ್ಲಿ ಆಡಳಿತ ಹಾಗೂ ಕಂದಾಯದ ಅಧಿಕಾರವಿದ್ದಿತು. ಸ್ಥಳೀಯರು ಅವರ ತೀರ್ಮಾನಕ್ಕೆ ಬೆಂಬಲ ಸೂಚಿಸಿದರು. ಕಾರಣ ತಮ್ಮ ಗ್ರಾಮದ ಹಿತ ಸಾಧನೆಯೇ ಆ ತೀರ್ಮಾನಕ್ಕೆ ಮೂಲವಾಗಿದ್ದಿತು ಎಂಬುದನ್ನು ಆ ಗ್ರಾಮವಾಸಿಗಳು ಅರ್ಥಮಾಡಿಕೊಂಡಿದ್ದರು. ಹೀಗೆ ಸಮುದಾಯ ಕಲ್ಯಾಣ ಸಾಧನೆಯೇ ಮುಖ್ಯ ಗುರಿಯಾಗಿ ಹೊಂದಿದ್ದ, ಸಂಪ್ರದಾಯಾಭಿಮುಖವಾಗಿದ್ದ ಮತ್ತು ಸಹಕಾರಕ ಸಂಬಂಧಗಳಿಂದ ಕೂಡಿದ್ದ[12] ಹರಹು ಗ್ರಾಮದ ಸಮುದಾಯ ಜೀವನದ ಸುಂದರ ಚಿತ್ರಣ ಈ ಶಾಸನದಲ್ಲಿ ಪ್ರತಿಬಿಂಬಿತವಾಗಿದೆ ಎನ್ನಬಹುದು.

ಟಿಪ್ಪಣಿಗಳು

1. ಎಕ, VI, ಕಡೂರು 102.
2. ಅದೇ, ''ಕಾಲಕ್ಷೇಪೋ ನ ಕರ್ತಬ್ಯ ಆಯುಃ ಕ್ಷೀಣಂ ದಿನೇ ದಿನೇ । ಯಮಸ್ಯ ಕರುಣಾ ನಾಸ್ತಿ ಧರ್ಮಸ್ಯ ತ್ವರಿತಾಗತಿಃ ॥''
3. ಅದೇ, ಚಿಕ್ಕಮಗಳೂರು 94, ''ತ್ರೈಲೋಕ್ಯ ದೀಪಕೋ ಧರ್ಮಃ''.
4. ಅದೇ, VII, ಶಿಕಾರಿಪುರ 131, ''ನಾಸ್ತಿ ಧರ್ಮ ಸಮೋ ಬಂಧುಃ''.
5. ಅದೇ, VIII, ನಗರ 35, ''ಧರ್ಮಂ ಪ್ರಾಗೇವ ಚಿಂತಯೇತ್''.

6. ಸೋಮೇಶ್ವರದೇವ, *ಅಭಿಲಷಿತಾರ್ಥ ಚಿಂತಾಮಣಿ,* (ಸಂ.) ಆರ್. ಶ್ಯಾಮಶಾಸ್ತ್ರಿ, 1926, 1.72; *ಸೌಇಂಇ* XI ii, 177.

7. ಲಾಂಗ್, ಕುರ್ತ್ ಮತ್ತು ಗ್ಲಾಡಿಸ್ ಈಗಲ್ ಲಾಂಗ್, 1961, *ಕಲೆಕ್ಟಿವ್ ಡೈನಾಮಿಕ್ಸ್,* ಪಬ್ಲಿಕ್ ಒಪಿನಿಯನ್ ಮೇಲಿನ ಅಧ್ಯಾಯ.

8. *ಎಕ,* (ಪರಿಷ್ಕೃತ) VI, ಪಾಂಡವಪುರ 19, ಪು. 115-120, 495-497.

9. *ಅದೇ,* ಪಂಕ್ತಿಗಳು 25-70, ಪು. 117-119.

10. *ಅದೇ,* ಪಂಕ್ತಿಗಳು 85-87, ಪು. 119.

11. *ಅದೇ,* ಪಂಕ್ತಿಗಳು 71-76, ಪು. 119.

12. ಚಾರ್ಲ್ಸ್ ಹೊರ್ಟನ್ ಕೂಲಿ, 1962, *ಸೋಷಿಯಲ್ ಆರ್ಗನೈಜೇಶನ್,* ಪು. 23-24, 30.

10. ದಕ್ಷಿಣ ಕನ್ನಡದಲ್ಲಿ ಇತ್ತೀಚೆಗೆ ದೊರೆತ ಮೂರು ವಿಜಯನಗರ ಶಾಸನಗಳು

ಬಿ. ವಸಂತ ಶೆಟ್ಟಿ

ವಿಜಯನಗರದ ಎರಡು ಆಡಳಿತ ವಿಭಾಗಗಳಾದ ಬಾರಕೂರು ಮತ್ತು ಮಂಗಳೂರು ರಾಜ್ಯಗಳನ್ನು ಹೊಂದಿದ್ದ ದಕ್ಷಿಣ ಕನ್ನಡ ಜಿಲ್ಲೆ ವಿಜಯನಗರದ ಆಡಳಿತಕಾಲದುದ್ದಕ್ಕು ಸದಾ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ಕೂಡಿತ್ತು. ವಿದೇಶಿ ವ್ಯಾಪಾರ ಸಂಪರ್ಕದ ದೃಷ್ಟಿಯಿಂದ ಹೆಚ್ಚಿನ ಮಹತ್ವ ಪಡೆದಿದ್ದ ಈ ಕರಾವಳಿ ಪ್ರದೇಶದಲ್ಲಿ ವಿಜಯನಗರವು ಆಡಳಿತದ ಸುಭದ್ರತೆಗಾಗಿ ಸ್ಥಳೀಯ ಅರಸು ಮನೆತನಗಳನ್ನು ಹಾಗೂ ಪ್ರಮುಖ ಭೂಮಾಲಿಕ ವರ್ಗವನ್ನು ಬಳಸಿಕೊಂಡಿತ್ತು. ಈ ಹಿನ್ನೆಲೆಯಲ್ಲಿ, ಇತ್ತೀಚೆಗೆ ದೊರೆತ ಮೂರು ವಿಜಯನಗರ ಶಾಸನಗಳ ಮಹತ್ವವನ್ನು ಪರೀಶೀಲಿಸುವುದು ಈ ಪ್ರಬಂಧದ ಉದ್ದೇಶ.

ಉಡುಪಿ ತಾಲೂಕಿನ ನೀಲಾವರ ಗ್ರಾಮದ ಯಳ್ಳಂಪಳ್ಳಿಯ ವಿಷ್ಣುಮೂರ್ತಿ ದೇವಸ್ಥಾನದ ಬಳಿ ದೊರೆತಿರುವ ಶಾಸನವು ವಿಜಯನಗರದ ದೊರೆ ಇಮ್ಮಡಿ ಹರಿಹರನ ಆಳ್ವಿಕೆಗೆ ಸೇರಿದ್ದು. ಶಕ 1305, ರುಧಿರೋದ್ಗಾರಿ ಸಂವತ್ಸರದಲ್ಲಿ (ಕ್ರಿ.ಶ. 1383) ಇಮ್ಮಡಿ ಹರಿಹರನ ನಿರೂಪದಿಂದ ಜಕ್ಕಣ್ಣ ಒಡೆಯನು ಬಾರಕೂರು ರಾಜ್ಯದ ಆಡಳಿತ ನಡೆಸುತ್ತಿದ್ದಾಗ ರಾಜಕಾರ್ಯದಲ್ಲಿ ನಿರತನಾಗಿದ್ದ ಅಂಣ ನಿಡಂಬೂರನು ಮರಣ ಹೊಂದಿದ ಪ್ರಯುಕ್ತ ಅವನ ಮಗ ಶಿವ ನಿಡಂಬೂರನಿಗೆ ಪರಿಹಾರ ನೀಡಿದ್ದನ್ನು ದಾಖಲಿಸುವ ಉದ್ದೇಶದಿಂದ ಈ ಶಾಸನವನ್ನು ಬರೆಸಲಾಯಿತು. ಆಗಿನ ಕನ್ನಡ ಭಾಷೆ ಮತ್ತು ಲಿಪಿಯಲ್ಲಿರುವ ಈ ಕಲ್ಬರಹ 29 ಸಾಲುಗಳನ್ನು ಹೊಂದಿದೆ. ಪರಿಹಾರವನ್ನು ನೀಡುವಾಗ ಹೊನ್ನಾವರದ ಮಲ್ಲಪ್ಪ ಒಡೆಯ ಹಾಜರಿದ್ದುದಾಗಿಯೂ, ಮುದ್ದೆಯ ದಣ್ಣಾಯಕನ ಆಜ್ಞೆಯಂತೆ ಈ ಪರಿಹಾರ ಒದಗಿಸಿದ್ದಾಗಿಯೂ ಶಾಸನ ತಿಳಿಸುತ್ತದೆ. ಯಳ್ಳಂಪಳ್ಳಿ, ಪೆಜಮಂಗೂರು ಗ್ರಾಮಗಳು ಹಾಗೂ ಕುತುಪಾಡಿಯ ಹರವರಿಯಿಂದ ವಸೂಲಾಗುವ ತೆರಿಗೆಯಿಂದ 1157 ಕಾಟಿಗದ್ಯಾಣಗಳನ್ನು ಶಿವ ನಿಡಂಬೂರನಿಗೆ ಸರ್ವಮಾನ್ಯವಾಗಿ ನೀಡಿದ್ದನ್ನು ಇಲ್ಲಿ ದಾಖಲಿಸಲಾಗಿದೆ.

ಅಣ್ಣ ನಿಡಂಬೂರನ ಮರಣಕ್ಕೆ ಕಾರಣವಾದ ಘಟನೆಯ ವಿವರ ಈ ಶಾಸನದಿಂದ ತಿಳಿಯುವುದಿಲ್ಲ. ಆದರೆ ಇಮ್ಮಡಿ ಹರಿಹರನ ಆಳ್ವಿಕೆಯ ಇನ್ನೊಂದು ಶಾಸನವು [1] ಕ್ರಿ.ಶ. 1399 ರಲ್ಲಿ ಇದೇ ರೀತಿ ರಾಜಕಾರ್ಯದಲ್ಲಿ ಮರಣ ಹೊಂದಿದ ಬಗ್ಗೆ ಪರಿಹಾರ ಒದಗಿಸಿದ್ದನ್ನು ತಿಳಿಸುತ್ತದೆ. ವಿಜಯನಗರದ ವಿರುದ್ಧದ ದಂಗೆಯೊಂದನ್ನು ಅಡಗಿಸಲು ಸಾಮ್ರಾಟನ ಪರವಾಗಿ ಹೋರಾಡಿ ಮಡಿದವರಿಗೆ ಆ ಪರಿಹಾರ ನೀಡಲಾಗಿತ್ತು. ಬಾರಕೂರಿನ ರಾಜ್ಯಪಾಲನಿಗೆ ಆಡಳಿತದಲ್ಲಿ ಕಟ್ಟಳೆಯವರಾಗಿ ನೆರವಾಗುತ್ತಿದ್ದ ನಿಡಂಬೂರರೂ ಅವರಲ್ಲಿ ಸೇರಿದ್ದರು. ಇಂತಹದೇ ಯಾವುದೋ ಘಟನೆ 1383 ರಲ್ಲೂ ನಡೆದಿರಬಹುದು. ಪ್ರಮುಖ ಭೂಮಾಲಿಕ ಮನೆತನದವರಾದ ನಿಡಂಬೂರರು ಕಟ್ಟಳೆಯವರಾಗಿ, ವಿಜಯನಗರದ ರಾಜ್ಯಪಾಲರು ಆ ಪ್ರದೇಶದಲ್ಲಿ ಇದಿರಿಸುತ್ತಿದ್ದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಪೂರ್ಣ ಸಹಕಾರ ನೀಡುತ್ತಿದ್ದರು. ಅಂತೆಯೇ ಸ್ಥಳೀಯ ಅರಸು ಮನೆತನಗಳಾದ ತೊಳಹರು, ಚೌಟರು, ಬಂಗರು, ಅಜಲರು ಮುಂತಾದವರ ರಾಜಕೀಯ ಪ್ರಭಾವವನ್ನು 'ಕಟ್ಟಳೆಯವರು' ಎಂಬ ನೆಲೆಯಲ್ಲಿ ವಿಜಯನಗರದ ಆಡಳಿತ ಬಳಸಿ ಕೊಳ್ಳುತ್ತಿದ್ದುದು ಬೇರೆ ದಾಖಲೆಗಳಿಂದಲೂ ತಿಳಿಯುತ್ತದೆ.[2]

ಯಳ್ಳಂಪಳ್ಳಿಯ ಶಾಸನದಲ್ಲಿ ಗ್ರಾಮದ ಆಡಳಿತದ ಜವಾಬ್ದಾರಿ ಹೊಂದಿದ್ದ 'ಊರು-ಹತ್ತು ಪ್ರಜೆ'ಯ ಪ್ರಸ್ತಾಪವಿದೆ. ಆ ಊರಿನ ತೆರಿಗೆಯಾದ 357 ಹೊನ್ನಿನಲ್ಲಿ 34 ಹೊನ್ನನ್ನು 'ಊರ ಉಪಚಾರ' (ಪ್ರಾಯಶಃ ಗ್ರಾಮಸಭೆಯ ವೆಚ್ಚಕ್ಕಿರಬಹುದು) ಕ್ಕೆಂದು ತೆಗೆದಿರಿಸಿ ಉಳಿದ 323 ಹೊನ್ನನ್ನು ಪರಿಹಾರದ ಬಗ್ಗೆ ತೆರುತ್ತಾ ಬರಬೇಕೆಂದು ನಿರ್ದೇಶಿಸಲಾಗಿದೆ.

ಇಂದು ನೀಲಾವರ ಗ್ರಾಮದ ಒಂದು ಭಾಗವಾಗಿರುವ ಯಳ್ಳಂಪಳ್ಳಿ ಆಗ ಒಂದು ಪ್ರತ್ಯೇಕ ಗ್ರಾಮವಾಗಿತ್ತೆಂಬುದು ಗಮನಾರ್ಹ. ಆಗಿನ ಸ್ಥಳನಾಮ 'ಯಳುದಂಪಳಿ' ಈಗ ಹ್ರಸ್ವಗೊಂಡು ಯಳ್ಳಂಪಳ್ಳಿಯಾಗಿದೆ. ಅಲ್ಲಿನ ದೇವಾಲಯದ ಪ್ರಾಚೀನತೆಯನ್ನು

ನಿರ್ಧರಿಸುವಲ್ಲಿಯೂ ಈ ಶಾಸನವು ಉಪಯುಕ್ತ ಆಕರವಾಗಿದೆ. ರಾಜಕಾರ್ಯದಲ್ಲಿ ನಿರತರಾಗಿದ್ದಾಗ ಮಡಿದವರ ಸಂಬಂಧಿಕರಿಗೆ ಪರಿಹಾರ ನೀಡಿದ್ದನ್ನು ತಿಳಿಸುವುದರಿಂದ ಹಾಗೂ ಗ್ರಾಮಾಡಳಿತದ ವಿವರಗಳನ್ನು ಒಳಗೊಂಡಿರುವುದರಿಂದ ವಿಜಯನಗರದ ಆಡಳಿತ ವ್ಯವಸ್ಥೆಯ ಅಧ್ಯಯನಕ್ಕೆ ತುಂಬಾ ಉಪಯುಕ್ತವಾಗಿದೆ.[3]

ವಿಜಯನಗರದ ಬಾರಕೂರು ಮತ್ತು ಮಂಗಳೂರು ರಾಜ್ಯಗಳಲ್ಲಿ ಭೂ ಒಡೆತನ ಹೊಂದಿದ್ದ ''ಜನನಿ''ಗಳು ಗ್ರಾಮಾಡಳಿತ ಮತ್ತು ಭೂ ವ್ಯವಹಾರಗಳಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದರು. ಈ 'ಜನನಿ'ಗಳ ಮಹತ್ವವನ್ನು ತಿಳಿಸುವ ಶಾಸನವೊಂದು ಇತ್ತೀಚೆಗೆ ಕುಂದಾಪುರ ತಾಲೂಕು ಅಜ್ರಿ ಗ್ರಾಮದ ತೆಂಕು ಬಯಲಿನಲ್ಲಿ ದೊರೆತಿದೆ. 29 ಸಾಲುಗಳ ಈ ಕನ್ನಡ ಶಾಸನ ಇಮ್ಮಡಿ ದೇವರಾಯನ ಆಡಳಿತ ಕಾಲದ್ದು. ಇದರ ತೇದಿ ಶಕ 1349 ಸಂದು ವರ್ತಮಾನ ಪರಾಭವ ಸಂವತ್ಸರ, ಅಂದರೆ ಕ್ರಿ.ಶ. 1428. ಆಗ ಬಾರಕೂರು ರಾಜ್ಯದ ಆಡಳಿತ ಮಹಾಮಂತ್ರಿ ನರಸಿಂಹದೇವ ಒಡೆಯನ ಕೈಯಲ್ಲಿತ್ತು. ಅಜ್ರಿ (ಅಜರೆ) ಮುಂಗಿನಾಡಿನ ಅಧಿಕಾರಿ ಅಚಪ್ಪನ ಆಡಳಿತಕ್ಕೊಳಪಟ್ಟಿತ್ತು. ಈ ಗ್ರಾಮದಲ್ಲಿ 6 ಜನ ಜನನಿಗಳಿದ್ದರೆಂದು ತಿಳಿಸುವ ಈ ಶಾಸನ ಅವರಲ್ಲಿ ಮುಖ್ಯರಾದ ಮೂವರನ್ನು ಹೆಸರಿಸುತ್ತದೆ. ಅವರೆಂದರೆ - ತನ್ನು ಹೆಗ್ಗಡೆ, ಬೀರ ಹೆಗ್ಗಡೆ ಮತ್ತು ಚೋಣು ಹೆಗ್ಗಡೆ. ಮೂವರು ಜನನಿಗಳು ಮಾಡಿದ ಕಟ್ಟು ಅಥವಾ ಕಾನೂನಿನ ವಿವರವನ್ನು ಶಾಸನ ಒಳಗೊಂಡಿದೆ. ತೆಂಕ ಬಯಲು, ಹೊಳೆತಳಮನೆ, ತೋಡು ಮತ್ತು ಅಂಬಲಗೆರೆ ಇಲ್ಲಿಂದ ಅಧಿಕಾರಿಗಳು ತೆರಿಗೆ ವಸೂಲು ಮಾಡಲಿಕ್ಕಿಲ್ಲ, ಅಲ್ಲಿಗೆ ಬಂಟರು (ಸೈನಿಕರು) ಮತ್ತು ಅಧಿಕಾರಿ ಬರಸಲ್ಲದು ಎಂಬುದಾಗಿ ಶಾಸನ ನಿರ್ದೇಶಿಸುತ್ತದೆ. ಇದು ತಾವು ಮಾಡಿದ ಮಾನ್ಯ, ಈ ಮಾನ್ಯವನು ತಾವು ಸಲಿಸಿಕೊಡುವೆವೆಂದು ಜನನಿಗಳು ತೀರ್ಮಾನಿಸಿದ್ದಾರೆ. ಈ ಶಾಸನದ ಒಕ್ಕಣೆ ಗ್ರಾಮದಲ್ಲಿ ಜನನಿಗಳು ಎಷ್ಟು ಮಹತ್ವ ಹೊಂದಿದ್ದರೆಂಬುದನ್ನು ಸೂಚಿಸುತ್ತದೆ. ಭೂಮಿಯ ಹಂಚಿಕೆ, ಕ್ರಯ-ವಿಕ್ರಯ, ಅಡವು ಇತ್ಯಾದಿ ಸಂದರ್ಭಗಳಲ್ಲಿ ಇವರು ಹಾಜರಿರುತ್ತಿದ್ದರು, ಸಾಕ್ಷಿಗಳಾಗಿರುತ್ತಿದ್ದರು. ಅವರನ್ನು ಕರೆಸಿಕೊಂಡಾಗ ಅವರಿಗೆ ಮರ್ಯಾದೆಯಾಗಿ ಹಣ ನೀಡುವ ಕ್ರಮವೂ ಇತ್ತೆಂಬುದು ಉಡುಪಿ ತಾಲೂಕಿನ ಹೆರಂಜೆಯಲ್ಲಿ ದೊರೆತ ಶಾಸನದಿಂದ ತಿಳಿಯುತ್ತದೆ.[4] ಭೂ ಒಡೆತನ ಹೊಂದಿದ್ದ ಅತೀ ಪ್ರತಿಷ್ಠಿತ ಹಾಗೂ ಪ್ರಭಾವಿ ವ್ಯಕ್ತಿಗಳನ್ನು ಆಯ್ದು 'ಜನನಿ'ಗಳೆಂದು ಮಾನ್ಯತೆ ನೀಡುತ್ತಿದ್ದಿರಬೇಕೆಂದು ತಿಳಿಯಲು ಅವಕಾಶವಿದೆ.

ವಿಜಯನಗರದಲ್ಲಿ ಕೃಷ್ಣದೇವರಾಯನ ಆಳ್ವಿಕೆಯ ಸಮಯ ಬಾರಕೂರು ರಾಜ್ಯವನ್ನು ವಿಠ್ಠರಸ ಒಡೆಯನು ಆಳುತ್ತಿದ್ದಾಗ ಕ್ರಿ.ಶ. 1524ರಲ್ಲಿ (ಶಕ 1445 ಸಂದು ಆರನೆಯ ವರ್ತಮಾನ ತಾರಣ ಸಂವತ್ಸರ)-ವಿಠ್ಠರಸ ಒಡೆಯನು ಕೃಷ್ಣದೇವರಾಯನಿಗೆ ಶತ್ರುಕ್ಷಯ, ಮಿತ್ರಾರ್ಜಿತ, ಆಯುರಾರೋಗ್ಯ, ಐಶ್ವರ್ಯ, ಅಭಿವೃದ್ಧಿಯಾಗಬೇಕೆಂದು ಉಡುಪಿಯ ಕೃಷ್ಣದೇವರಿಗೆ ದತ್ತಿ ನೀಡಿದ್ದನ್ನು ತಿಳಿಸುವ 23 ಸಾಲುಗಳ ಕನ್ನಡ ಲಿಪಿ ಮತ್ತು ಭಾಷೆಯ ಶಾಸನವೊಂದು ಕುಂದಾಪುರ ತಾಲೂಕು ವಕ್ವಾಡಿ ಗ್ರಾಮದಲ್ಲಿ ದೊರೆತಿದೆ.[5] ದತ್ತಿ ನೀಡಿದ ಹಣ ಹೇಗೆ ವಿನಿಯೋಗವಾಗಬೇಕೆಂದು ಶಾಸನ ವಿವರವಾಗಿ ತಿಳಿಸುತ್ತದೆ. ಅರಮನೆಯ ಭಂಡಾರ ಸ್ಥಳನಾದ ವೊಕ್ಕುಳಾಡಿಯ ಗ್ರಾಮದ ತೆರಿಗೆಯಿಂದ ಬರುವ 144 ಗದ್ಯಾಣಗಳಲ್ಲಿ ಛತ್ರದಲ್ಲಿ ನಡೆವ 15 ಜನ ಬ್ರಾಹ್ಮಣರ ಭೋಜನಕ್ಕೆ 75, ನೈವೇದ್ಯಕ್ಕೆ 36, ಗಂಧಪರಿಮಳಕ್ಕೆ 12, ನಂದಾದೀಪಕ್ಕೆ 18 ಹಾಗೂ ಪಂಚಾಮೃತಕ್ಕೆ 3 ವರಹ ಗದ್ಯಾಣಗಳನ್ನು ವಿನಿಯೋಗಿಸತಕ್ಕದ್ದೆಂದು ಶಾಸನದಲ್ಲಿ ನಿರ್ದೇಶಿಸಲಾಗಿದೆ.

ಆರ್ಥಿಕ ಇತಿಹಾಸದ ದೃಷ್ಟಿಯಿಂದ ಮಹತ್ವದ ಕೆಲವು ವಿಚಾರಗಳನ್ನು ಈ ಶಾಸನ ಒಳಗೊಂಡಿದೆ. ಅವುಗಳಲ್ಲಿ ಭಂಡಾರ ಸ್ಥಳದ ಪ್ರಸ್ತಾಪ ಮುಖ್ಯವಾದದ್ದು. ಇಡೀ ವಕ್ವಾಡಿ ಗ್ರಾಮವನ್ನು ''ಅರಮನೆ ಭಂಡಾರ ಸ್ಥಳ''ವೆಂದು ಕರೆಯಲಾಗಿದೆ. ಕೆಲವು ಶಾಸನಗಳಲ್ಲಿ 'ಭಂಡಾರ ಸ್ಥಳ'ವೆಂಬ ಉಲ್ಲೇಖ ದೊರೆಯುತ್ತದೆ. ರಾಜ್ಯದ ನೇರ ಒಡೆತನಕ್ಕೆ ಸೇರಿದ ಈ ಭೂಮಿಯಿಂದ ಬರುವ ತೆರಿಗೆಯನ್ನು ದಾನವಾಗಿ ನೀಡುವ ಸಂದರ್ಭದಲ್ಲಿ ಯಾವುದೇ ವ್ಯಕ್ತಿಯ ಭೂ ಒಡೆತನದ ಪ್ರಸ್ತಾಪ ಬಾರದಿರುವುದು ಗಮನಾರ್ಹ. ಹೀಗೆ ಇಡೀ ಗ್ರಾಮ-ಗ್ರಾಮಗಳೇ ದೇವಾಲಯಗಳ ಅಧೀನಕ್ಕೆ ಬಂದವು ಮತ್ತು ಸಾಮಾಜಿಕ-ಆರ್ಥಿಕ ಕ್ಷೇತ್ರದಲ್ಲಿ ಮಠ-ದೇವಾಲಯಗಳ ಪ್ರಭಾವ ಇಂತಹ ದಾನ-ದತ್ತಿಗಳಿಂದಾಗಿ ಹೇಗೆ ಹೆಚ್ಚಿತು ಎಂಬುದನ್ನು ತಿಳಿದುಕೊಳ್ಳಲು ಇದೊಂದು ಉದಾಹರಣೆಯಾಗಬಲ್ಲುದು.

ತೆರಿಗೆ - ''ಕುಳ''ದ ಪ್ರಸ್ತಾಪ, ತೆರಿಗೆಯನ್ನು ನಗದಾಗಿ ವಸೂಲು ಮಾಡುವುದು, ನಾಣ್ಯ-ವರಹದ ಉಲ್ಲೇಖ ಮತ್ತು ಆಡಳಿತ ವಿಭಾಗ ''ನಲ್ವತ್ತನಾಡಿನ'' ಬಗ್ಗೆ ಹೇಳಿರುವುದು ಆರ್ಥಿಕ ಮತ್ತು ಆಡಳಿತ ವ್ಯವಸ್ಥೆಯ ಅಧ್ಯಯನಕ್ಕೆ ಉಪಯುಕ್ತ.[6] ಕೃಷ್ಣದೇವರಾಯನ

ಕಾಲದಲ್ಲಿ ಉಡುಪಿಯ ಕೃಷ್ಣ ದೇವಸ್ಥಾನಕ್ಕೆ ವಿಜಯನಗರ ಆಡಳಿತವು ಬಹಳಷ್ಟು ದತ್ತಿಗಳನ್ನು ನೀಡುವುದರ ಮೂಲಕ ನಿಕಟ ಸಂಬಂಧ ಹೊಂದಿತ್ತೆಂಬುದನ್ನು ಈ ಶಾಸನ ಇನ್ನಷ್ಟು ದೃಢಪಡಿಸುತ್ತದೆ.[7]

ಅಂತೂ ಈ ಮೂರು ಶಾಸನಗಳು ವಿಜಯನಗರದ ಆಡಳಿತ ವ್ಯವಸ್ಥೆ, ಆರ್ಥಿಕ ಮತ್ತು ಧಾರ್ಮಿಕ ಸ್ಥಿತಿ-ಗತಿಗಳು ಹಾಗೂ ವಿಜಯನಗರದ ಆಡಳಿತ ಮತ್ತು ಸ್ಥಳೀಯ ಪ್ರಭಾವಿ ಮನೆತನಗಳು, ಭೂ ಮಾಲಿಕ ವರ್ಗ ಮತ್ತು ಧಾರ್ಮಿಕ ಸಂಸ್ಥೆಗಳ ಸಂಬಂಧದ ಕುರಿತು ಅಧ್ಯಯನಕ್ಕೆ ಉಪಯುಕ್ತ ಆಕರಗಳಾಗಿವೆ.

ಟಿಪ್ಪಣಿಗಳು

1. *ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್,* ಸಂಪುಟ VII, ಸಂ. 350 ಮತ್ತು ವಸಂತ ಶೆಟ್ಟಿ ಬಿ, *ಬಾರಕೂರು - ಎ ಮೆಟ್ರೊಪಾಲಿಟನ್ ಸಿಟಿ ಆಫ್ ಎಂಟಿಕ್ವಿಟಿ - ಇಟ್ಸ್ ಹಿಸ್ಟರಿ ಅಂಡ್ ಕಲ್ಚರ್,* (ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಮೈಸೂರು ವಿ.ವಿ., 1984) ಪು. 174-76.
2. *ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್,* ಸಂಪುಟ VII, ಸಂ. 182, 296.
3. ಈ ಶಾಸನವನ್ನು ಪ್ರತಿ ಮಾಡುವಲ್ಲಿ ಶ್ರೀ ವೈ. ಭಾಸ್ಕರ ಶೆಟ್ಟಿ, ಪ್ರಿನ್ಸಿಪಾಲ್, ಎಂ.ಎಸ್.ಆರ್.ಎಸ್. ಕಾಲೇಜು, ಶಿರ್ವ, ಹಾಗೂ ಇತರ ಸ್ಥಳೀಯರ ನೆರವನ್ನು ಪಡೆಯಲಾಗಿದೆ.
4. ವಸಂತ ಶೆಟ್ಟಿ ಬಿ., *ಬ್ರಹ್ಮಾವರದ ಇತಿಹಾಸ* (ಬ್ರಹ್ಮಾವರ, 1988) ಪು. 41-42. (ಒಂದನೆಯ ದೇವರಾಯನ ಕ್ರಿ.ಶ. 1410ರ ಶಾಸನ).
5. ಶಾಸನವು ವಕ್ವಾಡಿ ಗ್ರಾಮದ ಚಿತ್ತಾರಿ ಬ್ರಹ್ಮಲಿಂಗ ದೇವರ ಗುಡಿಯ ಬಳಿ ಇದೆ. ಈ ಶಾಸನ ಪ್ರತಿಮಾಡಿ ಕೊಟ್ಟವರು ಶ್ರೀ ಅಚ್ಚುತ ಹೆಬ್ಬಾರ್, ನಿವೃತ್ತ ಹೈಸ್ಕೂಲ್ ಅಧ್ಯಾಪಕರು, ಕೆರ್ಗಾಲು.
6. ಈಗಿನ ಸ್ಥಳನಾಮ ವೊಕ್ವಾಡಿ ಆಗ 'ವೊಕ್ಕುಳಾಡಿ' ಆಗಿತ್ತೆಂಬುದು ಈ ಶಿಲಾಲೇಖದಿಂದ ತಿಳಿಯುತ್ತದೆ.
7. ಉಡುಪಿ ತಾಲೂಕು ಹಿರಿಯಡ್ಕದ ಸಮೀಪ ಪಾವುಜೆ ಮಠದಲ್ಲಿ ಇತ್ತೀಚೆಗೆ ದೊರೆತ ಕೃಷ್ಣದೇವರಾಯನ ಇನ್ನೊಂದು ಶಾಸನ ಕೃಷ್ಣ ದೇವಸ್ಥಾನಕ್ಕೆ ನೀಡಿದ ದತ್ತಿಯನ್ನು ದಾಖಲಿಸುತ್ತದೆ.

11. ವಿಜಯನಗರ ಸಂಸ್ಕೃತಿಯ ಪರಂಪರೆ - ದಸರಾ ಬೊಂಬೆ ಹಬ್ಬ

ಎಂ.ಎಸ್. ಕೃಷ್ಣಮೂರ್ತಿ

ದಸರಾ ಹಬ್ಬದ ಒಂದು ಮುಖ್ಯ ಭಾಗವಾಗಿ ಆಚರಿಸಲ್ಪಡುವ ಬೊಂಬೆ ಹಬ್ಬ, ದಕ್ಷಿಣ ಭಾರತದ ಬಹುತೇಕ ಭಾಗಗಳ ಒಂದು ವಿಶಿಷ್ಟ ಧಾರ್ಮಿಕ ಸಂಪ್ರದಾಯದ ಪ್ರತೀಕವಾಗಿದೆ. ಸಾಮಾನ್ಯವಾಗಿ ಹಬ್ಬ ಹರಿದಿನಗಳಲ್ಲಿ ಅವರವರ ಇಷ್ಟ ದೇವತೆಗಳನ್ನು ಸ್ತುತಿಸಿ, ಪೂಜಿಸುವ ಸಂಪ್ರದಾಯ ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗ. ಆದರೆ ಸಂಪೂರ್ಣವಾಗಿ ಇಹಲೋಕಕ್ಕೆ ಒಡೆಯನಾದ ರಾಜ/ಅರಸ/ಚಕ್ರವರ್ತಿಯನ್ನು, ಆತನ ಸಮಸ್ತ ಪರಿವಾರವನ್ನೂ, ಸಂಸಾರದ ಎಲ್ಲಾ ಮುಖಗಳನ್ನು ಪ್ರತಿಬಿಂಬಿಸುವ ವಸ್ತು ವಿಷಯಗಳನ್ನೂ, ಬೊಂಬೆಗಳ ಮುಖಾಂತರ ಸೃಷ್ಟಿಸಿ, ಪೂಜಿಸುವ ಸಂಪ್ರದಾಯ ನಮ್ಮ ನಾಡಿನ ಸಂಸ್ಕೃತಿಯ ಒಂದು ವೈಶಿಷ್ಟವೇ ಸರಿ. ಈ ನಿಟ್ಟಿನಲ್ಲಿ ನೋಡಿದಾಗ ಬೊಂಬೆ ಹಬ್ಬವು ಜನಪದ ಸಂಪ್ರದಾಯದಿಂದ ಬಂದಂತಹ ಒಂದು ನಾಡಹಬ್ಬ ಎಂದೆನಿಸುತ್ತದೆ.

ದಸರಾ ಹಬ್ಬವು ಇಡೀ ಭಾರತದಲ್ಲಿ ಆಚರಿಸಲ್ಪಡುವ ಒಂದು ನಾಡ ಹಬ್ಬ. ದುಷ್ಟ ಶಕ್ತಿಯನ್ನು ಸಂಹರಿಸಿ, ಶಿಷ್ಟ ಸಂಸ್ಕೃತಿಯನ್ನು ಕಾಪಾಡುವ ದೈವೀಶಕ್ತಿಯ ಆರಾಧನೆ, ಈ ಹಬ್ಬದ ಆಚರಣೆಯ ಮುಖ್ಯ ಉದ್ದೇಶ. ಕೆಲವರು ಮಹಾಭಾರತದ ಕಥೆಯೊಂದಿಗೆ ಈ ಹಬ್ಬದ ಆಚರಣೆಯನ್ನು ಸಮೀಕರಿಸಿದರೆ, ಕೆಲವರು ರಾಮಾಯಣದ ಕಥೆಯೊಂದಿಗೆ ಈ ಹಬ್ಬದ ಮೂಲ ಉದ್ದೇಶವನ್ನು ಸಮೀಕರಿಸುತ್ತಾರೆ. ಇನ್ನು ಕೆಲವರು ದುರ್ಗಿಯು ಮಹಿಷಾಸುರನನ್ನು ಕೊಂದು ಲೋಕ ಕಲ್ಯಾಣವನ್ನು ಸಾಧಿಸಿದುದರ ಜ್ಞಾಪಕಾರ್ಥ ಈ ಹಬ್ಬವನ್ನು ಆಚರಿಸುತ್ತಾರೆ. ಒಟ್ಟಿನಲ್ಲಿ ಹಬ್ಬದ ಉದ್ದೇಶ ಇಡೀ ಹಿಂದೂ ಸಂಸ್ಕೃತಿಯಲ್ಲಿ ಒಂದೇ - ಅದೆಂದರೆ, ದುಷ್ಟಶಿಕ್ಷೆ ಶಿಷ್ಟರಕ್ಷೆ. ಇದೇ ಹಿಂದೂ ದೇವ-ದೇವತೆಗಳ ಮುಖ್ಯ ಕೆಲಸ. ಪಾಶವೀ ಶಕ್ತಿಗಳ ಕೈಯಿಂದ ಲೋಕವನ್ನು ಪಾರು ಮಾಡಿ ಸಮಸ್ತ ಪ್ರಜೆಗಳೂ ನಿರಾತಂಕವಾಗಿ ತಮ್ಮ ತಮ್ಮ ಧರ್ಮವನ್ನೂ ವೃತ್ತಿಯನ್ನೂ ಆಚರಿಸಿಕೊಂಡು ಹೋಗಲು ಅನುವು ಮಾಡಿಕೊಡಬೇಕೆಂಬ ಉದ್ದೇಶದಿಂದಲೇ ಎಲ್ಲಾ ಜನಗಳೂ ಯಜ್ಞ, ಯಾಗ, ಪೂಜೆ ಪ್ರಾರ್ಥನೆಗಳನ್ನು ಮಾಡುವುದು. ಪೂಜೆ ಪುರಸ್ಕಾರಗಳಿಂದ ಇಷ್ಟ ದೇವತೆಗಳನ್ನು ಪೂಜಿಸಿ, ಸ್ತುತಿಸಿ ಸಂತೃಪ್ತಿಪಡಿಸಿ, ಒಲಿಸಿಕೊಳ್ಳುವುದು. ಇದು ಪ್ರತಿಯೊಬ್ಬ ಹಿಂದೂ ಧರ್ಮೀಯನ ಮುಖ್ಯ ಕರ್ತವ್ಯವೂ ಅಗಿದೆ.

ದೇವರುಗಳ ಕಲ್ಪನೆ, ಪೂಜೆ ಎಲ್ಲಾ ಧರ್ಮಗಳಲ್ಲೂ ಅನಾದಿ ಕಾಲದಿಂದ ಬಂದಿದ್ದು. ಆದರೆ ರಾಜ ಅಥವಾ ಚಕ್ರವರ್ತಿಯ ಪೂಜೆ ಏಕೆ, ಹೇಗೆ ಪ್ರಾರಂಭವಾಯಿತು ಎಂಬ ವಿಚಾರ ನಿಜಕ್ಕೂ ಸ್ವಾರಸ್ಯಕರವಾದದ್ದು. ಹಿಂದೂ ಸಂಸ್ಕೃತಿಯಲ್ಲಿ 'ರಾಜಾ ಪ್ರತ್ಯಕ್ಷ ದೇವತಾ', 'ನಾವಿಷ್ಣುಃ ಪೃಥ್ವಿಪತಿಃ' ಇತ್ಯಾದಿ ನಂಬಿಕೆಗಳುಂಟು. ನಾವು ಯಾವ ದೇವರುಗಳನ್ನು ಯಾವ ಉದ್ದೇಶಕ್ಕಾಗಿ ಸ್ತುತಿಸಿ ಪೂಜಿಸುತ್ತೇವೆಯೋ ಆ ಕೆಲಸಗಳನ್ನು ರಾಜನು ಭೂಮಿಯ ಮೇಲೆ, ನಮ್ಮೊಂದಿಗೆ, ನಮ್ಮ ರೀತಿಯಲ್ಲೇ ಜೀವಿಸಿ ನಿರ್ವಹಿಸುತ್ತಾನೆ. ದುಷ್ಟಶಿಕ್ಷಣ ಶಿಷ್ಟಪರಿಪಾಲನ ರಾಜನ ಆದ್ಯ ಕರ್ತವ್ಯಗಳಲ್ಲೊಂದಾಗಿರುವುದು ಸರ್ವವಿದಿತವಾದದ್ದು. ಇದೇ ಕಾರ್ಯಕ್ಕಾಗಿ ನಾವು ದೇವರನ್ನು ಪೂಜಿಸುವುದು. ಆದ್ದರಿಂದ ಈ ಕೆಲಸವನ್ನೇ ಮುಖ್ಯ ಉದ್ದೇಶವಾಗಿ ಹೊಂದಿರುವ ಚಕ್ರವರ್ತಿಯೂ ಸಹ ಪೂಜಿಸಲು ಯೋಗ್ಯನೇ ಸರಿ. ಆದ್ದರಿಂದ ಚಕ್ರವರ್ತಿ ಪೂಜೆಯೂ ಸಹ ನಮ್ಮ ಧರ್ಮಾಚರಣೆಯಲ್ಲಿ ಒಂದು ಅವಿಭಾಜ್ಯ ಅಂಗವಾಗಿ ಸೇರಿಕೊಂಡಿದೆ.

ದುಷ್ಟಶಿಕ್ಷಣ, ಶಿಷ್ಟಪರಿಪಾಲನ ಕಾರ್ಯವನ್ನು ಸಾಂಕೇತಿಕವಾಗಿ ಪ್ರತಿನಿಧಿಸುವ ಹಬ್ಬವೆಂದರೆ ನಾಡಿನಾದ್ಯಂತ ಆಚರಿಸಲ್ಪಡುವ ದಸರಾ ಹಬ್ಬ. ಹೀಗೆ ಇದೇ ಕಾರ್ಯವನ್ನು ಭೂಮಿಯ ಮೇಲೆ ಜೀವಂತವಾಗಿ ನಿರ್ವಹಿಸುತ್ತಿರುವ ಚಕ್ರವರ್ತಿಯೂ ಈ ಹಬ್ಬದ ಸಾಲಿನಲ್ಲೇ ಪೂಜಿಸಲ್ಪಡಲು ಯೋಗ್ಯ. ಆದರಿಂದಾಗಿ ದಸರಾ ಹಬ್ಬದ ಒಂದು ಅಂಗವಾಗಿ ಚಕ್ರವರ್ತಿಯನ್ನೂ ಆತನೊಂದಿಗೆ ಆತನ ಸಮಸ್ತ ವೈಭವವನ್ನೂ, ಆತನಾಳುವ ನಾಡು, ಜನ, ಪ್ರಾಣಿ, ಪಶು ಪಕ್ಷಿ ಇತ್ಯಾದಿ, ಎಲ್ಲವನ್ನೂ ಸಂಕ್ಷಿಪ್ತವಾಗಿ ಬೊಂಬೆಗಳ ಮುಖಾಂತರ ಸೃಷ್ಟಿಮಾಡಿ ಬೊಂಬೆ ಹಬ್ಬವಾಗಿ ಪೂಜಿಸುವ ಪರಿಪಾಠ ನಮ್ಮಲ್ಲಿ ಬೇರೂರಿದೆ ಎಂದು ಹೇಳಬಹುದು. ರಾಜನ ಮೂಲ ಕರ್ತವ್ಯ ಏನು?

ಆತನು ಯಾವ ಉದ್ದೇಶಕ್ಕಾಗಿ ರಾಜ್ಯವಾಳಲು ಆಯ್ಕೆಯಾಗಿದ್ದಾನೆ ಮತ್ತು ಆತನು ತನ್ನ ಯಾವ ಕರ್ತವ್ಯಕ್ಕಾಗಿ ಪ್ರಜೆಗಳಿಂದ ಪೂಜಿಸಲ್ಪಡಲು ಯೋಗ್ಯ ಎಂಬ ಅಂಶಗಳು, ನಮ್ಮ ಪರಂಪರೆಯಲ್ಲಿ ಬೊಂಬೆ ಹಬ್ಬವನ್ನು ದಸರಾ ಹಬ್ಬದ ಸಾಲಿನಲ್ಲಿ ಆಚರಿಸುವ ಮುಖಾಂತರ ಪ್ರತಿಬಿಂಬಿಸಿರುವುದು ಅತ್ಯಂತ ಔಚಿತ್ಯಪೂರ್ಣವಾಗಿದೆ.

ಮೇಲೆ ಹೇಳಿದ ಅಂಶಗಳು ಬೊಂಬೆ ಹಬ್ಬದ ಉದ್ದೇಶ ಮತ್ತು ಔಚಿತ್ಯವನ್ನು ರುಜುವಾತುಪಡಿಸುವುದಾದರೆ, ಅದರ ಆಚರಣೆಗೆ ಬೇಕಾದ ಪರಿಕರಗಳು, ರೀತಿ ಮತ್ತು ಈ ಸಂಪ್ರದಾಯ ಪ್ರಾರಂಭವಾದ ಕಾಲ ಇವುಗಳ ಬಗ್ಗೆ ಈಗ ಗಮನ ಹರಿಸೋಣ.

ಹಬ್ಬಕ್ಕೆ ಕೆಲವು ತಿಂಗಳು ಅಥವಾ ವಾರಗಳ ಮುಂಚಿತವಾಗಿಯೇ ಸಿದ್ಧತೆಗಳು ಪ್ರಾರಂಭವಾಗುತ್ತವೆ. ವಿವಿಧ ಪ್ರಕಾರದ ಬೊಂಬೆಗಳನ್ನು ಶೇಖರಿಸಿ ಎಲ್ಲವುಕ್ಕೂ ಆಕರ್ಷಕ ವರ್ಣಗಳನ್ನು ಲೇಪಿಸಿ, ವಸ್ತ್ರಗಳನ್ನು ತೊಡಿಸಿ, ಕೃತಕ ಆಭರಣಗಳಿಂದ ಅಲಂಕರಿಸಿ, ಸಿದ್ಧಪಡಿಸಿಟ್ಟುಕೊಳ್ಳುತ್ತಾರೆ. ಕೆಲವರು ಈ ಹಬ್ಬಕ್ಕಾಗಿ ಪ್ರತ್ಯೇಕವಾಗಿ ಕೈಯಿಂದಲೇ ಬೊಂಬೆಗಳನ್ನು ತಯಾರಿಸುವುದೂ ಉಂಟು. ಮರ, ಲೋಹ, ಕಾಗದ, ಬೆಂಡು, ಗಾಜು, ಪಿಂಗಾಣಿ, ಬಟ್ಟೆ, ನಾರು, ಹುಲ್ಲು, ಹತ್ತಿ, ಸಗಣಿ, ಮಣ್ಣು, ಶಂಖ, ಕಪ್ಪೆಚಿಪ್ಪು, ರೇಷ್ಮೆಗೂಡು ಈಚೆಗೆ ರಬ್ಬರ್, ಪ್ಲಾಸ್ಟಿಕ್, ಮುಂತಾದ ವಸ್ತುಗಳಿಂದ ತಯಾರಿಸಿದ ಬೊಂಬೆಗಳನ್ನು ಉಪಯೋಗಿಸುತ್ತಾರೆ. ಕೆಲವರು ತೊಗಲಿನಿಂದ ಮಾಡಿದ ಬೊಂಬೆಗಳನ್ನೂ ಇಡುತ್ತಾರೆ. ಕೆಲವರಲ್ಲಿ ಇದು ನಿಷಿದ್ಧ. ಹಬ್ಬದ ಮುಖ್ಯ ಉದ್ದೇಶ ಬೊಂಬೆಯ ಪ್ರಪಂಚವನ್ನೇ ಸೃಷ್ಟಿಸಿ, ಪೂಜಿಸಿ, ಪ್ರದರ್ಶಿಸುವುದು.

ಮನೆಯ ವಿಶಾಲವಾದ ಹಜಾರ, ತೊಟ್ಟಿ, ಕೈಸಾಲೆ ಮುಂತಾದ ಕಡೆಗಳಲ್ಲಿ ಅನೇಕ ಹಂತಗಳಲ್ಲಿ ನಿರ್ಮಿಸಿದ ಕಟ್ಟೆ ಅಥವಾ ಸೋಪಾನಗಳ ಮೇಲೆ ಎಲ್ಲಾ ರೀತಿಯ ಬೊಂಬೆಗಳನ್ನು ಆಕರ್ಷಕ ರೀತಿಯಲ್ಲಿ ಪ್ರದರ್ಶನಕ್ಕೆ ಇಡುತ್ತಾರೆ. ಈ ರೀತಿಯ ಪ್ರದರ್ಶನದಲ್ಲಿ ನಿರ್ದಿಷ್ಟ ನಿಯಮವಿದ್ದಂತೆ ತೋರುವುದಿಲ್ಲ. ಅವರಿಗೆ ಇಷ್ಟಬಂದ ರೀತಿಯಲ್ಲಿ ವಸ್ತು, ವಿಷಯ, ಇತ್ಯಾದಿಗಳನ್ನು ಗಮನದಲ್ಲಿರಿಸಿಕೊಂಡು ಬೊಂಬೆಗಳನ್ನು ವರ್ಗೀಕರಿಸಿ ಕೂರಿಸುವ ಸಂಪ್ರದಾಯವೂ ಇದೆ. ಆದರೆ ಈ ಎಲ್ಲಾ ಬೊಂಬೆಗಳ ಕೇಂದ್ರ ಬಿಂದು ಅಥವಾ ಮುಖ್ಯ ಪ್ರಾಣವೆಂದರೆ, ಅತ್ಯಂತ ಪ್ರಮುಖ ಸ್ಥಾನದಲ್ಲಿ ಕೂರಿಸಿರುವ ರಾಜ-ರಾಣಿ ದಂಪತಿಗಳ ಬೊಂಬೆಗಳು. ಇವುಗಳನ್ನು ಪಟ್ಟದ ಬೊಂಬೆಗಳೆಂದು ಕರೆಯುತ್ತಾರೆ. ಚಂದನ ಅಥವಾ ಕರೀಮರದಲ್ಲಿ ಮಾತ್ರ ತಯಾರಿಸಲ್ಪಟ್ಟಿರುವ ಈ ಬೊಂಬೆಗಳು ಸಮಭಂಗಿಯಲ್ಲಿ ನಿಂತಿರುತ್ತವೆ. ಸಾಮಾನ್ಯವಾಗಿ ರಾಜನಿಗೆ ಅರಸರ ಕಾಲದ ದರ್ಬಾರ್ ಸಮವಸ್ತ್ರವನ್ನು ತೊಡಿಸಿರುತ್ತಾರೆ. ಅಂದರೆ ಬೂಟು ಅಥವಾ ಚಪ್ಪಲಿ, ಇಜಾರ, ಜುಬ್ಬ, ಉತ್ತರೀಯ, ಪೇಟ, ವಸ್ತ್ರಗಳನ್ನು ತೊಡಿಸಿ ಆಭರಣಗಳಿಂದ ಅಲಂಕರಿಸುತ್ತಾರೆ. ರಾಣಿಗೆ ಸೀರೆ ರವಿಕೆ ಮತ್ತು ಆಭರಣಗಳ ಅಲಂಕಾರ ಮಾಡುತ್ತಾರೆ. ರಾಜರಾಣಿಯರ (ಪಟ್ಟದ) ಬೊಂಬೆಗಳನ್ನು ಎಲ್ಲಕ್ಕಿಂತ ಎತ್ತರ ಹಾಗೂ ಮುಖ್ಯ ಸ್ಥಾನದಲ್ಲಿ ಕೂರಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ಪೂಜೆಗೆ ಅನುಕೂಲವಾಗಲೆಂದು ಕೆಳಗಿನ ಸೋಪಾನದಲ್ಲಿ ಪ್ರತಿಷ್ಠಾಪಿಸುವ ಪರಿಪಾಠವು ಉಂಟು. ರಾಜರಾಣಿಯರ ಮುಂದೆ ದೇವತಾ ಸ್ವರೂಪವಾದ ಕಳಶವನ್ನು ಸ್ಥಾಪಿಸುತ್ತಾರೆ. ಕಳಶ ಶಕ್ತಿ ಸ್ವರೂಪವಾದ್ದರಿಂದ ಇದಕ್ಕೇ ಅಗ್ರಪೂಜೆ. ಕಳಶವನ್ನು ಮಹಾಲಕ್ಷ್ಮೀ ಸ್ವರೂಪವೆಂದು ಮೈಸೂರು ಅರಮನೆಯಲ್ಲಿ ಪೂಜಿಸುತ್ತಾರೆ. ಇತರರು ತಮ್ಮ ತಮ್ಮ ನಂಬಿಕೆಗೆ ಅನುಗುಣವಾಗಿ ರಾಮ, ಕೃಷ್ಣ ಹಾಗೂ ಇತರ ದೇವತೆಗಳ ವಿಗ್ರಹಗಳನ್ನು, ಪಟಗಳನ್ನು ಕಳಶದ ಬಳಿ ಇಟ್ಟು ಪೂಜಿಸುವ ವಾಡಿಕೆಯೂ ಉಂಟು. ಕಳಶಕ್ಕೆ ನಿತ್ಯ ಪೂಜೆ ಮಾಡುತ್ತಾರೆ. ಸಾಮಾನ್ಯವಾಗಿ ಮೂಲಾ ನಕ್ಷತ್ರದಂದು ಸರಸ್ವತೀ ಹಬ್ಬದಲ್ಲಿ ಕಳಶದಲ್ಲಿರುವ ವೀಳ್ಯವನ್ನು ಬದಲಾಯಿಸುತ್ತಾರೆ.

ರಾಜರಾಣಿಯರನ್ನು ಅಗ್ರಸ್ಥಾನದಲ್ಲಿ ಕೂರಿಸಿ ಸುತ್ತಲೂ ಒಂದು ಸಣ್ಣ ಬೊಂಬೆ ಪ್ರಪಂಚವನ್ನೇ ನಿರ್ಮಿಸುತ್ತಾರೆ. ಸಮಕಾಲೀನ ಸಮಾಜದ ವೃತ್ತಿಪರರು ಅಂದರೆ ಕೃಷಿಕ, ಅಕ್ಕಸಾಲಿಗ, ಕಮ್ಮಾರ, ಬಡಗಿ, ನೇಕಾರ, ಶಿಲ್ಪಿ, ವರ್ತಕ, ನೃತ್ಯ - ಸಂಗೀತಗಾರರು, ವಾದ್ಯ-ವಾದಕರು, ಶಿಕ್ಷಕ-ವಿದ್ಯಾರ್ಥಿಗಳು ಮುಂತಾದವರನ್ನು ಪ್ರತಿಬಿಂಬಿಸುವ ಬೊಂಬೆಗಳು; ರಾಜ್ಯವನ್ನು ರಕ್ಷಿಸುವ ಸೈನ್ಯ, ಕೋಟೆ, ಕೊತ್ತಳ, ಕಂದಕಗಳು, ತುಪಾಕಿಗಳು, ತೋಪುಗಳು, ಅಸ್ತ್ರಗಳು, ಅಶ್ವ, ಗಜ, ಪದಾತಿ, ರಥಸೈನ್ಯಗಳು, ವಾಹನಗಳು; ಪಶು, ಪಕ್ಷಿ ಹಾಗೂ

ಜಲಚರಗಳು; ಹಣ್ಣು, ತರಕಾರಿಗಳು, ಸಸ್ಯಗಳು; ಗುಡಿಸಲು, ಮನೆ, ಅರಮನೆ, ದೇವಸ್ಥಾನ, ಇತ್ಯಾದಿ ಕಟ್ಟಡಗಳು; ದೇವತಾ ಬೊಂಬೆಗಳಲ್ಲಿ ದಶಾವತಾರ ಹಾಗೂ ಇತರ ದೇವ-ದೇವತಾ ಬೊಂಬೆಗಳು ಇತ್ಯಾದಿ ಸಮಕಾಲೀನ ಸಮಾಜದಲ್ಲಿ ಕಾಣಬರುವ ಸಮಸ್ತ ಚರಾಚರ ವಸ್ತುಗಳನ್ನು ಬೊಂಬೆಗಳ ರೂಪದಲ್ಲಿ ಪ್ರದರ್ಶಿಸುವ ಪದ್ಧತಿ ಇದೆ. ಮದುವೆ, ಮದುವೆ ದಿಬ್ಬಣ, ಮೆರವಣಿಗೆ ಅರಮನೆ ದರ್ಬಾರ್ ಮುಂತಾದ ಸಾಮೂಹಿಕ ಸಮಾರಂಭಗಳನ್ನೂ ಸಹ ಕಾಣುವುದು ಸಾಮಾನ್ಯ. ಈಚೆಗೆ ಆಸ್ಪತ್ರೆ, ಪ್ರಾಣಿ ಸಂಗ್ರಹಾಲಯ, ವಿಮಾನ, ಹಡಗು, ದೋಣಿ, ಕೊಳ, ನದಿ, ಅಣೆಕಟ್ಟು, ಬೆಟ್ಟ, ಕಾಡು, ಗುಹೆ, ಕಾಡು ಪ್ರಾಣಿಗಳು ಇತ್ಯಾದಿಗಳ ಸಂಕ್ಷಿಪ್ತ ಮಾದರಿಗಳನ್ನು ಮಕ್ಕಳ ಮನರಂಜನೆಗಾಗಿ ನಿರ್ಮಿಸುವುದೂ ಉಂಟು.

ರಾಜರಾಣಿ ಬೊಂಬೆಯನ್ನು ಕೂರಿಸಿ ಪೂಜಿಸುವ ಸಂಪ್ರದಾಯದ ಪ್ರಾರಂಭದ ಬಗ್ಗೆ ಸ್ಪಷ್ಟ ಸೂಚನೆಗಳಿಲ್ಲ. ರಾಜ್ಯದ ಸಮಸ್ತ ಸಾಂಸಾರಿಕ ವ್ಯಾಪಾರ-ವ್ಯವಹಾರಗಳಿಗೂ ಅಧಿಪತಿ ರಾಜ-ರಾಣಿಯರು. 'ರಾಜಾ ಪ್ರತ್ಯಕ್ಷ ದೇವತಾ' ಎಂಬ ಹೇಳಿಕೆ ಅತಿ ಪ್ರಾಚೀನವಾದರೂ ಎಲ್ಲಾ ಸಾಮಾಜಿಕ ಚಟುವಟಿಕೆಗಳಿಗೂ ಅಧಿಪತಿಯಾಗಿರುವ ರಾಜನನ್ನು ಪೂಜಿಸುವ ಪರಿಪಾಠ ಮುಂಚೆ ಇದ್ದುದಕ್ಕೆ ಆಧಾರವಿಲ್ಲ. ಈ ಪದ್ಧತಿ ಪ್ರಾರಂಭವಾದದ್ದು ಪ್ರಾಯಶಃ ವಿಜಯನಗರದ ಕಾಲದಿಂದ ಈಚೆಗೆ ಎಂದು ಹೇಳಬಹುದು. ಇದಕ್ಕೆ ಕಾರಣ ವಿಜಯನಗರದ ಅರಸರು ಹಿಂದೂ ಧರ್ಮದ ರಕ್ಷಣೆ ಮತ್ತು ಏಳಿಗೆಗೆ ತಮ್ಮನ್ನೇ ಮುಡುಪಾಗಿಟ್ಟಿದ್ದ ವಿಚಾರ. ಕ್ರಿ.ಶ. 13ನೇ ಶತಮಾನದಲ್ಲಿ ದಕ್ಷಿಣ ಭಾರತವು ಮುಸಲ್ಮಾನರ ದಾಳಿಯಿಂದ ತತ್ತರಿಸಿಹೋಗಿತ್ತು. ಹಿಂದೂ ಧರ್ಮದ ಅಸ್ತಿತ್ವಕ್ಕೇ ಧಕ್ಕೆ ಒದಗಿತ್ತು. ಸಮರ್ಥ ನಾಯಕನಿಲ್ಲದೆ ಜನರ ಸ್ಥೈರ್ಯಗಳು ಕುಗ್ಗಿ ಹೋಗಿದ್ದವು. ಎಲ್ಲೆಲ್ಲೂ ಭಯಭೀತಿಯ ವಾತಾವರಣ ವ್ಯಾಪಿಸಿತ್ತು. ಹಿಂದೂ ಧರ್ಮದ ಉಳಿವಿಗೆ ಒದಗಿದ ಇಂತಹ ಆಪತ್ಕಾಲದಲ್ಲಿ, ದಕ್ಷಿಣ ಭಾರತದ ರಾಜಕೀಯ ಪರಿಸ್ಥಿತಿಯನ್ನು ಸುಧಾರಿಸಿ ಮಹಮ್ಮದೀಯರ ದಾಳಿಯನ್ನು ಧೈರ್ಯವಾಗಿ ಎದುರಿಸಿ, ಹಿಂದೂ ಧರ್ಮವನ್ನು ರಕ್ಷಿಸಿದ ಕೀರ್ತಿ ವಿಜಯನಗರದ ಅರಸರಿಗೆ ಸಲ್ಲುತ್ತದೆ. ಪ್ರಜೆಗಳ ಧೈರ್ಯವನ್ನೂ, ಆತ್ಮ ವಿಶ್ವಾಸವನ್ನೂ ಹೆಚ್ಚಿಸಿ, ಅವರ ರಕ್ಷಣೆ ಮಾಡುವುದು ವಿಜಯನಗರದ ಅರಸರ ಗುರಿಯಾಗಿತ್ತು. ಇದಕ್ಕಾಗಿ ಎಲ್ಲಾ ವರ್ಗಗಳ, ಮತಗಳ, ಜಾತಿಗಳ, ಸಂಘಟನೆ ಮಾಡಿ ಹಿಂದೂಗಳಲ್ಲಿ ಐಕ್ಯತೆಯನ್ನು ಸಾಧಿಸಿ, ಪರಸ್ಪರ ಮೈತ್ರಿ ಭಾವ ಬೆಳೆಯುವಂತೆ ಮಾಡಬೇಕಾಗಿತ್ತು. ಈ ಗುರಿಯನ್ನು ಸಾಧಿಸಲು ವಿಜಯನಗರದ ಅರಸರಿಗೆ ಒದಗಿ ಬಂದ ಮುಖ್ಯ ಸಾಧನವೆಂದರೆ ದಸರಾ ಹಬ್ಬ. ದುಷ್ಟ ಶಕ್ತಿಯ ನಿರ್ಮೂಲನ ಮಾಡಿ ಶಿಷ್ಟ ಸಂಪ್ರದಾಯವನ್ನು ಮೆರೆಸುವ ಸಂದೇಶವನ್ನು ಪ್ರತಿನಿಧಿಸುವ ದಸರಾ ಹಬ್ಬವನ್ನು ನಾಡಹಬ್ಬವಾಗಿ ಆಚರಿಸಿ, ಚಕ್ರವರ್ತಿಯ ಸಮಸ್ತ ವೈಭವ, ಐಶ್ವರ್ಯ, ಶಕ್ತಿ, ಪರಾಕ್ರಮವನ್ನು ಪ್ರದರ್ಶಿಸಿ, ಆ ಪ್ರದರ್ಶನದಲ್ಲಿ ಸಮಸ್ತ ಜನರು ಪಾಲ್ಗೊಳ್ಳುವಂತೆ ಮಾಡಿ, ಸುಖಸಂತೋಷದಿಂದ ನಲಿದು, ತಮ್ಮ ಉಳಿವಿಗೆ, ಏಳಿಗೆಗೆ ಚಕ್ರವರ್ತಿಯ ಸಂಪೂರ್ಣ ರಕ್ಷಣೆ ಇದೆ ಎಂಬ ಭರವಸೆ ಪ್ರಜೆಗಳಲ್ಲಿ ಮೂಡುವಂತೆ ಮಾಡಿದರು.

ಶ್ರೀ ಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರದಲ್ಲಿ ದಸರಾ ಮಹೋತ್ಸವ ಬಹಳ ವಿಜೃಂಭಣೆಯಿಂದ ನಡೆಯುತ್ತಿತ್ತೆಂದು ವಿದೇಶೀ ಪ್ರವಾಸಿಗರ ಬರಹಗಳಿಂದ ಸ್ಪಷ್ಟವಾಗುತ್ತದೆ. 'ಮಾರನವಮಿ ದಿಬ್ಬ' ಎಂದು ಈಗಲೂ ಹೆಸರುವಾಸಿಯಾಗಿರುವ, ಹಂತ-ಹಂತವಾಗಿ ನಿರ್ಮಿತವಾಗಿರುವ ಎತ್ತರವಾದ, ವಿಶಾಲ ವೇದಿಕೆಯ ಮೇಲೆ ಚಕ್ರವರ್ತಿಯು ಕುಳಿತುಕೊಳ್ಳುತ್ತಿದ್ದನು. ರಾಜನ ಸುತ್ತಲೂ ವೇದಿಕೆಯ ಮೇಲೆ ಮತ್ತು ಕೆಳಹಂತಗಳಲ್ಲಿ ಅಧಿಕಾರಿಗಳು, ಪ್ರಜೆಗಳು ನೆರೆದಿರುತ್ತಿದ್ದರು. ಬಾಣ-ಬಿರುಸುಗಳ, ನೃತ್ಯ-ಸಂಗೀತಗಳ, ಆಟ-ಪಾಠಗಳ, ಕ್ರೀಡೆ-ಕವಾಯಿತುಗಳ, ಹಾಗೂ ಸಮಾಜದ ಎಲ್ಲಾ ವರ್ಗಗಳ ಜನರ ನೈಪುಣ್ಯ, ಕೌಶಲ್ಯಗಳ ಪ್ರದರ್ಶನಗಳೂ ನಡೆಯುತ್ತಿದ್ದವು. ಗಂಡು ಮಕ್ಕಳ ಕ್ರೀಡೆ, ಕೌಶಲ, ಪರಾಕ್ರಮ, ಪೌರುಷ ಇವುಗಳ ಪ್ರದರ್ಶನಕ್ಕಾಗಿಯೇ ಹೆಚ್ಚು ಪ್ರಾಮುಖ್ಯತೆ ನೀಡುತ್ತಿದ್ದುದರಿಂದ ''ಮಾರ್ನೋಮಿ ಹಬ್ಬ ಮಗನಿಗೆ'' ಎನ್ನುವ ಗಾದೆಯೂ ಈ ಹಿನ್ನೆಲೆಯಲ್ಲಿ ರೂಪಿತವಾಗಿದೆ ಎನ್ನಬಹುದು. ಮಳೆಗಾಲ ಮುಗಿದು ಬೆಳೆಗಳು ಕೈಗೂಡುವ ಮುನ್ನಿನ ಬಿಡುವಿನ ದಿನಗಳಲ್ಲಿ ಈ ಸಾಮಾಜಿಕ ಸಮಾರಂಭವನ್ನು ಏರ್ಪಡಿಸಿ ಪ್ರಜೆಗಳಲ್ಲಿ ಆತ್ಮವಿಶ್ವಾಸ ಮತ್ತು ಸಂತಸ ನೀಡುವ ಈ ದಸರಾ ಹಬ್ಬದ ಆಚರಣೆ ವಿಜಯನಗರದ ಅರಸರ ಪ್ರಮುಖ ಕೊಡುಗೆಗಳಲ್ಲಿ ಒಂದಾಗಿದೆ ಎಂಬುದು ನಿಸ್ಸಂದೇಹ.

ನಾಡಹಬ್ಬವಾಗಿ ಪರಿವರ್ತಿತಗೊಂಡ ದಸರಾ ಹಬ್ಬ ಸಮಾಜದ ಎಲ್ಲಾ ವರ್ಗಗಳೂ ಜಾತಿ, ಮತ, ಕುಲ, ಭೇದವಿಲ್ಲದೆ, ಮೇಲು-ಕೀಳು ಭಾವನೆಯಿಲ್ಲದೆ ಕೂಡಿ ಸಂಭ್ರಮದಿಂದ ಆಚರಿಸುವ ಹಬ್ಬವಾಯಿತು. ಚಕ್ರವರ್ತಿಯ ಸಮ್ಮುಖದಲ್ಲಿ, ರಾಜಧಾನಿಯಲ್ಲಿ ಆಚರಿಸಲ್ಪಡುತ್ತಿದ್ದ ದಸರಾ, ಚಕ್ರಾಧಿಪತ್ಯದ ಎಲ್ಲಾ ಪಟ್ಟಣ ಊರುಗಳಿಗೂ ಹರಡಿತು. ರಾಜರು, ಪಾಳೆಯಗಾರರು, ನಾಯಕರು, ತಮ್ಮ ತಮ್ಮ ಊರುಗಳಲ್ಲೇ, ಗ್ರಾಮಗಳಲ್ಲೇ ಈ ನಾಡ ಹಬ್ಬವನ್ನು ಆಚರಿಸಲು ಪ್ರಾರಂಭಿಸಿರಬೇಕು. ಹಬ್ಬದ ಆಚರಣೆಗಾಗಿ ಚಕ್ರವರ್ತಿಯ ಪ್ರತೀಕವಾಗಿ ರಾಜ-ರಾಣಿಯ (ಪಟ್ಟದ) ಬೊಂಬೆಗಳನ್ನು ಕೂಡಿಸಿ, ಸುತ್ತಲೂ ಸಂಸಾರದ ಸಮಸ್ತ ವಿಷಯಗಳನ್ನೂ ನಿರೂಪಿಸುವ ಬೊಂಬೆಗಳನ್ನು ಕೂರಿಸಿ ಸಾಂಕೇತಿಕವಾಗಿ, ಸಂಕ್ಷಿಪ್ತವಾದ ರಾಜಾಸ್ಥಾನವನ್ನೇ, ತಮ್ಮ ತಮ್ಮ ಮನೆಗಲ್ಲೇ, ಹಳ್ಳಿ, ಊರುಗಳಲ್ಲೇ ನಿರ್ಮಿಸಿ, ದಸರಾ ಹಬ್ಬನ್ನು ಸ್ವಸ್ಥಾನದಲ್ಲಿಯೇ ಆಚರಿಸುವ ಪದ್ಧತಿ ವಿಜಯನಗರದ ಕಾಲದಲ್ಲೇ ಇದ್ದಿರಬೇಕು. ಈ ಪದ್ಧತಿಯೇ ಇಂದಿನ ಬೊಂಬೆ ಹಬ್ಬಕ್ಕೆ ನಾಂದಿಯಾಯಿತು ಎನ್ನಬಹುದು.

ವಿಜಯನಗರ ಪತನಾನಂತರ ಸಾಮ್ರಾಜ್ಯ ಛಿದ್ರ-ಛಿದ್ರವಾಗಿ ಅದರ ವಿವಿಧ ಭಾಗಗಳು ಅನೇಕ ಪಾಳೆಯಪಟ್ಟುಗಳಾದವು. ಯಾವ ಯಾವ ಭಾಗದಲ್ಲಿ ವಿಜಯನಗರ ಸಂಸ್ಕೃತಿಯ ಪ್ರಭಾವ ಪ್ರಬಲವಾಗಿತ್ತೋ ಅಂತಹ ಸ್ಥಳಗಳಲ್ಲಿ ದಸರಾ ಮತ್ತು ಬೊಂಬೆಯ ಹಬ್ಬದ ಆಚರಣೆ ಮುಂದುವರೆಯಿತು. ದಕ್ಷಿಣ ಕರ್ನಾಟಕದ ಎಲ್ಲಾ ಭಾಗಗಳಲ್ಲಿ, ಆಂಧ್ರದ ಬಹಳಷ್ಟು ಭಾಗಗಳಲ್ಲಿ, ತಮಿಳುನಾಡು ಹಾಗೂ ಕೇರಳದ ಅನೇಕ ಭಾಗಗಳಲ್ಲಿ ಈಗಲೂ ಈ ಹಬ್ಬವನ್ನು ಆಚರಿಸುತ್ತಾರೆ. ಆದರೆ ಹಬ್ಬಕ್ಕೆ ಹೆಚ್ಚು ಮಹತ್ವ ಕಾಣಬರುವುದು ಹಳೇ ಮೈಸೂರು ಪ್ರಾಂತ್ಯದಲ್ಲಿ, ಅಂದರೆ ದಕ್ಷಿಣ ಕರ್ನಾಟಕದಲ್ಲಿ, ಆಂಧ್ರದಲ್ಲಿ ಮತ್ತು ತಮಿಳುನಾಡಿನಲ್ಲಿ. ಕರ್ನಾಟಕದಲ್ಲಿ ಬೊಂಬೆ ಹಬ್ಬವೆನಿಸಿದರೆ ಆಂಧ್ರದಲ್ಲಿ ''ಬೊಮ್ಮಲು ಕುಲುವು'' (ಬೊಂಬೆ ಆಸ್ಥಾನ) ಎಂದು ಪ್ರಸಿದ್ಧವಾಗಿದೆ.

ಆಚರಣೆ: ಬೊಂಬೆ ಹಬ್ಬದಲ್ಲಿ ಆಚರಿಸಲಾಗುವ ಧಾರ್ಮಿಕ ವಿಧಿ-ವಿಧಾನಗಳು, ರೀತಿ-ನೀತಿಗಳು, ಮುಂತಾದ ವಿಷಯಗಳ ಒಂದು ಸ್ಥೂಲ ವಿವರಣೆ ಇಲ್ಲಿ ಅಗತ್ಯವೆನಿಸುತ್ತದೆ. ಏಕೆಂದರೆ ಈ ಹಬ್ಬದ ಆಚರಣೆಯ ಔಚಿತ್ಯವನ್ನೂ ಮತ್ತು ಮೂಲವನ್ನೂ ನಿರ್ಧರಿಸುವಾಗ ಇವು ಅವಶ್ಯಕ. ಹಬ್ಬದ ಆಚರಣೆಯಲ್ಲಿ ಪಾಲಿಸುವ ನೀತಿ ನಿಯಮಗಳಲ್ಲಿ, ಧರ್ಮದ ಕಟ್ಟಳೆಗಳಲ್ಲಿ ಈ ಹಬ್ಬದ ಸಾಲಿಗೆ ಎರಡನೆಯ ಮಟ್ಟದ ಪ್ರಾಮುಖ್ಯತೆ ಕಾಣುತ್ತದೆ. ಇಷ್ಟದೇವತಾ ಪೂಜೆಯ ಆಚರಣೆಗಿಂತ ಈ ಹಬ್ಬದ ಆಚರಣೆ ಸ್ವಲ್ಪ ವಿಭಿನ್ನ. ಕಡಿಮೆ ಪ್ರಮಾಣದ ಕಟ್ಟಳೆ, ನಿಯಮ, ಮಡಿ, ಆಚಾರ ಮುಂತಾದವುಗಳನ್ನು ಇಲ್ಲಿ ಪಾಲಿಸಲಾಗುತ್ತದೆ. ದೇವರಂತೆ ಅತಿಮಾನುಷನಲ್ಲದಿದ್ದರೂ ರಾಜನು ತನ್ನ ಪರಿಧಿಯಲ್ಲೇ ಅತ್ಯಂತ ಶಕ್ತಿಶಾಲಿ ವ್ಯಕ್ತಿ. ಈತನು ಪ್ರತ್ಯಕ್ಷ ದೇವತೆ. ಈತನ ಎಲ್ಲಾ ಆಚಾರ ವಿಚಾರಗಳೂ ಇಂದ್ರಿಯಾತೀತವಲ್ಲದ್ದು. ಆದ್ದರಿಂದ ದೈವತ್ವಕ್ಕೆ ಸಂಬಂಧಿಸಿದ ಮೂಢನಂಬಿಕೆಗಳು, ಭಯ ಇವನ ಪೂಜೆಯಲ್ಲಿ ಕಾಣಬರುವುದಿಲ್ಲ. ದೇವತಾ ಪೂಜೆಯಷ್ಟು ಕಟ್ಟುನಿಟ್ಟಲ್ಲದ್ದೂ ಹಾಗೂ ದೈನಂದಿನ ಅಥವಾ ಲೌಕಿಕಕ್ಕಿಂತ ಶ್ರೇಷ್ಠವಾದ ಧರ್ಮಾಚರಣೆಗಳು ಬೊಂಬೆ ಹಬ್ಬದಲ್ಲಿ ಕಾಣ ಬರುತ್ತವೆ. ದೇವರಿಗೂ ಸಾಮಾನ್ಯ ಮನುಷ್ಯನಿಗೂ ಮಧ್ಯ ದೈವ ಸಮಾನನೆನಿಸುವ ರಾಜ ಪೂಜನೀಯನಾಗಿ ರಂಜಿಸುತ್ತಾನೆ.

ಬೊಂಬೆ ಹಬ್ಬದ ನಿಜವಾದ ಆಚರಣೆಯನ್ನು ನೋಡಿ ಅದರ ಮಹತ್ವವನ್ನೂ, ಸಂಕೇತವನ್ನೂ, ಔಚಿತ್ಯವನ್ನೂ ತಿಳಿಯಬೇಕಾದರೆ, ಪರಂಪರಾಗತವಾಗಿ ಆಚರಣೆಯಲ್ಲಿ ಉಳಿದು ಬಂದಿರುವ ಹಳೇ ಮೈಸೂರು ಸಂಸ್ಥಾನಕ್ಕೆ ಬರಬೇಕು. ವಿಜಯನಗರ ಪತನಾನಂತರ ನಿರಂತರವಾಗಿ ಅವರ ಮಾಂಡಳಿಕರಾಗಿದ್ದ ಮೈಸೂರು ಒಡೆಯರ್ ಅವರ ರಾಜವಂಶದ ಆಳ್ವಿಕೆಯಲ್ಲಿ ಮೈಸೂರು ಸಂಸ್ಥಾನ ಉಳಿದಿತ್ತು. ದಸರಾ ಹಬ್ಬದ ಆಚರಣೆ ವಿಜಯನಗರ ಕಾಲದ ವೈಭವದ ಪ್ರಮಾಣದಲ್ಲೇ ಮೈಸೂರು ರಾಜ್ಯದಲ್ಲಿ ಶತಮಾನಗಳ ಕಾಲ ಮುಂದುವರೆಯಿತು. ದಸರಾ ಹಬ್ಬದ ಅಂಗವಾಗಿ ಬೊಂಬೆ ಹಬ್ಬವನ್ನೂ ಅಷ್ಟೇ ಸಂಭ್ರಮದಿಂದ, ಸಡಗರದಿಂದ, ನಿಷ್ಠೆಯಿಂದ ಹಾಗೂ ಪೈಪೋಟಿಯಿಂದ ಇಂದಿಗೂ ಮೈಸೂರು ಸಂಸ್ಥಾನದಲ್ಲಿ ಆಚರಿಸಲಾಗುತ್ತಿದೆ. ಆದ್ದರಿಂದ ಮೈಸೂರು ನಗರ ಮತ್ತು ಅರಮನೆಯಲ್ಲಿ ಆಚರಿಸಲಾಗುವ ಬೊಂಬೆ ಹಬ್ಬದ ಆಚರಣಾ ವಿಧಾನವನ್ನು ಇಲ್ಲಿ ಸ್ಥೂಲವಾಗಿ ವಿವರಿಸಲಾಗಿದೆ.

ಮೈಸೂರು ಒಡೆಯರ್ ಅವರ ಸಂಸ್ಥಾನ ವಿಸ್ತರಿಸಿದ್ದ ಎಲ್ಲಾ ಭಾಗಗಳಲ್ಲಿಯೂ ದಸರಾ ಮತ್ತು ಅದರ ಅವಿಚ್ಛಿನ್ನ ಅಂಗವಾದ ಬೊಂಬೆ ಹಬ್ಬವನ್ನು ಈಗಲೂ ವಿಜೃಂಭಣೆಯಿಂದ ಆಚರಿಸುತ್ತಾರೆ. ಬೊಂಬೆ ಹಬ್ಬದ ಒಂದು ವಿಶೇಷತೆ ಎಂದರೆ ಹಬ್ಬದ ಹತ್ತೂ

ದಿನಗಳಲ್ಲಿ ಮಕ್ಕಳಿಗೆ ಪ್ರಾಧಾನ್ಯತೆ ನೀಡಿರುವುದು. ಶ್ರಾವಣದಲ್ಲಿ ಬರುವ ಹಬ್ಬಗಳು ನಿಯಮ, ಆಚಾರ, ಶ್ರದ್ಧೆ, ಮಡಿ, ಮಂತ್ರ ಮುಂತಾದವುಗಳಿಂದ ಕೂಡಿದ್ದು, ಹಿರಿಯರಿಗಾಗಿ ರೂಪಿತವಾಗಿವೆ. ಇವುಗಳಲ್ಲಿ ಮಕ್ಕಳು ಸಕ್ರಿಯವಾಗಿ ಭಾಗವಹಿಸುವ ಅವಕಾಶ ಕಡಿಮೆ. ಇದರಿಂದಾಗಿ ಪೂರ್ವಿಕರು, ಪ್ರಾಯಶಃ ಮಕ್ಕಳಿಗೂ ಪೂಜೆ-ಪುರಸ್ಕಾರಗಳನ್ನು ಕಲಿಸಲು, ಅವರ ಅಭಿರುಚಿಗೆ ತಕ್ಕುದಾದ ಬೊಂಬೆ ಹಬ್ಬವನ್ನು ಅವರ ಕೈಯಲ್ಲೇ ಮಾಡಿಸುವ ಪದ್ಧತಿಯನ್ನು ತಂದಿದ್ದಾರೆಂದು ತೋರುತ್ತದೆ. ವಾರ, ತಿಂಗಳುಗಳ ಮುಂಚೆಯೇ ಬೊಂಬೆಯ ಹಬ್ಬಕ್ಕೆ ಸಿದ್ಧತೆಗಳು ಪ್ರಾರಂಭವಾಗುತ್ತವೆ. ಬೊಂಬೆಗಳ ತಯಾರಿಕೆ, ಹಳೆ ಬೊಂಬೆಗಳಿಗೆ ಅಲಂಕರಣ, ಅಂಗಡಿ, ರಸ್ತೆ, ಮಾರುಕಟ್ಟೆ, ಅಣೆಕಟ್ಟು, ಕೆರೆ, ಕೊಳ, ಉದ್ಯಾನವನ ಇತ್ಯಾದಿಗಳ ನಿರ್ಮಾಣ, ಇವೆಲ್ಲದರಲ್ಲೂ ಹೆಣ್ಣು-ಗಂಡು ಮಕ್ಕಳೆಲ್ಲರೂ ಕೂಡಿ ಉತ್ಸಾಹದಿಂದ ಕೆಲಸ ಮಾಡುತ್ತಾರೆ. ಅವರವರ ಮನೆಗಳಲ್ಲಿ ಬೊಂಬೆ ಕೂಡಿಸುವ ಕೆಲಸ ಪೈಪೋಟಿಯಿಂದ ನಡೆಯುತ್ತದೆ. ಪ್ರತಿಯೊಬ್ಬರೂ ತಂತಮ್ಮ ಮನೆಗಳಲ್ಲಿ ಹೊಸ ಹೊಸ ರೀತಿಯಲ್ಲಿ ಬೊಂಬೆ ಕೂಡಿಸುವ ಪ್ರಯತ್ನ ಮಾಡುತ್ತಾರೆ. ಸಮಾಜದ ಎಲ್ಲಾ ವರ್ಗದ ಜನರೂ ಈ ಸಂಭ್ರಮದಲ್ಲಿ ಪಾಲ್ಗೊಳ್ಳುತ್ತಾರೆ. ಗಂಡು ಮಕ್ಕಳು ಬೊಂಬೆಯನ್ನು ಶೇಖರಿಸಿ, ಜೋಡಿಸಿ ಅಲಂಕರಿಸುವ ಕೆಲಸದಲ್ಲಿ ಮುಂದಿದ್ದರೆ, ಹೆಣ್ಣು ಮಕ್ಕಳು ಪೂಜೆ, ಆರತಿ, ಬಾಗಿನ, ನೃತ್ಯ, ಗಾಯನ, ರಂಗೋಲಿ ಇವುಗಳಲ್ಲಿ ಹೆಚ್ಚಾಗಿ ಪಾಲ್ಗೊಳ್ಳುತ್ತಾರೆ.

ಆಶ್ವಯುಜ ಶುದ್ಧ ಪಾಡ್ಯದ ದಿನ ಶುಭ ಮುಹೂರ್ತದಲ್ಲಿ ಅಂದರೆ ದಸರಾ ಹಬ್ಬದ ಪ್ರಾರಂಭದೊಂದಿಗೆ ಬೊಂಬೆ ಪೂಜೆ ಪ್ರಾರಂಭವಾಗುತ್ತದೆ. ಹಿಂದಿನ ಮಹಾರಾಜರ ಕಾಲದಲ್ಲಿ, ಮೈಸೂರು ನಗರದಲ್ಲಿ ಇಪ್ಪತ್ತೊಂದು ಕುಶಾಲ ತೋಪುಗಳನ್ನು ಹಾರಿಸುತ್ತಿದ್ದರು. ಇದು ಅರಮನೆಯಲ್ಲಿ ಪೂಜೆ ಪ್ರಾರಂಭವಾದ ಸಂಕೇತ. ಇದರ ನಂತರವೆ ಊರಿನ ಎಲ್ಲಾ ಕಡೆ ಬೊಂಬೆ ಪೂಜೆ ಪ್ರಾರಂಭವಾಗುತ್ತಿತ್ತು. ವಿಜಯದಶಮಿಯಂದು ಸಂಜೆ ಮಹಾರಾಜರು ಶಮೀಪೂಜೆ ನಡೆಸಿದ ನಂತರ ಮತ್ತೆ ಕುಶಾಲ ತೋಪುಗಳು ಸಿಡಿಯುತ್ತಿದ್ದವು. ಈ ಶಬ್ದ ಕೇಳಿದ ನಂತರವೇ ಊರಿನಲ್ಲಿ ಬೊಂಬೆ ಕಳಶದ ವಿಸರ್ಜನೆ ಆಗುತ್ತಿತ್ತು. ದಸರಾದ ದಿನಗಳಂದು ಪ್ರತಿನಿತ್ಯ ಬೆಳಿಗ್ಗೆ ಬೊಂಬೆಯ ಕಳಶಕ್ಕೆ ಪೂಜೆ, ಆರತಿ ನಡೆಯುತ್ತದೆ. ಸಂಜೆಯ ವೇಳೆಯಲ್ಲಿ ಹೆಣ್ಣುಮಕ್ಕಳು ಹೊಸ-ಹೊಸ ಬಟ್ಟೆಗಳನ್ನು ತೊಟ್ಟು, ಸಾಲಂಕೃತವಾಗಿ ನೆರೆಹೊರೆಯ ಹೆಣ್ಣು ಮಕ್ಕಳನ್ನು ಬೊಂಬೆ ಆರತಿಗೆಂದು ಕರೆಯುತ್ತಾರೆ. ಬೊಂಬೆಯ ಮುಂದೆ ಸಣ್ಣ ಮಕ್ಕಳ ಹಾಡು ಹಸೆ, ನೃತ್ಯ ಪ್ರದರ್ಶನಗಳು, ಬೊಂಬೆ ಆರತಿ ನಡೆಯುತ್ತದೆ. ಬೊಂಬೆ ಬಾಗಿನವೆಂದೇ ತಯಾರಾದ ಮಕ್ಕಳಿಗೆ ಪ್ರಿಯವಾದ ಪುಟ್ಟ-ಪುಟ್ಟ ಚಕ್ಕುಲಿ, ಕೋಡುಬಳೆ, ಪುರಿಉಂಡೆ, ಸಿಹಿ ತಿಂಡಿ ಇತ್ಯಾದಿಗಳನ್ನು ಮಕ್ಕಳಿಗೆ ಬಾಗಿನವಾಗಿ ಕೊಡುತ್ತಾರೆ. ಕೆಲವರಲ್ಲಿ ಪುಟ್ಟ ಮಕ್ಕಳನ್ನು ಆಮಂತ್ರಿಸಿ ಕಣವನ್ನು ಕೊಟ್ಟು ಪೂಜೆ ಮಾಡುತ್ತಾರೆ. ಇದಕ್ಕೆ 'ಕುಮಾರ ಪೂಜೆ' ಎಂದು ಕರೆಯುವ ವಾಡಿಕೆಯೂ ಇದೆ.

ಮೈಸೂರು ಅರಮನೆಯಲ್ಲಿ ಬೊಂಬೆ ಹಬ್ಬವನ್ನು ಬಹಳ ವಿಜೃಂಭಣೆಯಿಂದ ಆಚರಿಸಲಾಗುತ್ತಿತ್ತು. ಅರಮನೆಯಲ್ಲಿ 'ಬೊಂಬೆ ತೊಟ್ಟಿ' ಎಂದೇ ಕರೆಯಲಾಗುವ ಒಂದು ಭಾಗವಿದೆ. ಅಲ್ಲಿ ಅನೇಕ ಹಂತಗಳಲ್ಲಿ ಸಾವಿರಾರು ಸಾಲಂಕೃತ ಬೊಂಬೆಗಳನ್ನು ಕೂಡಿಸಿ ಪ್ರಪಂಚವನ್ನೇ ನಿರ್ಮಿಸುತ್ತಿದ್ದರು. ಸಹಸ್ರಾರು ಸಂಖ್ಯೆಯಲ್ಲಿ ದೇಶದ ವಿವಿಧ ಭಾಗಗಳಿಂದ ಆಗಮಿಸಿದ ಪ್ರವಾಸಿಗರು ಬೊಂಬೆ ಪ್ರದರ್ಶನವನ್ನು ನೋಡಿ ಆನಂದಿಸುತ್ತಿದ್ದರು.

ಈಗಲೂ ರಾಜವಂಶದವರು ಅರಮನೆಯ ಅವರ ಖಾಸಗೀ ನಿವಾಸದಲ್ಲಿ ಬೊಂಬೆ ಕೂಡಿಸಿ ಪೂಜಿಸುತ್ತಾರೆ. ರಾಜ-ರಾಣಿಯ ಬೊಂಬೆಗಳು (ಪಟ್ಟದ ಬೊಂಬೆಗಳು) ಇವುಗಳಲ್ಲಿ ಪ್ರಧಾನ ಸ್ಥಾನದಲ್ಲಿ ಇರುವುದು ಗಮನಾರ್ಹ. ಆಳುವ (ಆಳಿದ) ಮಹಾರಾಜರೇ ರಾಜ-ರಾಣಿಯರ ಬೊಂಬೆಗಳನ್ನು ಪೂಜಿಸುವ ವಿಚಾರ ಸಹಜವಾಗಿ ವಿಚಿತ್ರವೆನಿಸಿದರೂ ಸತ್ಯಸಂಗತಿಯಾಗಿದೆ. ಈ ಪದ್ಧತಿ ಮೂಲತಃ ಸಾಮಂತರಾಜರು, ಚಕ್ರವರ್ತಿಯ (ವಿಜಯನಗರ ಚಕ್ರವರ್ತಿಗಳ) ಪೂಜೆಯನ್ನು ಸ್ವಸ್ಥಾನದಲ್ಲೇ ಇದ್ದುಕೊಂಡು ನೆರವೇರಿಸುತ್ತಿದ್ದುದರ ಕುರುಹು ಎಂದು ಹೇಳಬಹುದು. ಮೈಸೂರು ಅರಸರು ಮೂಲತಃ ವಿಜಯನಗರ ಸಾಮ್ರಾಜ್ಯದ ಸಾಮಂತರು ಅಂದು ಇವರ ಪ್ರಾಂತ್ಯದಲ್ಲಿ ನಡೆಯುತ್ತಿದ್ದ ಸಾಂಕೇತಿಕ ಚಕ್ರವರ್ತಿ ಪೂಜೆ ಇಂದೂ ಸಹ ಅವರ ಅರಮನೆಯಲ್ಲಿ ಮುಂದುವರೆಯುತ್ತಿದೆ ಎಂಬ ಅಂಶದ ಹಿನ್ನೆಲೆಯಲ್ಲಿ ಈ ರಾಜ-ರಾಣಿಯರ ಪೂಜೆಯನ್ನು ವಿವರಿಸಿದರೆ, ಈ ಪೂಜೆಯ ಔಚಿತ್ಯ ಅರ್ಥಪೂರ್ಣವೆನಿಸುತ್ತದೆ.

ಪಟ್ಟದ ಬೊಂಬೆಗಳ ಪೂಜೆಯ ಜೊತೆಗೆ ಅರಮನೆಯಲ್ಲಿ ಮಹಾಲಕ್ಷ್ಮೀ ಪ್ರತೀಕವಾಗಿ ಕಳಶ ಸ್ಥಾಪನೆಯಾಗುತ್ತದೆ. ಮಹಾರಾಜರು ಮೊದಲು ಪಟ್ಟದ ಕುದುರೆಯನ್ನು ಅಶ್ವಲಕ್ಷ್ಮಿಯೆಂದೂ ನಂತರ ಪಟ್ಟದ ಆನೆಯನ್ನು ಗಜಲಕ್ಷ್ಮಿಯೆಂದೂ ಪೂಜಿಸಿ, ನಂತರ ಬೊಂಬೆಯ ಪೂಜೆ ಮಾಡುತ್ತಾರೆ. ಮಹಾರಾಜರ ಪರವಾಗಿ ರಾಜ ಪುರೋಹಿತರು ನಿತ್ಯಪೂಜೆ ನಡೆಸುತ್ತಾರೆ.

ಹೀಗೆ ನಮ್ಮ ನಾಡಿನಲ್ಲಿ ಶತಮಾನಗಳಿಂದ ಅನೂಚಾನವಾಗಿ ನಡೆದು ಬಂದಿರುವ ಬೊಂಬೆ ಹಬ್ಬವು, ಪ್ರತ್ಯಕ್ಷ ದೇವರೆನಿಸಿ ನಮ್ಮನ್ನು ರಕ್ಷಿಸುವ ಚಕ್ರವರ್ತಿಯನ್ನೂ ಪೂಜಿಸಿ, ಗೌರವಿಸುವ ಸಂಕೇತವಾಗಿದೆ. ಜೊತೆಗೇ ನಾಡಿನ ಸಮಸ್ತ ಜನರನ್ನೂ ಜಾತಿ, ಮತ, ಕುಲ ಭೇದವಿಲ್ಲದೆ ಒಂದುಗೂಡಿಸಿ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಐಕ್ಯತೆಯನ್ನು ಪ್ರತಿಬಿಂಬಿಸುವ ನಾಡಹಬ್ಬವೂ ಆಗಿದೆ. ಇದರ ವಸ್ತು-ವಿಷಯ, ಆಚರಣಾ ಕ್ರಮ, ನೀತಿ-ನಿಯಮಗಳು ಇವುಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದಾಗ, ಈ ಪದ್ಧತಿ ಬಹುಪಾಲು ವಿಜಯನಗರ ಸಾಮ್ರಾಜ್ಯದಲ್ಲಿ ಪ್ರಾರಂಭವಾದ ಒಂದು ಜನಪದ ಸಂಪ್ರದಾಯ ಎಂಬ ಭಾವನೆ ಮೂಡುತ್ತದೆ.

(ಈ ಲೇಖನ ದಿನಾಂಕ 14-10-1996 ರಂದು ಮೈಸೂರು ಆಕಾಶವಾಣಿಯಿಂದ ಬಿತ್ತರಿಸಲಾದ ಲೇಖಕರ ಭಾಷಣದ ವಿಸ್ತೃತ ರೂಪ.)

12. ವಿಜಯನಗರದಲ್ಲಿ ಜೈನ ಧರ್ಮ

ಹೆಚ್.ಟಿ. ತಳವಾರ್

ಯಾವುದೇ ಇತಿಹಾಸವನ್ನು ನಿರ್ಮಿಸಲು ಆಧಾರಗಳು ಬಹು ಪ್ರಾಮುಖ್ಯವಾದುವು. ವಿಜಯನಗರದಲ್ಲಿ ಜೈನ ಧರ್ಮವನ್ನು ಅಧ್ಯಯನ ಮಾಡಲು ಸ್ಮಾರಕಗಳು, ಶಾಸನಗಳು, ಶಿಲ್ಪಗಳು ಮತ್ತು ಸಾಹಿತ್ಯವು ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ.

ಸ್ಮಾರಕಗಳು ಮತ್ತು ಶಿಲ್ಪಗಳು:

ವಿಜಯನಗರದಲ್ಲಿ ಸುಮಾರು ಹತ್ತು ಬಸದಿಗಳನ್ನು, ಕೆಲವು ಹಾಳು ಬಿದ್ದ ಬಸದಿಗಳನ್ನು ಮತ್ತು ಶಿಲ್ಪಗಳನ್ನು ನೋಡಬಹುದು. ಅಂತೆಯೇ ಗಾಣಗಿತ್ತಿಯ ಬಸದಿ, ಪಾರ್ಶ್ವನಾಥ ಬಸದಿ, ಶಿವದೇವಾಲಯದ ಹತ್ತಿರವಿರುವ ಬಸದಿ, ಹೆಂಡ ಮಾರೋ ಗುಂಡಿನ ಹತ್ತಿರವಿರುವ ಬಸದಿ, ಸೋಮವಾರದ ಬಾಗಿಲ ಹತ್ತಿರವಿರುವ ಬಸದಿ, ಕಡಿರಾಮಪುರದ ಹತ್ತಿರವಿರುವ ಬಸದಿ ಆನೆಗೊಂದಿಯ ಬಸದಿ ಮತ್ತು ಗವಿ ರಂಗನಾಥ ದೇವಾಲಯದ ಹತ್ತಿರವಿರುವ ನಿಷಧಿಗಳು, ಹಾಗೂ ಶಿಲ್ಪಗಳು ವಿಜಯನಗರದಲ್ಲಿ ಜೈನ ಧರ್ಮವನ್ನು ಅಭ್ಯಸಿಸಲು ಬಲು ಅನುಕೂಲಕರವಾಗಿರುವುವು.

ಶಾಸನಗಳು:

ವಿಜಯನಗರ ಕಾಲದಲ್ಲಿ ಜೈನ ಧರ್ಮಕ್ಕೆ ಸಂಬಂಧಪಟ್ಟಂತೆ ಸುಮಾರು ಅರವತ್ತು ಶಾಸನಗಳನ್ನು ನೋಡಬಹುದು. ಆದರೆ ರಾಜಧಾನಿಯಲ್ಲಿ ಸುಮಾರು ಹತ್ತು ಶಾಸನಗಳನ್ನು ಕಾಣಬಹುದು. ಈ ಶಾಸನಗಳು ವಿಜಯನಗರದಲ್ಲಿ ಜೈನ ಧರ್ಮಕ್ಕೆ ಕೊಟ್ಟ ದಾನದತ್ತಿಗಳು, ಬಸದಿಗಳ ನಿರ್ಮಾಣ, ಹಬ್ಬಗಳು, ಜೈನ ಧರ್ಮದ ವಿವಿಧ ಚಟುವಟಿಕೆಗಳ ಬಗ್ಗೆ ಹಾಗೂ ವಿಜಯನಗರದ ಅರಸರು ಜೈನ ಧರ್ಮಕ್ಕೆ ಕೊಟ್ಟ ಪ್ರೋತ್ಸಾಹ ಮತ್ತು ಬೆಳವಣಿಗೆಯ ಬಗ್ಗೆ ತಿಳಿಸುತ್ತವೆ.

ಸಾಹಿತ್ಯ:

ವಿಜಯನಗರ ಕಾಲದಲ್ಲಿ ಸಾಹಿತ್ಯವು ಸಮೃದ್ಧಿಯಾಗಿ ಬೆಳೆದುದನ್ನು ಕಾಣಬಹುದು. ಇದರಲ್ಲಿ ಜೈನ ಕವಿಗಳ ಮತ್ತು ಆಚಾರ್ಯರ ಪಾತ್ರ ಹಿರಿದಾದುದು. ಜೈನ ಕವಿಗಳಲ್ಲಿ ಮೊದಲನೆಯವನು ಬಾಹುಬಲಿ ಪಂಡಿತ (ಕ್ರಿ.ಶ. 1352). ನಯಕೀರ್ತಿಯ ಶಿಷ್ಯನಾದ ಈತನು ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಾವೀಣ್ಯತೆ ಹೊಂದಿದ್ದರಿಂದ ಉಭಯಭಾಷಾ ಕವಿಚಕ್ರವರ್ತಿ ಎಂಬ ಬಿರುದನ್ನು ಪಡೆದಿದ್ದನು. ಈತನು ಬರೆದ ಧರ್ಮನಾಥ ಪುರಾಣದಲ್ಲಿ 15ನೆಯ ತೀರ್ಥಂಕರನಾದ ಧರ್ಮನಾಥನ ಚರಿತ್ರವಿದೆ.[1] ಕೇಶವವರ್ಣಿಯು (ಕ್ರಿ.ಶ. 1359) ಇನ್ನೊಬ್ಬ ಜೈನಕವಿ. ಈತನು ಗೊಮ್ಮಟಸಾರ ಮತ್ತು ಅಮಿತಗತಿ ಶ್ರಾವಕಾಚಾರಗಳಿಗೆ ಕರ್ಣಾಟಕವೃತ್ತಿಯನ್ನು ಬರೆದನು. ಅಭಯಸೂರಿ ಸಿದ್ಧಾಂತಚಕ್ರವರ್ತಿಯ ಶಿಷ್ಯನಾದ ಈತನು ಗೊಮ್ಮಟಸಾರದ ಕರ್ಣಾಟಕವೃತ್ತಿಯನ್ನು ಧರ್ಮಭೂಷಣಭಟ್ಟಾರಕನ ಆಜ್ಞೆಯ ಮೇರೆಗೆ ಬರೆದನು.[2] ಹಂಪೆಯ ಕೋಟಲಿಂಗದ ಹತ್ತಿರವಿರುವ ಪಾದಗಳ ಸುತ್ತಲೂ ಇರುವ "ಧರ್ಮಭೂಷಣ ಭಟ್ಟಾರಕದೇವರ ಪಾದ"[3] ಶಾಸನದಲ್ಲಿ ಉಲ್ಲೇಖಗೊಂಡವನು ಈ ಧರ್ಮಭೂಷಣ ಭಟ್ಟಾರಕನೇ ಇರಬಹುದು. ಮತ್ತೊಬ್ಬ ಜೈನಕವಿ ಮಧುರನು (ಕ್ರಿ.ಶ. 1385) ವಿಜಯನಗರದ ಅರಸ ಎರಡನೆಯ ಹರಿಹರನ ಆಸ್ಥಾನ ಕವಿಯಾಗಿದ್ದರಿಂದ "ಭೂನಾಥಾಸ್ಥಾನ ಚೂಡಾಮಣಿ" ಎಂಬ ಬಿರುದನ್ನು ಪಡೆದಿದ್ದನು. ಈತನು ಧರ್ಮನಾಥ ಪುರಾಣವನ್ನೂ ಮತ್ತು ಗುಮ್ಮಟಸ್ತುತಿರೂಪವಾದ ಒಂದು ಅಷ್ಟಕವನ್ನೂ ಬರೆದಿದ್ದಾನೆ.[4] ಆಯತವರ್ಮನೆಂಬ (ಕ್ರಿ.ಶ. 1400) ಕವಿಯು ವರ್ಧಮಾನ ಸಿದ್ಧಾಂತದೇವನ ಶಿಷ್ಯನು. ಈತನು ಬರೆದ ಕನ್ನಡ ರತ್ನಕರಂಡಕ ಗ್ರಂಥದಲ್ಲಿ ಜೈನಮತಕ್ಕೆ ಸಂಬಂಧಪಟ್ಟ ರತ್ನತ್ರಯವೆಂಬ ದರ್ಶನಜ್ಞಾನಚಾರಿತ್ರಗಳು ವರ್ಣಿಸಲ್ಪಟ್ಟಿವೆ.[5] ಸುಮಾರು ಅದೇ ಕಾಲದಲ್ಲಿದ್ದ ಇನ್ನೊಬ್ಬ

ಜೈನಕವಿ ಚಂದ್ರಕೀರ್ತಿ ಪರಮಾಗಮಸಾರವನ್ನು ಬರೆದಿದ್ದಾನೆ. ಇದರಲ್ಲಿ ಆತ್ಮಸ್ವರೂಪ, ವೈರಾಗ್ಯ ಮುಂತಾದ ವಿಷಯಗಳು ನಿರೂಪಿತವಾಗಿವೆ.[6] ಆದೇ ಕಾಲದಲ್ಲಿದ್ದ ಜಿನಾಚಾರ್ಯನ ಗ್ರಂಥಗಳಾವುವೂ ನಮಗೆ ದೊರೆತಿಲ್ಲ.[7]

ಜೈನ ಧರ್ಮ, ಧಾರ್ಮಿಕ ಸಹಿಷ್ಣುತೆ:

ವಿಜಯನಗರ ಕಾಲದಲ್ಲಿ ವಿವಿಧ ಧಾರ್ಮಿಕ ಪಂಗಡಗಳು ಸಮಾಜದಲ್ಲಿ ತಮ್ಮ ಪ್ರಭಾವವನ್ನು ಬೀರಲು ಸೆಣಸಾಡುವುದನ್ನು ಕಾಣಬಹುದು. ಇದು ಭಾರತೀಯ ಸಂಸ್ಕೃತಿಯಲ್ಲಿ ಸರ್ವಸಾಮಾನ್ಯವಾದುದು. ಆದರೂ ಕೂಡ ನಾವು ಧಾರ್ಮಿಕ ಸಹಿಷ್ಣುತೆಯನ್ನು ಕಾಣುತ್ತೇವೆ. ಅಂತೆಯೇ ವಿಜಯನಗರದಲ್ಲಿ ವೈಷ್ಣವ, ಶೈವ, ವೀರಶೈವ ಪಂಗಡಗಳು ಪ್ರಭಾವದಲ್ಲಿದ್ದು ಕೆಲವು ವ್ಯಾಜ್ಯಗಳಿದ್ದುದನ್ನು ಕಾಣಬಹುದು. ಇಂತಹ ಸಮಯದಲ್ಲಿ ತಮ್ಮ ವೈಯಕ್ತಿಕ ಧಾರ್ಮಿಕ ಆಚರಣೆಯನ್ನು ಬಿಟ್ಟು ಮತ್ತು ಪಂಗಡದ ಜನಸಂಖ್ಯೆಯನ್ನು ಮರೆತು ವ್ಯಾಜ್ಯಗಳನ್ನು ತೃಪ್ತಿಕರವಾಗಿ ನಿರ್ವಹಿಸಿರುವುದನ್ನು ಜೈನ ಶಾಸನಗಳಲ್ಲಿ ಕಾಣಬಹುದು.

ಶಿವಮೊಗ್ಗ ಜಿಲ್ಲೆಯ ಕಲ್ಲುಬಸದಿಯ ಕಣವೆ ಶಾಸನವು[8] ಹದಿನಾರುನಾಡು ಮತ್ತು ಬಸದಿಯ ಆಚಾರ್ಯರ ನಡುವೆ ಪಾರ್ಶ್ವನಾಥ ಬಸದಿಯ ಜಮೀನಿನ ಮೇರೆಯ ಬಗ್ಗೆ ಇದ್ದ ವ್ಯಾಜ್ಯವನ್ನು ನಾಗಣ್ಣ ಮಂತ್ರಿ ಮತ್ತು ಜೈನ ಮಲ್ಲಪ್ಪ ಆ ಹಳ್ಳಿಯ ಜನರನ್ನು ಕರೆಸಿ ನ್ಯಾಯವನ್ನು ಕೊಟ್ಟಿರುವುದನ್ನು ತಿಳಿಸುತ್ತದೆ. ಆದೇ ರೀತಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಅರಗ ಶಾಸನವು ಭೂಮಿಯ ಮೇರೆ ಬಗ್ಗೆ ವ್ಯಾಜ್ಯವನ್ನು ತಿಳಿಸಿ, ಬಸದಿಯ ಆಚಾರದ ಪ್ರಕಾರ ಮೇರೆಯನ್ನು ಗುರುತಿಸಲಾಗಿರುವುದು ಎಂಬುದನ್ನು ತಿಳಿಸುತ್ತದೆ.

ಇನ್ನೊಂದು ಪ್ರಮುಖ ಮತ್ತು ಪ್ರಸಿದ್ಧವಾದ ಬುಕ್ಕಾರಾಯನ ಶಾಸನ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಶ್ರವಣಬೆಳಗೊಳದ ಭಂಡಾರಿ ಬಸ್ತಿಯಲ್ಲಿದೆ.[9] ಜೈನರಿಗೆ ಇನ್ನು ಮುಂದೆ ಯಾವುದೇ ಧಾರ್ಮಿಕ ತೊಂದರೆಯಾಗದಿರುವುದಕ್ಕೆ ಇದು ಒತ್ತುಕೊಡುವುದು. ಜೈನರು ಮತ್ತು ಶ್ರೀ ವೈಷ್ಣವರು ಸ್ನೇಹದಿಂದ ಬದುಕುವುದನ್ನು ತಿಳಿಸುವುದು. ಸ್ವತಃ ರಾಜನು (ಬುಕ್ಕರಾಯ) ಜೈನರ ಕೈಯ ಮೇಲೆ ಶ್ರೀ ವೈಷ್ಣವರ ಕೈಯನ್ನು ಇಟ್ಟು ಇನ್ನು ಮುಂದೆ ಜೈನ ದರ್ಶನಕ್ಕೂ ಮತ್ತು ವೈಷ್ಣವ ದರ್ಶನಕ್ಕೂ ಯಾವುದೇ ಭಿನ್ನಾಭಿಪ್ರಾಯ ಇಲ್ಲವೆಂದು ಹೇಳಿರುವುದನ್ನು ತಿಳಿಸುತ್ತದೆ.

ಆದೇ ರೀತಿಯಾಗಿ ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಲಕ್ಷ್ಮೇಶ್ವರದ ಶಾಸನವು[10] ಶಂಖ ಬಸದಿಯ ಜೈನ ಗುರುಗಳಾದ ಸೋಮಾಚಾರ್ಯ ಹಾಗೂ ಹೇಮಾಚಾರ್ಯ ಮತ್ತು ಶೈವ ಗುರುಗಳಾದ ಕಾಳಹಸ್ತಿದೇವ ಮತ್ತು ಶಿವರಾಮದೇವರವರ ನಡುವೆ ಲಾಂಛನಗಳ ಉಪಯೋಗದ ಮತ್ತು ಭೂಮಿಯ ಬಗ್ಗೆ ವ್ಯಾಜ್ಯವನ್ನು ಹಳೆಯ ದಾಖಲೆಗಳ ಆಧಾರದ ಮೇಲೆ ತೀರ್ಮಾನ ಕೈಗೊಂಡಿರುವುದನ್ನು ಹೇಳುತ್ತದೆ.

ಮತ್ತೊಂದು ಶಾಸನ ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಪಾರ್ಶ್ವನಾಥ ಬಸದಿಯಲ್ಲಿರುವ ಶಾಸನವು[11] ಜೈನರಿಗೂ ಮತ್ತು ವೀರಶೈವರಿಗೂ ನಡೆದ ವ್ಯಾಜ್ಯದ ಬಗ್ಗೆ ತಿಳಿಸುತ್ತದೆ. ಹುಚ್ಚಪ್ಪ ದೇವನು ವೀರಶೈವ ಧರ್ಮದ ಲಿಂಗ ಮುದ್ರೆಯನ್ನು ವಿಜಯ ಬಸ್ತಿಯ ಕಂಬದ ಮೇಲೆ ಬರೆದದ್ದನ್ನು ವಿಜಯಪ್ಪ ಅಳಿಸಿರುವುದು, ಇಬ್ಬರೂ ಧಾರ್ಮಿಕ ಮುಖಂಡರು ಸೇರಿ ಹಿಂದಿನಿಂದಲೂ ನಡೆದುಬಂದ ಪದ್ಧತಿಯನ್ನು ಆಚರಿಸಲು ತೀರ್ಮಾನಿಸಿರುವುದನ್ನು ತಿಳಿಸುತ್ತದೆ.

ಬಸದಿಗಳ ನಿರ್ಮಾಣ:

ವಿಜಯನಗರ ಕಾಲದಲ್ಲಿ ಬಸದಿಗಳ ಮತ್ತು ಜಿನ ಮೂರ್ತಿಗಳ ಪ್ರತಿಷ್ಠಾಪನಾ ಕಾರ್ಯವು ಸರ್ವಸಾಮಾನ್ಯವಾಗಿದ್ದು, ರಾಜಧಾನಿಯಲ್ಲಿ ಇಂತಹ ಕಾರ್ಯಗಳು ನಡೆದದ್ದನ್ನು ಶಾಸನಗಳಲ್ಲಿ ನೋಡಬಹುದು. ವಿಜಯನಗರ ಪಟ್ಟಣದಲ್ಲಿರುವ ಕೃಷ್ಣ ದೇವಾಲಯದ ಹತ್ತಿರವಿರುವ ಆಂಜನೇಯ ದೇವಾಲಯದ ಮುಂದೆ ಇರುವ ಶಾಸನವು ಆದಿನಾಥ ಮತ್ತು ಪಾರ್ಶ್ವನಾಥನಿಗೆ ಮಠ,

ಮಂಟಪ, ತೋರಣವನ್ನು ಬಸವ ದಂಡನಾಯಕ ಕಟ್ಟಿಸಿರುವುದನ್ನು ತಿಳಿಸುವುದು.[13] ಇನ್ನೊಂದು ಶಾಸನವು ಬೈಚಯ್ಯ ದಂಡನಾಯಕ ಚೈತ್ಯಾಲಯವನ್ನು ಮತ್ತು ಕುಂತುನಾಥ ತೀರ್ಥಂಕರ ವಿಗ್ರಹದ ಪ್ರತಿಷ್ಠಾಪನೆ ಮಾಡಿರುವುದನ್ನು ತಿಳಿಸುವುದು. ಮತ್ತೊಂದು ಆನೆಗೊಂದಿಯಲ್ಲಿರುವ ಶಾಸನವು ಹರಿಹರನ ಮಹಾದಂಡನಾಯಕನಾದ ಇರುಗಪ್ಪ ದಂಡನಾಯಕನು (ಬೈಚದಂಡನಾಯಕನ ಮಗ) ಚೈತ್ಯಾಲಯವನ್ನು ಕಟ್ಟಿಸಿರುವುದನ್ನು ತಿಳಿಸುವುದು.[13] ಇನ್ನೊಂದು ಶಾಸನವು ವಿಜಯನಗರ ಅರಸ ಎರಡನೆಯ ದೇವರಾಯ ಪಾರ್ಶ್ವನಾಥ ಬಸದಿಯನ್ನು ಕಟ್ಟಿಸಿರುವುದನು ತಿಳಿಸುತ್ತದೆ.

ಅದೇ ರೀತಿಯಾಗಿ ರಾಜ ಮಹಾರಾಜರುಗಳಲ್ಲದೆ ಮಹಾರಾಣಿಯರು ಜೈನ ಧರ್ಮಕ್ಕೆ ಪ್ರೋತ್ಸಾಹ ನೀಡಿ ವಿಗ್ರಹಗಳ ಪ್ರತಿಷ್ಠಾಪನೆ ಮಾಡಿದ ಸಂಗತಿಗಳನ್ನು ಕಾಣಬಹುದು. ಅಂತೆಯೇ ಎರಡನೆಯ ದೇವರಾಯನ ರಾಣಿ ಭೀಮಾ ದೇವಿಯು ಶಾಂತಿನಾಥಸ್ವಾಮಿಯ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಿದ್ದನ್ನು ಶ್ರವಣಬೆಳಗೊಳದ ಮಂಗಾಯಿ ಬಸದಿಯಲ್ಲಿರುವ ಶಾಸನವು[14] ತಿಳಿಸುವುದು.

ಬಸದಿಗಳಲ್ಲಿ ಪೂಜೆ ಮತ್ತು ಹಬ್ಬಗಳು:

ವಿಜಯನಗರ ಕಾಲದಲ್ಲಿ ಹಬ್ಬ ಹರಿದಿನಗಳು ಮಹತ್ವವಾದ ಪಾತ್ರವನ್ನು ವಹಿಸಿದ್ದವು. ಜೈನ ಬಸದಿಗಳಲ್ಲಿ ತೀರ್ಥಂಕರರಿಗೆ ಹಾಲು ಧಾರೆಯು ಪ್ರಮುಖವಾಗಿತ್ತು ಎಂಬುದು ಜೈನ ಶಾಸನಗಳಿಂದ ತಿಳಿದುಬರುತ್ತದೆ. ಅಲ್ಲದೆ ವಿವಿಧ ಪ್ರಕಾರದ ಪೂಜೆಗಳು, ಹಬ್ಬಗಳಾದ ಶೃತ ಪಂಚಮಿ, ಶಿವರಾತ್ರಿ, ಯುಗಾದಿ ಹಬ್ಬಗಳನ್ನು ಶಾಸನಗಳಲ್ಲಿ ಉಲ್ಲೇಖಿಸಿರುವುದು ಅಲ್ಲದೆ ವಿವಿಧ ನೈವೇದ್ಯಗಳಾದ ಸಜ್ಜಿಗೆ-ತುಪ್ಪ, ಶಾವಿಗೆ ಪಾಯಸ, ಎಣ್ಣೆ ಗಾರಿಗೆ, ಕನಿಕೆ ಗಾರಿಗೆ ಮುಡಿಚಿಗೆ ಮುಂತಾದವುಗಳ ಬಗ್ಗೆ ವಿವರಿಸುತ್ತವೆ.

ಉಪಸಂಹಾರ:

ವಿಜಯನಗರ ಕಾಲದಲ್ಲಿ ಇಲ್ಲಿಯವರೆಗೆ ಸುಮಾರು 60 ಶಾಸನಗಳು ದೊರೆತಿದ್ದು ಮೂಡಬಿದರೆಯು ಜೈನ ಧರ್ಮದ ಮೊದಲನೆಯ ಸ್ಥಾನದಲ್ಲಿತ್ತು. ರಾಜಧಾನಿಯು ಎರಡನೆಯ ಸ್ಥಾನದಲ್ಲಿದ್ದರೆ, ಜೈನರ ಪವಿತ್ರ ಕೇಂದ್ರವಾದ ಶ್ರವಣಬೆಳಗೊಳವು ಮೂರನೆಯ ಸ್ಥಾನದಲ್ಲಿತ್ತು. ಇತರ ಸ್ಥಳಗಳಲ್ಲಿ ಜೈನ ಧರ್ಮದ ಅವನತಿಯನ್ನು ಕಾಣಬಹುದು.

ಎರಡನೆಯ ಹರಿಹರನಿಂದ ವೆಂಕಟನವರೆಗಿನ ಕಾಲವನ್ನು ಗಮನಿಸಿದಾಗ ಮೂಡಬಿದರೆಯ ಕೃಷ್ಣದೇವರಾಯನ ಕಾಲದ ಬಸದಿಯನ್ನು ಬಿಟ್ಟು ಉಳಿದಂತೆ ಜೈನ ಧರ್ಮದ ಅವನತಿಯನ್ನು ಕಾಣಬಹುದು. ಬುಕ್ಕರಾಯ ಮತ್ತು ದೇವರಾಯರ ಅವಧಿಯಲ್ಲಿಯ ಪ್ರೋತ್ಸಾಹ ಗಮನಾರ್ಹವಾದುದು. ಅಲ್ಲದೆ ದಂಡನಾಯಕರು, ಅಧಿಕಾರಿಗಳು ಮತ್ತು ವ್ಯಾಪಾರಿಗಳು ಬಸದಿಗಳಿಗೆ ರಾಜರಿಂದ ದಾನ ಬಿಟ್ಟಿರುವುದು ಕಂಡುಬರುತ್ತದೆ ಮತ್ತು ಕುತೂಹಲಕಾರಿಯಾದ ವಿಷಯವೆಂದರೆ ರಾಣಿಯರು ಮತ್ತು ಮಹಾರಾಣಿಯರು ದತ್ತಿಯನ್ನು ಮತ್ತು ಮೂರ್ತಿ ಪ್ರತಿಷ್ಠಾಪನೆ ಮಾಡಿದ್ದು ತಿಳಿದುಬರುತ್ತದೆ. ಅಲ್ಲದೆ ಜೈನರೇತರ ಅಧಿಕಾರಿಯಾದ ಬಸವದಂಡನಾಯಕನು ಬಸದಿಗಳ ಸ್ಥಾಪನೆಗೆ ಕಾರಣನಾಗಿದ್ದು ಗಮನಾರ್ಹವಾದುದು. ಇದರಿಂದ ವಿಜಯನಗರದಲ್ಲಿ ವಿವಿಧತೆಯಲ್ಲಿ ಐಕ್ಯತೆಯನ್ನು ಕಾಣಬಹುದು.

ಟಿಪ್ಪಣಿಗಳು

1. ನರಸಿಂಹಾಚಾರ್ಯ ಆರ್, 1972, *ಕರ್ನಾಟಕ ಕವಿಚರಿತೆ*, ಸಂ. 1, ಪು. 482-83.
2. *ಅದೇ*, ಪು. 483-84.
3. *ವಿಪ್ರೊರೀ*, 1984-87, ಸಂ. 40, ಪು. 36, ಚಿತ್ರ 50.
4. ನರಸಿಂಹಾಚಾರ್ಯ, *ಪೂರ್ವೋಕ್ತ*, ಪು. 502-510.

5. ಅದೇ, ಪು. 517-519.

6. ಅದೇ, ಪು. 519-520.

7. ಅದೇ, ಪು. 525.

8. ಎಕ, VIII, ಸಂ. 206.

9. ಎಕ, II (ಪರಿಷ್ಕೃತ), ಶ್ರವಣಬೆಳಗೊಳ 475.

10. ಆರಿಸಾಇಂವ, 1935-36, ಸಂ. 836.

11. ಎಕ, V, ಬೇಲೂರು, ಸಂ. 71.

12. ಆರಿಇಂವ, 1975-76, ಸಂ. 106.

13. ಆರಿಸಾಇಂವ, 1935-36, ಸಂ. 836.

14. ಎಕ., II (ಪರಿಷ್ಕೃತ), ಶ್ರವಣಬೆಳಗೊಳ 467.

13. ಕರ್ನಾಟಕ ಸಂಗೀತಕ್ಕೆ ವಿಜಯನಗರದ ಕಾಲದ ಕೆಲವು ಹರಿದಾಸರ ಕೊಡುಗೆ

ಎ.ಎಸ್. ಸಂಪತ್ಕುಮಾರಾಚಾರ್ಯ

ಪೀಠಿಕೆ

ಕರ್ನಾಟಕ ಸಂಗೀತ ಸಮ್ರಾಜ್ಯ ಸಂಸ್ಥಾಪಕರು ಶ್ರೀ ವಿದ್ಯಾರಣ್ಯರು. ಇವರು ಸಂಗೀತ ಸಾರವೆಂಬ ಲಕ್ಷಣ ಗ್ರಂಥವನ್ನು ರಚಿಸಿ, ಸಂಗೀತದಲ್ಲಿ ತೋರಿಬಂದಿದ್ದ ತೊಡಕುಗಳನ್ನೆಲ್ಲ ಸುಲಭವಾಗಿ ನಿವಾರಿಸಿ, ನಮ್ಮ ಸಂಗೀತವು ಚಿರಯೌವನವನ್ನು ಹೊಂದುವಂತೆ ಮಾಡಿದರು. ಆ ಕಾಲದಲ್ಲಿ ಪ್ರಸಿದ್ಧವಾಗಿದ್ದ ರಾಗಗಳನ್ನು ವರ್ಗೀಕರಿಸಿ ಅಂದರೆ ಮೇಳಗಳನ್ನಾಗಿ ವಿಂಗಡಿಸಿದರು. ಅವರ ಈ ಕಲ್ಪನೆಯು ಕರ್ನಾಟಕ ಸಂಗೀತದಲ್ಲಿ 72 ಮೇಳ ಕರ್ತಗಳ ಪದ್ಧತಿ ಮತ್ತು ಹಿಂದೂಸ್ಥಾನೀ ಸಂಗೀತದ ಥಾಟ್ ಪದ್ಧತಿಯು ರೂಪುಗೊಳ್ಳಲು ಮುಖ್ಯ ಪ್ರೇರಕವಾಯಿತು ಎಂಬ ವಿಷಯವನ್ನು ಇಲ್ಲಿ ಸ್ಮರಿಸಬಹುದು.

ಬಹಳ ಹಿಂದಿನಿಂದಲೂ ಶೈವಭಕ್ತಿ ಮತ್ತು ವಿಷ್ಣುಭಕ್ತಿ ಎಂಬ ಯಮಳ ನದಿಗಳು ದಕ್ಷಿಣದಿಂದ ಉತ್ತರಕ್ಕೆ ಹರಿದವು ಎಂಬುದು ಚಾರಿತ್ರಿಕ ವಿಷಯ. ತಮಿಳು ನಾಡಿನ ಶೈವ ಧರ್ಮ ಮತ್ತು ಕನ್ನಡನಾಡಿನ ವೀರಶೈವ ಧರ್ಮಕ್ಕೆ ಅನ್ಯೋನ್ಯ ಸಂಬಂಧವಿರುವುದು ಸುಸ್ಪಷ್ಟ. ತಮಿಳು ನಾಡಿನಲ್ಲಿ 6-7-8ನೇ ಶತಮಾನಗಳಲ್ಲಿದ್ದ ಶೈವ ಸಂತರು ವೀರಶೈವರಿಗೆ 63 ಪುರಾತನರು ಎಂಬುದು ತಿಳಿದ ವಿಷಯ. ಈ ಶಿವಸಂತರು ತೇವಾರಂ, ತಿರುವಾಚಕಂ ಮುಂತಾದ ಭಗವಂತನ ನಾಮಕೀರ್ತನೆಗಳನ್ನು ರಚಿಸಿ ಹಾಡುತ್ತಿದ್ದರು. ಅವುಗಳಿಗೆ ರಾಗ ನಿರ್ದೇಶನವಿತ್ತು. ಆ ತೇವಾರಂ ಹಾಡುಗಳು ಶಿವಶರಣರ ಹಾಡುಗಳಿಗೆ ಮಾದರಿಯಾಗಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. "ತಮಿಳಿನ ತೇವಾರಂ ಸ್ತೋತ್ರಗೀತಗಳನ್ನು ಹೋಲುವ ಯಾವುದಾದರೂ ರಚನೆ ಇದ್ದರೆ ಅದು ವಚನ ಸಾಹಿತ್ಯದಲ್ಲಿ ಬಸವಣ್ಣ, ಚೆನ್ನಬಸವ, ಸಿದ್ಧರಾಮ ಮುಂತಾದವರು ಹಾಡಿದರು ಎಂದು ರಾಗ ನಿರ್ದೇಶನದೊಂದಿಗೆ ಅವರವರ ಅಂಕಿತಗಳೊಂದಿಗೆ ಶೂನ್ಯ ಸಂಪಾದನೆಯಲ್ಲಿ ಸಿಗುವ ಪದಗಳು."[1]

ಕನ್ನಡ ಮತ್ತು ಕೀರ್ತನ ಪ್ರಕಾರವನ್ನು ಧರ್ಮಪ್ರಚಾರ ಮತ್ತು ಸಮಾಜ ಸುಧಾರಣೆಗಾಗಿ ಸಾರ್ಥಕವಾಗಿ ಬಳಸಿದವರು ಹೆಚ್ಚಾಗಿ ಮಧ್ವಾಚಾರ್ಯರ ಪಂಥದವರಾದ ಭಾಗವತರಾದ ಹರಿದಾಸರು. 15-16ನೇ ಶತಮಾನಗಳು ವಿಜಯನಗರದ ಉಚ್ಛ್ರಾಯ ಸ್ಥಿತಿಯ ಕಾಲ. ಈ ಕಾಲದಲ್ಲಿ ರಾಜಗುರುವಾಗಿದ್ದವರು ಶೀ ವ್ಯಾಸರಾಯರು (ಕ್ರಿ.ಶ. 1441-1539). ಇವರು ಪರಂಪರೆಯಲ್ಲಿ ಶೀ ಪಾದರಾಜಸ್ವಾಮಿಗಳ ಶಿಷ್ಯರು. ಇವರು ಮತ್ತು ಇವರ ಶಿಷ್ಯರ ಉದ್ದೇಶ, ಜನಸಾಮಾನ್ಯರನ್ನು ಭಕ್ತಿ ಪಂಥದ ಕಡೆಗೆ ಆಕರ್ಷಿಸುವುದು. ಸ್ವಧರ್ಮ ಪ್ರಚಾರದೊಂದಿಗೆ ಪರಧರ್ಮ ಸಹಿಷ್ಣುತೆ ಇವರ ವೈಶಿಷ್ಟ್ಯ.

ದೇವರನಾಮಗಳನ್ನು ರಚಿಸಿದವರಲ್ಲಿ ಮೊದಲಿಗರು ಶ್ರೀ ನರಹರಿತೀರ್ಥರು (ಕ್ರಿ.ಶ. 1205-1214). ರಘುಪತಿ, ರಘುಕುಲತಿಲಕ ಎಂಬ ಅಂಕಿತವಿರುವ ಇವರ ಮೂರು ಹಾಡುಗಳು ಮಾತ್ರ ಲಭ್ಯವಾಗಿವೆ. ಹರಿದಾಸ ಸಾಹಿತ್ಯವನ್ನು ಪುನರುಜ್ಜೀವನಗೊಳಿಸಿದವರು ಶ್ರೀಪಾದರಾಜರು (ಕ್ರಿ.ಶ. 1404-1502). ನರಹರಿತೀರ್ಥರ ರಚನೆಗಳಿಂದ ಪ್ರೇರೇಪಿತರಾದ ಇವರು ಶ್ರೀರಂಗದಲ್ಲಿ ಹಲವು ವರ್ಷಗಳಿದ್ದಾಗ ವೈಷ್ಣವ ಸಂತರಾದ 12 ಮಂದಿ ಆಳ್ವಾರರ ದಿವ್ಯ ಪ್ರಬಂಧಗಳನ್ನು ಅರಿತಿದ್ದಲ್ಲದೆ ಅವುಗಳಿಗೆ ಕೊಟ್ಟಿದ್ದ ಪ್ರಾಶಸ್ತ್ಯವನ್ನು ಗಮನಿಸಿದರು ಮತ್ತು ಕನ್ನಡ ನಾಡಿನಲ್ಲಿ ಶಿವಶರಣರ ವಚನಗಳು ಜನಪ್ರಿಯವಾಗಿದ್ದನ್ನು ಗಮನಿಸಿದರು. ತತ್ಪರಿಣಾಮವಾಗಿ ದಾಸ ಸಾಹಿತ್ಯದ ಪ್ರಮುಖ ಕಾರ್ಯರೂಪಗಳಾದ ಕೀರ್ತನೆ, ಸುಳಾದಿ, ಉಗಾಭೋಗ, ವೃತ್ತನಾಮ ಇತ್ಯಾದಿಗಳನ್ನು ರಚಿಸಿ, ಹಾಡಿ ಕೀರ್ತನಕಾರರಿಗೆ ಮಾರ್ಗದರ್ಶಿಯಾದರು.

ಶ್ರೀ ವ್ಯಾಸರಾಯರು ಶ್ರೀ ಕೃಷ್ಣ ಎಂಬ ಅಂಕಿತದಲ್ಲಿ ಕೀರ್ತನೆಗಳನ್ನು ರಚಿಸಿದ್ದಲ್ಲದೆ ವೃತ್ತನಾಮವನ್ನು ಹೆಚ್ಚು ರೂಢಿಗೆ ತಂದರು. ಪಲ್ಲವಿಯನ್ನು ಹಾಡಿದ ನಂತರ ವೃತ್ತ. ಅದಾದನಂತರ ಚರಣ ಹೀಗೆ ವೃತ್ತನಾಮವಿರುತ್ತದೆ. ಲೌಕಿಕರಿಗೆ ದೀಕ್ಷೆ ನೀಡಿ, ಅವರ

ಅಸಾಮಾನ್ಯ ವ್ಯಕ್ತಿತ್ವದ ಹಿರಿಮೆಯನ್ನೂ, ಪ್ರತಿಭೆಯನ್ನೂ ಧರ್ಮಸಾಧನೆಗೆ ಬಳಸಿಕೊಂಡ ಮಹಾಕಾರ್ಯವನ್ನು ಸಾಧಿಸಿದರು. ಇವರ ಮಹೋನ್ನತ ಕಾಣಿಕೆ ಎಂದರೆ ಪುರಂದರದಾಸರು, ಕನಕದಾಸರು ಮತ್ತು ವಾದಿರಾಜ ಸ್ವಾಮಿಗಳು.

ಪುರಂದರದಾಸರು (ಕ್ರಿ.ಶ. 1484-1564):

ದಾಸಶ್ರೇಷ್ಠರ ರಚನೆಗಳು ಅಸಂಖ್ಯಾತ. ಕೀರ್ತನೆ, ಕೃತಿ, ಸುಳಾದಿ, ಉಗಾಭೋಗ 4 ಲಕ್ಷ 25 ಸಾವಿರವೆಂದು 'ವಾಸುದೇವನ ನಾಮಾವಳಿಯ' ಎಂಬ ಹಾಡಿನಲ್ಲಿ ಹೇಳಿದ್ದರೂ ದೊರೆತಿರುವುದು ಸುಮಾರು 1000ದಷ್ಟು. ಇವರ ರಚನೆಗಳಲ್ಲಿ ಸಾಹಿತ್ಯ ಮತ್ತು ಸಂಗೀತಗಳ ಸಾಮರಸ್ಯ, ಗಾಯನ, ನರ್ತನಗಳ ಮೋಹಕ ಗುಣಗಳು, ಗಹನತತ್ವಗಳು, ವೈಚಾರಿಕತೆ, ಮಾರ್ಗನಿರ್ಮಾಣ, ಮಾರ್ಗದರ್ಶನವಿರುವುದಲ್ಲದೆ ಇವು ಜನಸಾಮಾನ್ಯರ ಭಾಷೆಯಲ್ಲಿವೆ.

ಸಂಗೀತಕ್ಕೆ ದಾಸರ ಕೊಡುಗೆಯನ್ನು ಮೊಟ್ಟಮೊದಲು ತೋರಿಸಿಕೊಟ್ಟವರು ಮದ್ರಾಸಿನವರು. 1942ರಲ್ಲಿ ಒಬ್ಬ ವಿದ್ವಾಂಸರು ದಾಸರ ಬಗ್ಗೆ ದೀರ್ಘ ಲೇಖನವನ್ನು ಬರೆದು ಮದ್ರಾಸ್ ಮ್ಯೂಸಿಕ್ ಅಕಾಡೆಮಿಯ ಜರ್ನಲ್‌ನಲ್ಲಿ ಪ್ರಕಟಿಸಿದರು. ಅವರು ಹೇಳಿದ್ದಾರೆ - "ದೈವೀಸಂಪತ್ತು, ಕಲೆ, ಸಂಸ್ಕೃತಿ ಇವುಗಳೇ ಮೂರ್ತೀಭವಿಸಿ ಬಂತೆಂಬ ದೊಡ್ಡಸ್ತಿಕೆ ಪಡೆದವರಲ್ಲಿ ಅತ್ಯಂತ ದೊಡ್ಡವರೆನಿಸಿದವರು ಶ್ರೀ ಪುರಂದರದಾಸರು. ಇವರು ಎಲ್ಲವನ್ನೂ ತ್ಯಜಿಸಿ ಹರಿದಾಸರಾಗಿ ಮಾಡಿದ ತ್ಯಾಗವು ಅಸಾಧಾರಣವಾದುದು. ಸಂಗೀತ ಶಾಸ್ತ್ರಕ್ಕೆ ಇವರು ಮಾಡಿದ ಅಪಾರ ಸೇವೆ ಅಮೋಘವಾಗಿರುವುದು. ಸಂಖ್ಯಾದೃಷ್ಟಿಯಿಂದ ಇತರ ಎಲ್ಲಾ ವಾಗ್ಗೇಯಕಾರರ ಕೃತಿಗಳನ್ನು ಕೂಡಿಸಿ ಹೋಲಿಸಿದರೆ ಪುರಂದರದಾಸರ ಕೃತಿಗಳ ಏಕಾಂಶ ಸಹ ಕಾಣುತ್ತಿಲ್ಲ.

ದಾಸರು ತಮ್ಮ ಉಪದೇಶವನ್ನು ಚಿತ್ತಾಕರ್ಷಕವಾದ, ಆಪ್ಯಾಯಮಾನವಾದ ಮಧುರ ಸಂಗೀತದ ಮೂಲಕ ಜನತೆಯಲ್ಲಿ ಹರಡಿದರು.

ತಾಯಿಯು ಹಾಡುತ್ತಿದ್ದ ಪುರಂದರದಾಸರ ದೇವರ ನಾಮಗಳನ್ನು ಕೇಳಿ ತ್ಯಾಗರಾಜರ ಮನಸ್ಸಿನ ಮೇಲಾದ ಪರಿಣಾಮವು ಅವರು ಅಷ್ಟು ದೊಡ್ಡ ವಾಗ್ಗೇಯಕಾರರಾಗಲು ಕಾರಣವಾಯಿತು ಎನ್ನುವುದಕ್ಕೆ ಬಲವತ್ತರ ಪ್ರಮಾಣಗಳಿವೆ.

ತಮ್ಮದೇ ಆದ ಹೊಸರೀತಿಯಲ್ಲಿ ಹಾಡಿದ ಮುತ್ತುಸ್ವಾಮಿ ದೀಕ್ಷಿತರು ಪುರಂದರದಾಸರ ಸುಳಾದಿಗಳ ತಾಳಕ್ರಮವನ್ನೂ ಕೀರ್ತನೆಗಳ ಶೈಲಿಯನ್ನೂ ಅನುಸರಿಸಿರುವುದು ಕಂಡು ಬರುತ್ತದೆ.

ಪದಗಳನ್ನು ಹಾಡುವುದರಲ್ಲಿ ಪ್ರಖ್ಯಾತರಾದ ಕ್ಷೇತ್ರಜ್ಞರೂ ಸಹ ಪುರಂದರದಾಸರ ಪದಗಳ ಮಾದರಿ ಅನುಸರಿಸಿ ಹಾಡಿರುವುದು ಕಂಡುಬರುತ್ತದೆ. ಕರ್ನಾಟಕಕ್ಕೆ ಪುರಂದರದಾಸರು ತಂದೆಯ ಸ್ಥಾನದಲ್ಲಿದ್ದಾರೆ. ಇದು ಒಪ್ಪತಕ್ಕ ಮಾತು. ದಾಸರು ಪದಗಳಲ್ಲಿ ರಚಿಸಿ ಹಾಡಿದ ಕವಿಗಳು ಮಾತ್ರವಲ್ಲ. ಅವರು ಉತ್ತಮ ವರ್ಗದ ಲಕ್ಷಣಕಾರರು. ಈಗ ನಮ್ಮದೆಂದು ಹೆಸರಾಗಿರುವ ಕರ್ನಾಟಕ (ದಾಕ್ಷಿಣಾತ್ಯ) ಸಂಗೀತ ಪದ್ಧತಿಯು ಸಂಪೂರ್ಣವಾಗಿ ಅವರ ಪ್ರಸಾದವಾಗಿರುತ್ತದೆ."

ಪುರಂದರದಾಸರು ಸಂಗೀತಾಭ್ಯಾಸ ಕ್ರಮವನ್ನು ಬದಲಾಯಿಸಿ ಮಾಳವಗೌಳ ಮೇಳದಿಂದ ಪ್ರಾರಂಭಿಸಿದರು. ಷಡ್ಜ, ಮಧ್ಯಮ, ಪಂಚಮಗಳಿಗೆ ನಾಲ್ಕು ಶ್ರುತಿಗಳ ಅಂತರವಿರುವ ಖರಹರಪ್ರಿಯ ರಾಗದಿಂದ ಅಭ್ಯಾಸ ಮಾಡುವುದು ಹಿಂದಿನ ಪದ್ಧತಿಯಾಗಿತ್ತು. ಪುರಂದರದಾಸರು ಚತುಶ್ರುತಿಗೆ ಬದಲಾಗಿ ದ್ವಿಶ್ರುತಿಗಳ ಅಂತರವಿರುವ ಸೌಲಭ್ಯವಿರುವ ಮಾಳವಗೌಳದಿಂದ ಪಾಠಕ್ರಮವನ್ನು ಆರಂಭಿಸಿದರು. ಇದು ಎಲ್ಲ ಬಗೆಯ ತೊಡಕುಗಳನ್ನೂ ನಿವಾರಿಸಿ ಜ್ಞಾನ ಉಂಟುಮಾಡುವ ಸ್ವರ, ತಾಳ, ಪ್ರಸ್ತಾರಗಳನ್ನು ಒಳಗೊಂಡ ಕ್ರಮವಾಗಿದ್ದು, ಕರ್ನಾಟಕ ಸಂಗೀತದಲ್ಲಿ ನೈಪುಣ್ಯವನ್ನು ಪಡೆಯಲು ಕಾರಣವಾಗಿರುವ ಸ್ವರಾವಳಿಗಳು, ಜಂಟಿ ಸ್ವರಗಳು, ಅಲಂಕಾರಗಳು, ಗೀತೆ ಮೊದಲಾದವುಗಳೇ ಈ ಪಾಠ ಪದ್ಧತಿಯ ಕ್ರಮವು. ಬೇರೆ ಬೇರೆ ತಾಳಗಳಲ್ಲಿರುವ ಲಂಬೋದರ, ಕುಂದಗೌರ, ಕೆರೆಯ ನೀರನು,

ಪದುಮನಾಭ ಎಂಬ ಮಲಹರಿ ರಾಗದ ಗೀತೆಗಳು ಪಿಳ್ಳಾರಿ ಗೀತೆಗಳೆಂದು ಪ್ರಸಿದ್ಧವಾಗಿವೆ. ಇವು ಒಂದೇ ಸುಳಾದಿಯ ಬೇರೆ ಬೇರೆ ನುಡಿಗಳಾಗಿದ್ದಿರಬಹುದು.

ಇದಲ್ಲದೆ ಭಾಂಡೀರ ಭಾಷೆಯಲ್ಲಿಯೂ ದಾಸರು ಕೃತಿ ರಚನೆ ಮಾಡಿದ್ದರು. ಪುರಂದರದಾಸರ ಅಂಕಿತವಿರುವ ದೇಶಾಕ್ಷಿ ರಾಗದಲ್ಲಿ ಅಪರೂಪವಾಗಿ ಹಾಡಲಾಗುತ್ತಿರುವ 'ಭಯ ಸಮಯದೇವ, ಉನಿದೇವ, ಶ್ರೀ ವೆಂಕಟಾಚಲದೇವನಲರೆ ಶ್ರೀ ಪರಂದರವಿಠಲರಾಯ ಕೇರಳಮಣಿ ದಣಿಸುವರೆ' ಎಂಬುದು ಇದರ ಸಾಹಿತ್ಯ. ಇದರಲ್ಲಿ 'ದಣಿಸುವರೆ' ಎಂಬ ದೈನ್ಯ ಭಾವದ ಪ್ರಶ್ನೆಯು ಕನ್ನಡದಲ್ಲಿದೆ. ಆನಲೇಕರ ಎಂಬ ಗೀತೆಯನ್ನು ಶುದ್ಧ ಸಾವೇರಿ ರಾಗದಲ್ಲಿ ಹಾಡುವುದು ರೂಢಿಯಲ್ಲಿದೆ. ಪಿಳ್ಳಾರಿ ಗೀತೆಗಳಲ್ಲದೆ ದಾಸರು ಬೇರೆ ಬೇರೆ ಗೀತೆಗಳನ್ನು ರಚಿಸಿದ್ದರು. ಅವರು ರಚಿಸಿರುವುದೆಂದು ಹೇಳಲಾದ ಲಕ್ಷಣ ಗೀತೆಗಳು, ತಾನವರ್ಣಗಳು ಮತ್ತು ತಿಲ್ಲಾನಗಳು ಯಾವುವೂ ದೊರೆತಿಲ್ಲ.

ದಾಸರ ಹೆಚ್ಚು ಕೀರ್ತನೆಗಳು ಮಧ್ಯಮ ಕಾಲದಲ್ಲಿವೆ. ಛಾಪು, ಝಂಪೆ ತಾಳಗಳೇ ಅವರಿಗೆ ಪ್ರಿಯವಾಗಿದ್ದ ತಾಳಗಳೆಂದು ಕಂಡುಬರುತ್ತದೆ. ಆದಿತಾಳವನ್ನು ಹೆಚ್ಚಾಗಿ ಬಳಸಿದ್ದಾರೆ. ಇದರಲ್ಲೂ ಸಹ ತ್ಯಾಗರಾಜರು ಪುರಂದರದಾಸರ ಮಾರ್ಗವನ್ನು ಅನುಸರಿಸಿದ್ದಾರೆ. ನಾಯಕ-ನಾಯಕೀ ಭಾವವನ್ನು ತೋರಿಸುವುದರಲ್ಲಿ ಭಾಷೆಯೊಂದರ ವಿನಹಾ ದಾಸರಿಗೂ ಕ್ಷೇತ್ರಜ್ಞರಿಗೂ ವ್ಯತ್ಯಾಸ ಕಂಡುಬರುವುದಿಲ್ಲ. ದಾಸರ ನಾಯಕ-ನಾಯಕೀ ಭಾವದ ರಚನೆಗಳು ಕ್ಷೇತ್ರಜ್ಞನಿಗೆ ಮಾದರಿಯಾಗಿದ್ದಂತೆ ಎಲ್ಲ ವಾಗ್ಗೇಯಕಾರರಿಗೂ ಮಾದರಿಯಾಗಿವೆ.

ಸುಳಾದಿಗಳು ಪುರಂದರದಾಸರ ಸಂಗೀತವಿದ್ಯಾ ಪ್ರೌಢಿಮೆಯನ್ನು ಪ್ರಕಟಸುವ ಕವಿತೆಗಳಾಗಿವೆ. ಇವುಗಳ ನಡೆಯು ಕೀರ್ತನೆಗಳ ನಡೆಯಂತೆ ಇದ್ದು, ಪಲ್ಲವಿ, ಅನುಪಲ್ಲವಿಗಳು ಇರುವುದಿಲ್ಲ. ಇದರಲ್ಲಿ 7-8 ಭಾಗಗಳಿದ್ದು, ಪ್ರತಿಭಾಗಕ್ಕೂ ಪ್ರತ್ಯೇಕ ತಾಳಗಳಿವೆ. ಕೆಲವು ಸುಳಾದಿಗಳ ಒಂದೊಂದು ತಾಳದ ಚರಣವನ್ನು ಒಂದೊಂದು ರಾಗದಲ್ಲೂ, ಮಿಕ್ಕವನ್ನು ಬೇರೆ ಬೇರೆ ತಾಳಗಳಲ್ಲಿ ಒಂದೇ ರಾಗದಲ್ಲಿ ಹಾಡುವ ರೂಢಿಯಿದೆ. ಸುಳಾದಿಯು ರಾಗದ ಸಂಚಾರವನ್ನು ತೋರಿಸುವ ಪ್ರೌಢವಾದ ಸಾಹಿತ್ಯವಾಗಿದೆ. ತುಳಜೇಂದ್ರ ಮಹಾರಾಜನ ಸಂಗೀತ ಸಾರಾಮೃತವೆಂಬ ಗ್ರಂಥದಲ್ಲಿ ವಿವರಿಸುವ ರಾಗಗಳ ಲಕ್ಷಣಕ್ಕೆ ಪುರಂದರದಾಸರ ಸುಳಾದಿಗಳ ವಿವಿಧ ಪ್ರಯೋಗಗಳು ಆಧಾರವೆಂದು ಹೇಳಿದ್ದಾರೆ.

ಪುರಂದರದಾಸರು ರಚಿಸಿರುವ ಮತ್ತೊಂದು ಬಗೆಯ ಸಂಗೀತ ಸಾಹಿತ್ಯವೆಂದರೆ ಉಗಾಭೋಗ. ಗೀತೆಗಿಂತ ಇದರ ಸಂಗೀತವು ಸರಳ. ಹಾಡಿನಲ್ಲಿ ವೈವಿಧ್ಯವಿಲ್ಲ. ಯಾವ ರಾಗದಲ್ಲಿ ಬೇಕಾದರೂ ಸರ್ವ ಲಘು ನಡೆಯಲ್ಲಿ ಹಾಡಬಹುದು. ತಮ್ಮ ಗುರು ವ್ಯಾಸರಾಯರಂತೆ ದಾಸರೂ ಸಹ ವೃತ್ತನಾಮಗಳನ್ನು ರಚಿಸಿರುತ್ತಾರೆ.

''ಯಾವ ನಿಧಿಯನ್ನು ಅನುಗ್ರಹ ರೂಪವಾಗಿ ನಮಗೆ ದಯಪಾಲಿಸಿರುವರೋ ಅಂಥ ನಿಧಿಯ ನಿರ್ಮಾತರೂ, ಸಹಸ್ರಗಟ್ಟಲೆ ಕೃತಿಗಳನ್ನು ರಚಿಸಿ ಮಾನವತ್ವದ ಮುದ್ರೆಯೊತ್ತಿ ನಮಗೆ ಹೆಮ್ಮೆಯನ್ನುಂಟು ಮಾಡಿಕೊಟ್ಟಿರುವರೋ ಅಂಥ ಪುರಂದರದಾಸರ ಮಹೋಪಕಾರವನ್ನು ಮಾತುಗಳಿಂದ ವರ್ಣಿಸುವ ಬಗೆ ಹೇಗೆ? ಸಂಸ್ಕೃತ ಸಾಹಿತ್ಯಕ್ಕೆ ವಾಲ್ಮೀಕಿ ಮಹರ್ಷಿ ಹೇಗೋ ಕರ್ನಾಟಕ ಸಂಗೀತಕ್ಕೆ ಪುರಂದರದಾಸರು ಹಾಗೆ ಎಂಬ ಗೌರವವನ್ನು ಪಡೆದಿರುವರು.''[2]

ಪುರಂದರದಾಸರ 150 ವರ್ಷಗಳ ನಂತರ ಇದ್ದ ಪ್ರಸನ್ನ ವೆಂಕಟದಾಸರು, 'ತಂದೆ ಪುರಂದರ ದಾಸರ ಸ್ಮರಿಸುವೆ' ಎಂಬ ಹಾಡಿನಲ್ಲಿ ಹೀಗೆ ಹೇಳಿದ್ದಾರೆ. ''ಗೀತಠಾಯಿ ಸುಳಾದಿ ಉಗಾಭೋಗ ಪದ ಪದ್ಯ ಪದವ್ರಾತ ಪ್ರಬಂಧ ರಚಿಸಿ ವಿಠಲನ । ಪ್ರೀತಿಪಡಿಸಿ ಪ್ರತ್ಯಕ್ಷ ಕಂಡು ನಲಿದ ವೈಷ್ಣವಾಗ್ರನಾಥ ಪ್ರಸನ್ನ ವೆಂಕಟಕೃಷ್ಣನ ॥''.

ದಾಸರು ರಚಿಸಿರುವ ಠಾಯಿಗಳೂ, ಲಕ್ಷಣಗೀತೆಗಳಾವುವೂ ಲಭ್ಯವಿಲ್ಲದಿರುವುದು ನಮ್ಮ ದುರ್ದೈವ.

ಕನಕದಾಸರು (ಕ್ರಿ.ಶ. 1509-1607):

ಪುರಂದರದಾಸರ ಜೊತೆ ಜೊತೆಗೆ ನೆನಪಿಗೆ ರೂಢಿಯಾಗಿರುವ ಎರಡನೆಯ ಹೆಸರು ಕನಕದಾಸರದು. ಇವರಿಗೆ ದಾಸರಲ್ಲಿ ಕವಿಗಳು ಎಂಬ ಪ್ರಶಸ್ತಿಯಿದೆ. ಇವರು ಮೊದಲು ತಾತಾಚಾರ್ಯರ ಶಿಷ್ಯರಾಗಿದ್ದು ನಂತರ ವ್ಯಾಸರಾಯರ ಶಿಷ್ಯರಾದರು. ಪುರಂದರದಾಸರು, ವಾದಿರಾಜರು, ಬೇಲೂರು ವೈಕುಂಠದಾಸರು ಇವರ ಒಡನಾಡಿಗಳಾಗಿದ್ದರು. ಆರಂಭದಿಂದಲೇ ಬಾಡದಾದಿ ಕೇಶವ, ಕಾಗಿನೆಲೆ ಆದಿಕೇಶವ ಎಂಬ ಅಂಕಿತವಿರುವ ಕನ್ನಡ ಪದಗಳನ್ನು ರಚಿಸುತ್ತಿದ್ದರು. ಆಗಿನ ಸಮಾಜದ ಕೆಳಗಿನ ಸ್ತರದಲ್ಲಿ ಹುಟ್ಟಿ ಗುಣ ಕರ್ಮಗಳಿಂದ ಹರಿದಾಸರಾಗಿ ಸರ್ವಾದರಣೀಯರಾದರು.

ಅವರು ಯಾವ ಮತವನ್ನೂ ತಿರಸ್ಕರಿಸಲಿಲ್ಲ. ಯಾವ ದೇವರನ್ನೂ ಬಹಿಷ್ಕರಿಸಲಿಲ್ಲ. ವಿಷ್ಣು ಶಿವರಲ್ಲಿ ಭೇದವೆಣಿಸದೆ ಆತ್ಮ ಸಾಕ್ಷಾತ್ಕಾರ ಮಾಡಿಕೊಂಡರು. ಕಾವ್ಯಕ್ಷೇತ್ರ, ಆಧ್ಯಾತ್ಮಕ್ಷೇತ್ರಗಳೆರಡರಲ್ಲೂ ಸಮಾನ ಖ್ಯಾತಿ ಪಡೆದ ಮಹಾನುಭಾವರು. ಸಾಹಿತ್ಯ ವಿದ್ಯಾ ಸಂಸ್ಕಾರ ಪಡೆದಿದ್ದು ಕಾವ್ಯಗಳು ಮತ್ತು ಸ್ತೋತ್ರಗಳನ್ನು ರಚಿಸಿದ್ದಾರೆ. ಕನಕದಾಸರು ಹೆಚ್ಚಾಗಿ ಕೀರ್ತನೆಗಳನ್ನು ರಚಿಸಲಿಲ್ಲ. ಇವುಗಳಲ್ಲಿ ಏಕಾಂತ ಭಕ್ತಿಯನ್ನೂ, ಸಮರ್ಪಣ ಮನೋಭಾವವನ್ನೂ, ಎಲ್ಲವೂ ಹರಿಚಾಲಿತ ಎಂಬ ತತ್ವವನ್ನೂ ಪ್ರತಿಪಾದಿಸಿರುವುದಲ್ಲದೆ, ಜನತೆಯ ಮೌಢ್ಯ, ಪೊಳ್ಳುನಂಬಿಕೆ ಇತ್ಯಾದಿಗಳನ್ನು ಖಂಡಿಸಿದ್ದಾರೆ. ನವವಿಧ ಭಕ್ತಿಯನ್ನು ನಿರೂಪಿಸಿದ್ದಾರೆ.

ಈಗ ದೊರೆತಿರುವ ಇವರ ಹಾಡುಗಳಲ್ಲಿ ಕಾಂಭೋಜಿ, ಮುಖಾರಿ, ಶಂಕರಾಭರಣ ಇತ್ಯಾದಿ 30ಕ್ಕೂ ಹೆಚ್ಚಿನ ರಾಗಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಇವರ 'ತಂಗದಿರನ ನಿಮಿಷ ತಾರಕೆಗಳು' ಎಂಬ ಕೃತಿಯಲ್ಲಿ ಕೆಲವು ರಾಗಗಳ ಪ್ರಸ್ತಾಪ ಮಾಡಿದ್ದಾರೆ.

''ತಾಳದಂಡಿಗೆ ಪಿಡಿದು ತುಂಬುರು ನಾರದರು ಭೂ ।
ಪಾಳಿ ದೇಶಾಕ್ಷಿ ನಾರಾಯಣಿ ಗುಜ್ಜರಿ ॥
ಮಾಳವಿ ಶ್ರೀ ದೇವಗಾಂಧಾರಿ ಮಲಹರಿ ।
ಸಾಳಗಮ ಸೌರಾಷ್ಟ್ರ ಗುಂಡಕ್ರಿಯಾ ಲಲಿತ ।
ಸುಳಾದಿಯಲಿ ನಾಮಕೀರ್ತನೆಗಳ ಪಾಡಿ ।
ಮೈಳೈಸಿ ವಾದ್ಯ ನೃತ್ಯಗಳಾಡುತಿಹರು ।
ಪಶುಪಾಲನು ಪವಡಿಸೋ ಹರಿಯೆ ॥ ''

ಗೇಯದ ವೈವಿಧ್ಯದ ದೃಷ್ಟಿಯಿಂದ ಇವರ ಕೊಡುಗೆ ಎಂದರೆ ಇವರ ದೇವರನಾಮಗಳು. ನಮ್ಮಮ್ಮ ಶಾರದೆ, ತೊರೆದು ಜೀವಿಸಬಹುದೇ, ಏನೆಂದು ಕೊಂಡಾಡಿ ಸುಖಿಸಲೋ, ಈತನೀಗ ವಾಸುದೇವನು, ತಲ್ಲನಿಸದಿರು, ಬಾಗಿಲನು ತೆರೆದು - ಮುಂತಾದವು ಎಲ್ಲರ ಹೃನ್ಮನಗಳಲ್ಲಿ ಚಿರಸ್ಥಾಯಿಯಾಗಿವೆ.

ಕೊನೆಯದಾಗಿ ಕನಕದಾಸರ ರಚನೆಗಳು ಪುರಂದರದಾಸರ ಕೀರ್ತನೆಗಳಂತೆ ಹೆಚ್ಚು ಪ್ರಚಲಿತವಾಗಿಲ್ಲ ಎಂಬ ಮಾತು ಅಲ್ಲಲ್ಲಿ ಕೇಳಿಬರುತ್ತಿದೆ. ಆಗಿನ ಸಮಾಜದ ಒಂದು ಕೆಳಗಿನ ಸ್ತರದಿಂದ ಬಂದವರು. ಆದರೆ ಅವರು ತಮ್ಮನ್ನು ಅಲ್ಲಿಗೆ ಸೀಮಿತಗೊಳಿಸಲಿಲ್ಲ. ಮೇಲಿನ ಸ್ತರದವರೆಗೂ ಮೀರಿ ವ್ಯಾಪ್ತಿಯಿಟ್ಟುಕೊಂಡವರು. ಭಾಗವತರಿಗೆ ಕುಲ, ಧರ್ಮ, ಉದ್ಯೋಗ ಇತ್ಯಾದಿ ಯಾವುದೂ ತಡೆಯಿಲ್ಲ. ಅವರು ಇದೆಲ್ಲವನ್ನೂ ಮೀರಿದವರು. ಇದಕ್ಕೆ ಕೆಲವು ಉದಾಹರಣೆಗಳನ್ನು ಕೊಡಬಹುದು. ಆಳ್ವಾರರುಗಳಲ್ಲಿ ಮಾರನ್, ಶಠಗೋಪನ್, ವಕುಳಾಭರಣ ಎಂಬ ಹೆಸರಿರುವ ನಮ್ಮಾಳ್ವಾರ್ ವೆಳ್ಳಾಲಗೌಡರು. ಮೇಲಾಗಿ ಇವರು ಕುಲಪತಿ. ಇವರ ಪ್ರಧಾನ ಶಿಷ್ಯ ಮಧುರಕವಿ ಆಳ್ವಾರರು ಬ್ರಾಹ್ಮಣರು. ಕುಲಶೇಖರಾಳ್ವಾರರು ಕ್ಷತ್ರೀಯರು. ತಿರುಪ್ಪಾಣಿ ಆಳ್ವಾರರು ಹರಿಜನರ ಪಾಣ್‌ಕುಲದವರು. ತಿರುಮಂಗೈ ಆಳ್ವಾರರು ಬೇಡರು. ಅಂದ ಮೇಲೆ 'ಕನಕದಾಸರಿಗೆ ಈಡಾಗಬಲ್ಲವರು ಲೋಕದಲ್ಲಿ ವಿರಳ' ಎಂಬ ಪುರಂದರದಾಸರ ಮಾತನ್ನು ಇಲ್ಲಿ ಸ್ಮರಿಸಬಹುದು.

ಶ್ರೀ ವಾದಿರಾಜಸ್ವಾಮಿಗಳು (ಕ್ರಿ.ಶ. 1480-1600):

ಮತ್ತೊಬ್ಬ ಇದೇ ಕಾಲದ ಮಹಾಪುರುಷರು ಶ್ರೀ ವಾದಿರಾಜಸ್ವಾಮಿಗಳು. ಈ ದಾಸವರೇಣ್ಯರ ಒಡನಾಡಿಯಾದ ಸನ್ಯಾಸಿ, ಮಠಾಧೀಶರು. ವ್ಯಾಸತೀರ್ಥರ ಶಿಷ್ಯರು. ಕೃಷ್ಣದೇವರಾಯನು ಇವರ ಪಾಂಡಿತ್ಯ ಪ್ರತಿಭೆಗಳನ್ನು ಮೆಚ್ಚಿ ಅವರಿಗೆ ಪ್ರಸಂಗಾಭರಣತೀರ್ಥ ಎಂಬ ಬಿರುದನ್ನಿತ್ತು ಗೌರವಿಸಿದನು. ವಾದಿರಾಜರು ಉಡುಪಿಗೆ ಹೋಗಿ ಅಷ್ಟಮಠಗಳ ಪರ್ಯಾಯ ಪೂಜಾಪದ್ಧತಿಯನ್ನು ಏರ್ಪಡಿಸಿದರು. ಭಾರತಾದ್ಯಂತ ಸಂಚಾರ ಮಾಡಿದರು. 120 ವರ್ಷಗಳು ಬಾಳಿ ಸಶರೀರರಾಗಿ ಬೃಂದಾವನ ಪ್ರವೇಶ ಮಾಡಿದರು. ಇವರ ಬೃಂದಾವನವು ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ ಬಳಿ ಸೋದೇ ಮಠದಲ್ಲಿದೆ. ಇವರು ಹಯಗ್ರೀವಾರಾಧಕರು. ತ್ರಿವಿಕ್ರಮ ದೇವೋಪಾಸಕರಾಗಿದ್ದರು.

ವಾದಿರಾಜರು ಸಂಗೀತಸಾಹಿತ್ಯ ರಚನೆಯಲ್ಲಿ ಮಾರ್ಗದರ್ಶಕರು. ಕೃತಿ, ಉಗಾಭೋಗ, ಸುಳಾದಿಗಳಲ್ಲದೆ ದೀರ್ಘವಾದ ರಚನೆಗಳನ್ನು ಮಾಡಿದ್ದಾರೆ. ಇಂತಹ ದೀರ್ಘ ರಚನೆಗಳು ಹತ್ತು ದೊರಕಿವೆ. ವೈಕುಂಠವರ್ಣನೆ, ಸುವ್ವಾಲಿಗಳು, ಲಕ್ಷ್ಮೀಶೋಭಾನೆ, ಸ್ವಪ್ನಪದ, ಗಜೇಂದ್ರಮೋಕ್ಷ, ಗುಂಡಕ್ರಿಯೆ ಮುಂತಾದವು. ನಾರದ ಕೊರವಂಜಿ ಎಂಬುದು ದೇಶೀಯ ಭಾಷೆಯಲ್ಲಿ ರಚಿಸಲಾಗಿರುವ ಮೊಟ್ಟ ಮೊದಲನೆಯ ರಚನೆ. ಇದೊಂದು ನೃತ್ಯರೂಪಕ. ಭ್ರಮರಗೀತೆ ಎಂಬುದು ಮತ್ತೊಂದು ರಚನೆ. ಲಕ್ಷ್ಮೀ ನಾರಾಯಣ ಎಂಬ 24 ನುಡಿಗಳುಳ್ಳ ಪದವನ್ನು ಇಂದಿಗೂ ಉಡುಪಿಯ ಮಠಗಳಲ್ಲಿ ಹಾಡುವ ಪದ್ಧತಿಯಿದೆ. ವಾದಿರಾಜರು 'ಹಯವದನ' ಎಂಬ ಅಂಕಿತವನ್ನು ಬಳಸಿದ್ದಾರೆ.

ಈ ಹರಿದಾಸರ ಮತ್ತೊಂದು ಅಮೂಲ್ಯ ಸಾಧನೆ ಎಂದರೆ ತಾಳಗಳು. ರೂಢಿಯಲ್ಲಿದ್ದ ಅನೇಕಾನೇಕ ಸಂಖ್ಯೆಯ ದೇಶಾದಿ ತಾಳಗಳನ್ನು ಶಾಸ್ತ್ರ ದೃಷ್ಟಿಯಿಂದ ಮರೆಗೊಳಿಸಿ, ಅವುಗಳ ಬದಲು ಏಳು ಏಳು ತಾಳಗಳನ್ನು ಬಳಕೆಗೆ ತಂದು ತಾಳಕ್ಷೇತ್ರದಲ್ಲಿ ಮಹತ್ತರವಾದ ಕ್ರಾಂತಿಯನ್ನುಂಟು ಮಾಡಿಬಿಟ್ಟರು. ಹಿಂದಿನಿಂದ ಬಂದವುಗಳನ್ನು ಪರಿಷ್ಕರಿಸಿ ಅವುಗಳಿಗೆ ಹೊಸ ರೂಪ, ಹೊಸ ಹೆಸರುಗಳನ್ನು ಕೊಟ್ಟು ರೂಢಿಗೆ ತಂದರು. ಇವೇ ಸುಳಾದಿ ತಾಳಗಳು. ಇವು ಮಾತ್ರ ಕರ್ನಾಟಕ ಸಂಗೀತದ ಲಕ್ಷ್ಯದಲ್ಲಿ ಇಂದಿಗೂ ಉಳಿದುಕೊಂಡಿವೆ.

ಕರ್ನಾಟಕ ಸಂಗೀತವು ಇಂದಿಗೂ ಜಾಜ್ವಲ್ಯಮಾನವಾಗಿ ವಿರಾಜಿಸುತ್ತಿರುವುದಕ್ಕೆ ವಿಜಯನಗರದ ಕಾಲದ ಹರಿದಾಸರ ಈ ಅಮೂಲ್ಯವೂ, ಅಮರವೂ ಆಗಿರುವ ಕೊಡುಗೆಯು ಆಧಾರವಾದ ಸಂಪತ್ತಾಗಿದೆ.

ಟಿಪ್ಪಣಿಗಳು

1. ಎಂ. ಚಿದಾನಂದ ಮೂರ್ತಿ, *ವಚನ ಸಾಹಿತ್ಯದ ಉಗಮ.*
2. ಬೇಲೂರು ಕೇಶವದಾಸರು, *ಹರಿದಾಸ ಸಾಹಿತ್ಯ.*

14. ವಿಜಯನಗರ ಕಾಲದ ಆಹಾರ ಪದ್ಧತಿ

ಎಂ.ವಿ. ಶ್ರೀನಿವಾಸ್

ಆಹಾರ ಮಾನವ ಜೀವನದ ಮುಖ್ಯ ಅಂಶವಾಗಿದೆ. ಆಹಾರದ ಉತ್ಪಾದನೆ ಮತ್ತು ಬಳಕೆ ಮನುಷ್ಯನ ಸಾಮಾಜಿಕ ಮತ್ತು ಆರ್ಥಿಕ ಜೀವನದ ಬೆಳವಣಿಗೆಯನ್ನು ಸೂಚಿಸುವ ಪ್ರಮುಖ ಲಕ್ಷಣಗಳಾಗಿವೆ. ಆಹಾರದ ಬಳಕೆ, ಆಯ್ಕೆ, ತಯಾರಿಕೆಗಳು ನಾಗರಿಕತೆಯ ಮಟ್ಟವನ್ನು ಸೂಚಿಸುವ ಸ್ಪಷ್ಟವಾದ ಮಾಪಕವಾಗಿವೆ. ಆದಿಕಾಲದ ಸರಳ ಆಹಾರ ಸೇವನೆಯಿಂದ ಇಂದಿನ ಕಾಲದ ಜಟಿಲ ಹಾಗೂ ವೈಜ್ಞಾನಿಕವಾಗಿ ವಿಶಿಷ್ಟ ಉದ್ದೇಶಗಳಿಗಾಗಿ ನಿಗದಿಗೊಳಿಸಿದ ಆಹಾರ ಪದ್ಧತಿ ಮಾನವನ ದೇಹಶಕ್ತಿ ಮತ್ತು ಬುದ್ಧಿಶಕ್ತಿಯೊಂದಿಗೆ ಹಾಸುಹೊಕ್ಕಾಗಿವೆ.

ವಿಜಯನಗರದ ಜನ ಜೀವನದಲ್ಲಿ ಆಹಾರ ಪಾನೀಯಗಳ ಬಳಕೆ ಅಲ್ಲಿನ ಸಂಪತ್ತು, ವೈಭವವನ್ನು ಸೂಚಿಸುವ ಮಹತ್ವದ ಅಂಶಗಳಾಗಿವೆ. ಆಗಿನ ಕಾಲದ ಆಹಾರ ಪದ್ಧತಿಯನ್ನು ಅರಿಯಲು ಅನೇಕ ಆಧಾರಗಳು ಲಭಿಸುತ್ತವೆ. ಶಾಸನಗಳಲ್ಲಿ ಸಾಹಿತ್ಯ ಕೃತಿಗಳಲ್ಲಿ ವಿದೇಶೀ ಬರವಣಿಗೆಗಳಲ್ಲಿ ಅಂದಿನ ಆಹಾರ ಪಾನೀಯಗಳ ವಿವರಣೆ ಸಿಗುತ್ತದೆ. ಈ ಕಾಲದ ಶಾಸನಗಳು, ಅಂದಿನ ಆಹಾರ ಧಾನ್ಯಗಳು ಹಣ್ಣು ತರಕಾರಿಗಳು ಮೊದಲಾದ ವಿವರಗಳನ್ನು ನೀಡುತ್ತವೆ. ಭತ್ತ, ರಾಗಿ, ಜೋಳ ಇವು ಪ್ರಮುಖ ಆಹಾರ ಧಾನ್ಯಗಳು. ಒಳ್ಳೆಯ ಗೋಧಿಯನ್ನು ಇಲ್ಲಿನ ಜನ ಬೆಳೆಯುತ್ತಿದ್ದರು. ಅವರೆ, ತೊಗರಿ, ಹೆಸರು, ಕಡಲೆ, ಹುರುಳಿ ಕಾಳುಗಳು ಮಾರುಕಟ್ಟೆಗಳಲ್ಲಿ ಹೇರಳವಾಗಿ ದೊರೆಯುತ್ತಿದ್ದವು. ಮನುಷ್ಯರಲ್ಲದೆ ಪ್ರಾಣಿಗಳೂ ಕೂಡ ಆಹಾರ ಧಾನ್ಯಗಳನ್ನು ಆಹಾರಕ್ಕಾಗಿ ಬಳಸುತ್ತಿದ್ದವು.

ವಿದೇಶೀ ಯಾತ್ರಿಕ ನ್ಯೂನಿಜ್ ವಿಜಯನಗರದ ಅರಸರ ಆಹಾರ ಪದಾರ್ಥಗಳ ಒಂದು ದೊಡ್ಡ ಪಟ್ಟಿಯನ್ನು ಕೊಡುತ್ತಾನೆ. ಈ ''ಬಿಸಾನಗರ ಅರಸರು ದನದ ಮಾಂಸವನ್ನು ಬಿಟ್ಟು ಉಳಿದೆಲ್ಲ ಪದಾರ್ಥಗಳನ್ನು ತಿನ್ನುತ್ತಾರೆ. ಇವರು ಗೋವುಗಳನ್ನು ಪೂಜಿಸುವುದರಿಂದ ಅವುಗಳನ್ನು ಎಂದೂ ಕೊಲ್ಲುವುದಿಲ್ಲ. ಈ ಜನರು ಕುರಿ, ಹಂದಿ, ಜಿಂಕೆ, ಮೊಲ, ಪಾರಿವಾಳ ಅನೇಕ ಪಕ್ಷಿಗಳ, ಇಲಿ, ಬೆಕ್ಕು, ಹಲ್ಲಿಗಳ ಮಾಂಸವನ್ನು ತಿನ್ನುತ್ತಾರೆ. ಅವು ಮಾರುಕಟ್ಟೆಯಲ್ಲಿ ಯಥೇಚ್ಛವಾಗಿ ಸಿಗುತ್ತವೆ''. ಪಯಾಸನು ಕುರಿಯ ಮಾಂಸವನ್ನು ಜನರು ಬಹುವಾಗಿ ಬಳಸುತ್ತಿದ್ದರೆಂದೂ, ಬೀದಿ ಬೀದಿಗಳಲ್ಲಿ ಕೊಬ್ಬಿದ ಶುದ್ಧವಾದ ಕುರಿಗಳ ಮಾಂಸ ಸಿಗುತ್ತಿತ್ತೆಂದೂ ತಿಳಿಸಿದ್ದಾನೆ. ಇಲ್ಲಿ ಹಂದಿಯ ಮಾಂಸವೂ ಸ್ವಚ್ಛವಾಗಿರುತ್ತಿತ್ತು. ಇಷ್ಟು ಶುದ್ಧವಾದ ಸ್ವಾದಿಷ್ಟವಾದ ಮಾಂಸ ಬೇರಾವ ದೇಶದಲ್ಲೂ ಸಿಗಲಾರದು ಎಂದು ಅವನು ತಿಳಿಸಿದ್ದಾನೆ. ಬಾರ್ಬೋಸಾನು ನ್ಯೂನಿಜ್‌ನಂತೆ ವಿಪರೀತವಾದ ಉತ್ಪ್ರೇಕ್ಷೆಯಿಂದ ಕೂಡಿದ ವಿವರಗಳನ್ನು ನೀಡದೆ ಇವರು ತಮ್ಮ ವಿಚಿತ್ರ ವಿಗ್ರಹಾರಾಧನೆ ನಿಷೇಧಿಸಿರುವ ಗೋಮಾಂಸವನ್ನು ಬಿಟ್ಟು ಪ್ರಾಣಿ ಮಾಂಸ ಮತ್ತು ಮೀನು ತಿನ್ನುತ್ತಾರೆ ಎಂದು ದಾಖಲಿಸಿದ್ದಾನೆ.

ಬ್ರಾಹ್ಮಣರು, ಜೈನರು, ವೈಶ್ಯರು, ಲಿಂಗಾಯಿತರು ಮಾಂಸಹಾರಿಗಳಾಗಿರಲಿಲ್ಲ. ಅವರು ಸಸ್ಯಾಹಾರವನ್ನು ಮಾತ್ರ ಬಳಸುತ್ತಿದ್ದರು. ಬಾರ್ಬೋಸಾನು, ವಿಜಯನಗರದ ಜನರು ಜೇನುತುಪ್ಪ, ಬೆಣ್ಣೆ, ಅಕ್ಕಿ, ಸಕ್ಕರೆ, ಹಾಲು, ಬೇಳೆಕಾಳುಗಳನ್ನು ಬಳಸುತ್ತಿದ್ದರು ಎಂದು ತಿಳಿಸಿದ್ದಾನೆ. ನಿಕಾಲೋ ಕಾಂಟಿಯೂ ಇದೇ ಅಂಶವನ್ನು ತಿಳಿಸುತ್ತಾನೆ. ವಿದೇಶೀ ಯಾತ್ರಿಕರು ಇಲ್ಲಿನ ಜನರ ಧರ್ಮ, ಆಚಾರ, ವ್ಯವಹಾರಗಳನ್ನು ಅರ್ಥಮಾಡಿಕೊಳ್ಳದೆ ಅವರ ಆಹಾರ ಮಾಂಸ ನಿಷೇಧದ ಬಗ್ಗೆ ವಿಚಿತ್ರವಾಗಿ ಬರೆದಿದ್ದಾರೆ.

ಆಮುಕ್ತಮಾಲ್ಯದದಲ್ಲಿ ಬರುವ ವರ್ಣನೆಯಿಂದ ಖಾನಾವಳಿಗಳಿರುತ್ತಿದ್ದವು ಎಂದು ತಿಳಿದು ಬರುತ್ತದೆ. ಅವುಗಳಲ್ಲಿ ಹಾಲು, ಮೊಸರು, ತುಪ್ಪಗಳಲ್ಲಿ ಮಾಡಿದ ಪಲ್ಯಗಳು ಸಿಗುತ್ತಿದ್ದವು. ಚಳಿಗಾಲದಲ್ಲಿ ಸಣ್ಣಕ್ಕಿಯ ಅನ್ನ, ತೊವ್ವೆ, ನಾಲ್ಕೈದು ಬಗೆಯ ಹುರಿದ ಪಲ್ಯಗಳು, ಸಂಡಿಗೆ, ಬಾಳಕ, ಮೊಸರು, ತುಪ್ಪ ಬಳಸುತ್ತಿದ್ದರು. ಮಳೆಗಾಲದಲ್ಲಿ ಅತಿಥಿ ಅಭ್ಯಾಗತರಿಗೆ ತೊವ್ವೆ, ಪರಮಾನ್ನ, ನಾಲ್ಕೈದು ಬಗೆಯ ಹುರಿದ ಪಲ್ಯ, ಸಂಡಿಗೆ, ತುಪ್ಪ, ಮೊಸರುಗಳಿಂದ ಆತಿಥ್ಯ ನೀಡುತ್ತಿದ್ದರು. ಬೇಸಿಗೆಯಲ್ಲಿ ಗಂಧವನ್ನು ಹಚ್ಚಿ, ಅತಿಥಿಗಳಿಗೆ ಬೆಚ್ಚಗಿರುವ ಬಿಳಿಯಕ್ಕಿ ಅನ್ನ, ಸಿಹಿಸಾರು, ತೆಳ್ಳಗಿನ ಅಂಬಲಿ, ಕಬ್ಬಿನ ರಸ, ಸಿಹಿರಸಕೊಡುವ ಹಣ್ಣುಗಳು, ಮಾವಿನ ಮಿಡಿಗಳ

ಉಪ್ಪಿನಕಾಯಿ, ಮಜ್ಜಿಗೆ ಇವುಗಳನ್ನು ಸಮೃದ್ಧಿಯಾಗಿ ಕೊಡುತ್ತಿದ್ದರು. ಶೀತ ಕಾಲದಲ್ಲಿ ಅವರಿಗೆ ಪುನುಗು ಹಚ್ಚಿ, ಮೆಣಸಿನ ಹುಡಿಯಿಂದ ಹುರಿದ ಪಲ್ಯ ಮಾಡಿಸಿ ಕುದಿಕುದಿಯುತ್ತಿರುವ ವ್ಯಂಜನಗಳನ್ನು ಬಡಿಸುತ್ತಿದ್ದರು. ನೆಗಡಿ ವಾಸಿಯಾಗುವಂತೆ ಉಪ್ಪಿನಕಾಯಿ, ಪಾಯಸ, ಚಟ್ನಿ, ಬಿಸಿತುಪ್ಪ, ಹಾಲು ಇವುಗಳನ್ನು ಧಾರಾಳವಾಗಿ ಹಾಕುತ್ತಿದ್ದರು. ಉಮ್ಮತ್ತಿ ಎಲೆ, ಪುಳ್ಳಂಪುರ್ಚಿ, ಸೊಪ್ಪಿನ ಉಪಯೋಗ ತಿಳಿದಿತ್ತು.

ಫ್ರಯರ್ ಜೋರ್ಡಾನಸ್ ಭಾರತದಲ್ಲಿ ಬಹಳಷ್ಟು ರೊಟ್ಟಿ ಸಿಗುತ್ತಿದ್ದರೂ ಇಲ್ಲಿನ ಜನ ಬೇಯಿಸದ ಅಕ್ಕಿ, ಹಾಲು ಮತ್ತು ಎಣ್ಣೆಯನ್ನು ಬಳಸುತ್ತಾರೆ ಎಂದಿದ್ದಾನೆ. ಬಾರ್ಬೊಸಾ ಇಲ್ಲಿನ ನಿವಾಸಿಗಳು ಹಣ್ಣು, ತರಕಾರಿ ಮತ್ತು ಕಾಡುಗಳಲ್ಲಿನ ಸಸ್ಯಗಳನ್ನೂ ತಿನ್ನುತ್ತಾರೆ. ಇವರು ಹಣ್ಣು ತರಕಾರಿಯ ತೋಟಗಳನ್ನು ಬೆಳೆಯುತ್ತಾರೆ ಎಂದಿದ್ದಾನೆ. ಅಬ್ದುರ್ ರಜಾಕನು ವಿಜಯನಗರಕ್ಕೆ ಬಂದಿದ್ದಾಗ ಅವನಿಗೆ ಎರಡು ಕುರಿ, ಎಂಟು ಕೋಳಿ, ಐದು ಮಣ ಅಕ್ಕಿ, ಒಂದು ಮಣ ಬೆಣ್ಣೆ, ಒಂದು ಮಣ ಸಕ್ಕರೆಯನ್ನು ಕೊಡಲಾಗಿದ್ದಿತು. ಇಲ್ಲಿ ತರಕಾರಿಗಳು ಹಣ್ಣುಗಳು ಯಥೇಚ್ಛವಾಗಿ ಸಿಗುತ್ತಿದ್ದವು. ರಾಜರ ಪಾಕಶಾಲೆಯಲ್ಲಿ ಅನೇಕ ವಿಧವಾದ ಭಕ್ಷ್ಯ ಭೋಜ್ಯಗಳನ್ನು ತಯಾರಿಸುತ್ತಿದ್ದರು. ರಾಜನ ಅಲ್ಲಿನ ಅಧಿಕಾರಿಗಳು ಅಡಿಗೆಗೆ ಬೇಕಾದ ಅಕ್ಕಿ, ಗೋಧಿ, ಮಾಂಸ ಮೊದಲಾದ ವಸ್ತುಗಳನ್ನು ಕಳುಹಿಸುತ್ತಿದ್ದರೆಂದು ನ್ಯೂನಿಜ್ ಹೇಳುತ್ತಾನೆ. ಅವನ ಪ್ರಕಾರ ಪಾಕಶಾಲೆಯಲ್ಲಿ 200 ಜನ ಕೆಲಸಗಾರರು ಅವರ ಉಸ್ತುವಾರಿ ನೋಡಲು ನಾಲ್ಕು ಜನ ಮುಖ್ಯಸ್ಥರು, ಇಬ್ಬರು ಅಧಿಕಾರಿಗಳು ಇರುತ್ತಿದ್ದರು. ಆದರೆ ಈ ಕೆಲಸಗಾರರು ಅರಮನೆಯ ಪಾಕಶಾಲೆಯ 5-6 ಬಾಗಿಲುಗಳಿಗಿಂತ ಒಳಗೆ ಹೋಗಲು ಅವಕಾಶವಿರಲಿಲ್ಲ. ಅಚ್ಯುತರಾಯನಿಗೆ ಅಡಿಗೆ ಮಾಡಲು ಪ್ರತ್ಯೇಕವಾಗಿ ಹತ್ತು ಜನ ಸ್ತ್ರೀಯರು ನೇಮಿಸಲ್ಪಟ್ಟಿದ್ದರು. ವಿದೇಶಿ ಪ್ರವಾಸಿಗರು ರಾಜರು ಊಟಮಾಡುತ್ತಿದ್ದ ವಿಧಾನವನ್ನು ಪಾಕಶಾಲೆಯ ಪರಿಕರಗಳನ್ನು ವಿವರವಾಗಿ ಚಿತ್ರಿಸಿದ್ದಾರೆ. ನ್ಯೂನಿಜ್ ದೇವರಾಯನ ಕಾಲದ ಭೋಜನ ಕೂಟಗಳನ್ನು ವಿವರಿಸುತ್ತಾನೆ. ಅತಿಥಿಗಳಿಗಾಗಿ ಅನೇಕ ಭಕ್ಷ್ಯಭೋಜ್ಯಗಳನ್ನು ಊಟದ ಮೇಜುಗಳ ಮೇಲೆ ಜೋಡಿಸುತ್ತಿದ್ದ ವಿಧಾನವನ್ನು ಅವನು ತಿಳಿಸುತ್ತಾನೆ. ಊಟಕ್ಕಾಗಿ ಅನೇಕ ವಿಧವಾದ ಎಲೆಗಳನ್ನು ಅಡಿಕೆ ಪಟ್ಟೆಗಳನ್ನು ಉಪಯೋಗಿಸುತ್ತಿದ್ದುದು ಶಾಸನಗಳಿಂದ ತಿಳಿದು ಬರುತ್ತದೆ. ಪ್ರಯಾಣಿಕರಿಗಾಗಿ ಅನೇಕ ಭೋಜನ ಗೃಹಗಳು ಇರುತ್ತಿದ್ದವು.

ದೇಶೀಯ ಸಾಹಿತ್ಯ ಕೃತಿಗಳು ಆಗಿನ ಕಾಲದ ಅಡುಗೆಗಳನ್ನೂ ತಿಂಡಿಗಳನ್ನೂ ಸ್ಪಷ್ಟವಾಗಿ ಚಿತ್ರಿಸುತ್ತವೆ. ಕನಕದಾಸರು ಅಕ್ಕಿ ಮತ್ತು ರಾಗಿಯ ಬಳಕೆಯನ್ನು ತಮ್ಮ ರಾಮಧಾನ್ಯ ಚರಿತ್ರೆಯಲ್ಲಿ ವಿವರಿಸಿದ್ದಾರೆ. ದಾಸ ಸಾಹಿತ್ಯದಲ್ಲಿ ಅನೇಕ ಅಡುಗೆಗಳ ಪ್ರಸ್ತಾಪವಿದೆ. ಹರಪನಹಳ್ಳಿ ಭೀಮವ್ವನ ಕೀರ್ತನೆಗಳಲ್ಲಿ ಅನೇಕ ರೀತಿಯ ಸಿಹಿ ಭಕ್ಷ್ಯಗಳ ಪ್ರಸ್ತಾಪ ಕಂಡುಬರುತ್ತದೆ.

ಹಪ್ಪಳ ಸಂಡಿಗೆ ಕರ್ಪೂರದ ಎಣ್ಣೋರಿಗೆ
ಮಿತ್ರೆ ಕಾಳಿಂದಿ ತಂದು ಬಡಿಸುತ್ತಿದ್ದರು
ಬುತ್ತಿ ಚಿತ್ರಾನ್ನ ಕಲ್ಯಾನ್ನ ಪರಮಾನ್ನಗಳನು
ಲಕ್ಷಣಾವಂತಿಯೇರು ಬಡಿಸುತ್ತಿದ್ದರು
ರುಬ್ಬಿದಾಂಬೋಡೆ ಫೇಣಿ ಉಬ್ಬಿದ ಗುಳ್ಳೋರಿಗೆ
ಭದ್ರೆ ಜಾಂಬವಂತಿಯೇರು ಬಡಿಸುತ್ತಿದ್ದರು

ಅಚ್ಚ ಮುತ್ತಿನ ಹರಿವಾಣದಿ ಮಾಲತಿ
ಬಟ್ಟೆ ವಿ ಗೌಲಿಗಳು
ಅಪ್ಪಗುಳ್ಳವು ಶಾವಿಗೆ ಪರಡಿ ಪಾಯಸ
ಭಕ್ಷ ಎಣ್ಣೋರಿಗೆ ಭಾರೀಬಟ್ಟಲು ತುಪ್ಪ
ಮಂಡಿಗೆ ಚೂರ್ಮವು ಬುಂದ್ಯ ಬೀಸೋರಿಗೆ
ದುಂಡು ಗುಳ್ಳೋರಿಗೆಯು
ಚೆಂದವಾಗಿದ್ದ ಚಕ್ಕಲಿ ಕರ್ಜಿಕಾಯ್ಗಳು
ಅಂದವಾದ ಕಾಯಿರಸ ಪಾಕವು

ಸಣ್ಣ ಅಕ್ಕಿಯ ಶಾಲ್ಯಾನ್ನಕೊಪ್ಪುವ ತವ್ವೆ
ಇನ್ನು ದಧ್ಯನ್ನಗಳು
ಸನ್ನತವಾಗಿದ್ದ ಶಾವಿಗೆ ಫೇಣಿಸಕ್ಕರೆ
ರುಬ್ಬಿದ ಆಂಬೊಡೆ ರುಚಿಯಾದ ಕಲಸನ್ನ

ಕ್ಷೀರದ ಪಾಯಸ ಬೆಣ್ಣೆಘೃತ ಸೀಕರ್ಣೆ ಕಾಯ್ದಾಲು
ಹೊಯ್ಗಡುವ ನಿಟ್ಟು
ಸಾರು ಸಾಂಬಾರು ಚಟ್ಟಣಿ ಕೋಸಂಬರಿ
ನೀರೆ ನಿನಗೆ ಪನ್ನಿರು ತಂದಿರಿಸುವೆ.

ಬಾಳ ಅನ್ನವ ಮಾಡು ಜೋಳ ಭಕ್ಕರಿ ಮಾಡು
ಬ್ಯಾಳೆಯ ತವ್ವೆ ಬೆಲ್ಲ ಪಲ್ಯವು ಬೆಣ್ಣೆ
ಮಾಡಿ ನೈವೇದ್ಯಕ್ಕಿಡು ಯಂದ್ರು

ಮೃಷ್ಟಾನ್ನವು ಜೋಳದ್ಹಿಟ್ಟಿನ ಭಕ್ಕರಿಯು
ತುಪ್ಪ ಕೆನೆಮೊಸರು ತುಂಬ್ಹಾಯಿ ರುಚಿಯಾದ
ಚಟ್ಟಣೆ ಶಾಖ ಸೂಪ ಶಾಲ್ಯಾನ್ನ

ದಾಸರ ಕೀರ್ತನೆಗಳಲ್ಲಿ ವಿವಿಧ ರೀತಿಯ ಸಿಹಿ ಭಕ್ಷ್ಯಗಳ ಪ್ರಸ್ತಾಪವಿದೆ. ಇದರಲ್ಲಿ ಕೆಲವು ರೀತಿಯ ಅಡಿಗೆಗಳು ಬಳಕೆಯಲ್ಲಿಯೇ ಇಲ್ಲದೆ ಹೋಗಿವೆ. ಈ ಪ್ರಸ್ತಾಪಗಳು ಉತ್ತರ ಕರ್ನಾಟಕದಲ್ಲಿ ಹೆಚ್ಚು ಬಳಕೆಯಲ್ಲಿರುವ ಸಿಹಿ ಭಕ್ಷಗಳಿಗೆ ಸಂಬಂಧಿಸಿವೆ. ಇವು ಬಹುಮಟ್ಟಿಗೆ ಬ್ರಾಹ್ಮಣರಲ್ಲಿಯೇ ಬಳಕೆಯಲ್ಲಿರುವುವು. ಪರಮಾನ್ನ, ಗೌಲಿ, ಪರಡಿ, ಶಾವಿಗೆ, ಪಾಯಸಗಳ ವಿವರವಿದೆ. ಇದರ ಜೊತೆಗೆ ಹೋಳಿಗೆ, ಲಡ್ಡಿಗೆ, ಸೂಸಲ ಕಡುಬು, ಹೊಯ್ ಗಡಬು, ಹೂರಣದ ಕಡುಬು, ಪೇಣಿ, ಬುಂದ್ಯದುಂಡೆ, ಸಜ್ಜಗೆ, ಎಣ್ಣೋರಿಗೆ, ಅತಿರಸ, ಅಪ್ಪಾಲು, ಗುಳ್ಳೋರಿಗೆ, ಅನಾರಸ, ಮಂಡಿಗೆ, ಮೋತಿಚೂರು, ಚೂರ್ಮಲಾಡು, ಗೇಹೂರ, ಮುಂತಾದ ಸಿಹಿ ಅಡಿಗೆಗಳು ಪ್ರಸ್ತಾಪಿಸಲ್ಪಟ್ಟವೆ.

ಸನತ್ಕುಮಾರ ಚರಿತೆಯಲ್ಲಿ ಬರುವ ಈ ವರ್ಣನೆಯನ್ನು ನೋಡಬಹುದು.

ಹೂರಿಗೆಯ ಗಿರಿ ಪಾಯಸದ ಮಡು
ಸಾರತುಪ್ಪದ ಸರಸಿ ದುಗ್ಧದ
ವಾರಿನಿಧಿ ಕಜ್ಜಾಯಗಳ ಮೊರಡಿಗಳಸಂಖ್ಯಾತ
ಪೂರಿ ತಾಮ್ರ ಪ್ರಮುಖ ಷಡುರಸ
ದೋರಣದ ಶಾಖಗಳು ಪಚ್ಚಡಿ
ಭೂರಿ ಪರಿಕರ ವಾದವಾಕ್ಷಣ ಭೂಪನಾಜ್ಞೆಯಲಿ

ತಿಲದ ಮಾಷದ ಚೂರ್ಣ ತೆಂಗಾ
ಯೊಳು ಸೆರಿದತುರಿ ಹಸ್ತಿ ನಿಂಬದ
ದಲಸರ್ಪ ಮೊದಲಾದ ಸಂಭಾರಗಳ ಶರ್ಕರೆಯ
ತಳಿದು ಘೃತದುಗ್ಧದಲಿ ಪಚಿಸಿದ

ಪಲವು ಪರಿಮಳವೆರೆದ ತಾಳಿದ
ಗಳಮತಂದುರೆ ಬಡಿಸಿದಳು ಬಾವನ್ನ ಗಂಧಿಯರು.

ರಾಘವಾಂಕನ 'ಸಿದ್ಧರಾಮ ಚರಿತ'ದಲ್ಲಿ ಕೆಲವು ಭಕ್ಷ್ಯಗಳನ್ನು ಮಾಡುವ ವಿವರಣೆಯಿದೆ.

ಬೆಳ್ಳಿಯರವುಡಿಯಂತಿರೆಸೆವಸೊಜ್ಜಿಗೆಗುಟ್ಟಿ
ಬಳ್ಳಿಯಲಿ ತಿರಿಸೇವಗೆಯ ರಾಸಿಗಳಮಾಡಿ
ಹಳ್ಳಿಕಾರ್ತಿಯರಲ್ಲದರಸು ಮಕ್ಕಳು ಮಾಡಿದರು ಪರಡಿಸರವಳಿಗೆಯ
ಉಪ್ಪು ಸಾಸವೆಯಮಾಗಾಯ ಸೆಳ್ಳಂಬಟೆಯ
ಹಪ್ಪಳಂ ಕುಂಬಳದ ಸಂಡಗೆಯ ಸೇವಗೆಯ
ನಿಪ್ಪವಿವು ಮೊದಲಾಗಿ ನೊರೆಸಂಡಗೆಯನು ಹುರಿಸಂಡಗೆಯ ಬಾಳಕವನು.

ಹರೀಶ್ವರ ಕವಿ ರಚಿಸಿದ ಶ್ರೀ ಪ್ರಭುದೇವರ ಪುರಾಣದಲ್ಲಿ ಭಕ್ಷ್ಯಗಳ ಬಗ್ಗೆ ಬರುವ ವರ್ಣನೆ ಹೀಗಿದೆ.

ಕರಜಿಗೆ ಕಾಯಿ ಯಿಡ್ಡಲಿಗೆ ದೋಸೆಯು ಮತ್ತೆ ।
ಸರಳ ಸೇವಿಗೆ ಯುಂಡಲಿಗೆಯು ಹೂರಣಗಡಬು
ಉರುತರದ ಬೆಲ್ಲಯೆಳ್ಳುಂ ಸಕ್ಕರೆ ಮಂಡಿಗೆಯು ಸುಕೆಯವಡೆ ಲಡ್ಡುಗೆ ॥
ತರತರದ ಸಂಜೀವನದ ಕುಟಕೆ ಜೇನು ಕೊಡ
ಪರಡಿ ಸರಳಿಗೆ ಕರಕ ಗೋದಿಯಕ್ಕಿಯ ಮಹಾ
ದೊರೆವತ್ತ ಪಾಯಸಾಜ್ಯಂ ಬಟ್ಟವಾಲ ಚಲಿವಾಲ ನೀಡಿದರಳ್ತಿಯಿಂ ॥

ಗೋಪಾಲದಾಸರ ಕೃತಿಗಳಲ್ಲಿ ಬರುವ ಈ ಪದ್ಯ ಅಂದಿನ ಆಹಾರ ಪದ್ಧತಿಯ ಮೇಲೆ ಬೆಳಕು ಚೆಲ್ಲುತ್ತದೆ.

ಪುಡಿಉಪ್ಪು ಚಟ್ನಿ ಕೋಸಂಬರಿ ಉಪ್ಪಿನಕಾಯಿ
ಪಡವಲಕಾಯಿ ಜೆವಳೀಕಾಯಿಯು
ಅಡವಿ ಗುಳ್ಳದ ಪಲಿದ್ಯ ಆಂಬೋಡೆ ಫೇಣಿಯು
ಬಡಿಸಲು ಶ್ರೀದೇವಿ ಬಂದು ನಿಂತಿಹಳು

ಎಣಲ್ಲಾರಿಗತಿರಸವು ಸಣ್ಣ ಶಾವಿಗೆ ಫೇಣಿ
ಬೆಣ್ಣೆ ದೋಸೆ ಹುಗ್ಗಿ ಅನ್ನ ದದ್ಯಾನ್ನ ಶೀರ್‍ಯಾನ್ನಗಳನು
ಕಾಯಿಹಾಲು ಬಡಿಸಲು
ಬಣ್ಣಿಸಿ ಶ್ರೀದೇವಿ ಬಂದು ನಿಂತಿಹಳು.

ಭಾರತೀಯ ಜನಜೀವನದಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ತಾಂಬೂಲವು ವಿಜಯನಗರದ ಕಾಲದಲ್ಲಿ ಜನಪ್ರಿಯವಾಗಿದ್ದಿತು. ದಿನನಿತ್ಯ ಆಚಾರದಲ್ಲಿ ತಾಂಬೂಲ ಅವಶ್ಯವಿದ್ದು ಸಾಮಾಜಿಕ ಸಮಾರಂಭಗಳಲ್ಲಿ ಗೌರವಸ್ಥಾನವನ್ನು ಪಡೆದಿದ್ದಿತು. ಊಟವಾದ ಎಲ್ಲ ವರ್ಗದ ಜನರೂ ತಾಂಬೂಲವನ್ನು ಸೇವಿಸುತ್ತಿದ್ದರು. ಶ್ರೀಮಂತರು ಸುಗಂಧಭರಿತ ವಿವಿಧ ವಸ್ತುಗಳಿಂದ ಕೂಡಿದ ತಾಂಬೂಲವನ್ನು ಸೇವಿಸುತ್ತಿದ್ದರು.

ಇನ್ನು ಅನೇಕ ಆಹಾರ ಪದಾರ್ಥಗಳು ಹಲವು ಧಾರ್ಮಿಕ ಮತ್ತು ಸಾಮಜಿಕ ಸಂದರ್ಭಗಳಲ್ಲಿ ನಿಷಿದ್ಧವಾಗಿದ್ದವು. ಬ್ರಾಹ್ಮಣರು ಕೆಲವು ತರಕಾರಿಗಳನ್ನು ಆಹಾರವಸ್ತುಗಳನ್ನು ತಿನ್ನುತ್ತಿರಲಿಲ್ಲ. ಅವರು ಶೂದ್ರರು ತಯಾರಿಸಿದ ಸಿಹಿ ತಿಂಡಿಗಳನ್ನು ತಿನ್ನಬಾರದೆಂದು ಕೆಲವು ಗ್ರಂಥಗಳಲ್ಲಿ ಪ್ರಸ್ತಾಪಿಸಲಾಗಿದೆ.

ಆಹಾರ ಪದ್ಧತಿಯ ಅಧ್ಯಯನದಿಂದ ವಿಜಯನಗರದ ಜೀವನ ವಿಧಾನವನ್ನು ಅದ್ಯಯನ ಮಾಡಲು ಸಹಾಯಕವಾಗಿದೆ. ಈ ವಿವರಗಳಿಂದ ಅವರ ಆಚಾರ, ನಂಬಿಕೆ, ಆರ್ಥಿಕ ಸ್ಥಿತಿ, ಜಾತಿಪದ್ದತಿಗಳನ್ನು ಅರಿತುಕೊಳ್ಳಬಹುದು. ವಿವಿಧ ವರ್ಗ, ಜಾತಿ, ಪಂಗಡಗಳಲ್ಲಿದ್ದ ಆಹಾರ ಪದ್ಧತಿಯಿಂದ ಅಂದಿನ ಸಾಮಾಜಿಕ ಜೀವನ ಸ್ಪಷ್ಟವಾಗಿ ಕಂಡುಬರುತ್ತದೆ. ಫರ್ನಾಂಡ್ ಬ್ರೂಡೇಲ್ ಮೊದಲಾದ ಪ್ರಸಿದ್ಧ ಇತಿಹಾಸಕಾರರು ಮಾಡಿರುವಂತೆ ವಿಜಯನಗರದ ಕಾಲದ ಆಹಾರ ಪದ್ಧತಿಯನ್ನು ವಿವರವಾಗಿ ಅಧ್ಯಯನ ಮಾಡಿದಲ್ಲಿ ಅಂದಿನ ಸಮಗ್ರ ಜನಜೀವನದ ಸ್ಪಷ್ಟ ಚಿತ್ರ ದೊರಕುವುದರಲ್ಲಿ ಸಂದೇಹವಿಲ್ಲ.

ಟಿಪ್ಪಣಿಗಳು

ಸಿವೆಲ್, ರಾಬರ್ಟ್, *ಎ ಫರ್‌ಗಾಟನ್ ಎಂಪೈರ್.*

ನಾಗೇಗೌಡ ಎಚ್.ಎಲ್., *ಪ್ರವಾಸಿ ಕಂಡ ಇಂಡಿಯ,* ಸಂ. 2, ಮತ್ತು 3.

ಸಾಲೆತೊರೆ, ಬಿ.ಎ., *ಸೋಷಿಯಲ್ ಆಂಡ್ ಪೊಲಿಟಿಕಲ್ ಲೈಫ್ ಇನ್ ದಿ ವಿಜಯನಗರ ಎಂಪೈರ್.*

ಚಿದಾನಂದಮೂರ್ತಿ ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.*

ಬೆಟಗೇರಿ ಕೃಷ್ಣಶರ್ಮ, *ಕರ್ನಾಟಕ ಜನಜೀವನ.*

ಟಿ.ಎಸ್. ನಾಗರತ್ನ (ಸಂ.), *ಹರಪನಹಳ್ಳಿ ಭೀಮವ್ವನ ಹಾಡುಗಳು.*

ದೇ. ಜವರೇಗೌಡ (ಸಂ.), *ಜೈಮಿನಿ ಭಾರತ ಸಂಗ್ರಹ.*

ನಿರುಪಮ (ಅನು), *ಆಮುಕ್ತಮಾಲ್ಯದ.*

ಎಂ.ಎಸ್. ಕೃಷ್ಣಜೋಯಿಸ್ (ಸಂ.), *ಮಂಗರಸನ ಸೂಪಶಾಸ್ತ್ರ.*

ಕಪಟರಾಳ ಕೃಷ್ಣರಾವ್, *ಕರ್ಣಾಟಕ ಸಂಸ್ಕೃತಿ ಸಂಶೋಧನೆ.*

ವಿಜಯನಗರ ಸೆಕ್ಸ್‌ಸೆಂಟೆನರಿ ಕಮೆಮೋರೇಶನ್ ವಾಲ್ಯೂಮ್.

15. ವಿಜಯನಗರ ಸಾಮ್ರಾಜ್ಯದಲ್ಲಿ ನಗರ ಬೆಳವಣಿಗೆ

ಬಿ.ಎಸ್. ನಾಗರಾಜ್

ಕ್ರಿಸ್ತ ಶಕ ಹನ್ನೆರಡನೇ ಶತಮಾನದಿಂದಲೂ ದಕ್ಷಿಣ ಭಾರತದಲ್ಲಿ ನಗರೀಕರಣ ಪ್ರಕ್ರಿಯೆ ಶೀಘ್ರಗತಿಯನ್ನು ಹೊಂದುತ್ತಿರವ ಬಗ್ಗೆ ಸ್ಪಷ್ಟ ಮಾಹಿತಿಗಳಿವೆ. ಈ ನಗರೀಕರಣ ಪ್ರಕ್ರಿಯೆ ಹೊಸ ನಗರಗಳ ಹುಟ್ಟು ಹಾಗೂ ನಗರಗಳ ಬೆಳವಣಿಗೆಯಲ್ಲಿ ಕಾಣುತ್ತೇವೆ. ನಗರ ಬೆಳವಣಿಗೆ ಎಂಬುದು ಎರಡು ರೀತಿಯಲ್ಲಿತ್ತು. ನಗರ ಕೇಂದ್ರಗಳ ಹೆಚ್ಚಳ ಮತ್ತು ನಗರಗಳ ವಿಸ್ತಾರ. ಈ ಪ್ರಕ್ರಿಯೆಗಳಿಗೆ ಭೌಗೋಳಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಅಂಶಗಳು ಅನುಕೂಲಕರವಾಗಿದ್ದವು. ಇದೇ ಸಂದರ್ಭದಲ್ಲಿ ಅನೇಕ ಹಳೆಯ ಕೇಂದ್ರಗಳು ಶತಮಾನಗಳಿಂದಲೂ ಅವನತಿ ಹೊಂದದೆ ಹಾಗೆಯೇ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬಂದವು. ಹೀಗೆ ನಗರ ಬೆಳವಣಿಗೆಯನ್ನು ಗುತಿಸುವಂತಹ ಈ ಮೂರು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ದಖನ್ ಪರ್ಯಾಯ ದ್ವೀಪ ಅಂತರ ರಾಷ್ಟ್ರೀಯ ವಾಣಿಜ್ಯ ಸಮುದ್ರ ಮಾರ್ಗದಲ್ಲಿದ್ದು ನಗರ ಕೇಂದ್ರಗಳು ಬೆಳೆಯುವುದಕ್ಕೆ ಸಹಾಯಕವಾಯಿತು.[1] ಪೂರ್ವ ಹಾಗೂ ಪಶ್ಚಿಮ ತೀರ ಹೊರ ಪ್ರಪಂಚದೊಡನೆ ವ್ಯಾಪಾರ ಸಂಬಂಧವನ್ನು ಹೊಂದಿದ್ದು ನಗರ ಕೇಂದ್ರಗಳು ಹುಟ್ಟಿಕೊಳ್ಳಲು, ಬೆಳೆಯಲು ಸಹಾಯಕವಾಯಿತು.[2] ಇದಕ್ಕೆ ಪೂರಕವಾಗಿ ಒಳನಾಡಿನಲ್ಲಿಯೂ ಪಟ್ಟಣಗಳು ಹುಟ್ಟಿ ಬೆಳೆದವು. ಜೊತೆಗೆ ರಾಜ್ಯಗಳು ಉದಯಿಸಿ ಬೆಳೆದಂತೆ ಅನೇಕ ರಾಜಧಾನಿಗಳಲ್ಲೂ ಆಡಳಿತ ಕೇಂದ್ರಗಳು ಬೆಳೆದವು. ಸಾಮ್ರಾಜ್ಯಗಳು ಉದಯಿಸಿದಂತೆ ನಗರೀಕರಣ ಪ್ರಕ್ರಿಯೆ ಹೆಚ್ಚು ಪುಷ್ಟಿಯನ್ನು ಪಡೆಯಿತು. ಇದರಲ್ಲಿ ದೇವಾಲಯ/ಮಠಗಳ ಪಾತ್ರವನ್ನು ಕಾಣುತ್ತೇವೆ. 12ನೇ ಶತಮಾನದಲ್ಲಿ ಚೋಳ, ಹೊಯ್ಸಳ ಸಾಮ್ರಾಜ್ಯ ಕಾಲದಲ್ಲಿ ನಗರ ಕೇಂದ್ರಗಳು ವೃದ್ಧಿಸಿದವು.[3] ಹಾಗೆಯೇ ಮುಂದಿವರೆದು 14ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ನಗರೀಕರಣ ಪ್ರಕ್ರಿಯೆ ಹೆಚ್ಚು ಪ್ರಬಲವಾಯಿತು. ವಾಣಿಜ್ಯ ಮತ್ತು ನಗರ ಜೀವನ ಹಾಗೂ ವಣಿಕರು ಕುಶಲಕರ್ಮಿಗಳಿಂದ ಕೂಡಿದ ಈ ವಾಸಸ್ಥಳಗಳು ಪ್ರಾಮುಖ್ಯತೆಯನ್ನು ಪಡೆದವು. ಇಂತಹ ಸನ್ನಿವೇಶದಲ್ಲಿ ವಿಜಯನಗರ ಸಾಮ್ರಾಜ್ಯ ಕಾಲವು ನಗರ ಬೆಳವಣಿಗೆಗೆ ಪ್ರೋತ್ಸಾಹದಾಯಕವಾಗಿತ್ತು.

ನಗರ ಬೆಳವಣಿಗೆಗೆ ಸಂಬಂಧಿಸಿದಂತೆ ಮತ್ತೊಂದು ಆಸಕ್ತಿಯುತ ಅಂಶವೆಂದರೆ ನಗರಗಳು, ಅವುಗಳ ಸ್ವಭಾವಕ್ಕನುಗುಣವಾಗಿ ಅವುಗಳ ವಿಂಗಡಣೆ, ಕಾರಣ ನಗರಗಳು ಅವುಗಳು ಬೆಳೆದಂತೆ ಬೆಳೆಯುವ ಹಂತದಲ್ಲಿ ತಮ್ಮ ಸ್ವಭಾವವನ್ನು ರೂಪಿಸಿಕೊಳ್ಳುತ್ತವೆ. ನಗರ ಕೇಂದ್ರಗಳು ಒಂದಕ್ಕಿಂತ ಹೆಚ್ಚು ಕಾರ್ಯ ಚಟುವಟಿಕೆಗಳಲ್ಲಿ ತೊಡಗುತ್ತವೆ. ಆದರೆ ಕೆಲವು ಊರುಗಳು ತಮ್ಮದೇ ಆದ ವೈಶಿಷ್ಟ ಬೆಳೆಸಿಕೊಳ್ಳುವುದು ವಿಶೇಷವಾಗಿ ಕಂಡು ಬರುತ್ತವೆ. ಖಿಜಯನಗರ ಕಾಲದಲ್ಲಿ ಈ ರೀತಿ ಅನೇಕ ನಗರ ಕೇಂದ್ರಗಳು ಬಹುಕಾರ್ಯ ಚಟುವಟಿಕೆಗಳಲ್ಲಿ ತೊಡಗಿದ್ದವು. ಇಂತಹುಗಳಲ್ಲಿ ಕೆಲವು ಪಟ್ಟಣಗಳನ್ನು ಇತರ ಕೇಂದ್ರಗಳಿಂದ ಪ್ರತ್ಯೇಕವಾಗಿ ವಿಂಗಡಿಸಬಹುದು; ಕೆಲವು ಪಟ್ಟಣಗಳನ್ನು ಅವುಗಳು ನಿರ್ವಹಿಸುತ್ತಿದ್ದ ಪಾತ್ರಗಳಿಗನುಸಾರವಾಗಿ ವ್ಯಾಪಾರ ನಗರಗಳೆಂದೂ, ರಾಜಕೀಯ ಆಡಳಿತ ಕೇಂದ್ರಗಳೆಂದೂ, ಕೋಟೆಗಳೆಂದೂ, ಧಾರ್ಮಿಕ, ಸಾಂಸ್ಕೃತಿಕ ಪಟ್ಟಣಗಳೆಂದೂ ವಿಂಗಡಿಸಬಹುದು. ನಗರ ಕೇಂದ್ರಗಳನ್ನು ವಿಂಗಡಿಸುವಾಗ ಅವುಗಳ ಗಾತ್ರದಂತೆ ಸಣ್ಣ ಹಾಗೂ ದೊಡ್ಡ ನಗರಗಳೆಂದು ಗುರುತಿಸಬಹುದು. ಹೀಗೆ ವಿಂಗಡಿಸುವಾಗ ಸಂಖ್ಯಾ ವ್ಯಾಖ್ಯೆಯ ನಿಖರ ಮಾಹಿತಿ ಇಲ್ಲದಿರುವುದು ಒಂದು ನ್ಯೂನತೆ. ಆದರೂ ಗುಣಾತ್ಮಕ ವ್ಯಾಖ್ಯೆಯಿಂದ ಊರು, ಪಟ್ಟಣ, ನಗರಗಳಿಗೂ ಸಣ್ಣ/ದೊಡ್ಡ, ಎಂದು ವಿಭಜಿಸುವುದು ಸಾಧ್ಯವಿದೆ.[4]

ವಿಜಯನಗರದ ಅರಸರು ಅನೇಕ ಅಗ್ರಹಾರಗಳನ್ನು ಸ್ಥಾಪಿಸಿದರು. ಅಲ್ಲದೆ ಅಗ್ರಹಾರಗಳನ್ನು ಪುರಗಳನ್ನಾಗಿ ಪರಿವರ್ತಿಸಿದರು. ಇದಕ್ಕಾಗಿ ದಾನ-ದತ್ತಿಯನ್ನು ಬಿಟ್ಟರು. ಕೆಲವು ಪುರ-ಪೇಟೆಗಳನ್ನು ಪುನರುಜ್ಜೀವನಗೊಳಿಸಿದರು. ಸಾಮ್ರಾಜ್ಯ ಕಾಲದುದ್ದಕ್ಕೂ ಇಂತಹ ನಿದರ್ಶನಗಳು ಸಾಕಷ್ಟಿವೆ. ಇದರಿಂದಾಗಿ ಕೆಲವು ಕೇಂದ್ರಗಳು, ಸುತ್ತ ಮುತ್ತಲಿನ ಗ್ರಾಮ ಸನ್ನಿವೇಶದಲ್ಲಿ ವಿಶೇಷ ಪ್ರಾಮುಖ್ಯತೆ ಪಡೆದು ಆರ್ಥಿಕ, ಧಾರ್ಮಿಕ ಚಟುವಟಿಕೆಗಳ ರಾಜಕೀಯ ಕೇಂದ್ರಗಳಾದವು. ಇದಕ್ಕಾಗಿ ಸಾಕಷ್ಟು ಆರ್ಥಿಕ ಅನುಕೂಲಗಳನ್ನು

ಕಲ್ಪಿಸಿಕೊಡಲಾಯಿತು. ಕ್ರಮೇಣ ಆ ಕೇಂದ್ರಗಳು ಪಟ್ಟಣಗಳಾಗಿ ಬೆಳೆದು ಗ್ರಾಮ್ಯ ಜೀವನಕ್ಕಿಂತ ಭಿನ್ನವಾದ ಬಹುಕಾರ್ಯ ಚಟುವಟಿಕೆಗಳ ಕೇಂದ್ರಗಳಾದವು. ಅವುಗಳ ಪ್ರಭಾವ ತಮ್ಮ ಸ್ಥಳೀಯ ಪರಿಧಿಯಿಂದ ಆಚೆಗೂ ವ್ಯಾಪಿಸಿತು. ಇಂತಹ ಅಧ್ಯಯನಕ್ಕೆ ಸಮಕಾಲೀನ ಶಾಸನಗಳು ವಿದೇಶಿ ಬರವಣಿಗೆ ಆಧಾರವಾಗಿದೆ.

ಪುರಗಳಾಗಿ ಬೆಳೆದ ಕೆಲವು ಕೇಂದ್ರಗಳು ವಾಣಿಜ್ಯ ಮಾರ್ಗದಲ್ಲಿದ್ದ ಸನ್ನಿವೇಶದಲ್ಲಿ ವಿಶೇಷ ಮಾರುಕಟ್ಟೆ ಬೆಳೆದ ಸಂದರ್ಭದಲ್ಲಿ, ಆಯಕಟ್ಟಿನ ಜಾಗದಲ್ಲಿದ್ದು ಕೋಟೆಗಳಾದ ಪಕ್ಷದಲ್ಲಿ, ಆಡಳಿತ ಕೇಂದ್ರಗಳಾಗಿ ಅಥವಾ ದೇವಾಲಯ/ಮಠಗಳು ಪ್ರವಾಸಿ ಯಾತ್ರಾ ಸ್ಥಳಗಳಾಗಿ, ಸಾಂಸ್ಕೃತಿಕ ಕೇಂದ್ರಗಳಾಗಿ ಬಹುಕಾರ್ಯ ಚಟುವಟಿಕೆಗಳಿಂದ ಕೂಡಿದ್ದು ಅವುಗಳು ನಗರ ಕೇಂದ್ರಗಳಾದವು. ಆದರೆ ಎಲ್ಲ ಪುರಗಳು ಬೆಳವಣಿಗೆಯ ಗತಿಯನ್ನು ಶೀಘ್ರಗೊಳಿಸಿಕೊಳ್ಳಲಾರದೆ ಗ್ರಾಮಗಳಿಗಿಂತ ಸ್ವಲ್ಪ ಭಿನ್ನವಾಗಿದ್ದರೂ ಅಂತಹವುಗಳನ್ನು ನಗರ ಕೇಂದ್ರಗಳೆಂದು ಗುರುತಿಸುವುದು ಕಷ್ಟ.

ಮಂಡ್ಯ ಜಿಲ್ಲೆಯಲ್ಲಿ ದೊರಕಿರುವ ಕ್ರಿ.ಶ. 13 ರಿಂದ 15ನೇ ಶತಮಾನದ ಶಾಸನಗಳಲ್ಲಿ ಕೆಲವು ಗ್ರಾಮಗಳನ್ನು ಪುರಗಳನ್ನಾಗಿ ಮಾರ್ಪಡಿಸಿದ ವಿವರಗಳಿವೆ. ಅದಕ್ಕಾಗಿ ಕೆಲವು ಆರ್ಥಿಕ ಅನುಕೂಲಗಳನ್ನು ಮಾಡಿಕೊಟ್ಟ ಬಗೆಯನ್ನು ತಿಳಿಸುತ್ತವೆ. ಈ ಕಾಲದಲ್ಲಿ ಆರ್ಥಿಕ ಚಟುವಟಿಕೆಗಳು ಹೆಚ್ಚಿದಂತೆ ಹಾಗೂ ವ್ಯಾಪಾರ ವಾಣಿಜ್ಯಕ್ಕೆ ಪ್ರೋತ್ಸಾಹ ದೊರೆತಿರುವ ಮಾಹಿತಿಗಳು ಸಿಗುತ್ತವೆ. ಪಟ್ಟಣಗಳಾಗಿ ಬೆಳೆದ ಸ್ಥಳಗಳನ್ನು ಆಡಳಿತಕ್ಕಾಗಿ ಕೆಲವು ಬದಲಾವಣೆಗಳನ್ನು ಮಾಡಿದ ಉಲ್ಲೇಖವಿದೆ. 1337ರ ಈ ಶಾಸನ ಬಿರುಗಹಳ್ಳಿಯನ್ನು ಪುರವನ್ನಾಗಿ ಪರಿವರ್ತಿಸಿದುದಕ್ಕಾಗಿ ತೆರಿಗೆಗಳನ್ನು ಕೊಡುವ ಬಗ್ಗೆ ನಿರ್ಬಂಧನೆಗಳನ್ನು ತಿಳಿಸುತ್ತದೆ. ಇದೇ ರೀತಿ ಅರುವನಹಳ್ಳಿ ಶಾಸನವು ಬಾಚಪಟ್ಟಣವನ್ನು ಸ್ಥಾಪಿಸಿದುದರ ಬಗ್ಗೆ ತಿಳಿಸುತ್ತದೆ. 1328ರ ಯಳಂದೂರು ಶಾಸನವು ಉಪೇಂದ್ರ ಪಟ್ಟಣ (ಮದ್ದೂರು)ವು ಪ್ರವರ್ಧಮಾನಕ್ಕೆ ಬಂದಿರುವ ವಿವರವನ್ನು ಒಳಗೊಂಡಿದೆ.[5] ಬೊಮ್ಮನಹಳ್ಳಿಯಲ್ಲಿ ಹೊಸಪಟ್ಟಣವನ್ನು ಕಟ್ಟಲಾಯಿತು.[6] ಕೊಳ್ಳೆಗಾಲದ ಶಾಸನದಿಂದ ಈ ಬಗ್ಗೆ ಹೆಚ್ಚು ಮಾಹಿತಿಗಳು ದೊರೆಯುತ್ತವೆ. 1354ರಲ್ಲಿ ಕೆಂಪರಾಯಪಟ್ಟಣವು ಅಸ್ತಿತ್ವಕ್ಕೆ ಬಂದು ನಂತರ ಸಾಕಷ್ಟು ಪ್ರಮುಖವಾಯಿತು.[7] 1470ರ ಗುಬ್ಬಿಯ ಶಾಸನದಿಂದ ಸಂಪಿಕೆಯಪುರವನ್ನು ಮಹಾ ಸಾಮಂತನು ಕಟ್ಟಿಸಿ, ಮಲ್ಲಿಕಾರ್ಜುನ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದನೆಂದು ಹೇಳುತ್ತದೆ.[8]

ಮಾರುಕಟ್ಟೆ ಕಾರ್ಯನಿರತವಾಗಿದ್ದು ಆರ್ಥಿಕ ಚಟುವಟಿಕೆಗಳಿಂದ ಕೂಡಿದ ಕೆಲವು ಪಟ್ಟಣಗಳ ಉಲ್ಲೇಖಗಳು ದೊರೆಯುತ್ತವೆ. ವ್ಯಾಪಾರ, ವಾಣಿಜ್ಯ, ವಸ್ತು ಉತ್ಪಾದನೆ ಮೊದಲಾದ ಆರ್ಥಿಕ ಚಟುವಟಿಕೆಗಳನ್ನು ಈ ಪಟ್ಟಣಗಳಲ್ಲಿ ಕಾಣುತ್ತೇವೆ. ಸಾಧಾರಣವಾಗಿ ಇಂತಹ ಕೇಂದ್ರಗಳು ವಾಣಿಜ್ಯ ಮಾರ್ಗಗಳ ಬಳಿ ಇದ್ದು ಇತರ ಪ್ರದೇಶಗಳೊಂದಿಗೆ ಸಂಪರ್ಕಹೊಂದಿದ್ದವು. ಮಾರುಕಟ್ಟೆ, ದೇವಾಲಯ, ಕುಶಲಕರ್ಮಿಗಳು, ಮತ್ತಿತರ ವಿವಿಧ ವರ್ಗಗಳಿಂದ ಕೂಡಿದ ಕೇಂದ್ರಗಳಾಗಿದ್ದು ಅವುಗಳ ಪ್ರಭಾವ ವಿಸ್ತೃತವಾಗಿತ್ತು.

ಮಾಂಬಳ್ಳಿ ಎಂಬ ಪಟ್ಟಣವು ಮುಖ್ಯವಾದ ನಗರ ಕೇಂದ್ರವಾಗಿತ್ತು. ಯಳಂದೂರಿನ ಶಾಸನದಿಂದ ಈ ಊರಿಗೆ ಹರಿಹರ ರಾಯಪಟ್ಟಣವೆಂದು, ಇಲ್ಲಿ ವ್ಯಾಪಾರ ಕೆಲಸಕ್ಕಾಗಿ ಅನೇಕ ವ್ಯವಸ್ಥೆ ಮಾಡಲಾಯಿತೆಂದು ತಿಳಿದು ಬರುತ್ತದೆ. ಈ ನಾನಾ ದೇಶಿ ವರ್ತಕರು ಮಾಂಬಳ್ಳಿಯಲ್ಲಿ ಶ್ರೀಮಂತರಾಗಿದ್ದು ದಾನ ದತ್ತಿಗಳನ್ನು ಬಿಟ್ಟುಕೊಟ್ಟರು.[9] ಮಲೆರಾಜ್ಯದ ಅರಗ ನಗರವೂ ಆರ್ಥಿಕ ಚಟುವಟಿಕೆಗಳಿಗೆ ಹೆಸರುವಾಸಿಯಾಗಿತ್ತು. ಪಶ್ಚಿಮ ಕರಾವಳಿಗೆ ವಾಣಿಜ್ಯ ಸಂಪರ್ಕ ಹೊಂದುವ ಮಾರ್ಗದಲ್ಲಿದ್ದು ಹಲವಾರು ಶತಮಾನಗಳವರೆಗೆ ಮುಖ್ಯವಾದ ನಗರ ಕೇಂದ್ರ ಎಂಬ ಅಂಶ ಶಾಸನಗಳಿಂದ ಹಾಗೂ ಇತರ ಮೂಲಗಳಿಂದ ತಿಳಿಯುತ್ತದೆ.[10]

ಪಶ್ಚಿಮ ಕರಾವಳಿಯ ನಗರ ಕೇಂದ್ರಗಳು ಆರ್ಥಿಕ ಚಟುವಟಿಕೆಗಳಿಂದ ಪ್ರಭಾವಿತವಾಗಿದ್ದವು. ಈ ಕೇಂದ್ರಗಳಲ್ಲಿನ ವಣಿಕರು ಅವರ ಶ್ರೇಣಿ, ಅವುಗಳ ಕಾರ್ಯಗಳ ಬಗ್ಗೆ ಸಾಕಷ್ಟು ಮಾಹಿತಿಗಳಿವೆ.[11] ಪೋರ್ಚುಗೀಸರ ಆಗಮನದಿಂದ ಈ ಪಟ್ಟಣಗಳು ಹೆಚ್ಚು ಕ್ರಿಯಾಶೀಲವಾದವು. ಅಲ್ಲದೆ ಕೆಲವು ಕೇಂದ್ರಗಳು ರಾಜಕೀಯ, ಧಾರ್ಮಿಕ, ಚಟುವಟಿಕೆಗಳಲ್ಲೂ ನಿರತವಾಗಿದ್ದವು. ಉತ್ತರ ಕನ್ನಡ ಜಿಲ್ಲೆಯ ಅಂಕೋಲ,[12] ಮಿರ್ಜಾನ್,[13] ಹೊನ್ನಾವರಗಳ ಬಗ್ಗೆ ತಿಳಿಯಲು ಪೋರ್ಚುಗೀಸ್ ಆಧಾರಗಳಿವೆ. ಭಟ್ಕಳ ಆ ಕಾಲದ

ಮತ್ತೊಂದು ಪ್ರಸಿದ್ಧ ನಗರವಾಗಿತ್ತು.[15] ಕರಾವಳಿಯ ಬಾರ್ಕೂರು, ಬಸರೂರು ನಗರಗಳ ಬಗ್ಗೆ ವಿಸ್ತಾರವಾದ ವರ್ಣನೆ ಲಭ್ಯವಿದೆ. ಇವು ವಾಣಿಜ್ಯ ಕೇಂದ್ರಗಳಾಗಿದ್ದವು. ವಣಿಕ ಸಂಘಗಳು ಕ್ರಿಯಾಶೀಲವಾಗಿದ್ದವು.[16-19] ಮಂಗಳೂರು ಅಥವಾ ಮಂಗಳಾಪುರದ ಬಗ್ಗೆ ದೊರೆಯುವ ಮಾಹಿತಿಗಳಿಂದ ಸಾಕಷ್ಟು ವಿಷಯಗಳನ್ನು ಸಂಗ್ರಹಿಸಬಹುದು.[20]

ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಂದ ಕೆಲವು ನಗರಗಳು ಪ್ರಾಮುಖ್ಯತೆಯನ್ನು ಪಡೆದವು. ಈ ಕೇಂದ್ರಗಳಲ್ಲಿ ದೇವಾಲಯ, ಮಠಗಳು ನಗರದ ಚಟುವಟಿಕೆಗಳ ಸ್ಥಾನವಾಗಿದ್ದವು, ಯಾತ್ರಾಸ್ಥಳವಾಗಿದ್ದವು. ಆಳರಸರು ಅವುಗಳೊಂದಿಗೆ ನಿಕಟ ಸಂಪರ್ಕಗಳನ್ನು ಹೊಂದಿದ್ದರು. ಇಂತಹ ಸಣ್ಣ-ದೊಡ್ಡ ಪಟ್ಟಣಗಳು ಸಾಮ್ರಾಜ್ಯದಲ್ಲಿ ಹುಟ್ಟಿ ಬೆಳೆದವು. ತೆರಕಣಾಂಬಿ ರಾಜ್ಯದ ತ್ರಿಯಂಬಕಪುರ ಎಂಬ ಪಟ್ಟಣವು 1417ರ ಶಾಸನದ ಪ್ರಕಾರ ಹರಿಹರರಾಯನಿಂದ ದಾನದತ್ತಿಯನ್ನು ಪಡೆಯಿತು.[21] ಕೃಷ್ಣದೇವರಾಯನ ಕಾಲದಲ್ಲಿ ಈ ನಗರವು ಮತ್ತಷ್ಟು ಅನುಕೂಲಗಳನ್ನು ಹೊಂದಿದ ಉಲ್ಲೇಖವಿದೆ. ತ್ರಿಯಂಬಕದೇವನಿಗೆ ಮಹಾದೇವೋತ್ತಮನೆಂಬ ನಾಮಾಂಕಿತ ಬಂದಿತು.[22] ತಳಕಾಡು, ಮೇಲುಕೋಟೆ ನಗರ ಕೇಂದ್ರಗಳು ಯಾತ್ರಿಕರ ಆಕರ್ಷಣೆಯಾಗಿದ್ದವು.[23] ಮುಳುವಾಯಿ ರಾಜ್ಯದ ಮುಳುಬಾಗಿಲು, ಕೋಲಾರ ಪಟ್ಟಣಗಳು, ಈ ಕಾಲದ ಪುಣ್ಯ ಕ್ಷೇತ್ರಗಳು. ಗುಬ್ಬಿ ಮತ್ತೊಂದು ಪವಿತ್ರ ನಗರ. ಬೇಲೂರು ವೇಳಾಪುರಿ ಪಟ್ಟಣ ದಕ್ಷಿಣ ವಾರಣಾಸಿ ಎಂದು ವಿಜಯನಗರದ ಕಾಲದಲ್ಲೂ ಹೆಸರುವಾಸಿಯಾಗಿತ್ತು.[24-29] ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಪಟ್ಟಣಗಳು ಧಾರ್ಮಿಕ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರಗಳಾಗಿ ತಮ್ಮ ಪ್ರಾಬಲ್ಯವನ್ನು ಉಳಿಸಿಕೊಂಡವು, ಬೆಳೆದವು. ಜೈನಧರ್ಮದ ಪವಿತ್ರ ಕೇಂದ್ರಗಳಾಗಿ ಕಾರ್ಕಳ, ಮೂಡಬಿದರೆ, ವೇಣೂರು ಪಟ್ಟಣಗಳು ಖ್ಯಾತವಾಗಿದ್ದವು.[30-31]

ರಾಜಕೀಯ ಚಟುವಟಿಕೆಗಳ ಕೇಂದ್ರಗಳಾಗಿ, ಆಡಳಿತ ಸ್ಥಾನಗಳಾಗಿ, ಸೈನ್ಯದ ಬೀಡು ಅಥವಾ ಕೋಟೆಗಳಾಗಿ ಕೆಲವು ನಗರ ಕೇಂದ್ರಗಳು ಬೆಳೆದು ಬಂದ ಬಗ್ಗೆ ವಿಜಯನಗರ ಕಾಲದ ದಾಖಲೆಗಳು ನಿರೂಪಿಸುತ್ತವೆ. ತೆರಕಣಾಂಬಿ ರಾಜ್ಯದ ಮುಖ್ಯ ಸ್ಥಾನವಾಗಿತ್ತು.[32] ಉಮ್ಮತ್ತೂರು[33-34] ಅಲ್ಲಿನ ಒಡೆಯರ ಕಾಲದಲ್ಲಿ, ನಂತರ ಕೃಷ್ಣದೇವರಾಯನ ಕಾಲದಲ್ಲಿ ತನ್ನ ಪ್ರಾಬಲ್ಯವನ್ನು ಪಡೆದಿತ್ತು. ತಗಡೂರು,[35] ಮುಳುಬಾಗಿಲು,[36] ಗೆರುಸೊಪ್ಪೆ,[37] ಸಂಗೀತಪುರ[38] (ಹಾಡುಹಳ್ಳಿ) ಮೊದಲಾದವು ಈ ಕಾಲದ ನಗರ ಕೇಂದ್ರಗಳು. ರಾಜಕೀಯ ಕೇಂದ್ರವಾದ ರಾಜಧಾನಿ ವಿಜಯನಗರ ಈ ಕಾಲದ ಉತ್ತುಂಗ ನಗರ - ಧಾರ್ಮಿಕ, ರಾಜಕೀಯ, ಆರ್ಥಿಕ ಚಟುವಟಿಕೆಗಳಿಂದ ಇತಿಹಾಸ ಪ್ರಸಿದ್ಧವಾಗಿತ್ತು. ರಾಜಧಾನಿಯು ಹುಟ್ಟಿ ಬೆಳೆದು ಪ್ರಖ್ಯಾತವಾದ ಬಗ್ಗೆ ಅನೇಕ ಮೂಲಗಳಿಂದ ಸಾಕಷ್ಟು ಮಾಹಿತಿಗಳಿವೆ.

ಮಧ್ಯಕಾಲೀನ ಯುಗದಲ್ಲಿ ಕೋಟೆಗಳು ಸಾಮ್ರಾಜ್ಯದಲ್ಲಿ ಸೈನಿಕ ದೃಷ್ಟಿಯಿಂದ ಮುಖ್ಯ ಪಾತ್ರವನ್ನು ನಿರ್ವಹಿಸುತ್ತಿದ್ದವು. ಸಾಧಾರಣವಾಗಿ ಮುಖ್ಯ ನಗರ ಕೇಂದ್ರಗಳ ಸುತ್ತಲೂ ರಕ್ಷಣಾತ್ಮಕ ಗೋಡೆಗಳನ್ನು ಕಟ್ಟಲಾಗುತ್ತಿತ್ತು. ಹೆಗ್ಗಡದೇವನ ಕೋಟೆ,[39] ಶ್ರೀರಂಗಪಟ್ಟಣ,[40] ತೇಕಳ ಮೊದಲಾದ ಕೇಂದ್ರಗಳ ಉದಾಹರಣೆಯನ್ನು ಕೊಡಬಹುದು. ತೇಕಳದ ಸುತ್ತಲೂ ಎರಡು ಸುತ್ತು ಗೋಡೆಗಳನ್ನು ಕಟ್ಟಿ ಭದ್ರಪಡಿಸಲಾಯಿತು. ಈ ಪಟ್ಟಣವು ವ್ಯಾಪಾರಕ್ಕೂ ಹೆಸರುವಾಸಿಯಾಗಿತ್ತು.[41] ಸೂಗೂರು,[42] ಉಚ್ಛಂಗಿ,[43] ಬೆಮತ್ತೂರು,[44] ಬಾದಾಮಿ[45] ಭದ್ರವಾದ ನಗರಗಳಾಗಿದ್ದವು. ಉತ್ತಮ ಕೋಟೆಗೆ ರಾಜ್ಯದ ವಿಜಯನಗರವು ಒಂದು ನಿದರ್ಶನ. ಸಾಮ್ರಾಜ್ಯದ ಉತ್ತರಾರ್ಧ ಕಾಲದಲ್ಲಿ ಪೆನುಕೊಂಡ, ಚಂದ್ರಗಿರಿ ಕೋಟೆಗಳು ರಾಜ್ಯದ ರಾಜಧಾನಿಗಳಾಗಿದ್ದವು.[46]

ಸಾಮ್ರಾಜ್ಯದ ಕಾಲದಲ್ಲಿ ಪೂರ್ವ ತೀರವು ಪಶ್ಚಿಮ ತೀರದಂತೆ ಅನೇಕ ನಗರಗಳಿಂದ ಆವೃತವಾಗಿತ್ತು. ಈ ಬಗ್ಗೆ ವೆಲಿಯಾ ಸೌಜ ನಗರಗಳ ಒಂದು ಯಾದಿಯನ್ನು ನೀಡುತ್ತಾನೆ.[47]

ಮೇಲ್ಕಂಡ ಅಧ್ಯಯನದಿಂದ ವಿಜಯನಗರ ಕಾಲದಲ್ಲಿ ನಗರೀಕರಣ ಪ್ರಕ್ರಿಯೆಯಿಂದ ನಗರ ಬೆಳವಣಿಗೆಯಾಗಿ ಅನೇಕ ಹೊಸ ಪಟ್ಟಣಗಳು ಹುಟ್ಟಿಕೊಂಡವು. ಕೆಲವು ವಿಸ್ತಾರಗೊಂಡವು ಮತ್ತು ನಗರಗಳು ವೈವಿಧ್ಯಮಯ ಕಾರ್ಯ ಚಟುವಟಿಕೆಗಳಿಂದ ಕೂಡಿದ್ದು ಕೆಲವು ನಗರ ಕೇಂದ್ರಗಳು ತಮ್ಮದೇ ಆದ ವಿಶಿಷ್ಟ ಸ್ವಭಾವ ಲಕ್ಷಣಗಳನ್ನು ಬೆಳೆಸಿಕೊಂಡವು. ಹೀಗೆ ನಗರ ಬೆಳವಣಿಗೆಯ ಅಧ್ಯಯನ ವಿಜಯನಗರ ಸಾಮ್ರಾಜ್ಯದ ಇತಿಹಾಸದ ಒಂದು ಮುಖ್ಯವಾದ ಅಂಶವಾಗಿ ತೋರುವುದರಿಂದ ಆ ಬಗ್ಗೆ ನಮ್ಮ ಅರಿವು ವಿಸ್ತಾರವಾಗಲು ಸಹಾಯವಾಗುತ್ತದೆ.

ಟಿಪ್ಪಣಿಗಳು

1. ಶಾಸ್ತ್ರಿ ಕೆ.ಎ., ನೀಲಕಂಠ, *ಎ ಹಿಸ್ಟರಿ ಆಫ್ ಸೌತ್ ಇಂಡಿಯ,* ಪು. 35-36.
2. ಸಾಲೆತೊರೆ ಬಿ.ಎ., *ಕರ್ನಾಟಕಾಸ್ ಟ್ರಾನ್ಸ್-ಓಷಿಯಾನಿಕ್ ಕಾಂಟ್ಯಾಕ್ಟ್ಸ್.*
3. ಸ್ಟೀನ್ ಬರ್ಟನ್, *ಪೀಜಂಟ್ ಸ್ಟೇಟ್,* ಪು. 251-52.
4. ಫಾಕ್ಸ್ ಆರ್.ಜಿ., *ಅರ್ಬನ್ ಆಂಥ್ರೊಪಾಲಜಿ,* ಪು. 22-23.
5. *ಎಕ,* VII (ಪರಿಷ್ಕೃತ), ಮುನ್ನುಡಿ ಪು. cxvi, ಮದ್ದೂರು 93, 87; *ಎಕ,* IV (ಪರಿಷ್ಕೃತ), ಯಳಂದೂರು 62, 61, 41, 42.
6. *ಎಕ,* IV (ಪರಿಷ್ಕೃತ), ಗುಂಡ್ಲುಪೇಟೆ 135.
7. *ಅದೇ,* ಕೊಳ್ಳೆಗಾಲ 62, 63, 57.
8. *ಅದೇ,* XII, ಗುಬ್ಬಿ 29.
9. *ಅದೇ,* IV (ಪರಿಷ್ಕೃತ), 155, 160-62, 164-65.
10. *ಅದೇ,* V, ಬೇಲೂರು 75; VIII, ತೀರ್ಥಹಳ್ಳಿ 197, 166, 206, ಹೊನ್ನಾಳಿ 84.
11. ಡೇಮ್ಸ್, *ದಿ ಬುಕ್,* ಪು. 184-197.
12. ವರ್ಥೆಮ ಲುಡಿವಿಕೊ, 1928, *ದಿ ಇಟಿನರರಿ ಆಫ್ ಲುಡಿವಿಕೊ ವರ್ಥೆಮ,* ಪು. 49-50.
13. ಇಬ್ನ್ ಬತೂತ, *ದಿ ರೆಹ್ಲ ಆಫ್ ಇಬ್ನ್ ಬತೂತ,* ಮೆಹ್ದಿ ಹುಸೇನ್ ಅವರ ಭಾಷಾಂತರ, ಬರೋಡ, 1953.
14. ರಸ್ಕಿನ್ಹ, *ಎ ಹಿಸ್ಟರಿ ಆಫ್ ನಾರ್ತ್ ಕೆನರ,* ಪು. 251-52.
15. ದೆನ್ವರ್ಸ್, *ಪೊರ್ತುಗೀಸ್ ಪಾವರ್ ಇನ್ ಇಂಡಿಯ,* ಪು. 120.
16. *ಭಟ್ಕಲ ಕೈಫಿಯತ್,* ಮೆಕೆಂಜಿ ಮ್ಯಾನುಸ್ಕ್ರಿಪ್ಟ್, ಪು. 428-35.
17. *ಸೌಇಂಇ,* IX i, 450, 449; IX ii, 423, 414, 471, 479, 525, 620, 655.
18. *ಅದೇ,* VII, 322, 329, 341, 350, 377, 372, 374.
19. *ಅದೇ,* VII, 177, 185.
20. ಡೇಮ್ಸ್, *ದಿ ಬುಕ್,* ಪು. 195-96.
21. *ಎಕ,* III (ಪರಿಷ್ಕೃತ), ಗುಂಡ್ಲುಪೇಟೆ 149, 135, 136, 134.
22. *ಅದೇ,* ನಂಜನಗೂಡು 248, 150, ಚಾಮರಾಜನಗರ 173.
23. *ಎಕ,* VI, 164, 152, 179, 134, 132, 125.
24. ಸ್ಟೀನ್ ಬರ್ಟನ್, *ಪೀಜಂಟ್ ಸ್ಟೇಟ್,* ಪು. 460-61.
25. *ಎಕ,* X, ಚಿಂತಾಮಣಿ 86.

27. ಅದೇ, ಮುಳುಬಾಗಲ 7.

28. ಮೈಆರಿ, 1939, ಪು. 26, 10.

29. ಅದೇ, ಪು. 101-103; ಎಕ, V, ಬೇಲೂರು 233, 78, 4.

30. ರಮೇಶ್ ಕೆ.ವಿ., ಎ ಹಿಸ್ಟರಿ ಆಫ್ ಸೌತ್ ಕೆನರ, ಪು. 300-301, 303.

31. ಸೌಇಂಇ, VII, 202.

32. ಎಕ, III (ಪರಿಷ್ಕೃತ), ಗುಂಡ್ಲುಪೇಟೆ 9, 119, 173, 77, 170, 178, 111, 302.

33. ಅದೇ, IV (ಪರಿಷ್ಕೃತ), ಚಾಮರಾಜನಗರ 184; III (ಪರಿಷ್ಕೃತ), ನಂಜನಗೂಡು 231, 288.

34. ಅದೇ, VIII, ಸಾಗರ 55; ರಸ್ಕಿನ್ಹ, ಎ ಹಿಸ್ಟರಿ ಆಫ್ ನಾರ್ತ್ ಕೆನರ, ಪು. 252-53, 236.

35. ಅದೇ, III, ನಂಜನಗೂಡು 394, 258, 259, 263, 258, 268-71.

36. ಅದೇ, X, ಕೋಲಾರ 23, ಗೌರಿಬಿದನೂರು 6, ಮುಳುಬಾಗಲ 20, ಕೋಲಾರ 1.

37. ಅದೇ, IV (ಪರಿಷ್ಕೃತ), ಚಾಮರಾಜನಗರ 89, 232, 229.

38. ಅದೇ, X, ಕೋಲಾರ 49-65; VIII, ಸಾಗರ 163.

39. ಮೈಆರಿ, 1937, ಪು. 4.

40. ಎಕ, IV (ಪರಿಷ್ಕೃತ), ಶ್ರೀರಂಗಪಟ್ಟಣ; ಸಿವೆಲ್ ರಾಬರ್ಟ್, ಎ ಫಾರ್‌ಗಾಟನ್ ಎಂಪಾಯರ್, ಪು. 118-19, 239-40.

41. ಮೈಆರಿ, 1914, ಪು. 46; ಎಕ, X, 72, 3, 1, 4, 5.

42. ಎಕ, XI, ಹಿರಿಯೂರು 36, 39.

43. ಅದೇ, ದಾವಣಗೆರೆ 69, 34, 27.

44. ಮೈಆರಿ, 1931, ಪು. 14-22; ಎಕ, XI, ಚಿತ್ರದುರ್ಗ, 6, 2, 14.

45. ಇಂಏಂ, 1881, 1876.

46. ಸಿವೆಲ್, ಅದೇ, ಪು. 5, 81, 250.

47. ಸಾಲೆತೊರೆ ಬಿ.ಎ., ಸೋಷಿಯಲ್ ಅಂಡ್ ಪೊಲಿಟಿಕಲ್ ಲೈಫ್ ಇನ್ ದಿ ವಿಜಯನಗರ ಎಂಪಾಯರ್, ಪು. 78-79; ಡೇಮ್ಸ್, ದಿ ಬುಕ್, ಪು. 126-132.

16. ವಿಜಯನಗರ ಪಟ್ಟಣ ಮತ್ತು ಅದರ ಉಪನಗರಗಳು

ಸಿ.ಎಸ್. ವಾಸುದೇವನ್

ದಕ್ಷಿಣ ಭಾರತದ ಮಧ್ಯಕಾಲೀನ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯವು ಪ್ರಸಿದ್ಧಿಯನ್ನು ಪಡೆದ ಅರಸು ಮನೆತನಗಳಲ್ಲಿ ಒಂದು. ಮಧ್ಯಕಾಲೀನ ಐತಿಹಾಸಿಕ ನೆಲೆಗಳಾದ ಚಂಪಾನೀರ್ ಮತ್ತು ಫತೇಪುರ್ ಸಿಕ್ರಿ (ಆಗ್ರಾ) ಸಹ ವಿಜಯನಗರ ಸಾಮ್ರಾಜ್ಯದ ಸಮಕಾಲೀನ ನೆಲೆಗಳಾಗಿದ್ದರೂ ವಿಜಯನಗರ ಸಾಮ್ರಾಜ್ಯವು ತನ್ನದೇ ಆದ ವೈಶಿಷ್ಟ್ಯಗಳನ್ನು ಹೊಂದಿರುವುದು ಗಮನಾರ್ಹ. ಬಳ್ಳಾರಿ ಜಿಲ್ಲೆಯಲ್ಲಿರುವ ಹಂಪಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ವಿಜಯನಗರದ ಅರಸರು ಇಡೀ ದಕ್ಷಿಣ ಭಾರತವನ್ನೇ ಸುಮಾರು ಮೂರು ಶತಮಾನಗಳಿಗೂ ಅಧಿಕವಾಗಿ ತಮ್ಮ ಅಧೀನದಲ್ಲಿಟ್ಟುಕೊಂಡಿದ್ದರು. ಪ್ರಾಚೀನ ಭಾರತದ ಅರಸು ಮನೆತನಗಳು ತಮ್ಮ ರಾಜ್ಯಗಳನ್ನು ಶ್ರೇಣಿಕೃತ ವಿಭಾಗಗಳನ್ನಾಗಿ ವಿಭಜಿಸಿ ಆಡಳಿತವನ್ನು ನಡೆಸಿದಂತೆಯೇ ವಿಜಯನಗರದ ಅರಸರು ಸಹ ತಮ್ಮ ರಾಜ್ಯವನ್ನು ವಿಭಾಗಿಸಿ ಆಳಿದುದು ಇತಿಹಾಸಕಾರರು ಬಲ್ಲ ವಿಷಯವಷ್ಟೆ. ಇಂತಹ ಶ್ರೇಣೀಕೃತ ವಿಭಾಗದ ಒಂದು ವಿಭಾಗವೇ ನಗರ ಅಥವಾ ಪಟ್ಟಣ. ಈ ಲೇಖನದಲ್ಲಿ ವಿಜಯನಗರ ಸಾಮ್ರಾಜ್ಯದ ರಾಜಧಾನಿಯನ್ನು ಮತ್ತು ಅದರೂಂದಿಗೆ ಸಾವಯವ್ಯ ಸಂಬಂಧವನ್ನು ಹೊಂದಿದ್ದಂತಹ ಉಪನಗರಗಳನ್ನು ಕುರಿತು ಚರ್ಚಿಸಲಾಗುವುದು.

ವಿಜಯನಗರ ಸಾಮ್ರಾಜ್ಯದ ಇತಿಹಾಸದೊಂದಿಗೆ, ಕಲೆ, ವಾಸ್ತುಶಿಲ್ಪ, ಸಮಾಜ ಮತ್ತು ಸಾಂಸ್ಕೃತಿಕ ಮಜಲುಗಳನ್ನು ಅರಿಯುವ ಪ್ರಯತ್ನವನ್ನು ವಿದ್ವಾಂಸರು ಸತತವಾಗಿ ಮಾಡುತ್ತಲೇ ಬಂದಿದ್ದಾರೆ. ವಿಜಯನಗರದ ಇತಿಹಾಸವನ್ನು ಸಂಪೂರ್ಣವಾಗಿ ಅರಿಯುವ ದಿಸೆಯಲ್ಲಿ ವಿಜಯನಗರದ ಅರಸರ ರಾಜಧಾನಿಯಾದ ಹಂಪೆಯನ್ನು ಭಾರತ ಮತ್ತು ವಿದೇಶಿ ವಿದ್ವಾಂಸರು ಅತೀ ಹೆಚ್ಚಿನ ಅಧ್ಯಯನಕ್ಕೆ ಗುರಿಪಡಿಸಿರುತ್ತಾರೆ. ಹಂಪೆಯನ್ನು ಶಾಸನಗಳಲ್ಲಿ ವಿಜಯನಗರ ಪಟ್ಟಣ ಎಂದು ಕರೆಯಲಾಗಿದೆ. ಈ ಪಟ್ಟಣಕ್ಕೆ ಭೇಟಿಯನ್ನಿತ್ತು ಅಂದಿನ ವೈಭವಗಳನ್ನು ದಾಖಲಿಸಿರುವ ವಿದೇಶಿ ಪ್ರವಾಸಿಗರ ಬರಹಗಳು ಮತ್ತು ವಿಜಯನಗರ ಕಾಲದ ಇತಿಹಾಸದಲ್ಲಿ ಆಸಕ್ತಿಯುಳ್ಳ ಪ್ರಾಕ್ತನ ಅನ್ವೇಷಣಕಾರರು ಮತ್ತು ಚರಿತ್ರಕಾರರು ವಿಜಯನಗರ ಪಟ್ಟಣವನ್ನು ಕುರಿತು ಒಂದು ದಶಕದಿಂದಲೂ ವಿಶೇಷ ಆಸಕ್ತಿಯನ್ನು ವಹಿಸಿ ಉತ್ಖನನ ಮತ್ತು ಸರ್ವೇಕ್ಷಣೆಯನ್ನು ನಡೆಸಿ ಅನೇಕ ಹೊಸ ವಿಚಾರಗಳನ್ನು ನಮ್ಮ ಮುಂದಿಟ್ಟಿರುವರು. ಇತ್ತೀಚಿಗೆ ಸಿ.ಎಸ್. ಪಾಟೀಲ್‌ರವರು ವಿಜಯನಗರ ಪಟ್ಟಣದ ನೀರಿನ ವ್ಯವಸ್ಥೆಯನ್ನು ಕುರಿತಂತೆ ಅಧ್ಯಯನವನ್ನು ನಡೆಸಿರುವರು.[1] ಬಿ.ಎಸ್. ನಾಗರಾಜ್‌ರವರು ವಿಜಯನಗರ ಸಾಮ್ರಾಜ್ಯದಲ್ಲಿ ನಗರ ಬೆಳವಣಿಗೆಯನ್ನು ಕುರಿತಂತೆ ಅಧ್ಯಯನವನ್ನು ಕೈಗೊಂಡಿರುವರು.[2] ನಾಗರಾಜ್‌ರವರು ಮುಖ್ಯವಾಗಿ ಶಾಸನಗಳ ಆಧಾರಗಳಿಂದ ವಿಜಯನಗರ ಸಾಮ್ರಾಜ್ಯದಲ್ಲಿ, ಅಂದರೆ, ಇಡೀ ದಕ್ಷಿಣ ಭಾರತದಲ್ಲಿ ವ್ಯಾಪಿಸಿದ್ದ, ನಗರಗಳನ್ನು ಕುರಿತಂತೆ ತಮ್ಮ ವಿಚಾರಗಳನ್ನು ಮಂಡಿಸಿರುತ್ತಾರೆ. ಈ ಲೇಖನದ ವ್ಯಾಪ್ತಿಯನ್ನು ವಿಜಯನಗರ ಪಟ್ಟಣಕ್ಕೆ (ಹಂಪೆ) ಮಾತ್ರ ಸೀಮಿತಗೊಳಿಸಲಾಗಿದೆ.

'ನಗರ' ಎಂದರೆ ನಾಗರೀಕರು ವಾಸಿಸುವ ಸ್ಥಳ ಅಥವಾ ಪ್ರದೇಶಕ್ಕೆ ನಗರ ಎಂದು ಅರ್ಥೈಸಬಹುದು. ನಗರ ಎಂದರೆ ಮುಖ್ಯ ಪಟ್ಟಣ ಅಥವಾ ಪುರ ಎಂದು ಕರೆಯುವುದು ವಾಡಿಕೆಯಲ್ಲಿದೆ. ವಡ್ಡಾರಾಧನೆಯಲ್ಲಿ ''ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಮುಖಂಗಳಂ ವಿಹಾರಿಸುತ್ತಂ''[3] ಎಂದಿದ್ದರೆ, ಕ್ರಿ.ಶ. 1032ರ ಒಂದು ಶಾಸನದಲ್ಲಿ ''ಆಲಂದೆಯ ನಗರಂ ದೇವರಿಗೆ ಮಾಜೆದ ಪೇಜೆಂಗಯ್ಯವತ್ತೆಲೆಯಂ ಬಿಟ್ಟರಿಂತಿ ನಿತುಮಂ ನಗರ ಮಹಾಜನ ಪಂಚ ಮಠ ಸ್ಥಾನಮಾಚಂದ್ರಾರ್ಕ್ಯ ಸ್ಥಾಯಿವರಂ ನಡೆಯಿಸುವರು'' ಎಂದು ನಗರವನ್ನು ಕುರಿತು ಉಲ್ಲೇಖಿಸಿದೆ.[4] ಹಲವಾರು ಶಾಸನಗಳಲ್ಲಿ ಇಂತಹ ಉಲ್ಲೇಖಗಳು ಇಲ್ಲದಿಲ್ಲ. ನಗರವನ್ನು ಅದರ ವ್ಯಾಪಕತೆ ಮತ್ತು ಅದರಲ್ಲಿ ವಾಸಿಸುವ ಜನಸಂಖ್ಯೆಯನ್ನು ಆಧರಿಸಿ ಆ ವಸತಿ ಪ್ರದೇಶವನ್ನು ನಗರ ಅಥವಾ ಪಟ್ಟಣ ಎಂದು ವರ್ಗೀಕರಿಸಬಹುದು. ಮತ್ತೊಂದು ವರ್ಗೀಕರಣದಂತೆ ನಗರದಲ್ಲಿ ಸುಸಂಸ್ಕೃತರು, ಸಮಾಜದಲ್ಲಿ ಉನ್ನತ ಸ್ಥಾನಮಾನಗಳನ್ನು ಹೊಂದಿರುವವರು, ಆಡಳಿತಗಾರರು ಮತ್ತು ಸಮಾಜದ ಶ್ರೇಷ್ಠಿಗಳು ವಾಸಿಸುವ ಜನವಸತಿ ಪ್ರದೇಶಕ್ಕೆ ನಗರ ಎಂದು ವರ್ಗೀಕರಿಸಿರುತ್ತಾರೆ.

ಒಂದು ಅರಸು ಮನೆತನದ ಆಳ್ವಿಕೆಗೆ ಒಳಪಟ್ಟ ಪ್ರದೇಶದ ಆಡಳಿತವನ್ನು ಸುಸೂತ್ರವಾಗಿ ನಡೆಸಲು ಆ ಪ್ರದೇಶವನ್ನು ಶ್ರೇಣೀಕೃತ ವಿಭಾಗಗಳನ್ನಾಗಿ ವಿಂಗಡಿಸಿರುವುದು ಚರಿತ್ರೆಯಿಂದ ತಿಳಿದ ವಿಷಯವೇ ಸರಿ. ಇಂತಹ ಶ್ರೇಣೀಕೃತ ವಿಭಾಗಗಳು ಯಾವುವೆಂದರೆ ರಾಜ್ಯ, ರಾಷ್ಟ್ರ, ನಾಡು, ಮಹಾನಾಡು, ಸೀಮೆ, ವೇಂಟೆ, ಸ್ಥಳ, ವಳಿತ, ಪಟ್ಟಣ, ನಗರ, ಪುರ, ಗ್ರಾಮ, ಹಳ್ಳಿ, ಮುಂತಾದವುಗಳೇ ಆಗಿವೆ. ಸಾಮಾನ್ಯವಾಗಿ ರಾಜಧಾನಿಯನ್ನು ನಗರ ಅಥವಾ ಪುರ ಎಂದು ಗುರುತಿಸುತ್ತಾರೆ. ಇದಲ್ಲದೇ ರಾಜ್ಯದಲ್ಲಿನ ಮುಖ್ಯ ಪ್ರದೇಶದಲ್ಲಿ, ವಾಣಿಜ್ಯ ವ್ಯವಹಾರ, ನಾಗರೀಕ ಸೌಲಭ್ಯಗಳನ್ನು ಹೊಂದಿರುವಂತಹ ಪ್ರದೇಶಕ್ಕೆ ಸಹ ನಗರ ಎಂದಿರುವುದನ್ನು ಕಾಣಬಹುದು. ಅದರಂತೆಯೇ ಧಾರ್ಮಿಕವಾಗಿ ಪ್ರಸಿದ್ಧಿಯನ್ನು ಪಡೆದ ಪ್ರದೇಶವು ಸಹ ನಗರವಾಗಿರುವುದನ್ನು ನೋಡಬಹುದಾಗಿದೆ. ಇಂತಹ ನಗರಗಳು ವಿಜಯನಗರ ಕಾಲದಲ್ಲಿ ಪಟ್ಟಣ ಸ್ವಾಮಿಗಳು ಎಂಬ ಅಧಿಕಾರಿಗಳ ಉಸ್ತುವಾರಿಯಲ್ಲಿ ಇರುತ್ತಿದ್ದವೆಂಬುದು ಶಾಸನಗಳಿಂದ ತಿಳಿದು ಬರುತ್ತದೆ.

ಭಾರತದಲ್ಲಿ ನಗರೀಕರಣದ ಪ್ರಕ್ರಿಯೆಯನ್ನು ಪ್ರಾಗೈತಿಹಾಸ ಕಾಲದ ನವಶಿಲಾಯುಗ ಕಾಲದಿಂದಲೂ ಕಾಣಬಹುದು. ಈ ಪ್ರಕ್ರಿಯೆಯು ಸ್ಪಷ್ಟವಾಗಿ ಗುರುತಿಸಲ್ಪಡುವುದು ಸಿಂಧೂ ಕಣಿವೆ ಸಂಸ್ಕೃತಿಯಲ್ಲಿಯೇ. ಈ ಸಂಸ್ಕೃತಿಗೆ ಸೇರಿದ ನೆಲೆಗಳ ಉತ್ಖನನಗಳಿಂದ ನಮಗೆ ಅನೇಕ ನಗರಗಳು ಉಪಲಬ್ಧವಾಗಿದ್ದು, ಇವುಗಳು ತಮ್ಮ ಎಲ್ಲಾ ಅಗತ್ಯಗಳನ್ನು ಪೂರೈಸಿಕೊಳ್ಳುವಂತಹ ಘಟಕಗಳಾಗಿದ್ದವೆಂಬುದು ತಿಳಿದು ಬರುತ್ತದೆ.[5] ಸಿಂಧೂ ಕಣಿವೆ ಸಂಸ್ಕೃತಿಯ ನೆಲೆಗಳ ನಗರ ರಚನಾ ವಿಧಾನ ಮತ್ತು ಶೈಲಿಯು ಮುಂದೆ ಆದಿ ಮತ್ತು ಇತಿಹಾಸ ಕಾಲದಲ್ಲಿಯೂ ಮುಂದುವರೆದು ಮಧ್ಯಕಾಲೀನ ಯುಗದಲ್ಲಿ ಪ್ರಬುದ್ಧವಾಗಿ ಬೆಳೆಯಿತು. ಇಲ್ಲಿಯವರೆಗೆ, ಭಾರತದ ವಿವಿದೆಡೆಗಳಲ್ಲಿ ನಡೆದಂತಹ ಉತ್ಖನನದಲ್ಲಿ ಅನೇಕ ನಗರಗಳನ್ನು ಹೊರ ತೆಗೆಯಲಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಉಲ್ಲೇಖಿಸಿದ ನಗರ ರಚನಾ ವಿನ್ಯಾಸದಂತಹ ಕೆಲವು ನಗರಗಳನ್ನು ಉತ್ಖನನದಲ್ಲಿ ಗುರುತಿಸಲಾಗಿದೆ. ಇನಾಂಗಾವ್, ಶಿಶುಪಾಲ್‌ಗಡ್, ಕೌಸಾಂಬಿ, ಪಾಟಲೀಪುತ್ರ, ಅಹಿಚ್ಛತ್ರ, ಅಯೋಧ್ಯ, ಶ್ರಿಂಗವೇರ್‌ಪುರ್, ನಾಗಾರ್ಜುನಕೊಂಡ, ಇತ್ಯಾದಿಯಾಗಿ ಆದಿ ಐತಿಹಾಸಿಕ ನೆಲೆಗಳ ಉತ್ಖನನಗಳಿಂದ ನಗರ ರಚನಾ ವಿಧಾನ, ರಕ್ಷಣಾ ವಿನ್ಯಾಸ ಮುಂತಾದ ವಿಷಯಗಳು ಬೆಳಕಿಗೆ ಬಂದಿವೆ.[6] ಆದುದರಿಂದ ಭಾರತದಲ್ಲಿ ನಗರೀಕರಣದ ಪ್ರಕ್ರಿಯೆಯು ಸುಮಾರು ನಾಲ್ಕು ಸಾವಿರ ವರ್ಷಗಳಿಂದ ನಿರಂತರವಾಗಿ ನಡೆದು ಬಂದಿರುವುದನ್ನು ಕಾಣಬಹುದು.

ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ವಿಜಯನಗರ ಪಟ್ಟಣವು ಪಂಪಾಕ್ಷೇತ್ರದಲ್ಲಿ ಇದ್ದ ಕಾರಣ ಮುಂದೆ ಇದುವೇ ಹಂಪೆಯಾಗಿ ಮಾರ್ಪಾಡಾಯಿತು. ಇದಕ್ಕೂ ಮುಂಚಿತವಾಗಿ ಪ್ರಾರಂಭಿಕ ವಿಜಯನಗರ ಸಾಮ್ರಾಜ್ಯದ ಕೆಲವು ಅರಸರು ಇಂದಿನ ರಾಯಚೂರು ಜಿಲ್ಲೆಯಲ್ಲಿರುವ ಆನೆಗೊಂದಿಯನ್ನು ರಾಜಧಾನಿಯನ್ನಾಗಿರಿಸಿಕೊಂಡಿದ್ದರು. ನಂತರದಲ್ಲಿ ಆನೆಗೊಂದಿಯಲ್ಲಿದ್ದ ರಾಜಧಾನಿಯನ್ನು ಇಂದಿನ ಹಂಪೆಗೆ ವರ್ಗಾಯಿಸಲ್ಪಟ್ಟ ತರುವಾಯವೇ ಹಂಪೆಯು ನಗರವಾಗಿ ಬೆಳೆದು ಪ್ರಸಿದ್ಧಿಯನ್ನು ಹೊಂದಿತು. ವಿಜಯನಗರ ಪಟ್ಟಣಕ್ಕೆ ಒಟ್ಟು ಏಳು ಸುತ್ತುಗಳ ಕೋಟೆ ಇದ್ದವೆಂದು ನಮಗೆ ವಿದೇಶಿ ಪ್ರವಾಸಿಗರ ಬರಹಗಳಿಂದ ತಿಳಿದು ಬರುತ್ತದೆ. ಇಂದು ವಿಜಯನಗರ ಪಟ್ಟಣವನ್ನು ಅದರ ಅವಶೇಷಗಳಿಂದ ಗುರುತಿಸಿ ಸುಮಾರು ಇಪ್ಪತ್ತೈದು ಚದುರ ಕಿ.ಮೀ. ಗಳಷ್ಟು ಪ್ರದೇಶಗಳಲ್ಲಿ ವ್ಯಾಪಿಸಿತ್ತೆಂದು ಅಭಿಪ್ರಾಯಪಡಲಾಗಿದೆ. ಕೋಟೆಯ ಏಳು ಸುತ್ತುಗಳನ್ನು ಇಲ್ಲಿಯವರೆಗೆ ಸ್ಪಷ್ಟವಾಗಿ ಗುರುತಿಸಲಾಗದಿದ್ದರೂ ಐದು ಸುತ್ತುಗಳನ್ನು ಖಚಿತವಾಗಿ ಗುರುತಿಸಲಾಗಿದೆ.

ವಿಜಯನಗರ ಪಟ್ಟಣವು ಏಳು ಸುತ್ತುಗಳನ್ನು ಒಳಗೊಂಡ ಕೋಟೆಯಾಗಿದ್ದರೂ, ಹಂಪೆಯನ್ನು ಮಾತ್ರವೇ ಪಟ್ಟಣವೆಂದು ಗುರುತಿಸಲಾಗಿದೆ. ಇಲ್ಲಿಯೇ ಅರಸರ ಅರಮನೆ ಮತ್ತು ಸಮಾಜದ ಉನ್ನತ ವ್ಯಕ್ತಿಗಳು ವಾಸವಾಗಿದ್ದ ಪ್ರದೇಶವಾಗಿದ್ದರಿಂದ ಇದನ್ನು ರಾಜಧಾನಿಯೆಂದು ಗುರುತಿಸಲಾಗಿದೆ. ಈ ಏಳು ಸುತ್ತಿನ ಕೋಟೆಯೊಳಗೆ ವಿಜಯನಗರ ಪಟ್ಟಣಕ್ಕೆ ಹೊಂದಿಕೊಂಡಿದ್ದ ಚಿಕ್ಕ ಜನವಸತಿಯ ಪ್ರದೇಶಗಳನ್ನು ಉಪನಗರಗಳೆಂದು ಗುರುತಿಸಬಹುದು. ಈ ಉಪನಗರಗಳು, ಗಾತ್ರ, ವ್ಯಾಪ್ತಿ ಮತ್ತು ರಚನಾವಿನ್ಯಾಸದಲ್ಲಿ ನಗರಗಳಿಗಿಂತ ಚಿಕ್ಕವಾಗಿದ್ದು ಇವುಗಳನ್ನು ವಿಜಯನಗರ ಪಟ್ಟಣದ ಉಪನಗರಗಳೆಂದು (Suburb) ಕರೆಯಬಹುದು. ವಿಜಯನಗರ ಪಟ್ಟಣದ ಉಪನಗರಗಳು ಯಾವುವೆಂದರೆ:

1. ಕಾಮಲಾಪುರ
2. ಕೃಷ್ಣಾಪುರ
3. ಅಚ್ಯುತಾಪುರ
4. ವಿಠಲಾಪುರ
5. ಮಲಪನಗುಡಿ
6. ಅನಂತಶಯನಗುಡಿ (ಶಾಲೆ ತಿರುಮಲರಾಯ ಪಟ್ಟಣ)
7. ತಿರುಮಲಾದೇವಿ ಪಟ್ಟಣ
8. ವರದಾಜಮ್ಮನ ಪಟ್ಟಣ (ಅನಂತಾಪುರ)
9. ವೆಂಕಟಾಪುರ
10. ಆನೆಗೊಂದಿ
11. ನಿಂಬಾಪುರ
12. ನಾಗಲಾಪುರ ಇತ್ಯಾದಿ.

ಈ ಉಪನಗರಗಳನ್ನು ಭೌಗೋಳಿಕ ವ್ಯಾಪ್ತಿಯನ್ನು ಮಾನದಂಡವಾಗಿಟ್ಟುಕೊಂಡು ಪರಿಶೀಲಿಸಿದಾಗ ಇವು ಮೂರು ಖಚಿತವಾದ ವಲಯಗಳಲ್ಲಿರುವುದನ್ನು ಗಮನಿಸಬಹುದು. ಇವು ಯಾವುವೆಂದರೆ

1. ಕೇಂದ್ರ ವಲಯ (Nucleus Region)
2. ವ್ಯವಸಾಯ ಅಥವಾ ಕೃಷಿ ವಲಯ (Agro Region) ಮತ್ತು
3. ಹೊರ ವಲಯ (Distal Region).

ರಾಜಧಾನಿ, ಅರಮನೆ, ರಾಜರ ವಾಸಸ್ಥಾನ, ಅಧಿಕಾರಿಗಳು, ಮಂತ್ರಿಗಳು, ಪ್ರಮುಖರು ವಾಸಿಸುವ ಸ್ಥಳವನ್ನು ಕೇಂದ್ರ ವಲಯವೆಂದು ಗುರುತಿಸಿದ್ದೇವೆ. ಈ ವಲಯದಲ್ಲಿಯೇ ಕೆಲವು ಪ್ರಮುಖ ದೇವಾಲಯಗಳೂ ಸಹ ಇವೆ. ಈ ವಲಯದಲ್ಲಿಯೇ ವಾಣಿಜ್ಯ ಚಟುವಟಿಕೆಗಳು ಬಿರುಸಿನಿಂದ ಸಾಗಿದ್ದವು ಎಂಬುದಕ್ಕೆ ನಮಗೆ ಆಧಾರಗಳು ದೊರಕಿವೆ. ಕೇಂದ್ರ ವಲಯಕ್ಕೆ ಒಳಪಟ್ಟಂತಹ ಉಪನಗರಗಳೆಂದರೆ

1. ಅಚ್ಯುತಾಪುರ
2. ಕೃಷ್ಣಾಪುರ
3. ವಿಠ್ಠಲಾಪುರ
4. ವಿಜಯನಗರ ಪಟ್ಟಣ (ಹಂಪೆ).

ಮೇಲೆ ಉಲ್ಲೇಖಿಸಿದ ಉಪನಗರಗಳು ಹಂಪೆಯ ಅಥವಾ ವಿಜಯನಗರ ಪಟ್ಟಣದ ಪರಿಧಿಯಲ್ಲಿದ್ದ ಕಾರಣ, ಹಂಪೆಯನ್ನು ಹೊರತುಪಡಿಸಿ, ಇವುಗಳನ್ನು ನಾವು ರಾಜಧಾನಿಯ ಪ್ರತಿಷ್ಠಿತ ಉಪನಗರಗಳೆಂದರೆ ತಪ್ಪಾಗಲಾರದು. ಅಚ್ಯುತಾಪುರ, ವಿಠ್ಠಲಾಪುರ ಮತ್ತು ಕೃಷ್ಣಾಪುರಗಳು ಅರಸರು ನಿರ್ಮಿಸಿದಂತಹ ಪುರ ಅಥವಾ ಅಗ್ರಹಾರಗಳಾಗಿದ್ದವು. ಈ ಎಲ್ಲಾ ಉಪನಗರಗಳಲ್ಲಿಯೂ ಒಂದೊಂದು ದೇವಾಲಯವನ್ನು ಕಟ್ಟಿಸಿ ಅದಕ್ಕೆ ಪೂರಕವಾಗಿ ವಾಣಿಜ್ಯ ಚಟುವಟಿಕೆಗಳನ್ನು ನಡೆಸಲು ಬಜಾರುಗಳನ್ನು ಸಹ ಪ್ರಾರಂಭಿಸಿದ ಉಲ್ಲೇಖಗಳು ನಮಗೆ ಶಾಸನಗಳಿಂದ ತಿಳಿದು ಬರುತ್ತವೆ. ಇವುಗಳಲ್ಲದೆ ಕೆಲವು ಉಪನಗರಗಳಾದ ವರದರಾಜಮ್ಮನ ಪಟ್ಟಣ, ಅನಂತಶಯನಗುಡಿ (ಶಾಲೆ ತಿರುಮಲರಾಯ ಪಟ್ಟಣ) ಮತ್ತು ನಾಗಲಾಪುರಗಳನ್ನು ಅರಸರೇ ನಿರ್ಮಿಸಿದ್ದರೂ, ಈ ಉಪನಗರಗಳು ರಾಜಧಾನಿ ಪಟ್ಟಣದ ಹೊರವಲಯಗಳಲ್ಲಿರುವುದು ಕುತೂಹಲಕಾರಿ ಸಂಗತಿ. ಇದಕ್ಕೆ ಕಾರಣವೇನೆಂದರೆ ರಾಜಧಾನಿ ಪ್ರದೇಶದಲ್ಲಿ ವಾಸಿಸಲು ಅನುಕೂಲವಾದ

ಭೌಗೋಳಿಕ ಪ್ರದೇಶದ ಅಭಾವವಿದ್ದುದೇ ಒಂದು ಕಾರಣ. ಈಗಾಗಲೇ ಹಂಪೆಯ ಪ್ರದೇಶದಲ್ಲಿ ಕೆಲವು ಉಪನಗರಗಳು ಅಸ್ತಿತ್ವದಲ್ಲಿ ಇದ್ದುದು ಎರಡನೆಯ ಕಾರಣ. ಹಂಪೆಯ ಪ್ರದೇಶವು ಬಂಡೆಗಲ್ಲುಗಳಿಂದ ಕೂಡಿದ್ದು ಸಮತಟ್ಟಾದ ಪ್ರದೇಶದ ಕೊರತೆಯಿದೆ. ಆದ್ದರಿಂದ ನಗರ ನಿರ್ಮಾಣಕ್ಕೆ ಅತ್ಯಲ್ಪ ಭೌಗೋಳಿಕ ಪ್ರದೇಶವು ಉಪಲಬ್ಧವಿರುವುದು ಹಂಪೆಯ ಪರಿಸರವನ್ನು ಪರಿವೀಕ್ಷಿಸಿದಾಗ ಕಂಡು ಬರುವ ಸ್ಪಷ್ಟ ಅಂಶವಾಗಿದೆ.

ಎರಡನೆಯ ವಲಯದಲ್ಲಿ ಕಾಮಲಾಪುರ, ಮಲಪನಗುಡಿ, ವರದರಾಜಮ್ಮನ ಪಟ್ಟಣ, ಶಾಲೆ ತಿರುಮಲರಾಯ ಪಟ್ಟಣ, ವೆಂಕಟಾಪುರ, ನಾಗಲಾಪುರ ಮತ್ತು ನಿಂಬಾಪುರಗಳು ಇವೆ. ಈ ವಲಯವನ್ನು ಕೃಷಿ ಉತ್ಪನ್ನ ವಲಯವೆಂದು ಗುರುತಿಸಲಾಗಿದ್ದು ಇಲ್ಲಿಯ ಭೌಗೋಳಿಕ ಪರಿಸರವನ್ನು ಗಣನೆಗೆ ತೆಗೆದುಕೊಂಡು ಪರಿಶೀಲಿಸಿದಾಗ ಇದು ವ್ಯವಸಾಯ ಉತ್ಪನ್ನಗಳನ್ನು ಉತ್ಪಾದಿಸುವ ಕ್ಷೇತ್ರವಾಗಿರುವುದು ಸ್ಪಷ್ಟವಾಗಿರುತ್ತದೆ. ಇಲ್ಲಿ ಉತ್ಪನ್ನವಾಗುವ ಕೃಷಿ ಪದಾರ್ಥಗಳು ಬಹುತೇಕವಾಗಿ ವಿಜಯನಗರ ಪಟ್ಟಣದ ಅಗತ್ಯಗಳನ್ನು ಪೂರೈಸುತ್ತಿದ್ದವು ಎಂದು ಹೇಳಬಹುದು. ಹೊರ ವಲಯಗಳಿಂದಲೂ ಹಂಪೆಯ ಕೇಂದ್ರ ಸ್ಥಳಕ್ಕೆ ಅಗತ್ಯ ವಸ್ತುಗಳು ಪೂರೈಸಲ್ಪಟ್ಟರೂ, ನಿರಂತರವಾಗಿ, ದೈನಂದಿನ ಅಗತ್ಯ ವಸ್ತುಗಳನ್ನು ಈ ಉಪನಗರಗಳೇ ಪೂರೈಸುತ್ತಿದ್ದವು ಎಂಬುದರಲ್ಲಿ ಯಾವ ಸಂಶಯವಿಲ್ಲ.[7] ಈ ಉಪನಗರಗಳಲ್ಲಿ ಭತ್ತ, ಕಬ್ಬು, ಜೋಳ, ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದರು ಎಂಬುದು ಶಾಸನಗಳಿಂದ ತಿಳಿಯಬಹುದಾಗಿದೆ. ಇದರೊಂದಿಗೆ ಉಲ್ಲೇಖಿಸಲ್ಪಟ್ಟ ಉಪನಗರಗಳಲ್ಲಿ ತುಂಗಭದ್ರಾ ನದಿಯ ಕೆಲವು ಮುಖ್ಯ ಕಾಲುವೆಗಳು ಹಾದು ಹೋಗುತ್ತಿವೆ.[8] ಇವು ವ್ಯವಸಾಯಕ್ಕೆ ಮತ್ತು ಕುಡಿಯುವುದಕ್ಕೆ ನೀರನ್ನು ಸಹ ಪೂರೈಸುತ್ತಿದ್ದವು. ಈ ಉಪನಗರಗಳಿರುವ ಪ್ರದೇಶಗಳು ಹೆಚ್ಚಾಗಿ ಸಮತಟ್ಟಾಗಿದ್ದು ಅಧಿಕಾಂಶವಾಗಿ ಪ್ರತಿ ಉಪನಗರಕ್ಕೆ ತನ್ನದೇ ಆದ ಕೆರೆಯನ್ನು ಹೊಂದಿದ್ದವು. ಇಂತಹ ಒಂದು ಉಪನಗರವಾದ ಕಾಮಲಾಪುರದ ಕೆರೆಯಿಂದ ವಿಜಯನಗರ ಪಟ್ಟಣಕ್ಕೆ ನೀರನ್ನು ಪೂರೈಸಲಾಗುತ್ತಿತ್ತು ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಮೂರನೆಯ ವಲಯವನ್ನು ಹೊರವಲಯವೆಂದು ಗುರುತಿಸಲಾಗಿದ್ದು ಇದರ ವ್ಯಾಪ್ತಿಯು ಅತಿ ಹೆಚ್ಚಾಗಿದ್ದು ಕೋಟೆಗೋಡೆಯ ಹೊರಗಿರುವ ಎಲ್ಲಾ ಪ್ರದೇಶಗಳು ಮತ್ತು ರಾಜ್ಯದೊಳಗಿನ ಊರು, ನಗರ, ಮುಂತಾದ ಪ್ರದೇಶಗಳು. ಈ ವಲಯವು ವಿಜಯನಗರ ಪಟ್ಟಣಕ್ಕೆ ಬೇಕಾದ ಎಲ್ಲಾ ಅಗತ್ಯ ವಸ್ತುಗಳನ್ನು ಕಾಲಕಾಲಕ್ಕೆ ಪೂರೈಸುತ್ತಿತ್ತು. ತಿಮ್ಮಲಾಪುರ, ದರೋಜಿ, ಮುಂತಾದ ಪ್ರದೇಶಗಳು ಈ ವಲಯದ ವ್ಯಾಪ್ತಿಗೆ ಬರುತ್ತವೆ.

ವಿಜಯನಗರ ಪಟ್ಟಣ ಮತ್ತು ಅದರ ಉಪನಗರಗಳನ್ನು ಭೌಗೋಳಿಕವಾಗಿ ಪರಿಶೀಲಿಸಿದಾಗ ನಮಗೆ ಕೆಲವು ಕುತೂಹಲಕಾರಿಯಾದ ಮತ್ತು ಮಹತ್ವದ ಸಂಗತಿಗಳು ಸ್ಪಷ್ಟವಾಗುತ್ತವೆ. ಎರಡನೆಯ ವಲಯದಲ್ಲಿ ಅಂದರೆ ಕೃಷಿ ವಲಯದಲ್ಲಿ ಅಡಕಗೊಂಡಂತಹ ಉಪನಗರಗಳು ಸುಮಾರು 4 ರಿಂದ 6 ಕಿಲೋಮೀಟರ್ ಅಂತರಗಳಲ್ಲಿ ಇದ್ದು, ಇವು ವ್ಯವಸಾಯ ಉತ್ಪನ್ನಗಳನ್ನು ಉತ್ಪಾದಿಸುವ ಕ್ಷೇತ್ರವಾಗಿದ್ದವು. ಅಧಿಕಾಂಶವಾಗಿ ಈ ಎಲ್ಲಾ ಉಪನಗರಗಳಲ್ಲಿಯೂ ಒಂದೊಂದು ಕೆರೆಯಿರುವುದನ್ನು ಕಾಣಬಹುದಾಗಿದೆ.[9] ಅದರಂತೆಯೇ ಈ ಉಪನಗರಗಳೆಲ್ಲವೂ ಸರಾಸರಿಯಾಗಿ ಸಮುದ್ರ ಮಟ್ಟದಿಂದ 500 ಮೀಟರ್ ನೈಸರ್ಗಿಕ ಕ್ಷಿತಿಜ ಭೂಮಟ್ಟ (Contour) ಎತ್ತರದಲ್ಲಿಯೇ ಇವೆ. ಉಪನಗರಗಳ ಕೆರೆಗಳು ಸಹಾ ಇದೇ 500 ಮೀಟರ್ ಎತ್ತರದಲ್ಲಿರುವುದು ವಿಶೇಷ ಸಂಗತಿ. ಇನ್ನು ವಿಜಯನಗರ ಪಟ್ಟಣದ ಮತ್ತು ಅದರ ಉಪನಗರಗಳ ಜನಸಂಖ್ಯೆಯನ್ನು ಪರಿಶೀಲಿಸಿದಾಗ ನಮಗೆ ಖಚಿತವಾದ ಅಂಕಿ ಅಂಶಗಳು ದೊರಕುವುದಿಲ್ಲ.[10] ಒಂದು ಅಂದಾಜಿನಂತೆ ವಿಜಯನಗರ ಪಟ್ಟಣದ ಜನಸಂಖ್ಯೆಯು ಸುಮಾರು ಒಂದು ಲಕ್ಷದಷ್ಟು ಇತ್ತೆಂದು ಗಣಿಸಲಾಗಿದೆ. ವಿದೇಶಿ ಪ್ರವಾಸಿಗರ ಬರಹಗಳಿಂದಲೂ ನಮಗೆ ಕೆಲವು ಸುಳಿವುಗಳು ದೊರಕುತ್ತವೆ. ಆದರೆ ಅವುಗಳನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುವುದು ಕಷ್ಟದ ಸಂಗತಿ. ವಿಜಯನಗರ ಪಟ್ಟಣದಲ್ಲಿ ಸಂಪೂರ್ಣವಾಗಿ ಉತ್ಖನನವನ್ನು ನಡೆಸದ ಕಾರಣ ನಾವು ಪ್ರಾಚೀನ ಜನಗಣತಿಯನ್ನು ಗಣಿಸಲಿಕ್ಕೆ ಕಷ್ಟವಾಗುತ್ತದೆ. ಸಾಂಖಿಕ ವಿಧಾನದಿಂದ ಮತ್ತು ಮಡಕೆ ಚೂರುಗಳ ಆಧಾರದಿಂದ ಸ್ವಲ್ಪ ಮಟ್ಟಿಗೆ ಮಾತ್ರ ಈ ದಿಸೆಯಲ್ಲಿ ಪ್ರಯತ್ನ ಪಡಬಹುದಾಗಿದೆ. ಹೀಗಿದ್ದರೂ ವಿಜಯನಗರ ಪಟ್ಟಣದ ಖಚಿತವಾದ ಜನಗಣತಿಯನ್ನು ಮಾಡುವುದು ಕಠಿಣವಾದ ಕೆಲಸವೇ ಸರಿ.

ಈ ಮೇಲೆ ಚರ್ಚಿಸಿದ ವಿಷಯಗಳನ್ನು ನಾವು ಪುನರಾವಲೋಕಿಸಿದಾಗ ಕಂಡು ಬರುವ ಅಂಶಗಳು ಏನೆಂದರೆ ರಾಜಧಾನಿ ಪಟ್ಟಣಕ್ಕೆ ಹೊಂದಿಕೊಂಡಂತಹ ಉಪನಗರಗಳು ರಾಜಧಾನಿಯ ಬೇಡಿಕೆಯನ್ನು ಪೂರೈಸುತ್ತಿದ್ದವು. ಇದರೊಂದಿಗೆ ಹೊರವಲಯದಲ್ಲಿ ಇದ್ದಂತಹ ನಗರಗಳು ಮತ್ತು ಉಪನಗರಗಳು ಸಹ ರಾಜಧಾನಿಯೊಂದಿಗೆ ಸಂಬಂಧವನ್ನು ಇಟ್ಟುಕೊಂಡು ರಾಜಧಾನಿಯ ಉಪನಗರಗಳಿಗೆ ಪೂರಕವಾಗಿ ಕೆಲಸವನ್ನು ಮಾಡುತ್ತಿದ್ದವು. ವಿಜಯನಗರ ಪಟ್ಟಣವು ಮುಖ್ಯವಾಗಿ ದೊಡ್ಡ ವಾಣಿಜ್ಯ ಕೇಂದ್ರವಾಗಿಯೂ ಸಹ ಇತ್ತು. ಪ್ರಾಚೀನ ಮತ್ತು ಮಧ್ಯಕಾಲೀನ ಯುಗದಲ್ಲಿ ನಗರ ಮತ್ತು ಜನ ವಸತಿಯ ನೆಲೆಗಳನ್ನು ಅರಸರು ಮತ್ತು ವಾಸ್ತುಶಾಸ್ತ್ರಜ್ಞರು ನಿಸರ್ಗವನ್ನು ಪರಿಶೀಲಿಸಿ ಪ್ರದೇಶಗಳನ್ನು ಆಯ್ಕೆ ಮಾಡಿರುವುದು ಅವರ ಭೌಗೋಳಿಕ ಪ್ರಜ್ಞೆಯನ್ನು ನಮಗೆ ಪರಿಚಯಿಸುತ್ತದೆ.

ಟಿಪ್ಪಣಿಗಳು

1. ಪಾಟೀಲ ಚನ್ನಬಸಪ್ಪ ಎಸ್., 'ಶಾಸನಗಳಲ್ಲಿ ಕಂಡಂತೆ ವಿಜಯನಗರ ಪಟ್ಟಣದ ನೀರಿನ ವ್ಯವಸ್ಥೆ', *ವಿಜಯನಗರ ಅಧ್ಯಯನ,* ಸಂಪುಟ 1, (ಸಂ.) ಡಿ.ವಿ.ದೇವರಾಜ್ ಮತ್ತು ಚನ್ನಬಸಪ್ಪ ಎಸ್. ಪಾಟೀಲ, ಮೈಸೂರು, ಪು. 62-75.

2. ನಾಗರಾಜ್ ಬಿ.ಎಸ್., 'ವಿಜಯನಗರ ಸಾಮ್ರಾಜ್ಯದಲ್ಲಿ ನಗರ ಬೆಳವಣಿಗೆ' ಎಂಬ ಲೇಖನವನ್ನು ಹಂಪೆ ಉತ್ಸವದ ಅಂಗವಾಗಿ ನಡೆದ ವಿಚಾರಗೋಷ್ಠಿಯಲ್ಲಿ ಮಂಡಿಸಿರುವರು, ಹಂಪೆ, 1996. ಈ ಲೇಖನ ಪ್ರಸ್ತುತ ಸಂಪುಟದಲ್ಲಿ ಪು. 94-98ರಲ್ಲಿ ಪ್ರಕಟವಾಗಿದೆ.

3. *ವಡ್ಡಾರಾಧನೆ,* 7-9.

4. *ಎಪಿಗ್ರಾಫಿಯ ಇಂಡಿಕಾ,* ಸಂ. XXVIII, ಪು. 35-58.

5. ಗೋರ್ಡಾನ್ ಚೈಲ್ಡ್ ರವರು ನಗರವನ್ನು ಕುರಿತು ಈ ರೀತಿಯಾಗಿ ಅರ್ಥೈಸುವರು. 1) Size 2) Inclusion of additional Class - Craftsmen, Artisans 3) Centralization of Surplus food 4) Monumental public building 5) Formulation of ruling Class 6) System of recording administration (Script) 7) Exact and predictive Science regulating agricultural operation 8) Style of Art 9) Long distance trade 10) Social organisation based on kinship.

   Shaffer ರವರು "Reurbanisation: The Eastern Punjab and beyond" ಎಂಬ ಲೇಖನವನ್ನು *Urban Form and Meaning in South Asia: The Shaping of cities and Prehistoric to Pre Colonial Times* ಎಂಬ ಪುಸ್ತಕದಲ್ಲಿಪ್ರಕಟಿಸಿರುತ್ತಾರೆ. ಅದರಲ್ಲಿ ನಗರವನ್ನು ಈ ರೀತಿಯಾಗಿ ಅರ್ಥೈಸುತ್ತಾರೆ.

   1) An Economy incorporating agriculture and pastoralists 2) Large urban settlement 3) Use of stone, mud and fired bricks 4) Public architecture (Wells and tanks) 5) Development of public and private hydraulic features 6) Highly developed craft industry 7) Homogenous material Culture distributed over a large geographic region 8) Long distance trade 9) A unified system of weight and measure and 10) Written script. ಆಲ್‌ಚಿನ್ ಎಫ್. ಆರ್., *ದಿ ಆರ್ಕಿಯಾಲಜಿ ಆಫ್ ಅರ್ಲಿ ಹಿಸ್ಟಾರಿಕ್ ಸೌತ್ ಏಷಿಯ: ದಿ ಎಮರ್ಜೆನ್ಸ್ ಆಫ್ ಸಿಟೀಸ್ ಆಂಡ್ ಸ್ಟೇಟ್ಸ್,* ಪು. 54-72.

6. ಆಲ್‌ಚಿನ್‌ರವರು ಈ ಪುಸ್ತಕದಲ್ಲಿ ನಗರೀಕರಣವನ್ನು ಕುರಿತು ವಿಶ್ಲೇಷಣಾತ್ಮಕವಾಗಿ ಚರ್ಚಿಸಿದ್ದಾರೆ.

7. ಆಲ್‌ಚಿನ್, *ಅದೇ,* ಪು. 65-67. ಒಂದು ಸಾಂಖಿಕ ಸರ್ವೇಕ್ಷಣೆಯಂತೆ ಒಬ್ಬ ಮನುಷ್ಯನಿಗೆ ಒಂದು ವರ್ಷಕ್ಕೆ 7,06,640 ಕ್ಯಾಲೋರಿಗಳನ್ನು ನೀಡಬಲ್ಲ ಆಹಾರ ಪದಾರ್ಥಗಳು ಬೇಕಾಗುತ್ತವೆ ಎಂದು ಗಣಿಸಲಾಗಿದೆ. ಅಂದರೆ 72 % ರಷ್ಟು ಆಹಾರ

ಪದಾರ್ಥಗಳು ಬೇಕಾಗುತ್ತವೆ. ಒಬ್ಬ ಮನುಷ್ಯನಿಗೆ ವರ್ಷಕ್ಕೆ 144.6 ಕೆ.ಜಿ. ಗಳಷ್ಟು ಆಹಾರ ಪದಾರ್ಥಗಳು 7,06,640 ಕ್ಯಾಲೋರಿಗಳನ್ನು ಒದಗಿಸುತ್ತವೆ. ಒಣ ಹವಾಮಾನ ವ್ಯವಸಾಯ, ಅಂದರೆ ಹೊಲಗಳಲ್ಲಿ 180ರಿಂದ 230 ಕೆ.ಜಿ.ಗಳಷ್ಟು ಆಹಾರ ಧಾನ್ಯಗಳನ್ನು ಬೆಳೆಯಬಲ್ಲದು ಎಂದು ಗಣಿಸಲಾಗಿದೆ.

8. ತುರ್ತುಕಾಲುವೆ, ಬಸವಣ್ಣ ಕಾಲುವೆ ಮತ್ತು ರಾಯಕಾಲುವೆಗಳು ಹಂಪೆಯ ಸಮೀಪವೇ ಹಾದು ಹೋಗುತ್ತವೆ.

9. ವಾಸುದೇವನ್ ಸಿ.ಎಸ್., 'ಹೊಸಪೇಟೆ ತಾಲೂಕಿನ ವಿಜಯನಗರ ಕಾಲದ ಕೆರೆಗಳು - ಒಂದು ಅಧ್ಯಯನ', ಅಪ್ರಕಟಿತ ಯೋಜನೆ, ಕನ್ನಡ ವಿಶ್ವವಿದ್ಯಾಲಯ ಹಂಪಿ, 1996.

10. ಆಲ್‌ಚಿನ್, *ಅದೇ*, ಪು. 67; ಹಸನ್ ಎಫ್.ಎ., ''ಡೆಮೊಗ್ರಾಫಿಕ್ ಮೆಥಡ್ಸ್ ಇನ್ ಆರ್ಕಿಯಾಲಜಿ'' *ಅಡ್ವಾನ್ಸಸ್ ಇನ್ ಆರ್ಕಿಯಾಲಜಿಕಲ್ ಮೆಥಡ್ ಆಂಡ್ ಥಿಯರಿ*, ಸಂಪುಟ 1, (ಸಂ.) ಮೈಕೇಲ್ ಶಾಫರ್, ಪು. 48-90.

17. ವಿಜಯನಗರದಲ್ಲಿ ಅರ್ದೆಗೆಮಾ ಅಥವಾ ಒಂದೆಗೆಮಾ ಪಟ್ಟಣ ಯಾವುದು?

ಸಿ. ಮಹಾದೇವ

ರಾಬರ್ಟ್ ಸಿವೆಲ್ ಅವರು 'ಎ ಫಾರ್‌ಗಾಟನ್ ಎಂಪಾಯರ್' ಕೃತಿಯ ಮೂಲಕ ಚರಿತ್ರಾಕಾರರಿಗೆ ಚಿರಪರಿಚಿತರು. ವಿಜಯನಗರ ಸಾಮ್ರಾಜ್ಯದ ಚರಿತ್ರೆಗೆ ಸಂಬಂಧಿಸಿದ ಈ ಕೃತಿ ಎಲ್ಲರ ಮೆಚ್ಚುಗೆ ಪಡೆದಿದೆ. ಇಂಗ್ಲೀಷಿನಲ್ಲಿರುವ ಈ ಗ್ರಂಥವನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿಯು 1992 ರಲ್ಲಿ 'ಮರೆತು ಹೋಗಿರುವ ಸಾಮ್ರಾಜ್ಯ ವಿಜಯನಗರ' ಎಂದು ಕನ್ನಡಕ್ಕೆ ಅನುವಾದಿಸಿದೆ. ಈ ಕೃತಿಯಲ್ಲಿ ಸಿವೆಲ್ ಅವರು ಅನೇಕ ಸಂಗತಿಗಳನ್ನು ಚರ್ಚಿಸಿದ್ದಾರೆ. ಇವುಗಳಲ್ಲಿ ವಿದೇಶಿ ಪ್ರವಾಸಿಗರು ಪ್ರಸ್ತಾಪಿಸಿರುವ ವಿಜಯನಗರದ ಅರ್ದೆಗೆಮಾ ಪಟ್ಟಣವೂ ಒಂದು.[1] ಕೆಲವೆಡೆ ಇದನ್ನು ಒಂದೆಗೆಮಾ ಎಂದು ಸಹ ಕರೆಯಲಾಗಿದೆ.[2] ಪ್ರಸ್ತುತ ಲೇಖನದ ಉದ್ದೇಶ ವಿಜಯನಗರದಲ್ಲಿ ಈ ಪಟ್ಟಣ ಯಾವುದೆಂದು ಗುರುತಿಸುವುದಾಗಿದೆ. ಮೊದಲಿಗೆ ಅರ್ದೆಗೆಮಾ ಮತ್ತು ಒಂದೆಗೆಮಾ ಎಂಬ ಪದಗಳ ಓದಿನ ಮೂಲವನ್ನು ಕುರಿತು ಪರಿಶೀಲಿಸೋಣ. ವಿದೇಶಿ ಪ್ರವಾಸಿಗರು ದಾಖಲಿಸಿರುವ "Ardegema" ಮತ್ತು "Ondegema" ಪದಗಳನ್ನು ಸಿವೆಲ್ ಅವರು ಅರ್ದೆಗೆಮಾ ಮತ್ತು ಒಂದೆಗೆಮಾ ಎಂದು ಓದಿದ್ದಾರೆ. ನಮ್ಮಲ್ಲಿನ ಗ್ರಾಮ ಎಂಬ ಪದವನ್ನು ಗಮನದಲ್ಲಿರಿಸಿಕೊಂಡು ಗೆಮಾ ಎಂಬುದು ಗ್ರಾಮವಿರಬೇಕೆಂದು ಸಿವೆಲ್ ಅಭಿಪ್ರಾಯಪಡುತ್ತಾರೆ. ದೇವರಕೊಂಡಾರೆಡ್ಡಿಯವರು ಈ ಪದಗಳನ್ನು ಅರ್ದೆಜೆಮಾ ಎಂದು ಓದಲು ಸಲಹೆಮಾಡುತ್ತಾರೆ. ಏಕೆಂದರೆ ಇಂಗ್ಲೀಷ್ ವ್ಯಾಕರಣದ ದೃಷ್ಟಿಯಿಂದಲೂ "Gema" ಎಂಬುದು ''ಜೆಮಾ'' ಎಂದೇ ಓದಿಸಿಕೊಳ್ಳುತ್ತದೆ. "G" ಅಕ್ಷರದ ಮುಂದೆ "E" ಅಕ್ಷರ ಬಂದಾಗ ಅದು ''ಜೆ'' ಎಂದು ಉಚ್ಚಾರಣೆಯಾಗುತ್ತದೆ. ಬಹುಶಃ ವಿದೇಶಿ ಪ್ರವಾಸಿಗರು ಇವುಗಳನ್ನು ಅರ್ದೆಜೆಮಾ ಮತ್ತು ಒಂದೆಜೆಮಾ ಎಂದೇ ಗ್ರಹಿಸಿ ದಾಖಲಿಸಿರಬಹುದು. ಹಾಗಾಗಿ ಸಿವೆಲ್ ಓದಿರುವ ಅರ್ದೆಗೆಮಾ ಮತ್ತು ಒಂದೆಗೆಮಾ ಪದಗಳನ್ನು ಅರ್ದೆಜೆಮಾ ಮತ್ತು ಒಂದೆಜೆಮಾ ಎಂದು ಓದುವುದು ಸಮಂಜಸವಾದುದು. ಭಾರತೀಯ ಸ್ಥಳನಾಮಗಳು ವಿದೇಶಿಯರಲ್ಲಿ ಭಿನ್ನಭಿನ್ನವಾಗಿ ಉಚ್ಚಾರಣೆಗೊಳ್ಳುವುದು ತುಂಬಾ ಸಹಜ. ಹಾಗೆಯೇ ಅದನ್ನು ಬರಹದಲ್ಲಿ ದಾಖಲಿಸುವಾಗ ಅಕ್ಷರಗಳ ಬಳಕೆಯಲ್ಲೂ ವ್ಯತ್ಯಾಸವಿರುತ್ತದೆ. ಹಾಗಾಗಿ ಇಲ್ಲಿ ಬರುವ ಅರ್ದೆಗೆಮಾ (ಅರ್ದೆಜೆಮಾ) ಮತ್ತು ಒಂದೆಗೆಮಾ (ಒಂದೆಜೆಮಾ) ಒಂದೇ ಪಟ್ಟಣದ ಹೆಸರುಗಳಾಗಿವೆ. ಮುಂದೆ ಈ ಪಟ್ಟಣ ಯಾವುದೆಂಬುದನ್ನು ಗುರುತಿಸಲು ಪ್ರಯತ್ನ ಮಾಡೋಣ.

'ಎ ಫಾರ್‌ಗಾಟನ್ ಎಂಪಾಯರ್' ಗ್ರಂಥದಲ್ಲಿ ಡೊಮಿಂಗೊ ಪಾಯೇಸ್ ಕಥನದ ಕೊನೆಯ ಮೂರು ಕಂಡಿಕೆಗಳು ಈ ರೀತಿ ಇವೆ.

1. ವಾಯುವ್ಯಕ್ಕೆ ಬಿಸ್ನಗಕ್ಕೆ ಹೊಂದಿಕೊಂಡು ಕ್ರಿಸ್ನಾಪೂರ್ ಎಂಬ ಇನ್ನೊಂದು ನಗರವಿದೆ....

2. ದಕ್ಷಿಣ ಬದಿಗೆ ಬಯಲಿನಲ್ಲಿರುವ ನಾಗಲಾಪುರ ಎಂಬ ಇನ್ನೊಂದು ನಗರ. ಇದರಲ್ಲಿ ಇದಲ್ ಸಾ ಬಿಸ್ನಗಕ್ಕೆ ಮುತ್ತಿಗೆ ಹಾಕಿದಾಗ ಬಿಡಾರ ಹೂಡಿದ್ದ ಮತ್ತು ಅದನ್ನು ನೆಲಸಮ ಮಾಡಿದ. ಆದರೆ, ಈಗಾಗಲೇ ಅದನ್ನು ಪುನಃ ಕಟ್ಟಲಾಗಿದೆ. ಮತ್ತು ಇದು ಬಿಸ್ನಗದಿಂದ ಒಂದು ಹರದಾರಿ ದೂರ ಇದೆ.

3. ಪೂರ್ವಕ್ಕೆ ಅರ್ದೆಗೆಮಾ ಎಂಬ ಇನ್ನೊಂದು ನಗರವಿದೆ. ಅದು ಈ ರಾಜನ ಪ್ರಧಾನ ರಾಣಿಯ ಹೆಸರು. ಅದು ಹೊಸದಿದೆ ಮತ್ತು ಅವನು ಅವಳ ಪ್ರೀತ್ಯರ್ಥ ಅದನ್ನು ಕಟ್ಟಿದ.

ಎಂದು ಕೊನೆಯಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಸಿವೆಲ್ ಅವರು, ಎರಡನೆ ಕಂಡಿಕೆಯಲ್ಲಿರುವ ಸಂಗತಿಯು ಬಹುಶಃ 1522 ಅಥವಾ ಆ ಸುಮಾರಿಗೆ ಬರೆದ ಪಾಯೇಸ್‌ನ ಮೂಲ ದಿನಚರಿಯ ಭಾಗವಾಗಿರಲಾರದು. ಏಕೆಂದರೆ ಅದು 1435-36ರಲ್ಲಿ ನಡೆದ ಘಟನೆಯನ್ನು ಪ್ರಸ್ತಾಪಿಸುತ್ತದೆ. ಬಹುಶಃ ಕೊನೆಯ ಈ ಕಂಡಿಕೆಗಳನ್ನು ಮಧ್ಯೆ ಸೇರಿಸಿರಬೇಕೆಂದು ಅಭಿಪ್ರಾಯ ಪಡುತ್ತಾರೆ.[3] ಅಚ್ಯುತದೇವರಾಯನ ಕಾಲದಲ್ಲಿ ಬಿಜಾಪುರದ ಆದಿಲ್‌ಶಹ ವಿಜಯನಗರದ ಮೇಲೆ ಎರಡು ಬಾರಿ ದಾಳಿ ಮಾಡುತ್ತಾನೆ. ಮೊದಲನೆ ದಾಳಿ ಕ್ರಿ.ಶ. 1530-31ರಲ್ಲಿ

ನಡೆಯುತ್ತದೆ. ಎರಡನೆ ದಾಳಿಯಲ್ಲಿ ನಾಗಲಾಪುರವನ್ನು ಹಾಳು ಮಾಡುತ್ತಾನೆ.[4] ಹಾಗೆಯೇ ಕೊನೆಯ ಕಂಡಿಕೆಯಲ್ಲಿರುವ, ''ಪೂರ್ವಕ್ಕೆ ಅರ್ದೆಗೆಮಾ ಎಂಬ ನಗರವಿದೆ. ಅದು ಈ ರಾಜನ ಪ್ರಧಾನ ರಾಣಿಯ ಹೆಸರು. ಅವಳ ಪ್ರೀತ್ಯರ್ಥ ಅದನ್ನು ಕಟ್ಟಿದ'' ಎಂಬ ಸಂಗತಿಯು ಸಹ ಅಚ್ಯುತರಾಯನಿಗೆ ಸಂಬಂಧಿಸಿದೆ. ಅಂದರೆ ಪಾಯೇಸ್‌ನ ಕಥನದ ಈ ಕೊನೆಯ ಕಂಡಿಕೆಗಳು ಅಚ್ಯುತರಾಯನ ಕಾಲದ ಘಟನಾವಳಿಗಳನ್ನೇ ನಿರೂಪಿಸುತ್ತವೆ. ಹಾಗಾಗಿ ಸಿವೆಲ್ ಅವರ ಅಭಿಪ್ರಾಯ ಸಮಂಜಸವಾಗಿದೆ.

ಇಂದಿನ ಹಂಪಿಯ ಅರಮನೆ ಪ್ರದೇಶ ವಿಜಯನಗರದ ಕೇಂದ್ರ ಭಾಗವಾಗಿದ್ದು, ಅದಕ್ಕೆ ಹೊಂದಿಕೊಂಡಂತಿದ್ದ ಇತರ ಪಟ್ಟಣಗಳ ದಿಕ್ಕನ್ನೂ ಈ ಕೇಂದ್ರ ಭಾಗದಿಂದಲೇ ಸೂಚಿಸುವ ಪದ್ಧತಿ ರೂಢಿಯಲ್ಲಿತ್ತು ಎಂದು ಹೇಳಬಹುದು. ಆದ್ದರಿಂದಲೇ ಕ್ರಿಸ್ನಾಪೊರ್ (ಕೃಷ್ಣಾಪುರ: ಹಂಪಿಯ ಕೃಷ್ಣ ದೇವಾಲಯದ ಪ್ರದೇಶ) ಮತ್ತು ನಾಗಲಾಪುರ (ಇಂದಿನ ಹೊಸಪೇಟೆಯ ವಡಕರಾಯಸ್ವಾಮಿ ದೇವಾಲಯದ ಪ್ರದೇಶ)ದ ದಿಕ್ಕನ್ನು ನಿರ್ದೇಶಿಸುವಾಗ ವಿಜಯನಗರ (ಬಿಸ್ನಗ)ವನ್ನು ಕೇಂದ್ರವಾಗಿಟ್ಟುಕೊಳ್ಳಲಾಗಿದೆ. ಇದೇ ರೀತಿ ''ಪೂರ್ವಕ್ಕೆ ಅರ್ದೆಗೆಮಾ'' ಎಂದು ಹೇಳುವಾಗಲೂ ಸಹ ವಿಜಯನಗರವೇ ಕೇಂದ್ರವಾಗುತ್ತದೆ. ಅಂದರೆ ಅರಮನೆ ಪ್ರದೇಶದಿಂದ ಪೂರ್ವಕ್ಕೆ ಅರ್ದೆಗೆಮಾ ಪಟ್ಟಣವಿತ್ತೆಂದು ಸ್ಪಷ್ಟವಾಗುವುದು. ಈ ಅರ್ದೆಗೆಮಾ ಪಟ್ಟಣ ನ್ಯೂನಿಜ್‌ನ ದಿನಚರಿಯಲ್ಲಿ ''ಒಂದೆಗೆಮಾ'' ಎಂದು ಉಲ್ಲೇಖನಗೊಂಡಿದೆ.[5]

ಆದರೆ ಸಿವೆಲ್ ತಮ್ಮ ಗ್ರಂಥದ ಅಡಿಟಪ್ಪಣಿಯಲ್ಲಿ ''ಪೂರ್ವಕ್ಕಿರುವ ಅರ್ದೆಗೆಮಾ ಪಟ್ಟಣದ ಸ್ಥಳ ನಿರ್ಧರಿಸಲು ಕಷ್ಟಕರವಾಗಿದೆ. ಯಾವುದರ ಪೂರ್ವಕ್ಕೆ? ನಾಗಲಾಪುರದ ಪೂರ್ವಕ್ಕೆ ಎಂದಾದರೆ ಅರ್ದೆಗೆಮಾ ಅಥವಾ ಒಂದೆಗೆಮಾ ಆ ಪಟ್ಟಣದ ಹೊರಗೇರಿ ಆಗಿರಬಹುದು. ರಾಜಧಾನಿಯ ಪೂರ್ವಕ್ಕೆಂದು ಹೇಳುವುದಾದರೆ ನಾನು ಆ ಸ್ಥಳವನ್ನು ಗುರುತಿಸಲಾರೆ'' ಎಂದು ತಿಳಿಸುತ್ತಾರೆ.[6] ಸಿವೆಲ್ ಅವರು ಇಲ್ಲಿ ಗೊಂದಲಕ್ಕೊಳಗಾಗಿದ್ದಾರೆ. ಈ ಮೊದಲೇ ತಿಳಿಸಿದಂತೆ 'ಪೂರ್ವಕ್ಕೆ ಅರ್ದೆಗೆಮಾ' ಎಂದರೆ ಅದು ವಿಜಯನಗರದ ಅರಮನೆ ಪ್ರದೇಶದಿಂದ ಪೂರ್ವಕ್ಕಿರುವ ಅರ್ದೆಗೆಮಾ ಪಟ್ಟಣ ಎಂದು ಸ್ಪಷ್ಟವಾಗುತ್ತದೆ. ಪುರಾತತ್ವಜ್ಞರು, ಇಂದಿನ ಕಮಲಾಪುರದಿಂದ ಹಂಪಿ ಪವರ್ ಕಾಲೋನಿಗೆ ಹೋಗುವ ದಾರಿಯಲ್ಲಿರುವ ಪಟ್ಟಾಭಿರಾಮ ದೇವಾಲಯದ ಸುತ್ತಮುತ್ತಲ ಪ್ರದೇಶವನ್ನು ವಿಜಯನಗರ ಕಾಲದ ವರದರಾಜಮ್ಮನ ಪಟ್ಟಣ ಎಂದು ಗುರುತಿಸಿದ್ದಾರೆ. ಅಚ್ಯುತರಾಯ ತನ್ನ ಪ್ರಧಾನ ರಾಣಿ ವರದಾಂಬಾ ಅಥವಾ ವರದರಾಜಮ್ಮನ ಹೆಸರಿನಲ್ಲಿ ವರದರಾಜಮ್ಮನ ಪಟ್ಟಣವನ್ನು ನಿರ್ಮಿಸಿದ್ದಾನೆ. ವರದಾಂಬಾ ಪಾಂಡ್ಯರ ಮನೆತನದವಳು.[7] ಈ ಪ್ರದೇಶದಲ್ಲಿ ದೊರೆತ ಶಾಸನಗಳು ವರದಾದೇವಿ ಅಮ್ಮನವರ ಪಟ್ಟಣ,[8] ವರದಾಜಂಮನ ಪಟ್ಟಣ[9] ಮತ್ತು ವರದಾಜಿಯಮ್ಮನ ಪಟ್ಟಣ[10] ಎಂದು ಉಲ್ಲೇಖಿಸಿ ಅಲ್ಲಿನ ದೇವಾಲಯಗಳನ್ನು ಹೆಸರಿಸುತ್ತವೆ. ವಿಜಯನಗರದಲ್ಲಿ ಪ್ರಧಾನರಾಣಿಯರ ಹೆಸರಿನಲ್ಲಿ ನಿರ್ಮಾಣಗೊಳ್ಳುತ್ತಿದ್ದ ಪಟ್ಟಣಗಳನ್ನು ಸಾಮಾನ್ಯವಾಗಿ ಅವರ ತವರು ರಾಜ್ಯಕ್ಕೆ ಹೋಗುವ ಮಾರ್ಗದಲ್ಲಿ ನಿರ್ಮಿಸುತ್ತಿದ್ದರೆಂದು ಹೇಳಬಹುದು. ಉದಾಹರಣೆಗೆ ಕೃಷ್ಣದೇವರಾಯನು ತನ್ನ ರಾಣಿ ತಿರುಮಲದೇವಿಯ ಹೆಸರಿನಲ್ಲಿ ನಿರ್ಮಿಸಿದ ತಿರುಮಲಾದೇವಿಯರ ಪಟ್ಟಣ (ಇಂದಿನ ಹೊಸಪೇಟೆ)ವು ಆಕೆಯ ತವರು ಶ್ರೀರಂಗಪಟ್ಟಣಕ್ಕೆ ಹೋಗುವ ಮಾರ್ಗದಲ್ಲಿದೆ. ಅದೇ ರೀತಿ ಅಚ್ಯುತದೇವರಾಯನು ತನ್ನ ರಾಣಿ ವರದರಾಜಮ್ಮನ ಹೆಸರಿನಲ್ಲಿ ಆಕೆಯ ತವರು ಪಾಂಡ್ಯರಾಜ್ಯಕ್ಕೆ ಹೋಗುವ ಮಾರ್ಗದಲ್ಲಿ ಅಂದರೆ ಪೆನುಗೊಂಡೆ ಬಾಗಿಲ ಬಳಿ ವರದರಾಜಮ್ಮನ ಪಟ್ಟಣವನ್ನು ನಿರ್ಮಿಸಿರಬೇಕು.

ಕ್ರಿ.ಶ. 1535ರ ಶಾಸನವೊಂದು ವರದರಾಜಮ್ಮನ ಪಟ್ಟಣದ ಸೆಟ್ಟಿಪಟ್ಟಣ ಸ್ವಾಮಿಗಳನ್ನು ಪ್ರಸ್ತಾಪಿಸಿದೆ.[11] ನ್ಯೂನಿಜ್‌ನ ದಿನಚರಿಯು, ''ನರ್ವರ ಎಂದು ಕರೆಯಲ್ಪಡುವ ರತ್ನಗಳ ಭಂಡಾರಿಯು ಒಂದೆಗೆಮಾ ಎಂಬ ಹೊಸನಗರದ ದಳವಾಯಿ ಆಗಿರುವನು'' ಎಂದು ತಿಳಿಸುತ್ತದೆ.[12] ಮೊದಲನೆಯದಾಗಿ, ನ್ಯೂನಿಜ್ ಕ್ರಿ.ಶ. 1535-37ರ ಸುಮಾರಿನಲ್ಲಿ ವಿಜಯನಗರದಲ್ಲಿದ್ದನು. ಆಗ ಅಚ್ಯುತದೇವರಾಯನ ಆಳ್ವಿಕೆ. ದೊರೆ ತನ್ನ ಹೆಂಡತಿ ವರದರಾಜಮ್ಮನ ಹೆಸರಿನಲ್ಲಿ ಹೊಸ ಪಟ್ಟಣವನ್ನು ನಿರ್ಮಿಸುತ್ತಾನೆ. ಇದನ್ನೇ ನ್ಯೂನಿಜ್ ಒಂದೆಜೆಮಾ ಎಂದು ಕರೆದಿದ್ದಾನೆ (ಸಿವೆಲ್ ಅವರು ''ಒಂದೆಗೆಮಾ'' ಎಂದು ಓದಿದ್ದಾರೆ). ಎರಡನೆಯದಾಗಿ ರತ್ನಗಳ ಭಂಡಾರಿ ನರ್ವರನು ಒಂದೆಗೆಮಾ ಪಟ್ಟಣದ ದಳವಾಯಿ ಆಗಿರುವುದು ಮತ್ತು ಶಾಸನದಲ್ಲಿ ವರದರಾಜಮ್ಮನ ಪಟ್ಟಣದ ಸೆಟ್ಟಿಪಟ್ಟಣಸ್ವಾಮಿಗಳ

ಉಲ್ಲೇಖವಿರುವುದನ್ನು ಗಮನಿಸಿದರೆ ನರ್ವರನು ವರದರಾಜಮ್ಮನ ಸೆಟ್ಟಿಪಟ್ಟಣಸ್ವಾಮಿಯಾಗಿದ್ದನೆಂದು ಸ್ಪಷ್ಟವಾಗುತ್ತದೆ. ಮೂರನೆಯದಾಗಿ ಈ ಮೊದಲೇ ತಿಳಿಸಿದಂತೆ ಅರ್ದೆಗೆಮಾ ಅಥವಾ ಒಂದೆಗೆಮಾ ಎಂಬ ಪದಗಳನ್ನು ಅರ್ದೆಜೆಮಾ ಅಥವಾ ಒಂದೆಜೆಮಾ ಎಂದು ಓದಿಕೊಂಡಲ್ಲಿ ವರದರಾಜಮ್ಮ ಎಂಬ ಉಚ್ಚಾರಣೆಗೆ ಸಮೀಪವಾಗುತ್ತವೆ. ಈ ಮೇಲಿನ ವಿವರಗಳಿಂದ ಅರ್ದೆಜೆಮಾ ಅಥವಾ ಒಂದೆಜೆಮಾ ಪಟ್ಟಣವೇ ವರದರಾಜಮ್ಮನ ಪಟ್ಟಣವೆಂದು ಗುರುತಿಸಬಹುದು.

ಟಿಪ್ಪಣಿಗಳು

1. ಸಿವೆಲ್ ರಾಬರ್ಟ್, 1991, *ಎ ಫಾರ್‌ಗಾಟನ್ ಎಂಪಾಯರ್,* ಪು. 290.
2. *ಅದೇ,* ಪು. 387.
3. *ಅದೇ,* ಪು. 290.
4. ದೇಸಾಯಿ ಪಿ.ಬಿ. (ಸಂ.), 1981, *ಎ ಹಿಸ್ಟರಿ ಆಫ್ ಕರ್ನಾಟಕ,* ಧಾರವಾಡ, ಪು. 388.
5. ಸಿವೆಲ್, *ಪೂರ್ವೋಕ್ತ,* ಪು. 387.
6. *ಅದೇ,* ಪು. 387.
7. ದೇಸಾಯಿ, *ಪೂರ್ವೋಕ್ತ,* ಪು. 388.
8. *ಸೌಇಂಇ,* IX ii, ಸಂ. 595.
9. *ಅದೇ,* IV, ಸಂ. 245.
10. *ಆರಿಸೌಇಂಎ,* 1922, ಸಂ. 698.
11. *ಸೌಇಂಇ,* IX ii, ಸಂ. 573.
12. ಸಿವೆಲ್, *ಪೂರ್ವೋಕ್ತ,* ಪು. 387.

18. ಹಂಪೆಯ ಇನ್ನೊಂದು ಮಾಲ್ಯವಂತ

ದೇವರಕೊಂಡಾರೆಡ್ಡಿ

ಈಗಿನ ಹಂಪೆಯು ಬಾದಾಮಿ ಚಲುಕ್ಯರ ಕಾಲದಿಂದ ಪಂಪಾತೀರ್ಥವೆಂಬ ಹೆಸರಿನಿಂದ ಪ್ರಸಿದ್ಧವಾಗಿದ್ದು ಕ್ರಿ.ಶ. ಸು. 1018ರಿಂದ ಲಿಖಿತ ಶಾಸನಗಳು ದೊರೆಯಲಾರಂಭಿಸುತ್ತವೆ. ಅಲ್ಲಿಯವರೆಗೂ ಹೊರಗಿನ ಶಾಸನಗಳಲ್ಲಿ ಮಾತ್ರ ಉಲ್ಲೇಖಿತವಾಗುತ್ತಿದ್ದ ಹಂಪೆ ಮತ್ತದರ ಪರಿಸರ ಸಿಂದರ ಶಾಸನದಲ್ಲಿ ವಿವರಗಳ ಸಮೇತ ಉಲ್ಲೇಖವಾಗಿದೆ. ಅದರ ಪ್ರಕಾರ ಒಬ್ಬ ಅಧಿಕಾರಿ ಹಂಪೆಯಲ್ಲಿದ್ದು, ಮತಂಗ ಪರ್ವತದಿಂದ ಅದರ ರಕ್ಷಣೆಯ ಜವಾಬ್ದಾರಿಯನ್ನು ಮಾಡುತ್ತಿದ್ದ. ಅದರ ಬಳಿ ದೇವದೋಟ ಮತ್ತು ಅಡಿಕೆತೋಟವಿದ್ದ ಬಗ್ಗೆ ಉಲ್ಲೇಖವಿದೆ. ಉಳಿದಂತೆ ವಿವರಗಳು ಈ ಶಾಸನದಲ್ಲಿ ದೊರೆಯುವುದಿಲ್ಲ.


ಮಾಲ್ಯವಂತವೆಂದು ಕರೆಯುವ ಈ ಬೆಟ್ಟವನ್ನು ಮಾಲ್ಯವಂತ ರಘುನಾಥಬೆಟ್ಟವೆಂಬ ಹೆಸರಿನಿಂದಲೂ ಗುರುತಿಸುತ್ತಾರೆ. ಹೀಗೆ ಕರೆಯಲು ಕಾರಣ ರಘುನಾಥ ದೇವಾಲಯಗಳು ಹಂಪೆಯಲ್ಲಿ ಹಲವು ಇರುವುದೇ ಕಾರಣ. ಹಜಾರ ರಾಮಸ್ವಾಮಿ ದೇವಾಲಯ, ಕೋದಂಡರಾಮಸ್ವಾಮಿ ದೇವಾಲಯ, ಪಟ್ಟಾಭಿರಾಮ ದೇವಾಲಯಗಳಿಗಿಂತ ಇದು ಭಿನ್ನವೆಂಬುದನ್ನು ಸೂಚಿಸಲು ಹೀಗೆ ಕರೆಯಲಾಗಿದೆ. ಇವುಗಳಲ್ಲಿ ಹಜಾರ ರಾಮಸ್ವಾಮಿ ದೇವಾಲಯವು ವಿದ್ಯಾನಗರದಲ್ಲಿದೆ. ಕೋದಂಡರಾಮಸ್ವಾಮಿ ದೇವಾಲಯವು ವಿರೂಪಾಕ್ಷನ ತೇರು ಬೀದಿಯ ಅಂತ್ಯದ ಬಳಿ ತುಂಗಭದ್ರಾ ನದಿ ಬಳಿ ಇದೆ. ಪಟ್ಟಾಭಿರಾಮ ದೇವಾಲಯವನ್ನು ಶಾಸನಗಳು ರಘುನಾಥ ದೇವಾಲಯವೆಂದು ಕರೆದಿದ್ದು ಇದು ವರದಾದೇವಿ ಅಮ್ಮನವರ ಪೇಟೆಯಲ್ಲಿತ್ತೆಂದು ಹೇಳಲಾಗಿದೆ. ಇದು ಈಗ ಹಂಪಿಯ ವಿದ್ಯುತ್ ನಾಲೆಯ ಆಚೆ ಬದಿಗಿದೆ. ಉಳಿದದ್ದು ಮಾಲ್ಯವಂತ ಬೆಟ್ಟದಲ್ಲಿದೆ. ಇದನ್ನು ಮಾಲ್ಯವಂತ ರಘುನಾಥವೆಂದೇ ಇಂದಿಗೂ ಜನ ಗುರುತಿಸುತ್ತಾರೆ.

ಹೀಗಾಗಿ ಮಾಲ್ಯವಂತವೆಂಬುದು ಈಗಿನ ಮಾಲ್ಯವಂತ ರಘುನಾಥವೇ ಆಗಿದೆ. ಬೇರೆ ಮಾಲ್ಯವಂತವಿದೆಯೆಂಬುದೂ ನಮ್ಮ ಕಲ್ಪನೆಗೆ ಬರುವುದಿಲ್ಲ. ಇದುವರೆಗೆ ಸಂಶೋಧಕರು ಮಾಲ್ಯವಂತ ರಘುನಾಥವನ್ನೇ ಕೇಂದ್ರವಾಗಿಟ್ಟು ಅದಕ್ಕೆ ಸಂಬಂಧಿಸಿದ ವಿವರಗಳನ್ನು ಹುಡುಕುತ್ತಿದ್ದರು. ಈ ಮಾಲ್ಯವಂತದಲ್ಲಿ ವೈಷ್ಣವ ಕುರುಹುಗಳಿದ್ದಂತೆ ಶೈವ ಕುರುಹುಗಳೂ ಇವೆ. ಹೀಗಾಗಿ ಯಾವುದೇ ಅನುಮಾನಕ್ಕೆಡೆಯಾಗದಂತೆ ಈ ಮಾಲ್ಯವಂತವೊಂದೇ, ಇನ್ನೊಂದು ಇಲ್ಲವೆಂದೇ ತೀರ್ಮಾನಿಸಿದ್ದರು.

ಈ ದಿಸೆಯಲ್ಲಿ ನಡೆಸಿದ ಶೋಧಗಳಲ್ಲಿ ಎಂ.ವಿ. ವಿಶ್ವೇಶ್ವರ ಅವರ ಶೋಧನೆ ಮುಖ್ಯವಾದುದು. ಲಕ್ಷ್ಮೀಧರನ ಶಾಸನದ ಆಧಾರದ ಮೇಲೆ ಅವರು ಮಾಲ್ಯವಂತದ ದಕ್ಷಿಣ ದಿಕ್ಕಿನ ಗುಹೆಯಲ್ಲಿ ಹುಡುಕಿ ಅದರಲ್ಲಿ ಲಕ್ಷ್ಮೀಧರನು ಪ್ರತಿಷ್ಠಾಪಿಸಿದ ಗಣಪತಿ ವಿಗ್ರಹದ ಬಗ್ಗೆ ಹುಡುಕುತ್ತಿದ್ದರು. ಇದರಿಂದ ಅವರಿಗೆ ಬೇರೆ ಬೇರೆ ಸ್ಥಳಗಳಲ್ಲಿದ್ದ ವಿವಿಧ ರೀತಿಯ ಗಣಪತಿ ವಿಗ್ರಹಗಳು ದೊರೆತವು. ಅವರ ಪ್ರಕಾರ ಈಗ ಹಂಪೆಯಲ್ಲಿರುವ ಲಕ್ಷ್ಮೀಧರನ ಶಾಸನವು ಮಾಲ್ಯವಂತದಿಂದ ಕೃಷ್ಣಾಪುರಪೇಟೆಗೆ ಬಂದು ಅಲ್ಲಿಂದ ಈಗಿನ ಸ್ಥಳಕ್ಕೆ ಬಂದಿದೆಯೆಂದು ಊಹಿಸುತ್ತಾರೆ. ಕೃಷ್ಣಾಪುರಪೇಟೆಯಿಂದ ಹಂಪೆಯ ಗಣಪತಿ ದೇವಾಲಯದ ಬಳಿಗೆ ಬಂದ ಬಗ್ಗೆ ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್ ಸಂಪುಟದಲ್ಲಿ ಸ್ಪಷ್ಟವಾದ ಮಾಹಿತಿ ಇದೆ. ಆದರೆ ಮಾಲ್ಯವಂತ ರಘುನಾಥದಿಂದ ಕೃಷ್ಣಾಪುರ ಪೇಟೆಗೆ ಬಂದ ಬಗ್ಗೆ ಯಾವುದೇ ಉಲ್ಲೇಖಗಳು ದೊರೆಯುವುದಿಲ್ಲ. ಹೀಗಾಗಿ ಇದು ಮೂಲತಃ ಮಾಲ್ಯವಂತದಲ್ಲಿ ಎಲ್ಲಿತ್ತು ಎಂಬುದು ಖಚಿತವಾಗಿ ತಿಳಿಯುವುದಿಲ್ಲ.

ಈ ಮಾಲ್ಯವಂತ ರಘುನಾಥವು ಕ್ರಿ.ಶ. 1559ರಲ್ಲಿಯೇ ಪ್ರಸಿದ್ಧವಾಗಿತ್ತು. ಈ ಬಗ್ಗೆ ಸದಾಶಿವರಾಯನ ಕಾಲದ ಶಾಸನದಲ್ಲಿ ಮಾಲ್ಯವಂತ ರಘುನಾಥದೇವರ ಅಮೃತಪಡಿಗೆ ಛತ್ರದಹಳ್ಳಿಯ ಪ್ರಜೆಗಳು ದಾನ ನೀಡುತ್ತಾರೆ.[1]

ಈ ಮಾಲ್ಯವಂತದ ಬಗ್ಗೆ ತಿಳಿಯುವ ಮೊದಲು ಮಾಲ್ಯವಂತವೆಂದರೇನೆಂದು ಯೋಚಿಸೋಣ. ಶಿವತತ್ವ ರತ್ನಾಕರದಲ್ಲಿ 'ಮಾಲ್ಯವತ್ ಪರ್ವತದ ಮೇಲೆ ಯಾವಾಗಲೂ ಸಂವರ್ತಕವೆಂಬ ಪ್ರಳಯಕಾಲದಲ್ಲಿ ಅಗ್ನಿಯು ಜ್ವಲಿಸುತ್ತದೆ. ಆ ಪರ್ವತದ



1. ಕೃಷ್ಣಾಪುರ ಪೇಟೆಯ ಉತ್ತರಕ್ಕಿರುವ ಮಾಲ್ಯವಂತ ಪರ್ವತ. ವೃತ್ತದಲ್ಲಿ ಕಾಣಿಸಿರುವುದು ಲಕ್ಷ್ಮೀಧರನು ತಿಳಿಸಿರುವ 'ಮಹಾಗಹ್ವರ' ಇರುವ ಸ್ಥಳ. ದೂರಕ್ಕೆ ಕಾಣುತ್ತಿರುವ ಬೆಟ್ಟವೇ ಮತಂಗ ಪರ್ವತ



2. ಮಾಲ್ಯವಂತದ ದಕ್ಷಿಣಕ್ಕಿರುವ 'ಮಹಾಗುಹೆ'ಯ ಹೊರಭಾಗ

ಪೂರ್ವಭಾಗದಲ್ಲಿ ಆನೆಯ ಕುಂಭಸ್ಥಳವಿದ್ದಂತೆ ಉಬ್ಬಿರುವ ವಿಶಾಲವಾದ ವಿಭಾಗವಿದೆ. ಆ ಪರ್ವತವು ಹದಿನೈದು ಸಾವಿರ ಯೋಜನೆ ವಿಸ್ತಾರವಾಗಿದೆ. ಅಲ್ಲಿರುವ ಜನರೆಲ್ಲರೂ ಬ್ರಹ್ಮಲೋಕದಿಂದ ಹೊರಗೆ ಬಂದವರಂತೆ ಇರುತ್ತಾರೆ ಮತ್ತು ಅವರು ಶುದ್ಧವಾದ ಬೆಳ್ಳಿಯಂತಿರುತ್ತಾರೆ.[2] ಇದು ಪುರಾಣ ಪ್ರಸಿದ್ಧವಾದ ಮಾಲ್ಯವಂತವಾದರೆ ಪಂಪಾಮಹಾತ್ಮೆಯಲ್ಲಿ ಇನ್ನೊಂದು ಚಿತ್ರವನ್ನು ನೀಡುತ್ತಾರೆ. ಅದರ ಪ್ರಕಾರ 'ಈ ಕ್ಷೇತ್ರದಲ್ಲಿ ಶುಭವಾದ ಪುಣ್ಯತಮವಾದ ಗಿರಿಗಳು ಪ್ರಕಾಶಿಸುತ್ತವೆ. ಅವುಗಳಲ್ಲಿ ಮತಂಗಗಿರಿ, ಮಾಲ್ಯವಂತಗಿರಿ, ಋಷ್ಯಮೂಕ, ಕಿಷ್ಕಿಂದಾದ್ರಿ, ಹೇಮಕೂಟ, ವಿಪ್ರಕೂಟ, ಗಂಧರ್ವಗಿರಿ, ಜಂಬೂನಾಥಗಿರಿ, ಮಾಣಿಭದ್ರೇಶ್ವರ ಪರ್ವತ, ಸೋಮವರ್ಪತ ಮುಂತಾದವು ಪುಣ್ಯ ಗಿರಿಗಳೆನಿಸಿವೆ.[3]

ಅದೇ ಪಂಪಾಮಹಾತ್ಮೆ ಗ್ರಂಥದಲ್ಲಿ ಮುಂದುವರಿದು ಮಾಲ್ಯವಂತವೆಂಬ ಹೆಸರು ಬರಲು ಕಾರಣವಾದ ಕಥೆಯನನ್ನು ಹೇಳಿದೆ. ಕೇರಳದಲ್ಲಿ ಮಾಲ್ಯವಂತನೆಂಬ ಹೂಗಾರನಿದ್ದ. ಈತನ ಕೆಲಸ ರಾಜನಿಗೆ ಪೂಜೆಗಾಗಿ ಹೂಮಾಲೆಗಳನ್ನು ನೀಡುವುದು. ಒಂದು ದಿನ ಹೂಮಾಲೆಯಲ್ಲಿ ಸ್ತ್ರೀಯ ಕೂದಲು ದೊರೆತಿದ್ದುದರಿಂದ ರಾಜನು ಸಿಟ್ಟಾಗಿ ಮಾಲ್ಯವಂತನನ್ನು ತನ್ನ ದೇಶದಿಂದ ಹೊರಹಾಕುತ್ತಾನೆ. ಮಾಲ್ಯವಂತನು ದೇಶ ಸಂಚಾರ ಮಾಡುತ್ತಾ ಪಂಪಾಕ್ಷೇತ್ರಕ್ಕೆ ಬರುತ್ತಾನೆ. ಅವನು ಈ ಗಿರಿಯಲ್ಲಿ ವಾಸಮಾಡುತ್ತಾ ಹೂಮಾಲೆಗಳನ್ನು ಮಾಡಿ ಅಲ್ಲಿನ ಋಷಿಗಳಿಗೆ ಅರ್ಪಿಸುತ್ತಿದ್ದನು. ಇದರಿಂದ ಸಂತುಷ್ಟರಾದ ಮುನಿಗಳು ಇವನಿಗೆ ಶಿವ ಪಂಚಾಕ್ಷರಿ ಮಂತ್ರೋಪದೇಶ ಮಾಡಿದರು. ಮಾಲ್ಯವಂತನು ಈ ಮಂತ್ರವನ್ನುಚ್ಚರಿಸುತ್ತಾ ಬಹು ಕಠಿಣ ತಪಸ್ಸನ್ನು ಮಾಡುತ್ತಾನೆ.

ತಪಸ್ಸಿಗೆ ಮೆಚ್ಚಿದ ವಿರೂಪಾಕ್ಷನು ಇವನ ಮುಂದೆ ಪ್ರತ್ಯಕ್ಷನಾಗುತ್ತಾನೆ. ವರವನ್ನು ಬೇಡೆಂದು ಹೇಳಲು ಈತನು 'ನಿನ್ನ ಭಕ್ತಿ ನನ್ನಲ್ಲಿ ನೆಲಸಲಿ. ಈ ಶಿಲಾತಲವೇ ನನಗೆ ಮಂಚವಾಗಲಿ. ಅರಣ್ಯವೇ ಮಹಾಮನೆಯಾಗಲಿ. ಹಣ್ಣು ಹಂಪಲುಗಳೇ ಉತ್ತಮವಾದ ಉಣ್ಣುವ ಮೃಷ್ಟಾನ್ನವಾಗಲಿ. ಇಲ್ಲಿರುವ ಜಲವೇ ಅಮೃತವಾಗಲಿ' ಯೆಂದು ಬೇಡುತ್ತಾನೆ. ಅದರಂತೆ ಶಿವನು 'ಈ ಗಿರಿಯು ಇಂದಿನಿಂದ ನಿನ್ನ ಹೆಸರಿನಿಂದ ಲೋಕದಲ್ಲಿ ಪ್ರಸಿದ್ಧವಾಗಲಿ' ಎಂದು ವರ ನೀಡುತ್ತಾನೆ. ಅಂದಿನಿಂದ ಇವನ ಹೆಸರಾದ 'ಮಾಲ್ಯವಂತ' ಎಂಬ ಹೆಸರಿನಿಂದ ಈ ಬೆಟ್ಟ ಪ್ರಸಿದ್ಧವಾಯಿತು.

ಇದಾದ ಮೇಲೆ ಈ ಕಥೆಯಲ್ಲಿ ರಾಮಾಯಣದ ಘಟನೆಗೆ ಸಂಬಂಧಿಸಿದಂತೆ ಸನ್ನಿವೇಶವನ್ನು ತಂದಿದ್ದಾನೆ. ಅದೆಂದರೆ ರಾಮನು ವನವಾಸಕ್ಕೆ ಬಂದಾಗ ಸೀತೆಯನ್ನು ಕಳೆದುಕೊಂಡು ಇಲ್ಲಿಗೆ ಬಂದು ವಾಲಿಯನ್ನು ವಧಿಸಿ ಸುಗ್ರೀವನಿಗೆ ಪಟ್ಟಾಭಿಷೇಕ ಮಾಡಿದ ಮೇಲೆ ರಾಮನಿಗೆ ವೈರಾಗ್ಯ ಪ್ರಾಪ್ತಿಯಾಗಿ ಲಕ್ಷ್ಮಣನನ್ನು ಅಯೋಧ್ಯೆಗೆ ಹೋಗಿ ರಾಜ್ಯಭಾರ ಮಾಡಿಕೊಂಡಿರುವಂತೆ ತಿಳಿಸಿ, ಸೀತೆಯ ದುಃಖವನ್ನು ಸಹಿಸಲಾರೆನೆಂದು ಗುಹೆಯೊಂದರಲ್ಲಿ ಪ್ರವೇಶಿಸಿ ಪ್ರಾಣ ಬಿಡುವುದಾಗಿ ತಿಳಿಸಿ ಗುಹಾಪ್ರವೇಶ ಮಾಡುತ್ತಾನೆ. ಇದನ್ನು ತಡೆಯಲು ವಿಫಲನಾದ ಲಕ್ಷ್ಮಣ ಚಿಂತಾಕ್ರಾಂತನಾಗಿದ್ದಾಗ ಮಾಲ್ಯವಂತ ಮುನಿ ಕಾಣಿಸಿಕೊಂಡು ಲಕ್ಷ್ಮಣನ ಚಿಂತೆಗೆ ಕಾರಣವನ್ನು ಕೇಳುತ್ತಾನೆ. ಆಗ ಮಾಲ್ಯವಂತನು ಲಕ್ಷ್ಮಣನಿಗೆ ಬಂದಿರುವ ವಿಪತ್ತು ಕಳೆದುಕೊಳ್ಳಲು ವಿರೂಪಾಕ್ಷನನ್ನು ಧ್ಯಾನಿಸುವಂತೆ ಹೇಳುತ್ತಾನೆ. ಮುಂದೆ ರಾಮನ ಬಳಿಗೆ ಬಂದು ಅವನಿಗೆ ಸಮಾಧಾನವನ್ನು ಹೇಳುತ್ತಾನೆ. ಆತನಿಗೂ 'ವಿರೂಪಾಕ್ಷ' ಎಂಬ ಧ್ಯಾನಮಂತ್ರವನ್ನು ಹೇಳಿ ಆತನನ್ನು ಧ್ಯಾನಿಸುವಂತೆ ಹೇಳುತ್ತಾನೆ. ಮುಂದೆ ವಿರೂಪಾಕ್ಷನು ಪ್ರತ್ಯಕ್ಷನಾಗಿ ರಾಮ ಮತ್ತು ಲಕ್ಷ್ಮಣರಿಗೆ ಸಮಾಧಾನ ಹೇಳಿದುದಾಗಿ ಹೇಳಿದ್ದಾನೆ.[4]

ಪಂಪಾಮಹಾತ್ಮೆಯ ಕಾಲಕ್ಕೆ ಮಾಲ್ಯವಂತವೆಂದರೆ ಈಗಿನ ರಘುನಾಥ ಮಾಲ್ಯವಂತವೇ ಆಗಿದೆ. ಮಾಲ್ಯವಂತದ ವಿವರವಿರುವ ಈ ಭಾಗವು, ಬಹುಶಃ 16ನೆಯ ಶತಮಾನದ ಕಾಲದಲ್ಲಿ ಸೇರ್ಪಡೆಯಾಗಿರಬಹುದು. ಹೀಗಾಗಿ ಈಗಿನ ಮಾಲ್ಯವಂತದಲ್ಲಿರುವ ತೀರ್ಥಗಳನ್ನು, ದೇವಾಲಯಗಳನ್ನು ಈ ಕಥೆಗೆ ಪೂರಕವಾಗಿ ಬಳಸಿರುತ್ತಾರೆ.

ಕನ್ನಡ ಕಾವ್ಯಗಳು, ಹರಿಹರ ಮುಂತಾದವರು ಹೇಳಿರುವ ಹಂಪೆಯ ಗಡಿಗಳನ್ನು ಎತ್ತಿ ಹಿಡಿದಿದ್ದಾರೆ. ಇನ್ನೂ ಕೆಲವನ್ನು ಸೇರಿಸಿರುವುದೂ ಉಂಟು. ಆದರೆ ಬೆಟ್ಟಗಳ ಗಡಿಗಳನ್ನು ಹೇಳಿರುವುದು ಕಡಿಮೆ. ಅಪರೂಪಕ್ಕೆ ಕೆಲವು ಕಾವ್ಯಗಳಲ್ಲಿ ಬೆಟ್ಟಗಳ ಬಗ್ಗೆ ಹೇಳಿದೆ. 'ಶಿವತತ್ವ ಚಿಂತಾಮಣಿ, ಕರಸ್ಥಲ ನಾಗಲಿಂಗನ ಚರಿತ್ರೆ, ಹರಿಶ್ಚಂದ್ರ ಕಾವ್ಯ, ಪಂಪಾಸ್ಥಾನ ವರ್ಣನಂ ಮುಂತಾದ ಕೃತಿಗಳು ಈ ಬಗ್ಗೆ ಹೆಚ್ಚಿನ ಬೆಳಕು ಚೆಲ್ಲುತ್ತವೆ.

ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ದಲ್ಲಿ ಹೇಮಕೂಟದ ಹಿರಿಮೆಯನ್ನು ಹೇಳುವಾಗ

ಪುದಿದ ಭಕ್ತಿ ಜ್ಞಾನ ವೈರಾಗ್ಯ ಮುತ್ತಮಾಂ
ಗದ ಮಕುಟದಗ್ರದೊಳು ಹೊಳೆವ ಮಣಿಗಣದಂತೆ
ತುದಿ ತೋಱುತಿದೆ ನಿಂದು ನಿಲುಕಿ ನಿಟ್ಟಿಸಿ ನೋಡು ನೋಡು ಕಟ್ಟದಿರೊಳಿಪ್ಪ॥
ಅದು ಹೇಮಕೂಟ ಮತ್ತದು ಮತಂಗಾದ್ರಿ ಹೋ
ಗದು ಮಾಲ್ಯವಂತ ವಿಂತವಱ ಮಹಿಮೆಗಳಾನಾ
ಮದನ ಹರನೇ ಬಲ್ಲನೆಂದು ತೋರಿದನು ಭೂನಾತಂಗೆ ಮುನಿನಾಥನು ॥ 5:62

ಇಲ್ಲಿ ಹೇಮಕೂಟ, ಮತಂಗ ಮತ್ತು ಮಾಲ್ಯವಂತ ಪರ್ವತಗಳನ್ನು ಹೆಸರಿಸಿ ಅವುಗಳ ಮಹಿಮೆ ಇಷ್ಟೆಂದು ಹೇಳಲು ಸಾಧ್ಯವಿಲ್ಲವೆಂದಿದ್ದಾನೆ. ರಾಘವಾಂಕನ ಕಾಲಕ್ಕಾಗಲೇ ಈ ಮಾಲ್ಯವಂತವು ಮತಂಗ, ಹೇಮಕೂಟದಷ್ಟು ಪ್ರಸಿದ್ಧವಾಗಿತ್ತು. ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿಯಲ್ಲಿಯೂ ಈ ಮತಂಗ ಪರ್ವತದ ಉಲ್ಲೇಖ ಬರುತ್ತದೆ.

ಅಲ್ಲಿರ್ಪುದೊಲುಮೆಯಿಂ ಮಾಲ್ಯವಂತಾಚಲಂ ।
ಸಲ್ಲಲಿತ ಋಣವಿಮೋಚನ ತೀರ್ಥಮವಿರತಂ ।
ಪ್ರೋಲ್ಲಸಿತ ಯಕ್ಷತೀರ್ಥಂ ಗದಾತೀರ್ಥವುಂ ಧನುತೀರ್ಥವೆಂದೆನಿಪವು ॥

ಎಲ್ಲಮಹಿಮೆಯ ಶಂಖತೀರ್ಥಂಮುಕ್ತಿ
ಪಲ್ಲವಿಪ ಪದ್ಮದಳತೀರ್ಥಂಗಳಂ ಕೂಡಿ
ಸಲ್ಲೀಲೆಯಿಂದಿರ್ಪ ಪಂಪಾಪತಿಯ ವಿಮಲ ಚರಣಾಂಬುಜಕ್ಕೆ ಶರಣು ॥ [5]

ಈ ಬೆಟ್ಟದಲ್ಲಿದ್ದ ಅನೇಕ ಭಕ್ತರ ಬಗ್ಗೆಯೂ ಈ ಗ್ರಂಥದಲ್ಲಿ ಉಕ್ತವಾಗಿದೆ.

ಸಂಸ್ಕೃತಿಯ ಬಾಧೆಯೊಳು ತೊಳಲ್ವ ಜೀವರ ಸಂಗ
ದಿಂ ಸಕಲ ಮೋಹಜಾಲಂ ಕವಿಗುಮೆಂದು ನಿ
ಸ್ಸಂಶಯಾತ್ಮಕರಾಗಿ ಸರ್ವೇಂದ್ರಿಯದ ಭೋಗದೊಳ್ ವಿರಾಗಿಗಳಾಗುತ ।
ಹಂಸನ ಗತಿಯನಱಿವುತೂರ್ಧ್ವಮುಖದೊಳು ಚರಿಸು
ತಂ ಸಹಜದಿಂದಿರ್ಪ ಮಾಲ್ಯವಂತಾಚಲೋ
ತ್ತಂ ಸ ಸಿಂಹಾಸನದ ಚರಲಿಂಗ ಮೂರ್ತಿಗಳ ಚರಣಾಂಬುಜಕ್ಕೆ ಶರಣು ॥ [6]

ಈ ಬೆಟ್ಟದ ವರ್ಣನೆಯಾದ ಮೇಲೆ ಮತಂಗ ಪರ್ವತದ ವರ್ಣನೆ ಬರುತ್ತದೆ. ಪಂಪಾಸ್ಥಾನ ವರ್ಣನಂ ಎಂಬ ಕೃತಿಯಲ್ಲಿಯೂ ಇತರ ಪರ್ವತಗಳ ಜೊತೆಗೆ ಮಾಲ್ಯವಂತದ ಉಲ್ಲೇಖ ಬರುತ್ತದೆ.

ಸುರನಗದಿಂದೆ ಪುಟ್ಟಿ ಪೆಸರ್ವೆತ್ತ ನೆಗಳ್ತೆಯ ಋಷ್ಯಮೂಕ ಮೆಂ
ಬುರುತರ ಶೈಲದೊಳ್ ನೆಲಸಿದರ್ಥದ ಧರ್ಮದ ಮೋಕ್ಷದೇಳ್ಗೆಯಂ
ತಿರೆ ವರ ಮಾಲ್ಯವದ್ಗಿರಿ ಮಾತಂಗ ಮಹೀಧರ ಹೇಮಕೂಟ ಭೂ
ಧರಮೆನೆ ಪೆರ್ಮೆವೆತ್ತ ಶ್ರೀತ್ರಯ ಮಿರ್ಪುದು ವಿಶ್ವ ವಿಶ್ರುತಂ ॥ 26॥

ಇನ್ನೊಂದು ಪದ್ಯದಲ್ಲಿ

ಋಣ ಮೋಚನ ಯಕ್ಷ ಮುಖಾ
ಗಣಿತ ಮಹಾತೀರ್ಥದಿಂ ಮತಂಗಾದ್ರಿಯ ಪಡು
ವಣ ಮಾಲ್ಯವನ್ನ ಹೀಧರ
ವೆಣಿಸುವಡರಿದೆಂಬ ಮಹಿಮೆಯಂ ತಳೆದಿರ್ಕುಂ ॥ 28॥

ಈ ಪದ್ಯಗಳಲ್ಲಿ ಹಂಪೆಯ ಬೆಟ್ಟಗಳನ್ನು ಹೆಸರಿಸಿರುವುದಲ್ಲದೆ ಅವುಗಳಿದ್ದ ದಿಕ್ಕಿನ ಬಗ್ಗೆಯೂ ಸೂಚನೆ ನೀಡಿದೆ. ಅದೆಂದರೆ ಮಾಲ್ಯವಂತವು ಮತಂಗದ ಪಡುವಣಕ್ಕಿದೆಯೆಂಬುದು. ಈ ಕಾವ್ಯದ ಪ್ರಕಾರ ಮಾಲ್ಯವಂತವು ಹೇಮಕೂಟದ ಪೂರ್ವಕ್ಕೆ ಮತ್ತು ಮತಂಗದ ಪಶ್ಚಿಮಕ್ಕೆ ಇರುವುದೆಂದು ಸ್ಪಷ್ಟವಾಗಿ ಸೂಚನೆ ನೀಡುತ್ತದೆ.

ಕರಸ್ಥಲ ನಾಗಲಿಂಗನ ಚರಿತ್ರೆ ಗ್ರಂಥದಲ್ಲಿ ಪಂಪಾಕ್ಷೇತ್ರದಲ್ಲಿಯ ಐದು ಪರ್ವತಗಳು ಪುಣ್ಯಸ್ಥಳಗಳೆಂದು ಹೇಳಿ ಅವುಗಳಲ್ಲಿ

ಋಷಿಶೃಂಗ ಮಾತಂಗ ಎಸೆವ ಮಾಲ್ಯವಂತ ।
ಪಸರಿಸಿ ಮೆಜೆವ ಕಿಷ್ಕಿಂಧ ।
ವಸುಧೆಗೆ ಹೇಮಾದ್ರಿ ಹಸವಂಚಕ್ಷೇತ್ರವು
ಉಸುರಲಳವೆ ಪುಣ್ಯಸ್ಥಳವ ॥ 1:35 ॥

ಋಷಿಶೃಂಗ, ಮಾತಂಗ, ಮಾಲ್ಯವಂತ, ಕಿಷ್ಕಿಂಧ ಮತ್ತು ಹೇಮಾದ್ರಿ ಈ ಐದು ಬೆಟ್ಟಗಳು ಪುಣ್ಯ ಬೆಟ್ಟಗಳೆಂದು ಹೇಳಿದ್ದಾರೆ.

ಒಟ್ಟಿನಲ್ಲಿ ಈ ಕಾವ್ಯಗಳ ಪ್ರಕಾರ ಮಾಲ್ಯವಂತವು ಪಂಪಾತೀರ್ಥದ ಪರಿಸರದಲ್ಲಿಯೇ ಇದೆ. ಅದು ಮತಂಗ ಪರ್ವತದ ಪಡುವಣಕ್ಕಿಗೆ. ಅದು ಇಲ್ಲಿನ ಪ್ರಸಿದ್ಧ ಬೆಟ್ಟಗಳಲ್ಲಿ ಒಂದಾಗಿತ್ತು.

ಹಂಪೆಯ ಪರಿಸರದಲ್ಲಿದ್ದ, ಇದ್ದಿರಬಹುದಾದ ಅನೇಕ ಪ್ರಾಚೀನ ಶಾಸನಗಳು ವಿಜಯನಗರ ಕಾಲದ ಬೃಹತ್ ನಿರ್ಮಾಣದ ಕಾರ್ಯದಲ್ಲಿ ನಾಶವಾಗಿರಬೇಕು. ಜೊತೆಗೆ ವಿಜಯನಗರದ ರಾಜಬೀದಿ ಮತ್ತು ದೇವಾಲಯದ ಬೀದಿಗಳನ್ನು ಬಿಟ್ಟರೆ ಉಳಿದೆಡೆಗಳಲ್ಲಿ ಎಲ್ಲೆಂದರಲ್ಲಿ ವಾಸಕ್ಕೆ ಬಿಡಾರ ಮಾಡಿಕೊಂಡಿದ್ದ ಜನಗಳಿಂದಲೂ ನಾಶ ಹೊಂದಿರಬಹುದು. ಆದರೂ ಅಲ್ಲಿನ ಶಾಸನಗಳನ್ನು ಗಮನಿಸಿದಾಗ ಮಾಲ್ಯವಂತದ ಬಗ್ಗೆ ಸಿಗುವ ಮಾಹಿತಿ ಅತ್ಯಲ್ಪ. ಲಕ್ಷ್ಮೀಧರನ ಶಾಸನವೇ ಪ್ರಮುಖವಾದದ್ದು.[7] ಆ ಶಾಸನದಲ್ಲಿ ಲಕ್ಷ್ಮೀಧರನು ಪ್ರತಿಷ್ಠಾಪಿಸಿದ ಮಹಾಗಣಪತಿಯ ಗುಹೆಯು '..... ಪಂಪಾಕ್ಷೇತಂ ಸೊಗಯಿಪುದದಱ ಪೂರ್ವ್ವದಿಗ್ಭಾಗದೆ ಮಾಲ್ಯವತ್ಪರ್ವ್ವತದ ತೆಂಕವಕ್ಕದೊಳೊಂದು ಮಹಾಗುಹೆಯುಂಟು....' ಇದರ ಪ್ರಕಾರ ಪಂಪಾಕ್ಷೇತ್ರದ ಪೂರ್ವಕ್ಕೆ ಮಾಲ್ಯವತ್ಪರ್ವತವಿದ್ದು ಅದರ ದಕ್ಷಿಣ ದಿಕ್ಕಿನಲ್ಲಿ ಒಂದು ಮಹಾ ಗುಹೆಯಿತ್ತು, ಇದರಲ್ಲಿ ಆತ ಮಹಾಗಣಪತಿಯನ್ನು ಪ್ರತಿಷ್ಠಾಪಿಸುತ್ತಾನೆ. ಮುಂದಿನ ವರ್ಷಗಳಲ್ಲಿ ಈ ಗಣಪತಿಯ ಬಗ್ಗೆ ಯಾವುದೇ ಉಲ್ಲೇಖಗಳು ನಮಗೆ ದೊರೆಯುವುದಿಲ್ಲ. ಹೀಗಾಗಿ ಈ ಗುಹೆಯಲ್ಲಿದ್ದ ಮಹಾಗಣಪತಿಗೆ ನಡೆಯುತ್ತಿದ್ದ ಪೂಜೆಯ ಬಗ್ಗೆಯೂ ನಮಗೆ ಹೆಚ್ಚಿನ ಮಾಹಿತಿ ಲಭ್ಯವಿಲ್ಲ.

ಇತ್ತೀಚೆಗೆ ಹಂಪೆಯಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಈಗ ಶ್ವೇತಾಂಬರ ಜೈನರು ಅತಿಕ್ರಮಿಸಿರುವ ಸ್ಥಳದ ಕಟ್ಟಡಗಳ ಬಳಿ ಇರುವ 'ಮಲಗು ಬಸವಣ್ಣ' ದೇವಾಲಯದ ಬಳಿ ಇದ್ದ ಶಾಸನಗಳ ಕಡೆಗೆ ಹೊಸಪೇಟೆಯ ಇಟಗಿ ಈರಣ್ಣನವರು ನನ್ನ ಗಮನ ಸೆಳೆದರು. ಅಲ್ಲಿ ಮೂರು ಶಾಸನಗಳಿದ್ದು ಅವುಗಳ ಪಾಠ ಹೀಗಿದೆ.

1 ನೆಯ ಶಾಸನ

'ಶ್ರೀಮಾಲ್ಯ'

2 ನೆಯ ಶಾಸನ

'ಶ್ರೀ ಮಾಲ್ಯವಂತ'

3 ನೆಯ ಶಾಸನ

'ಶ್ರೀ ಮಾಲ್ಯವಂತದ ಮೈಲಾರದೇವರು'

ಈ ಮೂರು ಶಾಸನಗಳು ಸ್ಪಷ್ಟವಾಗಿ 'ಮಾಲ್ಯವಂತ'ವನ್ನು ಹೆಸರಿಸುತ್ತವೆಯೆಂಬುದು ಸ್ಪಷ್ಟ. ಹಾಗಾದರೆ ಈ ಮಾಲ್ಯವಂತ ಯಾವುದು? ಮೈಲಾರದೇವರು ಎಲ್ಲಿತ್ತು ಎಂಬ ಬಗ್ಗೆ ಶೋಧ ಕೈಗೊಂಡಾಗ ಮಾಲ್ಯವಂತ ರಘುನಾಥದಲ್ಲಿ ಶಿವಪರವಾದ ಕೆಲವು ಕುರುಹುಗಳಿದ್ದರೂ ಮೈಲಾರ ದೇವಾಲಯ ಅಲ್ಲಿ ಕಾಣಲಿಲ್ಲ. ಹೀಗಾಗಿ ಮಾಲ್ಯವಂತ ರಘುನಾಥದಲ್ಲಿ ಶಾಸನಗಳಲ್ಲಿ ಹೇಳಿರುವಂತೆ ಕುರುಹು ಕಾಣಲಿಲ್ಲ.

ಹಾಗಾದರೆ ಈ ಮಾಲ್ಯವಂತ ಬೇರೆಯೇ ಎಂಬ ಪ್ರಶ್ನೆ ಮುಂದಿಟ್ಟುಕೊಂಡು ಶೋಧವನ್ನು ಮುಂದುವರಿಸಿದಾಗ ವಿಜಯನಗರದ ಕೋಟೆ ಕಟ್ಟುವಾಗ ಆ ಪಟ್ಟಣದ ಸಮೀಪದಲ್ಲಿದ್ದ ಕೆಲವು ದೇವರುಗಳ ಹೆಸರಿನಲ್ಲಿ ಕೊತ್ತಳಗಳನ್ನು ಕಟ್ಟಿರುವುದು ಗಮನಕ್ಕೆ ಬಂತು. ಅದರಲ್ಲಿ ಈಗಿನ ತುರ್ತಕಾಲುವೆಯ ಬಲಗಡೆಗೆ ಇರುವ ಕೊತ್ತಳಕ್ಕೆ 'ಮಳಲ ವಿನಾಯಕ ಕೊತ್ತಳ' ಎಂಬ ಹೆಸರಿದೆ. ಈ ಸೂಚನೆಯನ್ನು ಅನುಸರಿಸಿ ಯೋಚಿಸಿದಾಗ ಲಕ್ಷ್ಮೀಧರನ ಶಾಸನವು ಮಾಲ್ಯವಂತದಿಂದ ಕೃಷ್ಣಾಪುರ ಪೇಟೆಗೆ ಬಂದ ಸಂಗತಿಗೆ ಆಧಾರವಿಲ್ಲವೆಂದು ತಿಳಿಯಿತು. ಆ ಶಾಸನ ಮೂಲತಃ ಕೃಷ್ಣಾಪುರ ಪೇಟೆಯಲ್ಲಿಯೇ (ಕೃಷ್ಣದೇವಾಲಯದ ಎದುರಿಗೆ) ಇತ್ತೆಂಬುದು ಸ್ಪಷ್ಟ. ಅದು ಮಾಲ್ಯವಂತ ರಘುನಾಥದಲ್ಲಿರದೆ ಕೃಷ್ಣಾಪುರ ಪೇಟೆಯಲ್ಲಿರಲು ಕಾರಣ ಕಾವ್ಯಗಳು ನೀಡುವ ಆಧಾರ ಸರಿಯಾಗಿದೆ. ಶಾಸನ ಮತ್ತು ಕಾವ್ಯಗಳಲ್ಲಿ ಮಾಲ್ಯವಂತವೆಂದು ಕರೆಯುತ್ತಿದ್ದುದು ಜೈನರು ಈಗ ಅತಿಕ್ರಮಿಸಿರುವ ಸ್ಥಳವೇ ಆಗಿದೆ. ಇದನ್ನು ಅನುಕೂಲ ದೃಷ್ಟಿಯಿಂದ ಶೈವ ಮಾಲ್ಯವಂತವೆಂದು ಕರೆಯುವುದೇ ಸರಿ. ಈ ಶೈವ ಮಾಲ್ಯವಂತವು ಚಂದ್ರಕವಿಯ 'ಪಂಪಾಸ್ಥಾನವರ್ಣನಂ' ಪ್ರಕಾರ ಮತಂಗದ ಪಡುವಣಕ್ಕಿತ್ತು. ಇದನ್ನೇ ಲಕ್ಷ್ಮೀಧರನ ಶಾಸನಕಾರ ಪಂಪಾಕ್ಷೇತ್ರದ ಪೂರ್ವಕ್ಕೆ ಇದ್ದ ಮಾಲ್ಯವಂತದ ದಕ್ಷಿಣ ದಿಕ್ಕಿನ ಮಹಾಗುಹೆಯಲ್ಲಿ ಗಣಪತಿಯನ್ನು ಸ್ಥಾಪಿಸಿದ ಎಂದಿರುವುದು. ಲಕ್ಷ್ಮೀಧರನ ಶಾಸನವಿದ್ದ ಸ್ಥಳದಿಂದ ಸಾಗಿಸಿದ ಬಗ್ಗೆ ಈ ಕೆಳಗಿನ ಟಿಪ್ಪಣಿ ಗಮನಿಸಿ. On a stone lying on the southern slope of a rock to the north of the Krishnabazar, which is on the east side of Krishnaswamy temple in the same village (Hampi). ಇದಕ್ಕೆ ಟಿಪ್ಪಣಿಯಾಗಿ ... the stone has since been removed and placed in a mandapa in front of the Krishnaswamy temple on the way to Hampi[8] ಎಂದಿರುತ್ತಾರೆ. ಹೀಗಾಗಿ ಈ ಶಾಸನ ಕೃಷ್ಣಾಪುರಪೇಟೆಯ ಎಡಭಾಗಕ್ಕಿರುವ ಬೆಟ್ಟದ ಕಿಬ್ಬಿಯಲ್ಲಿತ್ತು. ಅಂದರೆ ಮಾಲ್ಯವಂತದ ವಿನಾಯಕನ ದೇವಾಲಯದ ಎದುರಿಗೆ ಈ ಶಾಸನವಿತ್ತು. ವಿಶ್ವೇಶ್ವರ ಅವರು ಭಾವಿಸುವಂತೆ ಮಾಲ್ಯವಂತ ರಘುನಾಥದಿಂದ ಅದು ಬಂದಿಲ್ಲ. ಹೀಗಾಗಿ ಈ ಮಾಲ್ಯವಂತವು ಈಗಿನ 'ರತ್ನಕೂಟ'ವೆಂದು ಕರೆಯುವ ಸ್ಥಳವೇ ಆಗಿದೆ. ಇಡೀ ಪ್ರದೇಶದಲ್ಲಿದ್ದ ಅನೇಕ ಶಾಸನಗಳನ್ನು ಉದ್ದೇಶ ಪೂರ್ವಕವಾಗಿ ನಾಶಗೊಳಿಸಿರುವುದರಿಂದ ಇನ್ನೂ ಹೆಚ್ಚಿನ ಆಧಾರಗಳು ಸಿಗುವುದು ತಪ್ಪಿದೆ. ಈ ಬೆಟ್ಟದಲ್ಲಿ ಶೈವಾಂಶದ ಅನೇಕ ಕುರುಹುಗಳು ಉಳಿದಿದ್ದು 'ಮಲಗು ಬಸವಣ್ಣ' 'ಭೈರವ' ಮುಂತಾದ ಶಿಲ್ಪಗಳಿವೆ. ಮೂರು ಶಿಥಿಲ ದೇವಾಲಯಗಳು ಈ ಬೆಟ್ಟದಲ್ಲಿವೆ. ಅನೇಕ ಗುಹೆಗಳನ್ನು ಅಲ್ಲಿನ ಶ್ವೇತಾಂಬರ ಜೈನರು ವಿರೂಪಗೊಳಿಸಿರುವುದರಿಂದ ಅನೇಕ ಕುರುಹುಗಳು ಹಾಳಾಗಿವೆ.[9]

ಲಕ್ಷ್ಮೀಧರನ 'ಮಹಾಗಹ್ವರ' ಯಾವುದೆಂದು ಹುಡುಕಾಟ ನಡೆಸಿದಾಗ ಅದು ಈಗಿನ ಶೈವಮಾಲ್ಯವಂತದ ದಕ್ಷಿಣ ದಿಕ್ಕಿನ ಗುಹೆಯೆಂಬುದು ನನ್ನ ಶೋಧದಿಂದ ದೃಢಪಟ್ಟಿದೆ. ಕೃಷ್ಣಾಪೇಟೆಯಲ್ಲಿನ ಕೊಳದ ಉತ್ತರಕ್ಕಿರುವ ಎತ್ತರವಾದ ವೇದಿಕೆಯ ಬಳಿ ಇರುವ ಗುಹೆಯೇ ಅದಾಗಿದೆ. ವೇದಿಕೆಗೆ ಹತ್ತಲು ಪಶ್ಚಿಮದಿಂದ ಮೆಟ್ಟಿಲುಗಳಿದ್ದು ಮೆಟ್ಟಿಲುಗಳ ಬಳಿಯೇ ಸಣ್ಣ ಬಾವಿಯೊಂದಿದೆ. ಮೆಟ್ಟಿಲು ಹತ್ತಿದರೆ ವಿಶಾಲವಾದ ಸ್ಥಳವನ್ನಾಗಿ ಮಾರ್ಪಡಿಸಿಕೊಂಡಿರುವ ಕೃತಕ ವೇದಿಕೆ ಇದೆ. ಇಲ್ಲಿನ ಬಂಡೆಗಳ ಮೇಲೆ ಹಸುವಿನ ದೊಡ್ಡ ಚಿತ್ರವಿದೆ. ಅದರ ಬಳಿ ಹಿಂದೆ ಕಟ್ಟಡವಿದ್ದ ಕುರುಹು ಉಳಿದಿದೆ. ಅಲ್ಲಿಂದ 15 ಅಡಿ ಮುಂದೆ ಹೋದರೆ ಒಂದು ಗುಹೆ ಇದ್ದು ಅದರ ಗೋಡೆಗಳನ್ನು ಗಾರೆಯಿಂದ ನಯಗೊಳಿಸಲಾಗಿದೆ. ಒಳಗೆ ವಿಶಾಲವಾಗಿದ್ದು ಇದನ್ನೇ ಲಕ್ಷ್ಮೀಧರ ಮಹಾಗಹ್ವರವೆಂದು ಕರೆದಿರುವುದು.

ಒಟ್ಟಿನಲ್ಲಿ ಹಿಂದಿನ ಮಾಲ್ಯವಂತವೆಂದರೆ ಹೇಮಕೂಟದ ಪೂರ್ವಕ್ಕೆ ಮತಂಗ ಪರ್ವತದ ಪಶ್ಚಿಮಕ್ಕೆ ಇರುವ ಸಣ್ಣ ಬೆಟ್ಟವೇ ಆಗಿದೆ. ಇದೇ ಬೆಟ್ಟದ ದಕ್ಷಿಣಕ್ಕೆ ಕೃಷ್ಣಾಪುರದಲ್ಲಿರುವ ಕೊಳದ ಹಿಂಬದಿಯ ಬೆಟ್ಟದಲ್ಲಿ ಲಕ್ಷ್ಮೀಧರನು ಗಣಪತಿಯನ್ನು ಪ್ರತಿಷ್ಠಾಪಿಸಿದ ಮಹಾಗುಹೆ ಇದೆ. ಲಕ್ಷ್ಮೀಧರನ ಶಾಸನವು ಗಣಪತಿಗೆ ನೇರವಾಗಿ ಕೃಷ್ಣಾಪುರ ಪೇಟೆಯಲ್ಲಿತ್ತು. ಇದರ ಮುಂದೆ ನೇರದಲ್ಲಿ ಮಳಲ ವಿನಾಯಕ ಕೊತ್ತಳವಿದೆ. ಕೃಷ್ಣದೇವರಾಯನು ಕೃಷ್ಣದೇವಾಲಯವನ್ನು ನಿರ್ಮಿಸಿ ಕೃಷ್ಣಾಪುರ ಪೇಟೆಯನ್ನು ನಿರ್ಮಿಸುವ ಕಾಲಕ್ಕೆ ಈ ಗುಹಾದೇವಾಲಯ ತನ್ನ ಮಹತ್ವವನ್ನು ಕಳೆದುಕೊಂಡಿರಬೇಕು. ಹಂಪೆಯಲ್ಲಿನ ಈ ಮಾಲ್ಯವಂತವನ್ನು ಬೇರೆಯೆಂಬಂತೆ ಗುರುತಿಸಲು ಇನ್ನೊಂದು ಮಾಲ್ಯವಂತವನ್ನು ರಘುನಾಥ ಮಾಲ್ಯವಂತವೆಂದು ವಿಜಯನಗರ ಕಾಲಕ್ಕಾಗಲೇ ಗುರುತಿಸಿದ್ದರು.

ಟಿಪ್ಪಣಿಗಳು

1. *ಸೌಇಂಇ* IX ii, ಸಂ. 670.
2. *ಶಿವತತ್ವ ರತ್ನಾಕರ,* ಎರಡನೆಯ ಕಲ್ಲೋಲ ಶ್ಲೋ. 61 ರಿಂದ 64.
3. *ಪಂಪಾಮಹಾತ್ಮೆ,* ಪು. 32.
4. *ಅದೇ,* ಪು. 276-283.
5. *ಶಿವತತ್ವ ಚಿಂತಾಮಣಿ,* ಸಂಧಿ 38, ಪ. 238.
6. *ಅದೇ,* ಸಂ. 38, ಪ. 221.
7. *ಸೌಇಂಇ* IV, ಸಂ. 267.
8. *ಅದೇ.*
9. 1996ರ ಫೆಬ್ರವರಿ ತಿಂಗಳಲ್ಲಿ ಈಗಿನ ಜೈನರ ಅತಿಕ್ರಮಿತ ಪ್ರದೇಶದ ಸರ್ವೇಕ್ಷಣ ಮಾಡಿದಾಗ ಎರಡು ಬಂಡೆಗಲ್ಲಿನ ಶಾಸನಗಳು ನನ್ನ ಗಮನಕ್ಕೆ ಬಂದವು. ಅವನ್ನು ಫೆಬ್ರವರಿ 15ರ ನಂತರ ಬಂದು ಪ್ರತಿ ಮಾಡಿಕೊಂಡು ಹೋಗುವುದಾಗಿ ಆ ಆಶ್ರಮದವರಿಗೆ ತಿಳಿಸಿದ್ದೆ. ಆದರೆ ಫೆಬ್ರವರಿ 10 ರಂದು ಅಲ್ಲಿಗೆ ಹೋಗಿ ನೋಡಿದಾಗ ಎರಡೂ ಶಾಸನಗಳಿಗೆ ಸಿಮೆಂಟು ಹಚ್ಚಿ ಅದನ್ನು ಕ್ಯೂರಿಂಗ್ ಮಾಡುತ್ತಿದ್ದರು. ನಾನು ಗುರುತಿಸಿದ್ದ ಶಾಸನಗಳ ಪೈಕಿ ಒಂದು ಶಾಸನವು ಕನ್ನಡ ಭಾಷೆ, ಕನ್ನಡ ಲಿಪಿಯಲ್ಲಿದ್ದು ಮೇಲೆ ಶಿವಲಿಂಗದ ರೇಖಾಚಿತ್ರವಿತ್ತು. ಇನ್ನೊಂದು ದೊಡ್ಡ ಶಾಸನವಾಗಿದ್ದು ಅದು ನಾಗರೀ ಲಿಪಿಯಲ್ಲಿತ್ತು ಅದರ ಅರ್ಧಭಾಗವನ್ನು ಗೋಡೆಗೆ ಸೇರಿಸಿ ಕಟ್ಟಿದ್ದರು. ಹೀಗಾಗಿ ಈ ವಿಷಯದ ಬಗ್ಗೆ ಹೆಚ್ಚಿನ ಬೆಳಕು ಚೆಲ್ಲಬಹುದಾಗಿದ್ದ ಎರಡು ಶಾಸನಗಳನ್ನು ಓದಲಾಗಲಿಲ್ಲ.

19. ಅಪ್ರಕಟಿತ ಸಂತೆಬೆನ್ನೂರು ಕೈಫಿಯತ್ತಿನಲ್ಲಿ ಕಂಡುಬರುವ ವಿಜಯನಗರ ಇತಿಹಾಸ ಆಕರಗಳು

ಕೆ. ವೆಂಕಟೇಶ್

ಇತಿಹಾಸವೆಂಬುದು ಕೇವಲ ಹಿಂದಿನ ಘಟನೆಗಳಿಗೆ ಸೀಮಿತವಾಗಿರುವಂತಹುದಲ್ಲ. ವರ್ತಮಾನದ ಘಟನೆಯನ್ನು ಪರೋಕ್ಷವಾಗಿ ನಿಯಂತ್ರಿಸಿ, ಆ ಮೂಲಕ ಮಾನವನ ಬದುಕಿಗೆ ದಾರಿದೀಪವಾಗುವಂತಹುದು. ಹಾಗಾಗಿ ಯಾವುದೇ ಜನಾಂಗ ಗತಕಾಲದಲ್ಲಿ ಅಡಗಿರುವಂತಹ ವರ್ತಮಾನದ ಬೇರನ್ನು ಹುಡುಕುತ್ತಲೇ ಇರಬೇಕಾಗುತ್ತದೆ. ಇತಿಹಾಸವನ್ನು ಅರಿಯುವ ಮನೋಭಿಲಾಷೆಯುಳ್ಳಂತಹವರು ಇಂತಹ ಐತಿಹಾಸಿಕ ಮಾಹಿತಿನ್ನು ಸಂಗ್ರಹಿಸುವ, ಸಂಗ್ರಹಿಸಿರುವತ್ತ ಒಲವನ್ನು ತೋರಿರುವುದಿದೆ. ಇಂತಹ ಸಂಗ್ರಹದಿಂದ ಇತಿಹಾಸ ರಚನೆಗೆ, ಇತಿಹಾಸದ ಮಹತ್ವವನ್ನು ತಿಳಿಯುವುದಕ್ಕೆ ಸಾಧ್ಯವಾಗುತ್ತಿದೆ. ಆದರೆ ಇಂತಹ ಮಾಹಿತಿಗಳಲ್ಲಿ ಪುರಾಣಗಳ ಪ್ರಭಾವವು ಹೆಚ್ಚಿರುವುದನ್ನು ಗಮನಿಸಬಹುದು. ಹಾಗಾಗಿ ಶುದ್ಧ ಐತಿಹಾಸಿಕ ಮಾಹಿತಿಗಳು ಇಂತಹ ಆಕರಗಳಿಂದ ದೊರೆಯಲಾರವು ಎಂಬ ಅಭಿಪ್ರಾಯ ವಿದ್ವಾಂಸರಲ್ಲಿದೆ. ಆದರೆ ಪುರಾಣ, ಐತಿಹ್ಯ ಹರಿವುಗಳು ಹೆಚ್ಚೆಂದೆನಿಸಿದರೂ ಇಂತಹ ಆಕರಗಳು ನಮಗೆ ಆಗಿನ ಜನಜೀವನ, ಸಾಮಾಜಿಕ ವ್ಯವಸ್ಥೆಯನ್ನು ತಿಳಿಯವಲ್ಲಿ ತುಂಬ ಸಹಕಾರಿಯಾಗಿವೆ. ಇಂತಹ ಐತಿಹಾಸಿಕ ಮಾಹಿತಿಯನ್ನು ಕಲೆ ಹಾಕಿ ಇತಿಹಾಸ ರಚನೆಗೆ ಆಕರವನ್ನು ಒದಗಿಸಿಕೊಟ್ಟವರಲ್ಲಿ ಕರ್ನಲ್ ಮೆಕೆಂಜಿ ಪ್ರಮುಖರು. ತನ್ನ ಇಪ್ಪತ್ತೊಂಬತ್ತನೇ ವಯಸ್ಸಿನಲ್ಲಿ ಭಾರತಕ್ಕೆ ಬಂದು ಸುಮಾರು ಮೂವತ್ತೆಂಟು ವರ್ಷಕಾಲ ಇಲ್ಲಿ ಸೇವೆಯನ್ನು ಮಾಡಿ, ಸಾಕಷ್ಟು ಕ್ಷೇತ್ರ ಕಾರ್ಯಗಳ ಮೂಲಕ ಐತಿಹಾಸಿಕ ಮಾಹಿತಿಗಳನ್ನು ಕಲೆ ಹಾಕಿದರು. ಮೆಕೆಂಜಿಯವರ ಸಂಗ್ರಹಗಳು ಈಗಾಗಲೇ ಪ್ರಕಟವಾಗಿವೆ. ಮಾಹಿತಿ ಸಂಗ್ರಾಹಕರಿಗೆ ನೀಡಿದ ಮಾಹಿತಿಯ ಪ್ರತಿಯೊಂದನ್ನು ತಮ್ಮ ಕೆಲವು ಟಿಪ್ಪಣಿಗಳೊಂದಿಗೆ ಗುರುತು ಹಾಕಿಕೊಂಡು ಸಂಗ್ರಹದಲ್ಲಿಟ್ಟುಕೊಂಡಿದ್ದುದು ಚೆನ್ನಗಿರಿ ತಾಲ್ಲೋಕಿನಲ್ಲಿ ಕಂಡು ಬಂದಿತು.

ಶಿವಮೊಗ್ಗ ಜಿಲ್ಲೆಯ ಚೆನ್ನಗಿರಿ ತಾಲ್ಲೂಕಿನಲ್ಲಿ ಸರ್ವೇಕ್ಷಣೆ ನಡೆಸುವ ಸಂದರ್ಭದಲ್ಲಿ ಆ ತಾಲ್ಲೂಕಿನ ಸಂತೆಬೆನ್ನೂರಿನ ಸುಮತೀಂದ್ರ ನಾಡಿಗ ಎಂಬುವರಲ್ಲಿ ಸಂತೆಬೆನ್ನೂರಿನ ಇತಿಹಾಸ ಮತ್ತು ಇತರೆ ದಾಖಲೆಗಳ ಒಂದು ಕೈಫಿಯತ್ತು ಪುಸ್ತಕ ದೊರೆಯಿತು. 100 ಪುಟಗಳ ಒಂದು ನೋಟ್ ಪುಸ್ತಕದಲ್ಲಿ ಹಳೆಗನ್ನಡದಲ್ಲಿ ಬರೆದುಕೊಳ್ಳಲಾಗಿತ್ತು. ಮೆಕೆಂಜಿ ಸಾಹೇಬರಿಗೆ ಒದಗಿಸಿದ ಮಾಹಿತಿಯ ಪ್ರತಿ ಇದಾಗಿದೆ. ಪುಸ್ತಕಕ್ಕೆ 'ಸಂತೆಬೆನ್ನೂರು ಇತಿಹಾಸ' ಎಂಬುದಾಗಿ ಹೆಸರಿಸಲಾಗಿದೆ. ಪ್ರಾರಂಭದಲ್ಲಿ

> "ಶ್ರೀ ರಾಮಚಂದ್ರಾಯ ನಮಃ ॥ ಸಂತೇಬೆನ್ನೂರ ಕೈಫಿಯತ ಪಟ್ಟಿ . . . .
> ಹರಿಹರ ದೇವ ಮಹಾರಾಯರು । ರತ್ನ ಸಿಂಹಾಸನರೂಡಾರಾಗಿ । ರಾಜ್ಯ
> ವನ್ನಾಳುತ್ತಾ ಹರಿಹರ ಮುಂತಾದ ಸ್ಥಳಗಳಲ್ಲಿ ಬಂದುಯಿರುವ ಸಮಯದಲ್ಲಿ ।
> ಮದಕರಿಯಂಬ ಸ್ಥಳದಲ್ಲಿ ಬಂದುಯಿರುವ ಸಮಯದಲ್ಲಿ । ಮದಕರಿಯಂಬ
> ಸ್ಥಳದಲ್ಲಿ ಗಿಡ ಬೆಳದು ಮಹತ್ತದಂತೆ ಮಲೆಯಿದ್ದಲ್ಲಿ . . . ." ಎಂಬುದಾಗಿ ಇದೆ.

ಏಳು ಪುಟಗಳಲ್ಲಿರುವ ಕೈಫಿಯತ್ತು ಕಲಬುರ್ಗಿವರು ಸಂಪಾದಿಸಿರುವ ಕರ್ನಾಟಕದ ಕೈಫಿಯತ್ತು ಪುಸ್ತಕದ ಪುಟ 551-553ರಲ್ಲಿ ಪ್ರಕಟವಾಗಿದೆ.

ಈ ಪುಸ್ತಕದಲ್ಲಿ ಕಂಡು ಬರುವ ಎರಡನೇ ಕೈಫಿಯತ್ತಿನಲ್ಲಿ ಉತ್ತಂಗಿ ವೇಂಲೆಕೆ ಸಲ್ಲುವ ನಾಡಿನಲ್ಲು ಶ್ರೀಮತ್ತೂಲೋಕೋದ್ಧಾರಕರಾದ ಕೋಮಕೋಟಿ ಹನುನಪ್ಪ ನಾಯಕರು, ಅವರ ಮಕ್ಕಳು ಹುಚಹಳಮಪ್ಪನಾಯಕ ಚಿಕ್ಕಂಣಾಯಿಕ ಎಂಬುದಾಗಿ ಪ್ರಾರಂಭವಾಗುತ್ತದೆ. ಇದು ಕರ್ನಾಟಕ ಕೈಫಿಯತ್ತುಗಳ ಕೃತಿಯಲ್ಲಿ ಪುಟ 424-430ರಲ್ಲಿ ಪ್ರಕಟವಾಗಿದೆ. ಈಗ

ಪ್ರಕಟವಾಗಿರುವ ಕೈಫಿಯತ್ತಿನಲ್ಲಿ ಕಂಡು ಬರದಂತಹ ಚಿಕ್ಕ ಕೋಗಲೂರು ಗ್ರಾಮದ ವಿಚಾರ, ಮೊದಲಾದವು ಈ ಕೈಫಿಯತ್ತಿನಲ್ಲಿ ಕಂಡು ಬರುತ್ತವೆ.

ಈ ಪುಸ್ತಕದಲ್ಲಿ ಆಯುರ್ವೇದ ಗಿಡ ಮೂಲಿಕೆಗಳ ವಿವರವಿದೆ. ಯಿಂಗ್ರೆಜಿ ಬಹದ್ದೂದ್ದರ್ರು । ತುಂಫಣಿ ಕೈನಾಡಿಯಂ ಒಂದಾಗಿ ಹೆಸರುಯಿಟ್ಟುಕೊಂಡು ಇವರು ನಡವ ಚರ್ಯ ವಿವರ, ಕೌತುಕಗಳು ಆದ ವಿವರ - ನೃಪ ಶಾಲಿವಾಹನ ಶಕ ವರ್ಷ 1721ನೆಯ . . ರ್ತಿ (ಸಿದ್ಧಾರ್ತಿ?) ಸಂ ॥ ದಲ್ಲೂ ಯಿಂಗ್ರೆಜಿ ಬಹದ್ದೂರವರ್ರು । ತುಂಫಣಿ ಕೈನಾತಿಯಂಬದಾಗಿ ಹೆಸರುಯಿಟ್ಟುಕೊಂಡು . . . . ಯಿವರು ನಡವ ಚರ್ಯ ವಿವರ್ರ. ಕುದುರೆ ಪೌಜಿನ ಹೆಸರು ರಿಜಮಯಿಯೆಂಬವರ್ರೂ ಇತ್ಯಾದಿ ವಿವರಗಳಿವೆ. ಶಾಲಿವಾಹನ ಶಖವರ್ಷ 17 . . . . . . ಪುನದ ಸಂಸ್ಥಾನದ ವಂಶಪ್ರಧಾನ ಶ್ರೀಮಂತ ನಾರಾಯಣರಾಯರ ವಂಶಸ್ತರು । ಸವಾಲು ಮಾಧುರಾಯರು । ಕೈಲಾಸವಾಸಿಗಳು । ಆದ ತರುವಾಯ । ಕೆಲವು ದಿವಸ ನಾನಾಪಡಿನಿಸರ್ರು । ರಾಜ್ಯಭಾರ ವಿಚಾರಿಸುತ್ತಯಿರಲಾಗಿ ಅವರು ಕೈಲಾಸವಾಸಿಗಳಾದ ತರುವಾಯ । ಆ ವಂಶಸ್ತರು ಅಮ್ರುತರಾಯರಿಗು । ಬಾಜಿರಾಯರಿಗು । ಅಂತಹ । ಕಲಹ ಹುಟ್ಟಿದ್ದರಿಂದ । ಬಾಜಿರಾಯರು । ಕುಂಫಣಿ ಯಿಂಗ್ರೆಜಿ ಬಹದ್ದೂರರವರ । ಆಸರೆ ತೆಗೆದುಕೊಂಡು ಕೆಲ ವರ್ಷಯಿದ್ದು . . . . ಎಂಬುದಾಗಿ ವಿವರವಿದೆ.

ಈ ಮಾಹಿತಿಗಳು ಮಾಹಿತಿದಾರ ತನ್ನ ನೆನಪಿಗೋಸುಗ ಗುರುತು ಹಾಕಿಕೊಂಡಿರುವಂತಹುಗಳಾಗಿವೆ.

1742ನೇ ವಿಕ್ರಮ ಸಂವತ್ಸರದ ವೈಶಾಖ ಬಹುಳ 12 ಮಂಗಳವಾರ ಸಾಯಂಕಾಲಕ್ಕೆ ಆದ ವಾತಾವರಣದ ವೈಪರಿತ್ಯವನ್ನು, ಸೂಳೆಗೆರೆಯ ಕೋಡಿ ಬೀಳುವ ಪರಿಯಂತ್ರ ತುಂಬುವುದಕ್ಕೆ ನೀರು ನಿಲ್ಲುವ ಕೋಲುಗಳ ವಿತರಣೆ, ಹಿರೆ ಬಡದ ಕೋಲು, ಚಿಕರೆ ಚಿಕ್ಕಲಿ ಹರಲು ನಾಕೊಕೊಲು, ಚಿಕ್ಕಲಿ ಸೋಮಲಾಪುರ ನಡವೆ ಕೆಂಚವಿನರಕಟಿಕೊಲು ಇತ್ಯಾದಿ ಭೂಮಿ, ಕೆರೆ ಏರಿಗೆ ಇರುವ ವಿವರಗಳು, ಇದಕ್ಕೆ ಸೇರುವ ಹಳ್ಳಿಗಳು, ಆ ಕಾಲದ ನೀರಾವರಿ ವ್ಯವಸ್ಥೆಯನ್ನು ಪ್ರತಿಪಾದಿಸಲು ಅನುಕೂಲವಾಗಿದೆ.

ಪುಟ 41-42, 48ರಲ್ಲಿ

ಶಾಲಿವಾಹನ ಶಖ ವರ್ಷ 1728ನೆ ಅಕ್ಷಯ ಸಂವತ್ಸರದ ನೆಡಿಯುಪಂಕ್ತಿ ಕಾಲದಲ್ಲಿ ನರ್ಮದಾ ಉತ್ರ ಭಾಗ 2, ವಿಕ್ರಯ ಶಕ ವರ್ಷ 1729 ಯಿಶ್ವರ ಸಂ ॥ ದಲ್ಲಿ ದಿಳ್ಳಿ ಆಳಿದವರ್ರು ಅವರ ಹೆಸರು, ವರ್ಷ, ತಿಂಗಳು, ದಿವಸದ ವಿವರಗಳು, ರಣದುಲ್ಲಾಖಾನರ ಆಡಳಿತ ಕಾಲದ ವಿವರ. ಚನ್ನಮ್ಮಾಜಿ ಠಾಣ್ಯದ ವಿವರ, ಚಿತ್ರದುರ್ಗದ ಅರಸುಗಳ ವಂಶಾವಳಿ ವಿವರ ಮೊದಲಾದವುಗಳನ್ನು ವಿವರಿಸಲಾಗಿದೆ. ಜೊತೆಗೆ ಬಿಜಾಪುರದ ಬಾದಶಹನ ಆಡಳಿತದ ವಿವರ, ಸಂತೆಬೆನ್ನೂರು ಕೆಂಗೆ ಹನುಮಪ್ಪನಾಯಕರಿಗೆ ಬಕ್ಷೀಸು ಕೊಟ್ಟ ವಿವರ, ಬಿದನೂರಿನ ಚೆನ್ನಮ್ಮಾಜಿಗೆ ಲವಣಶಾಪತಿ ಮೊದಲಾದ ನೂತನ ಪದಾರ್ಥಗಳನ್ನು ಕೊಟ್ಟ ವಿವರ ಇದೇ ಕಾಲದಲ್ಲಿ ದೇಶಪಾಂಡೆ । ದೇಶಮುಖ ದೆಶಾಯಿ ಮುಂತಾದ ಬಾಬಗಳು, ಯಿವರು ಆಳಿದ ರಾಜ್ಯದಲ್ಲಿ ಹುಟ್ಟಿದ ವಿವರ, ಶಾ.ಶ. 1562ನೇ ವಿಕ್ರಮ ಸಂವತ್ಸರದಲ್ಲಿ ಬಸವಾಪಟ್ಟಣದ ದೇಶಪಾಂಡೆಯವರು ಮೊದಲಾದವರ ಸನದು ದೇಶಪಾಂಡೆಯವರಿಗೆ ಆದ ವಿವರಣೆ ಇದನ್ನು ಪರವಾನಗಿ ಎನ್ನುವರು. ಶಾಲಿವಾಹ ಶಕ ವರುಷ 1454ನೆ ನಂದನ ಸಂ ॥ ರದ ಸಂಬಂಧ ಚ.ಶು. 5 ರಲ್ಲಿ ನಮಗೆ ತ್ರಿಯಣಾಯ್ಯರು ಯಿ ದಿವಸಪಟ್ಟ. ಅವರ ಆಳ್ವಿಕೆಯ ವಿವರ, ಅಹೋಬಲ ನರಸಿಂಹಯ್ಯ । ಯಿವರ ಗುರು ತಿರುಮಲ ತಾತಾಚಾರ್ಯ ಇವರ ನಂತರ ಮಗ ಸರ್ಜರಾಯರು ಹೀಗೆ ಸರ್ಜಾ ಹನುಮಪ್ಪನಾಯಕರವರೆಗೆ ವಂಶವೃಕ್ಷ, ಸರ್ಜಾ ನಾಯಕರಿಗೂ, ವಿಜಯನಗರದ ಅರಸರಿಗೂ ಇದ್ದ ಸಂಬಂಧವನ್ನು ವಿವರಿಸುವ ಮಾಹಿತಿ ಇಲ್ಲಿ ದೊರೆಯುತ್ತದೆ.

ಮಧ್ಯದಲ್ಲಿ ಅಡಕವೊಂದಿದೆ.

ಅನಂತರದಲ್ಲಿ ವಿಜಯನಗರ ಕೃಷ್ಣರಾಯನ ಅಳಿಯ । ರಾಮರಾಯರು । ಪೃಥ್ವಿ ಸಾಮ್ರಾಜ್ಯಗೈಯುತ್ತಯಿರಲ್ಲು । ರಾಯರು ಹನುಮನಾಯಕನಿಗೆ । ಉತ್ಸಂಗಿ ವೆಂಟಿಕೆ ಸಲ್ಲುವ ಮದಕರಿನಾಡನ್ನು ಅಮರಮಾಗಣಿಯಾಗಿ ದಯಪಾಲಿಸಿದ್ದರಿಂದ ಯಿಾ

ಹನುಮನಾಯಕರು । ಮದಕರಿನಾಡು ಒಳಗಿನ ಚಿಕ್ಕ ಕೊಗಲೂರು ಯಂಬ ಸ್ಥಳದಲ್ಲಿ ಯಿದ್ದುಕೊಂಡು ಯಿರಲಾಗಿ । ಅಲ್ಲಿ ಹನುಮಂತದೇವರು ಯಿತಗೆ ನಿಜರೂಪ ಕೊಟ್ಟದ್ದರಿಂದ । ಯಿಾತನು ರೋಮಪುಳಕಿತನಾಗಿ ಯಿಾದೇವರು ಕುಲದೇವತೆಯಾಗಿ ನಡದುಕೊಂಡರಾದ ಕಾರಣ . . . . ಸ್ವಯಂವ್ಯಕ್ತ ಹರಿಹರಾತ್ಮಕ ಸ್ವಾಮಿಗೆ ಬ್ರಾಂಹ್ಮಣರ ಪೂಜೆ ದೇವಸ್ತಾನದಲ್ಲು ಸಕಲ ಪರಿಚಾರಕ ಕೈಯೆನು ಉಂಟಾದರ್ರು ದೇವರಿಗೆ . . ವಕ್ಕದೆವೊಪಚಾರ ಯಾವತ್ತು ಯಿವರ ಮುಖದಿಂದ್ಲೆ ಸರ್ರಿ. ಎಂಬುದಾಗಿ ವಿಜಯನಗರದ ಕೊನೆಯ ಕಾಲದಲ್ಲಿಯ ಘಟನೆಗಳ ಅವಲೋಕನ ಈ ಕೈಫಿಯತ್ತಿನಲ್ಲಿ ಕಂಡು ಬರುತ್ತದೆ. ಕೈಫಿಯತ್ತಿನ ಕೊನೆಯಲ್ಲಿ ರಾಮಾಯಣವನ್ನು ಬರೆಯಲಾಗಿದೆ.

ಕೈಫಿಯತ್ತು ಒಟ್ಟು ನೂರು ಪುಟಗಳಿದ್ದು, ಇವುಗಳಲ್ಲಿ ಕಂಡು ಬರುವ ಮಾಹಿತಿಗಳು ಸಮಕಾಲೀನ ಇತಿಹಾಸದ ಅಧ್ಯಯನಕ್ಕೆ, ಅಂದಿನ ಹಲವಾರು ಸಾಮಾಜಿಕ ವ್ಯವಸ್ಥೆಯತ್ತ ಗಮನ ಸೆಳೆಯುವಲ್ಲಿ ಆಕರವಾಗಿ ಬಳಸಿಕೊಳ್ಳಲು ಉಪಯುಕ್ತವಾಗಿದೆ.

20. ತುಳು ವಂಶದ ಮೂಲದ ವಿಚಾರ

ಸೂರ್ಯನಾಥ ಕಾಮತ್

ವಿಜಯನಗರದ ಮೂರನೆಯ ರಾಜವಂಶವಾದ ತುಳುವರ ವಿಚಾರ ನಾನು ಒಂದು ಲೇಖನವನ್ನು 'ಶ್ರೀಕಂಠತೀರ್ಥ' (ಸಂಪಾದಕರು: ಡಾ. ಚಿದಾನಂದಮೂರ್ತಿ ಮತ್ತು ಇತರರು, ಬೆಂಗಳೂರು, 1976) ದಲ್ಲಿ ಪ್ರಕಟಿಸಿದ್ದೇನೆ. 'ತುಳುವಂಶದ ಮೂಲಸ್ಥಾನ' ಎಂಬ ಈ ಲೇಖನದಲ್ಲಿ (ಪು. 708ರಿಂದ 711) 'ತುಳುವ' ರೆಂದು ತಮ್ಮನ್ನು ಕರೆದುಕೊಂಡಿದ್ದ ವಿಜಯನಗರದ ಸಾಳುವರ ಒಂದು ಶಾಖೆಯ ಮೂಲದ ಬಗ್ಗೆ ಕೆಲವು ವಿಚಾರಗಳನ್ನು ಅಲ್ಲಿ ಮಂಡಿಸಿದ್ದೆ. ಸಾಳುವ ನರಸಿಂಹನ ವಂಶದಿಂದ ತಮ್ಮನ್ನು ಪ್ರತ್ಯೇಕಿಸಿಕೊಳ್ಳಲು ಸಾಳುವ ನರಸನಾಯಕನ ವಂಶದ ರಾಜರು ತಮ್ಮನ್ನು 'ತುಳುವ'ರೆಂದು ಕರೆದುಕೊಂಡಿದ್ದರು. ಇವರ ಶಾಸನಗಳಲ್ಲಿ ಯಾದವ ವಂಶದ ತುರ್ವಸುವಿನ ವಂಶಸ್ಥರು ಇವರೆಂದು ಕತೆಗಳನ್ನು ಕಟ್ಟಿ ಹೇಳಲಾಗಿದೆ.

ಆದರೆ ಈ ತುರ್ವಸುವಿನ ಮೂಲದಿಂದ ಹೇಳುವ ಪೌರಾಣಿಕ ಹಿನ್ನೆಲೆಗಿಂತ ಇವರು ತುಳುವ ಎಂದರೆ ದಕ್ಷಿಣ ಕನ್ನಡ ಜಿಲ್ಲೆಯವರೆಂದು ಹೇಳುವುದು ಸರಿ, ಅವರ ಮೂಲ ಆವಾಸ ಸ್ಥಾನದಿಂದ ಇವರು ''ತುಳುವಾನ್ವಯ'' ಎಂದು ಪರಿಚಿತರಾಗಿದ್ದಾರೆ, ಎಂದು ಎಂ. ರಾಮರಾವ್ ಎಂಬ ಆಂಧ್ರದ ಖ್ಯಾತ ಇತಿಹಾಸಕಾರರು ಹೇಳಿದ್ದಾರೆ.[1]

ಈ ತುಳು ವಂಶದವರು ಹಂಪಿಗೆ ಬರುವ ಮುಂಚೆ ಉತ್ತರ ಆರ್ಕಾಟು ಜಿಲ್ಲೆಯ ದೇವಿಕಾಪುರಂನಲ್ಲಿ ನೆಲೆಸಿದ್ದರು; ಅವರ 2-3 ತಲೆಮಾರುಗಳ ಉಲ್ಲೇಖವಿರುವ ಶಾಸನಗಳು ದೇವಿಕಾಪುರಂನ ಬೃಹದಾಂಬಾ ದೇವಾಲಯದಲ್ಲಿ ಇವೆ, ಎಂದು ಓ. ರಾಮಚಂದ್ರಯ್ಯ ಹೇಳಿದ್ದಾರೆ.[2] ದೇವಿಕಾಪುರಂಗೆ ಅವರು ತುಳುನಾಡಿನಿಂದ ವಲಸೆಹೋಗಿರಬೇಕೆಂದು ಹುಲ್ಷ್ ಅವರು 1912ರ ವಾರ್ಷಿಕ ವರದಿಯಲ್ಲಿ ಅಭಿಪ್ರಾಯ ಪಟ್ಟಿದ್ದಾರೆ. ತೆಲುಗು ಕೃತಿಯಲ್ಲೂ ನರಸನಾಯಕನು ದೇವಕೀಪುರಕ್ಕೆ ಸೇರಿದ್ದವನೆಂದು ಹೇಳಿದೆ ಎಂದು ರಾಮಚಂದ್ರಯ್ಯ ಹೇಳಿದ್ದಾರೆ.

ರಾಮರಾವ್ ಅವರು ಈ ಬಗ್ಗೆ ಹೀಗೆ ಹೇಳಿದ್ದಾರೆ: ''ಮನೆತನದ ಇತಿಹಾಸದಲ್ಲಿ ಉಲ್ಲೇಖಿತವಾದ ಪ್ರಥಮ ಸದಸ್ಯ ತಿಮ್ಮ ಅಥವಾ ದಿಲೀಪ. ಇವನು ತುಳು ದೇಶದಲ್ಲಿ ಇದ್ದ. ಮುಂದೆ ಈ ವಂಶ ಕಿಷ್ಕಿಂಧೆಗೂ ಚಂದ್ರಗಿರಿಗೂ ವಲಸೆಹೋಯಿತು''.

ತುಳುನಾಡಿನಲ್ಲಿ ಯೇಣೂರಿನ ಅಜಲರೂ, ಗೇರಸೊಪ್ಪೆಯ ಅರಸರೂ ತಮ್ಮನ್ನು ಚಂದ್ರವಂಶದ ಸಾಳ್ವರೆಂದು ಹೇಳಿಕೊಂಡಿದ್ದಾರೆ.[3] ಗೇರಸೊಪ್ಪೆಯ ಅರಸರು ತಮ್ಮನ್ನು ಸಾಳ್ವವಂಶವೆಂದೇ ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ. ತುಳುನಾಡು ಎಂಬ ಹೆಸರು ಈಗ ದಕ್ಷಿಣ ಕನ್ನಡ ಜಿಲ್ಲೆಗೆ ಇದೆಯಾದರೂ ಹಿಂದೆ ಇಂದಿನ ದಕ್ಷಿಣ ಕನ್ನಡ ಜಿಲ್ಲೆಯ ಪ್ರದೇಶವು ಆಳ್ವಖೇಡವೆಂದೇ ಪರಿಚಿತವಾಗಿತ್ತು. ಆದರೆ 'ತುಳುವ' ಎಂಬ ಹೆಸರು ಶಾಸನಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಕೆಲವು ಭಾಗಗಳಿಗೆ ಸೀಮಿತವಾಗಿತ್ತು. ಗೇರಸೊಪ್ಪೆಯನ್ನು 'ತುಳುದೇಶ ತಿಲಕಾಯಮಾನಮಾಗಿರ್ದನಗಿರೆ' ಎಂದು ಶಾಸನಗಳು ಕರೆದಿವೆ.[4]

ಗೇರಸೊಪ್ಪೆಯ ಸಾಳುವರ ಶಾಸನಗಳು 1392ರಿಂದ ದೊರೆತಿವೆ. ಇಲ್ಲಿ ಆಳುವ ಸಾಳುವರ ಒಂದು ಶಾಖೆಯೇ ಮುಂದೆ ಹಾಡುವಳ್ಳಿಯಿಂದಲೂ ಆಳುತ್ತಿತ್ತು. ಇವರುಗಳು ಜೈನರಾಗಿದ್ದರು. ಈ ಗೇರಸೊಪ್ಪೆಯ ಅರಸರು ವಿಜಯನಗರದ ಮಾಂಡಲಿಕರಾಗಿದ್ದು ಸಂಗಮ ಅರಸರ ಕಾಲದಲ್ಲಿ ಕರಾವಳಿಯ ಇತರ ಜೈನ ರಾಜರಂತೆ ಇವರೂ ವಿಜಯನಗರದ ವಿರುದ್ಧ ಸದಾ ಬಂಡೆದ್ದ ವಿಚಾರವು 1398, 1428, 1438 ಮತ್ತು 1454ರಲ್ಲಿ ನಡೆದುದು ಶಾಸನಗಳಿಂದ ತಿಳಿಯುತ್ತದೆ.[5] ಇಂಥ ಕೊನೆಯ ಯುದ್ಧ ಸಂಗಮ ಚಕ್ರವರ್ತಿ ವಿರೂಪಾಕ್ಷನ ಕಾಲದಲ್ಲಿ 1492ರಲ್ಲಿ ಆಯಿತು. (62 of 1941-42). ಆದರೆ ಮುಂದೆ ಗೇರಸೊಪ್ಪೆಯ ಅರಸರು ತಮ್ಮ ಈ ದ್ವೇಷಭಾವ ತೊರೆದು ವಿಜಯನಗರದ ಸಾಮ್ರಾಟರ ಬಗ್ಗೆ ಪ್ರೀತಿ, ನಿಷ್ಠೆ ಪ್ರದರ್ಶಿಸಿದ್ದರು.

ಗೆರಸೊಪ್ಪೆಯ ಅರಸನಾದ ಒಂದನೇ ದೇವರಾಯನು ವಿಜಯನಗರದ ಸಾಳುವ 'ನರಸಣ್ಣ ನಾಯಕ'ನ ಹಲವು ವಿಧದ ಸೌಖ್ಯಗಳಿಗಾಗಿ ಧಾರೇಶ್ವರ ದೇವಾಲಯಕ್ಕೆ ದಾನ ನೀಡಿದ 1502 ರ ಶಾಸನ ಕಂಡುಬರುತ್ತದೆ.[6] ಇಲ್ಲಿ ತುಳುವ ನರಸನಾಯಕನನ್ನು 'ಸಾಳುವ' ಎಂದು 'ನರಸಣ್ಣ' ಎಂಬ ಆತ್ಮೀಯ ಭಾವದಿಂದಲೂ ಕರೆದಿದೆ. ಈ ಹೊಸ ರಾಜ ವಂಶದ ಬಗ್ಗೆ ಒಂದು ಆತ್ಮೀಯ ಭಾವ, ತಮ್ಮವರೆಂಬ ಮಮತೆ ಗೆರಸೊಪ್ಪೆಯವರಲ್ಲಿ ಬೆಳೆಯಲು ಸಕಾರಣವಿರಬೇಕು. ತುಳುವ ವಂಶದ ಬಗ್ಗೆ ತಮಗಿದ್ದ ಅಭಿಮಾನವನ್ನು ಅವರು ತಮ್ಮ ವಂಶದ ಒಬ್ಬ ರಾಜಪುತ್ರನಿಗೆ ಕೃಷ್ಣದೇವರಾಯ ಎಂದು ಹೆಸರಿಟ್ಟು ಪ್ರದರ್ಶಿಸಿದರು. ಈ ಹೆಸರು 1548ರ ಶಾಸನದಲ್ಲಿ ಇದೆ.[7] ಗೆರಸೊಪ್ಪೆ, ಹಾಡುವಳ್ಳಿಯ ಅರಸರೂ, ವಿಜಯನಗರದ ತುಳುವರೂ ಒಂದೇ ಮೂಲದವರೆಂದು ಜನರಲ್ಲಿ ಇದ್ದ ನಂಬಿಕೆಯನ್ನು 1801ರಲ್ಲಿ ಫ್ರಾನ್ಸಿಸ್ ಬುಕಾನನ್ ಕೂಡ ತಾನು ಉತ್ತರ ಕನ್ನಡದಲ್ಲಿ ಸಂಚರಿಸುವಾಗ ಹೇಳಿದ್ದಾನೆ.[8]

ಆದರೆ ಈ ಬಗ್ಗೆ ನನ್ನ ಗಮನಕ್ಕೆ ಬಂದ ಇನ್ನೂ ಒಂದು ಹೊಸ ಆಧಾರವನ್ನು ಇಲ್ಲಿ ನಿಮ್ಮ ಮುಂದಿಡುತ್ತೇನೆ. ತಮಿಳುನಾಡಿನ ಮುಖ್ಯ ಕೃಷಿಕ ಜಾತಿಯು ವೆಲ್ಲಾಳರೆಂದು ಪ್ರಸಿದ್ಧರು. ಇ.ಎಲ್. ಥರ್‌ಸ್ಟನ್ ಇವರು ವೆಲ್ಲಾಳರ ಬಗ್ಗೆ ಬರೆದ ಭಾಗದಲ್ಲಿ ವೆಲ್ಲಾಳರಲ್ಲಿ ಇದ್ದ ವಿವಿಧ ಗುಂಪುಗಳಲ್ಲಿ 'ತುಳುವ' ವೆಲ್ಲಾಳರನ್ನು ಹೆಸರಿಸುತ್ತಾನೆ. ಇವರು ಉತ್ತರ, ದಕ್ಷಿಣ ಆರ್ಕಾಟು ಹಾಗೂ ಚೆಂಗಲ್ಪಟ್ಟು ಜಿಲ್ಲೆಗಳಲ್ಲಿ ವಿಶೇಷವಾಗಿ ವಾಸಿಸುತ್ತಾರೆ. ಇವರ ವಿಚಾರ ಹೇಳುತ್ತ ಕಾರ್ ಎಂಬ ವಿದ್ವಾಂಸನು ಬರೆದು ''ಡಿಸ್ಕ್ರಿಪ್‌ಟಿವ್ ಕ್ಯಾಟಲಾಗ್ ಆ್ಯಂಡ್ ಹಿಸ್ಟಾರಿಕಲ್ ಪೇಪರ್ಸ್ ರಿಲೇಟಿಂಗ್ ಟು ದಿ ಸೆವೆನ್ ಪಗೋಡಾಸ್'' ಎಂಬ ಕೃತಿಯನ್ನು ಉಲ್ಲೇಖಿಸಿ ಈ ತುಳುವ ವೆಲ್ಲಾಳರು ತುಳುವದಿಂದ, ಎಂದರೆ ನಾರ್ತರ್ನ್ ಕೆನರಾದಿಂದ ಬಂದವರು ಎಂದು ಕಾರ್ ಗುರುತಿಸುವರೆಂದು ಥರ್‌ಸ್ಟನ್ ಹೇಳುತ್ತಾನೆ. ಇದಲ್ಲದೆ ಕಾಂಚಿಯಲ್ಲಿ ಇರುವ 'ನಾಟ್ವಾರ್' ಎಂಬ ವೆಲ್ಲಾಳರೂ ತುಳುವ ವೆಲ್ಲಾಳರೇ ಎಂದು ಥರ್‌ಸ್ಟನ್ ಹೇಳುತ್ತಾನೆ.[9] 'ನಾಟ್ವಾರ್' ಎಂಬ ಶಬ್ದ ನಾಡವರು ಎಂಬ ಶಬ್ದದಿಂದ ಬಂದಿರಬೇಕು. ಉತ್ತರ ಕನ್ನಡದಲ್ಲಿ ನಾಡವರು ಎಂಬ ಕೃಷಿಕ ವರ್ಗವಿದೆ. ಇವರಲ್ಲಿ ನಾಯಕ ಎಂಬ ಅಡ್ಡ ಹೆಸರು ಸಾಮಾನ್ಯ. ಕೃಷ್ಣದೇವರಾಯನ ತಂದೆಯೂ ನರಸನಾಯಕ ಎಂದು ಇಲ್ಲಿ ಗಮನಿಸಬೇಕು.

ಉತ್ತರ ಕನ್ನಡದಲ್ಲಿ ಈಗ ಇರುವ (ವಿಶೇಷತಃ ಕುಮಟಾ, ಅಂಕೋಲಾ ತಾಲ್ಲೂಕಿನ) ನಾಡವರು ತಾವು ಹಿಂದೆ ಜೈನರಾಗಿದ್ದರೆಂದು ಭಾವಿಸುತ್ತಾರೆ ಮತ್ತು ಮುಂದೆ ತಾವು ಶ್ರೀ ವೈಷ್ಣವ ದೀಕ್ಷೆ ಪಡೆದುದಾಗಿ ತಿಳಿಸುತ್ತಾರೆ. ಉತ್ತರ ಕನ್ನಡದ ಮಂಜುಗುಣಿಯ ವೆಂಕಟರಮಣ ಇವರ ಆರಾಧ್ಯ ದೈವ. ತಮ್ಮ ಗುರುಗಳು ತಿರುಪತಿಗೆ ಸೇರಿದ ಗೋವಿಂದರಾಜಪುರದಲ್ಲಿ ಇರುವ ತಾತಾಚಾರ್ಯರೆಂದು ಅವರು ನಂಬಿದ್ದಾರೆ. ಈ ಬಗ್ಗೆ ವಿವರಗಳನ್ನು 'ಉತ್ತರ ಕನ್ನಡ ಗ್ಯಾಸೆಟಿಯರ್' (1985) ನಲ್ಲಿ ನೋಡಬಹುದು (ಪು. 251). ತುಳುವ ವಂಶದವರೂ ಶ್ರೀ ವೈಷ್ಣವರು, ತಾತಾಚಾರ್ಯನೇ ಅವರ ಗುರು.

ಬಹುಶಃ ಗೆರಸೊಪ್ಪೆ ರಾಜ್ಯವನ್ನು 1606ರ ಸುಮಾರಿಗೆ ಕೆಳದಿಯ ವೆಂಕಟಪ್ಪನಾಯಕನು ಗೆದ್ದುಕೊಂಡಾಗ ಆ ರಾಜ್ಯದ ರಾಜಮನೆತನಕ್ಕೆ ಸಂಬಂಧಿಸಿದ ಈ ಜನ ಗೆರಸೊಪ್ಪೆ ರಾಜ್ಯದ ಗಡಿಯಿಂದ ಅಘನಾಶಿನಿಯ ಉತ್ತರಕ್ಕೆ ವಲಸೆ ಹೋಗಿರಬಹುದು. ಅನೇಕರು ಸೋದೆ ನಾಯಕರ ಸೇನೆಗೆ ಸೇರಿರಬಹುದು. ಸೋದೆ ರಾಜ್ಯ ಗೋವೆಯ ಭಾಗ ಹಾಗೂ ಕಾರವಾರ ಅಂಕೋಲಾ ಪ್ರದೇಶಗಳನ್ನು ಆಗ ಒಳಗೊಂಡಿತ್ತು. ಕೊಂಕಣಿಯ ಪ್ರಭಾವದಿಂದ ಊರ ಪ್ರಮುಖರನ್ನು 'ಗಾಂವ್ಕಾರ' ಎಂದು ಕರೆಯುತ್ತಿದ್ದು. ಈ ಹೆಸರು ಈಗಲೂ ನಾಡವರಲ್ಲಿದೆ. ಆದರೆ ತಮಿಳುನಾಡಿನಲ್ಲಿ ನೆಲೆಸಿದ ಶಾಖೆ ಅದಕ್ಕೆ, ಬಹಳ ಮೊದಲೇ ವಿಜಯನಗರದ ರಾಜಧಾನಿಗೆ ವಲಸೆ ಹೋಗಿ ಅಲ್ಲಿಂದ ತಮಿಳುನಾಡಿಗೆ ಹೋಗಿರಬೇಕು.

ಕರ್ನಾಟಕದ ವಿಶಾಲ ಒಕ್ಕಲಿಗ ಜಾತಿಯಂತೆ ಹಲವು ಒಳಪಂಗಡಗಳನ್ನು ಹೊಂದಿರುವ ತಮಿಳುನಾಡಿನ ವೆಲ್ಲಾಳರಲ್ಲಿ ಒಂದು ಭಾಗವಾಗಿರುವ ತುಳುವ ವೆಲ್ಲಾಳ ಅಥವಾ ಒಕ್ಕಲಿಗರು ವಿಶೇಷವಾಗಿ ನೆಲೆಸಿದ್ದರೆಂದು ಮೇಲೆ ಹೇಳಿದ ತಮಿಳುನಾಡಿನ ಜಿಲ್ಲೆಗಳಲ್ಲಿ ಒಂದಾದ ಉತ್ತರ ಆರ್ಕಾಟಿಗೇ ದೇವಿಕಾಪುರಂ ಸೇರಿದೆ. ಇದೇ ನರಸನಾಯಕನೂ ಅವನ ಹಿರಿಯರೂ 2-3 ತಲೆಮಾರುಗಳಿಂದ ನೆಲೆಸಿದ್ದ ಸ್ಥಳವೆಂದು ಶಾಸನಗಳಿಂದ ತಿಳಿದಿದೆ. ತುಳುವ ವಂಶಜರೆಂದರೆ 'ತುಳುವ' ನಾಡಿನವರೇ ಎಂದು ರಾಮರಾವ್ ಹಾಗೂ ಆಂಗ್ಲ ವಿದ್ವಾಂಸರು ಹೇಳಿದ್ದು ಈ ಜನ ಶಾಸನಗಳು ಉಲ್ಲೇಖಿಸಿದ ಉತ್ತರ ಕನ್ನಡದ ತುಳುವ (ಇದನ್ನು ತುಳುವ, ಹೈಗ ಅಥವಾ ಹೈವೆ ಹಾಗೂ ಕೊಂಕಣ

ಎಂದು ಜೊತೆಜೊತೆಯಾಗಿ ಈ ಕಾಲದ ಶಾಸನಗಳಲ್ಲಿ ಉಲ್ಲೇಖಿಸಿದೆ) ಅಥವಾ ಗೆರಸೊಪ್ಪೆಯ ಸಾಳುವರೆಂದು ಊಹಿಸಲು ಸಾಕಷ್ಟು ಆಧಾರಗಳಿವೆ. ಈ ನಾಡವರೂ ದಕ್ಷಿಣದ ಕನ್ನಡ ನಾಡವರೂ ಬಂಟರೂ ಒಂದೇ ಗುಂಪಿಗೆ ಸೇರಿದವರು. ಬಂಟರಂತೆ (ಇವರು ಬಹುಕಾಲ ಜೈನರಾಗಿದ್ದು ವ್ಯಾಪಾರಿಗಳಾಗಿ 'ಶೆಟ್ಟಿ' ಎಂಬ ಹೆಸರು ಪಡೆದಿದ್ದಾರೆ) ಗೆರಸೊಪ್ಪೆಯ ಅರಸರಲ್ಲೂ ಸ್ತ್ರೀ ಮೂಲಕ ಉತ್ತರಾಧಿಕಾರದ ಅಳಿಯ ಸಂತಾನ ಪದ್ಧತಿ ಇತ್ತು. ದಕ್ಷಿಣ ಕನ್ನಡದ ಜೈನ ಅರಸರಲ್ಲೂ ಈ ಪದ್ಧತಿ ಇತ್ತು. ಇದನ್ನು ನಾನು ನನ್ನ ಪಿಎಚ್.ಡಿ. ಪ್ರಬಂಧದಲ್ಲಿ ವಿವರಿಸಿದ್ದೇನೆ. ಈ ಜೈನರಲ್ಲಿ ಬಹುಪಾಲು ಜನ ತಿರುಗಿ ವೈದಿಕ ಮತ ಸ್ವೀಕರಿಸಿ ಬಂಟ, ನಾಡವರೆನಿಸಿದರು. ಉತ್ತರ ಕನ್ನಡದ ನಾಡವರೂ ಹಿಂದೆ ಜೈನರಾಗಿದ್ದು ಮುಂದೆ ವೈದಿಕ ಶ್ರೀವೈಷ್ಣವರಾದರು.

ಟಿಪ್ಪಣಿಗಳು

1. ರಾಮರಾವ್ ಎಂ., 1971, *ಕೃಷ್ಣದೇವರಾಯ*, ನ್ಯಾಶನಲ್ ಬುಕ್ ಟ್ರಸ್ಟ್, ಪು. 7.
2. ರಾಮಚಂದ್ರಯ್ಯ ಓ., 1953, *ಸ್ಟಡೀಸ್ ಆನ್ ಕೃಷ್ಣದೇವರಾಯ ಆಫ್ ವಿಜಯನಗರ*, ವಾಲ್ಟೇರ್, ಪು. 31; *ಆರಿಸೌಇಂಎ*, 1912, ಸಂ. 355, 395.
3. *ಸೌಇಂಇ*, VII, ಸಂ. 256.
4. *ಅದೇ*, ಸಂ. 207.
5. *ಕಇ*, I, ಸಂ. 1940-41 ರ 52; 1940-41 ರ 53; 1939-40 ರ 35; 1939-40 ರ 47; 1939-40 ರ 56; 1941-42 ರ 62.
6. *ಆರಿಸೌಇಂಎ*, 1906, ಸಂ. 32.
7. *ಕಇ*, III, ಸಂ. 1939-40 ರ 80.
8. ಬುಕನನ್ ಫ್ರಾನ್ಸಿಸ್, 1806, *ಎ ಜರ್ನಿ ಫ್ರಾಂ ಮದ್ರಾಸ್ ಥ್ರೂ ಮೈಸೂರು, ಮಲಬಾರ್ ಆಂಡ್ ಕೆನರ*, II, ಪು. 277, 303.
9. ಥರ್ಸ್ಟನ್, *ಕ್ಯಾಸ್ಟ್ಸ್ ಆಂಡ್ ಟ್ರೈಬ್ಸ್* ನಲ್ಲಿ ವೆಲ್ಲಾಲ, ನೋಡಿ ಪು. 381-82.

21. ಕೃಷ್ಣದೇವರಾಯ ಮತ್ತು ಮೈಸೂರು

ಎ. ಸತ್ಯನಾರಾಯಣ

ಉತ್ತರ ಭಾರತದಿಂದ ಪದೇ ಪದೇ ಮಹಮ್ಮದೀಯರು ನಡೆಸುತ್ತಿದ್ದ ದಾಳಿಯಿಂದ 14ನೇ ಶತಮಾನದ ಆರಂಭದಲ್ಲಿ ದಕ್ಷಿಣ ಭಾರತದ ರಾಜಕೀಯ ಪರಿಸ್ಥಿತಿಯಲ್ಲಿ ಅನಿಶ್ಚಿತತೆ ತಲೆದೋರಿತು. ಪರಕೀಯರ ದಾಳಿಗೆ ಹಿಂದೂಗಳ ಪ್ರತಿಕ್ರಿಯೆಯ ಪರಿಣಾಮ ರೂಪದಲ್ಲಿ ವಿಜಯನಗರ ಸಾಮ್ರಾಜ್ಯ ಅಸ್ತಿತ್ವಕ್ಕೆ ಬಂದಿತು. ಯತಿವರೇಣ್ಯರಾದ ವಿದ್ಯಾರಣ್ಯರ ಪ್ರೇರಣೆಯಿಂದ ಸ್ಥಾಪಿಸಲ್ಪಟ್ಟ ಈ ಸಾಮ್ರಾಜ್ಯವು ಕ್ರಿ.ಶ. 1565 ರಲ್ಲಿ ತಾಳಿಕೋಟೆ ಬಳಿ ನಡೆದ ನಿರ್ಧಾರಕ ಭೀಕರ ಕಾಳಗದಲ್ಲಿ ಅವನತಿ ಹೊಂದುವ ತನಕ ಎರಡೂವರೆ ಶತಮಾನಗಳ ಪರ್ಯಂತ ಪರಕೀಯರ ದಾಳಿಯನ್ನು ಸಮರ್ಥವಾಗಿ ತಡೆಗಟ್ಟಿ ಭಾರತೀಯ ಸಂಸ್ಕೃತಿ ಮತ್ತು ಧರ್ಮವನ್ನು ಸುರಕ್ಷಿತವಾಗಿ ಎತ್ತಿ ಹಿಡಿಯಿತು. ಈಗಿನ ಆಂಧ್ರ ಪ್ರದೇಶ, ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳು ಸೇರಿದಂತೆ ಇಡೀ ದಕ್ಷಿಣ ಭಾರತ ಈ ಸಾಮ್ರಾಜ್ಯಕ್ಕೆ ಸೇರಿತ್ತು. ದಕ್ಷಿಣ ಭಾರತದ ಎಲ್ಲಾ ರಾಜ್ಯಗಳ ಒಗ್ಗೂಡಿವಿಕೆಯ ಕಾರಣ ಭಾಷೀಯ ಮತ್ತು ಭಾವನಾತ್ಮಕ ಸಮ್ಮಿಳನದ ಸಂಕೇತವಾಗಿ ಈ ಸಾಮ್ರಾಜ್ಯ ಮೈದಳೆಯಿತು.

ಪ್ರಜೆಗಳ ಹಿತವನ್ನು ಗಮನದಲ್ಲಿರಿಸಿಕೊಂಡಿದ್ದ ವಿಜಯನಗರದ ರಾಜರುಗಳು ತಮ್ಮ ಸಾಮ್ರಾಜ್ಯದ ವಿವಿಧ ಕಡೆಗೆ ಖುದ್ದಾಗಿ ಭೇಟಿ ನೀಡುತ್ತಿದ್ದರು. ಹಾಗೂ ವಿವಿಧ ಪ್ರಾಂತ್ಯಗಳಲ್ಲಿಯ ಆಡಳಿತ ವಿಷಯಗಳಲ್ಲಿ ಮಾರ್ಗದರ್ಶನ ನೀಡಿ ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸುತ್ತಿದ್ದರು.

ಇಂತಹ ಒಂದು ಸಂದರ್ಭದಲ್ಲಿ ಕೃಷ್ಣದೇವರಾಯನು (ಕ್ರಿ.ಶ. 1509-1530) ತನ್ನ ಆಳ್ವಿಕೆಯ ಆರಂಭ ಕಾಲದಲ್ಲಿ ಮೈಸೂರಿಗೆ ಭೇಟಿ ಇತ್ತನು. ಈ ಭೇಟಿಯು ಯಾವುದೇ ಪ್ರಜಾ ಸಮುದಾಯದ ಅಥವಾ ಧಾರ್ಮಿಕ ಉದ್ದೇಶಕ್ಕೆ ಹೊರತಾಗಿದ್ದುದಲ್ಲದೆ ಅಲ್ಲಿ ತಲೆದೋರಿದ್ದ ದಂಗೆಯೊಂದನ್ನು ಅಡಗಿಸುವ ಉದ್ದೇಶಕ್ಕಾಗಿ ಕೈಗೊಂಡ ದಂಡಯಾತ್ರೆಯಾಗಿತ್ತು. ಉಮ್ಮತ್ತೂರಿನ ಪಾಳೆಯಗಾರರು ಸಾಮ್ರಾಜ್ಯದ ವಿರುದ್ಧ ದಂಗೆಯೆದ್ದಿದ್ದರು. ಇದನ್ನು ಹತ್ತಿಕ್ಕಲು ಕೃಷ್ಣದೇವರಾಯನು ಮೈಸೂರಿಗೆ ಭೇಟಿ ನೀಡಬೇಕಾಯಿತು. ಈ ಒಂದು ಮಹತ್ಕಾರ್ಯದಲ್ಲಿ ಅವನು ಜಯಶೀಲನಾದನು. ದಂಗೆಯನ್ನು ಹತ್ತಿಕ್ಕುವುದರ ಜೊತೆಗೆ ಕೃಷ್ಣದೇವರಾಯನ ಮೈಸೂರಿನ ಈ ಭೇಟಿಯು ಐತಿಹಾಸಿಕ ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದನ್ನು ಈ ಕೆಳಗೆ ಅವಲೋಕಿಸಿದೆ.

14ನೇ ಶತಮಾನದ ಕೊನೆಯ ದಶಕಕ್ಕೆ ಸೇರಿದ ಹಾಗೂ 15ನೇ ಶತಮಾನದ ಆರಂಭ ಕಾಲದ ಶಾಸನಗಳು ಮೈಸೂರಿನ ಸುತ್ತ ಮುತ್ತ ಇರುವುದು ನಮ್ಮ ಗಮನಕ್ಕೆ ಬಂದಿದ್ದು ಇವುಗಳಿಂದ ಉಮ್ಮತ್ತೂರು ಮತ್ತು ತೆರಕಣಾಂಬಿಯಲ್ಲಿನ ಪಾಳೆಯಗಾರರು ವಿಜಯನಗರ ಸಾಮ್ರಾಜ್ಯದ ಪ್ರತಿನಿಧಿಗಳಾಗಿ ಕಾವೇರಿ ನದಿಯ ದಕ್ಷಿಣ ಭಾಗದ ಪ್ರಾಂತ್ಯಗಳಲ್ಲಿ ಮಂಡಲಾಧಿಕಾರಿಗಳಾಗಿ ಆಳುತ್ತಿದ್ದ ಬಗ್ಗೆ ತಿಳಿದು ಬರುತ್ತದೆ. ಕ್ರಿ.ಶ. 1396-97ರಲ್ಲಿ ಮಹಾಮಂಡಲೇಶ್ವರ ಮಲ್ಲಪ್ಪ ಒಡೆಯರ್‌ನ ಮಗನೂ ಹಾಗೂ ಇಮ್ಮಡಿ ಹರಿಹರನ ಸಹೋದರನಾದ ನಾರಾಯಣದೇವನು ಉಮ್ಮತ್ತೂರು ಸಂಸ್ಥಾನದಲ್ಲಿ ಆಳ್ವಿಕೆ ನಡೆಸುತ್ತಿದ್ದ ಸಂಗತಿ ಒಂದು ಶಾಸನದಿಂದ ತಿಳಿದು ಬರುತ್ತದೆ. ವಿಜಯರಾಯ ಮತ್ತು ಇಮ್ಮಡಿ ದೇವರಾಯರ ಅಳ್ವಿಕೆಯ ಕಾಲದಲ್ಲಿ ಮೊದಲನೆ ದೇವರಾಯನ ಮಗನಾದ ಮುಮ್ಮಡಿ ಹರಿಹರನು ತೆರಕಣಾಂಬಿಯ ಮಾಂಡಲಿಕನಾಗಿದ್ದನು.[2] ಈ ಎರಡು ಶಾಸನಗಳ ಆಧಾರದ ಮೇಲೆ ಉಮ್ಮತ್ತೂರಿನ ಪಾಳಯಗಾರರು ಕರ್ನಾಟಕ ಸಂಸ್ಥಾನಕ್ಕೆ ಸೇರಿದವರಾಗಿದ್ದು ಕೇಂದ್ರದಲ್ಲಿನ ಅಧಿಕಾರಿ ವರ್ಗವು ದುರ್ಬಲಗೊಂಡ ಕಾರಣ ಪ್ರಾಬಲ್ಯಕ್ಕೆ ಬಂದರು.

15ನೇ ಶತಮಾನದ ಕೊನೆಯ ದಶಕದಲ್ಲಿ ಅಧಿಕಾರಕ್ಕೆ ಬಂದ ಸಂಗಮ ರಾಜರ ದೌರ್ಬಲ್ಯ ಹಾಗೂ ಸಾಳುವ ರಾಜನ ಸಿಂಹಾಸನಾರೋಹಣ ವಿಜಯನಗರ ಸಾಮ್ರಾಜ್ಯದಲ್ಲಿ ಕ್ಷೋಭೆ ಉಂಟುಮಾಡಿದ ಕಾರಣ ಉಮ್ಮತ್ತೂರಿನ ಪಾಳೆಯಗಾರರು ಪ್ರಾಬಲ್ಯಕ್ಕೆ ಬಂದ ವಿಷಯವು ತಿಳಿದು ಬರುತ್ತದೆ. ಅವರ ಶಾಸನಗಳಿಂದ ಒದಗಿ ಬರುವ ಮಾಹಿತಿಯಿಂದ ಈಗಿನ ಮೈಸೂರು ಮತ್ತು ಮಂಡ್ಯ

ಜಿಲ್ಲೆಗಳು, ಕೊಯಮತ್ತೂರು ಮತ್ತು ಸೇಲಂ ಜಿಲ್ಲೆಗಳ ಕೆಲವು ಭಾಗಗಳೂ ಸೇರಿದಂತೆ ವಿಸ್ತಾರವಾದ ಪ್ರದೇಶದಲ್ಲಿ ಅಧಿಪತ್ಯ ನಡೆಸುತ್ತಿದ್ದ ಸಂಗತಿ ಕಾಣಬಹುದು. ಈ ಪಾಳೆಯಗಾರರಿಗೆ ಕೆಲವು ಬಿರುದುಗಳಿದ್ದವು. ಅವುಗಳೆಂದರೆ ಪೆಸಾಲಿ ಹನುಮ, ಗೇನಾಂಕ ಚಕ್ರವರ್ತಿ, ಮಹಾಮಂಡಲೇಶ್ವರ, ಅರಸಂಕ ಸೋನೆಗಾರ, ಜವಾಡಿ ಕೋಲಾಹಲ, ಗಜಬೇಂಟೆಕಾರ, ಸಂಗ್ರಾಮ ಭೀಮ ಮತ್ತು ಇತರೆ ಬಿರುದುಗಳು.[3] 15ನೇ ಶತಮಾನದ ಕೊನೆಯ ವೇಳೆಗೆ ಸೋಮರಾಜ ಒಡೆಯರ್‌ನ ಮಗನಾದ ದೇಪಣ್ಣ ಒಡೆಯರ್‌ನು ವಿಜಯನಗರದ ಸರ್ಕಾರದ ಅಧಿಪತ್ಯವನ್ನು ಧಿಕ್ಕರಿಸಿ ಗೌರವ ನೀಡಲು ಓಗೊಡಲಿಲ್ಲ. ದೇವಣ್ಣ ಒಡೆಯರ್‌ನ ದಂಗೆಯ ಬಗ್ಗೆ ತಿಳಿದು ಅವನ ಉದ್ಧಟತನದ ಸೊಕ್ಕಡಗಿಸಲು ನರಸನಾಯಕನು ದಂಡೆತ್ತಿ ಹೊರಟನು. ಕಾವೇರಿ ಮೇಲೆ ಕಣಿವೆಯ ಮೂಲಕ ಸಾಗಿದ ಅವನು ಶ್ರೀರಂಗಪಟ್ಟಣವನ್ನು ತಲುಪಿದನು. ನದಿಯು ತುಂಬು ಪ್ರವಾಹದಿಂದ ಹರಿಯುತ್ತಿದ್ದುದರಿಂದ ಕೋಟೆಯ ಮೇಲೆ ಕೈಗೊಳ್ಳಬೇಕಾಗಿದ್ದ ದಾಳಿಯು ಅಸಾಧ್ಯವೆನಿಸಿತು. ಕಷ್ಟಕಾಣದೆ ನದಿಗೆ ಅಡ್ಡಲಾಗಿ ತುರ್ತಾಗಿ ಸೇತುವೆಯೊಂದನ್ನು ನಿರ್ಮಿಸಿ ನದಿಯನ್ನು ದಾಟುವುದರಲ್ಲಿ ಅವನು ಸಫಲನಾದನು. ಈ ರೀತಿ ಶ್ರೀರಂಗಪಟ್ಟಣದ ಕೋಟೆಯನ್ನು ಹಾಳುಗೆಡವಿ ವಿಜಯಸ್ತಂಭವೊಂದನ್ನು ಅಲ್ಲಿ ನೆಟ್ಟನು. ಯುದ್ಧ ಕೈದಿಯಾಗಿ ಸಿಕ್ಕ ನಾಯಕನಿಗೆ ಮತ್ತೊಮ್ಮೆ ಅಲ್ಲಿನ ಕೋಟೆ ಹಾಗೂ ಅದಕ್ಕೆ ಹೊಂದಿಕೊಂಡಂತಿದ್ದ ಪ್ರದೇಶಗಳನ್ನು ಹಿಂತಿರುಗಿಸುವುದು ಬಹು ಅವಶ್ಯಕವೆಂದು ಅವನು ಮನಗಂಡನು.[4]

ದೇವರಾಜನ ಶರಣಾಗತಿಯಿಂದ ಉಮ್ಮತ್ತೂರು ಪಾಳೆಯಗಾರರ ಅವಿಧೇಯ ವರ್ತನೆ ಅಲ್ಲಿಗೆ ನಿಲ್ಲಲಿಲ್ಲ. ಉಮ್ಮತ್ತೂರಿನ ನಾಯಕನಾದ ದೇಪಣ್ಣ ಒಡೆಯರ್‌ನ ಮಗ ಮಲ್ಲರಾಜ ಒಡೆಯರ್‌ನು ನರಸನಾಯಕನು ಮೃತಿ ಹೊಂದಿದ ಬಳಿಕ ಹಾಗೂ ವೀರ ನರಸಿಂಹನ ದುರ್ಬಲ ಆಳ್ವಿಕೆಯ ಲಾಭ ಪಡೆದು ಪುನಃ ದಂಗೆ ಎದ್ದನು. ಈ ದಂಗೆಯ ಮಾಹಿತಿ ಪಡೆದ ವೀರ ನರಸಿಂಹನು ದಂಗೆಯನ್ನು ಅಡಗಿಸುವುದಕ್ಕಾಗಿ ಸೈನ್ಯದೊಡನೆ ತೆರಳಿ ಉಮ್ಮತ್ತೂರು ಕೋಟೆಯನ್ನು ಮೂರು ತಿಂಗಳವರೆಗೆ ಸುತ್ತುವರೆದನು. ಆದರೆ ಶತ್ರುವಿನ ಪ್ರಬಲ ಪ್ರತಿರೋಧದ ಕಾರಣ ಕೋಟೆಯ ಅತಿಕ್ರಮಣವನ್ನು ಸಡಿಲಿಸಿ ಶ್ರೀರಂಗಪಟ್ಟಣದ ಕೋಟೆಯನ್ನು ಮುತ್ತಲು ಆ ದಿಕ್ಕಿನಲ್ಲಿ ಹೊರಟನು. ಆದರೆ ದಂಗೆಯೆದ್ದಿದ್ದ ನಾಯಕನು ರಾಜ-ಸೈನ್ಯವನ್ನು ಸೋಲಿಸಲಾಗಿ ವೀರನರಸಿಂಹನು ಹಿಂತೆಗೆದನು. ಉಮ್ಮತ್ತೂರು ನಾಯಕನ ದಂಗೆಯನ್ನು ಅಡಗಿಸಲು ಅಸಮರ್ಥನಾದ ಇಮ್ಮಡಿ ನರಸಿಂಹನು ಸೋಲಿನಿಂದ ಹಿಂತಿರುಗಬೇಕಾಯಿತು.[5]

ರಾಜ ಸೈನ್ಯದ ಸೋಲು ಉಮ್ಮತ್ತೂರು ನಾಯಕ ನೈತಿಕಸ್ಥೈರ್ಯವನ್ನು ಹೆಚ್ಚಿಸಲಾಗಿ ತದನಂತರ ಅವನು ಬಹುವಾಗಿ ಅಂಕೆಗೊಳಪಡದವನಾದನು. ಇಮ್ಮಡಿ ದೇವರಾಜ ಒಡೆಯರ್‌ನ ಎರಡನೆ ಮಗನಾದ ಇಮ್ಮಡಿ ನಂಜರಾಜ ಒಡೆಯರ್‌ನು ಪುನಃ ರಾಜಾಧಿಕಾರವನ್ನು ಪಡೆದು ಕೆಲವು ಸಾಳುವ ಬಿರುದುಗಳನ್ನು ಹೊಂದಿದನು - ಅರಿರಾಯ ವಿಭಾಡ, ಭಾಷೆಗೆ ತಪ್ಪುವರಾಯರ ಗಂಡ, ಪೆನುಗೊಂಡ ಚಕ್ರೇಶ್ವರ, ಚಿಕ್ಕರಾಯಪಟ್ಟ ಮತ್ತಿತರ ಬಿರುದುಗಳು.[6] ಉಮ್ಮತ್ತೂರು ಪಾಳೆಯಗಾರರು ರಾಜಶಾಹಿ ಬಿಲ್ಲತ್ತುಗಳನ್ನು ಹೊಂದಿದುದು ವೀರನರಸಿಂಹನು ಉಮ್ಮತ್ತೂರು ನಾಯಕನ ಸ್ಥಾನಮಾನವನ್ನು ಗುರುತಿಸಿ ಅವನಿಗೆ ಪಟ್ಟಕ್ಕೆ ಬರುವ ರಾಜಕುಮಾರನನ್ನಾಗಿ ಮಾಡಿದಂತಿದೆಯೆಂದು ಕೃಷ್ಣಶಾಸ್ತ್ರಿಗಳು ಬರೆಯುತ್ತಾರೆ.[7]

ಕೃಷ್ಣದೇವರಾಯನು ಪಟ್ಟಾಭಿಷಿಕ್ತನಾದ ಕೂಡಲೇ ತನ್ನ ಗಮನವನ್ನು ಉಮ್ಮತ್ತೂರು ಪ್ರಾಂತ್ಯದ ಕಡೆಗೆ ತಿರುಗಿಸಿದನು. ವೀರನರಸಿಂಹನ ಆಳ್ವಿಕೆಯ ಕೊನೆಯ ವರ್ಷಗಳಲ್ಲಿದ್ದಂತೆ ಅಲ್ಲಿನ ಪಾಳೆಯಗಾರನಾದ ಗಂಗರಾಜನು ಪುನಃ ದಂಗೆಯೇಳುವ ಸ್ಥಿತಿಯಲ್ಲಿದ್ದನು. ಹಿಂದಿನ ರಾಜನ ಸೈನ್ಯದ ಮೇಲೆ ಪಡೆದ ವಿಜಯದಿಂದ ಬಹುವಾಗಿ ಧೈರ್ಯ ಪಡೆದಿದ್ದ ಈತ ಅವನ ನಂತರ ಬಂದ ರಾಜನಿಗೆ ಅದರಲ್ಲೂ ಆಳ್ವಿಕೆಯಲ್ಲಿ ಇನ್ನೂ ತನ್ನ ಸಾಮರ್ಥ್ಯವನ್ನು ತೋರಬೇಕಾಗಿದ್ದ ರಾಜನಿಗೆ ತಲೆಬಾಗಲು ಇಷ್ಟಪಡಲಿಲ್ಲ. ಶಿವನಸಮುದ್ರ ಮತ್ತು ಶ್ರೀರಂಗಪಟ್ಟಣದಲ್ಲಿನ ಕೋಟೆ ದ್ವೀಪಗಳನ್ನು ಇನ್ನೂ ತನ್ನ ಅಧೀನದಲ್ಲಿಯೇ ಇಟ್ಟುಕೊಂಡಿದ್ದ ನಾಯಕನು ಕಾವೇರಿ ಮೇಲೆ ಕಣಿವೆಯಲ್ಲಿ ಅಧಿಪತ್ಯವನ್ನು ಸ್ಥಾಪಿಸಿ ಆ ಪ್ರದೇಶದಲ್ಲಿನ ರಾಜ ಪ್ರಭುತ್ವಕ್ಕೆ ಚ್ಯುತಿ ತಂದಿದ್ದನು. ರಾಯವಾಚಕಮು ಮತ್ತು ಕೃಷ್ಣದೇವರಾಯ ವಿಜಯಮು ಗ್ರಂಥಗಳು ಸಂಕ್ಷಿಪ್ತವಾದ ಒಂದು ಸೂಚನೆಯಿಂದ ಉಮ್ಮತ್ತೂರು ದಂಡಯಾತ್ರೆಯನ್ನು ಅಲ್ಲಗಳೆಯುತ್ತವೆ. ಒಂದೇ ದಿವಸದಲ್ಲಿ ಕೃಷ್ಣದೇವರಾಯನು ಉಮ್ಮತ್ತೂರು ಮತ್ತು ಶಿವನ ಸಮುದ್ರಗಳೆರಡನ್ನೂ ವಶಕ್ಕೆ

ಪಡೆದನೆಂಬುದು ಪ್ರಚಲಿತವಿದೆ.[8] ಇದಕ್ಕೆ ಪೂರಕವಾಗಿ ಬೇರೆ ಯಾವುದೇ ಆಧಾರವಿರುವುದಿಲ್ಲ. ಕೊಂಗುದೇಶರಾಜುಕ್ಕಲಿನ್ ಚರಿತಮ್ ಕೃತಿಯ ಪ್ರಕಾರ ಈ ದಂಡಯಾತ್ರೆಯ ಒಂದು ವರ್ಷದವರೆಗೆ ನಡೆಯಿತೆಂದು ಹೇಳಿದೆ.[9] ಕೃಷ್ಣದೇವರಾಯನು ಪೆನುಗೊಂಡೆಯ ಕೋಟೆಯನ್ನು ಆಕ್ರಮಿಸಿದುದು ಅವನ ಈ ದಂಡಯಾತ್ರೆಯ ಮೊದಲ ಘಟನೆಯಾಗಿರಬೇಕೆಂಬುದು ಪ್ರತೀತಿ. ಪೆನುಗೊಂಡೆಯ ಕೋಟೆಯನ್ನು ಆಕ್ರಮಿಸಿದ ದಂಗೆಯ ನಾಯಕನು ಉಮ್ಮತ್ತೂರಿನ ಗಂಗರಾಜನಿರಬೇಕೆಂದು ಗುರುತಿಸಲಾಗಿದೆ. ಕೃಷ್ಣದೇವರಾಯನು 5000 ಸೈನಿಕರನ್ನುಳ್ಳ ಪದಾತಿದಳ ಹಾಗೂ 2000 ಸೈನಿಕ ಅಶ್ವದಳದೊಡನೆ ಹಕ್ಕಿನಿಂದ ರಾಜ್ಯವು ತನಗೆ ಸೇರಬೇಕೆಂದು ಸಾರಿ ಅವನ ವಿರುದ್ಧ ದಂಗೆಯೆದ್ದಿದ್ದ ಅಧೀನ ಸಾಮಂತನನ್ನು ಸದೆಬಡಿಯಲು ಹೊರಟನೆಂದು ಫಾ: ಲೂಯಿಜ್‌ರವರು ಬರೆಯುತ್ತಾರೆ.[10] ಪಾರಿಜಾತಾಪಹರಣಮು ಗ್ರಂಥವು ಉಮ್ಮತ್ತೂರು ಮತ್ತು ಶಿವನಸಮುದ್ರಗಳಲ್ಲಿನ ಯುದ್ಧ ಶಿಬಿರಗಳನ್ನು ಕೆಡವಿದ ಬಗ್ಗೆ ತಿಳಿಸುತ್ತದೆ.[11] ಕೊಂಗುದೇಶ ರಾಜಕ್ಕಲಿನ್ ಚರಿತಮ್ ವಿವರವಾಗಿ ಶಿವನಸಮುದ್ರದ ಮುತ್ತಿಗೆಯನ್ನು ವರ್ಣಿಸುತ್ತದೆ. ಗಂಗರಾಜನು ಶಿವನಸಮುದ್ರಕ್ಕೆ ಹೆಚ್ಚಿನ ಸುರಕ್ಷತೆಯನ್ನು ಒದಗಿಸುವ ಸಲುವಾಗಿ ಅಲ್ಲಿ ಸೈನಿಕರನ್ನು ಹಾಗೂ ಯುದ್ಧ ಸಾಮಗ್ರಿಗಳನ್ನು ಹೆಚ್ಚಾಗಿ ಸಂಗ್ರಹಿಸಿದ ಬಗ್ಗೆ ಮತ್ತು ಅದನ್ನು ಕೇಂದ್ರಸ್ಥಾನವನ್ನಾಗಿ ಮಾಡಿದ ಬಗ್ಗೆ ಹೇಳಲಾಗಿದೆ. ರಾಜನ ಸೈನ್ಯವು ಕೋಟೆಯನ್ನು ಮುತ್ತಿತು. ಪ್ರತಿರೋಧವನ್ನು ತಡೆಯಲಾರದ ಗಂಗರಾಜನು ಶತ್ರು ಸೈನಿಕರಿಂದ ತಪ್ಪಿಸಿಕೊಂಡು ಪಲಾಯನಗೈಯ್ಯುವಾಗ ಗಗನ ಚುಕ್ಕಿಯ ಬಳಿ ಕಾವೇರಿ ನದಿಯಲ್ಲಿ ಮುಳುಗಿ ಮೃತಿ ಹೊಂದಿದನು.[12]

ವಿಜಯನಗರದ ಕೃಷ್ಣದೇವರಾಯನ ಸಮಕಾಲೀನನಾದ ಮತ್ತು ಶ್ರೀರಂಗಪಟ್ಟಣದ ದೊರೆಯಾದ 'ಕುಮಾರ ವೀರ್ಯ' (ಕುಮಾರ ವೀರಯ್ಯ) ಎಂಬುವನೊಬ್ಬನ ಬಗ್ಗೆ ಪೇಸ್ ಉಲ್ಲೇಖಿಸಿರುವುದು ಒಂದು ಕುತೂಹಲಪೂರ್ಣ ಅಂಶ.[13] ಕೃಷ್ಣದೇವರಾಯನ ಪ್ರಮುಖ ರಾಣಿಯರಲ್ಲಿ ಒಬ್ಬಳು ರಾಜನಿಗೆ ಅತ್ಯಂತ ನಿಕಟವಾಗಿದ್ದ ಕುಮಾರ ವೀರ್ಯನ ಮಗಳೆಂದು ಇದೇ ಪೇಸ್‌ನು ತಿಳಿಸಿದ್ದಾನೆ. ರಾಜನ (ಕೃಷ್ಣದೇವರಾಯನ) ಮಾವನು ಶ್ರೀರಂಗಪಟ್ಟಣದ ಅಧಿಪತಿಯಾಗಿದ್ದನೆಂದೂ ಮತ್ತು ಅವನು ರಾಯಚೂರು ದಂಡಯಾತ್ರೆಯಲ್ಲಿ ಸೈನ್ಯದ ನೇತೃತ್ವ ವಹಿಸಿದ್ದನೆಂದೂ ನ್ಯೂನಿಜ್ ಬರೆಯುತ್ತಾನೆ.[14] ಈ ಕುಮಾರ ವೀರ್ಯನು ಮುಮ್ಮಡಿ ಬೆಟ್ಟದ ಚಾಮರಾಜ ಒಡೆಯರ್ ಇರಬೇಕೆಂದು ಸಿವೆಲ್ ವಾದಿಸುತ್ತಾನೆ. ಆದರೆ ಈ ವಾದ ಸರಿಯಾದುದಲ್ಲ. ಏಕೆಂದರೆ ಮೈಸೂರು ಸಂಸ್ಥಾನವು ಈ ಅವಧಿಯಲ್ಲಿ ಅತ್ಯಂತ ಚಿಕ್ಕದಾದ ಸಂಸ್ಥಾನವಾಗಿದ್ದು ಶ್ರೀರಂಗಪಟ್ಟಣದ ಮೇಲೆ ಅದರ ಪ್ರಭುತ್ವವಿರಲಿಲ್ಲ. ಅದೂ ಕ್ರಿ.ಶ. 1610ರಲ್ಲಿ ರಾಜ ಒಡೆಯರ್‌ರವರ ಆಳ್ವಿಕೆಯ ಕಾಲದಲ್ಲಿ ಶ್ರೀರಂಗಪಟ್ಟಣವು ಒಡೆಯರ್‌ರವರ ಆಳ್ವಿಕೆಗೆ ಒಳಪಟ್ಟಿತು. ಅಲ್ಲದೆ ಈ ಕುಮಾರ ವೀರ್ಯನು ಕೃಷ್ಣದೇವರಾಯನ ಮಾವನಿರಬೇಕೆಂದು ಕೆಲವರ ಗ್ರಹಿಕೆ. ಮುಮ್ಮಡಿ ಬೆಟ್ಟದ ಚಾಮರಾಜ ಒಡೆಯರ್ ಆಗಲೀ ಅಥವಾ ಮೈಸೂರು ಒಡೆಯರ್ ವಂಶದ ಮತ್ತ್ಯಾವ ಸದಸ್ಯರಾಗಲೀ ಕೃಷ್ಣದೇವರಾಯನೊಡನೆ ವೈವಾಹಿಕ ಸಂಬಂಧ ಬೆಳೆಸಿದ್ದರೆಂಬುದಕ್ಕೆ ಪ್ರಮಾಣೀಭೂತವಾದ ಆಧಾರವಿರುವುದಿಲ್ಲ.

ಹಾಗಾದರೆ ಪೇಸ್‌ನು ತಿಳಿಸಿರುವ ಈ ಕುಮಾರವೀರ್ಯನು ಯಾರು ಎಂಬುದು ಸಮಸ್ಯೆ. ಕ್ರಿ.ಶ. 1511-12ರಲ್ಲಿ ಕೃಷ್ಣದೇವರಾಯನು ಉಮ್ಮತ್ತೂರಿನ ಕಡೆಗೆ ಕೈಗೊಂಡ ದಂಡಯಾತ್ರೆಯಲ್ಲಿ ಅಲ್ಲಿನ ಪಾಳೆಯಗಾರನಾದ ಗಂಗರಾಜನು ಪರಾಜಯ ಹೊಂದಿದನು. ಈ ರೀತಿ ಶತ್ರು ಪ್ರದೇಶವನ್ನು ವಶಪಡಿಸಿಕೊಂಡ ಕೃಷ್ಣದೇವರಾಯನು ಅದನ್ನು ಒಂದು ಹೊಸ ಪ್ರಾಂತ್ಯವನ್ನಾಗಿ ಮಾರ್ಪಡಿಸಿ ಇದಕ್ಕೆ ಶ್ರೀರಂಗಪಟ್ಟಣವನ್ನು ಕಾರ್ಯಸ್ಥಾನ ಮಾಡಿದನು. ಶ್ರೀರಂಗಪಟ್ಟಣ ಪ್ರಾಂತ್ಯಕ್ಕೆ ವೀರಪ್ಪ ಒಡೆಯರ್ ಎಂಬುವವನನ್ನು ಸಾಮಂತನನ್ನಾಗಿ ನೇಮಿಸಿದನು. ಕೃಷ್ಣದೇವರಾಯನಿಂದ ಪರಾಜಯಗೊಂಡ ಉಮ್ಮತ್ತೂರು ಪಾಳೆಗಾರನಾಗಿದ್ದ ಗಂಗರಾಜನ ಮಗನೇ ಇವನಿರಬೇಕೆಂದು ಎರಡು ಶಾಸನಗಳು ಅಧಿಕೃತಗೊಳಿಸುತ್ತವೆ.[16] ಗಂಗರಾಜನಿಗೆ ''ಚಿಕ್ಕರಾಯ ಅಥವಾ ಚಿಕ್ಕೊಡೆಯ'' ಎಂಬ ಸಾರ್ಥಕ ನಾಮಗಳಿದ್ದವು.[17] ಅಲ್ಲದೆ, ವಿಜಯನಗರದಲ್ಲಿ ಕೃಷ್ಣದೇವರಾಯನ ಆಳ್ವಿಕೆಗೆ ಶ್ರೀರಂಗಪಟ್ಟಣದಲ್ಲಿನ ವೀರಪ್ಪ ಒಡೆಯರ್‌ನ ಆಳ್ವಿಕೆ ಕೂಡಿ ಬರುತ್ತದೆ. ಆದ್ದರಿಂದ ಶ್ರೀರಂಗಪಟ್ಟಣದ ಚಿಕ್ಕೊಡೆಯನ ಮಗನಾದ ವೀರಪ್ಪ ಒಡೆಯರ್‌ನೊಡನೆ ಪೇಸ್ ಹೇಳಿರುವ 'ಕುಮಾರ ವೀರ್ಯ'ನೆಂದು ಗುರುತಿಸಲಾಗಿದೆ. 'ಕುಮಾರ ವೀರ್ಯ' ಅಥವಾ ವೀರಪ್ಪ ಒಡೆಯರ್‌ನನ್ನು ಮೈಸೂರ ಮುಮ್ಮಡಿ ಬೆಟ್ಟದ ಒಡೆಯರ್‌ರವರೊಡನೆ ಸಿವೆಲ್ ಗುರುತಿಸಿರುವುದ ಸರಿಕಾಣಿಸದು.

ಉಮ್ಮತ್ತೂರು ದಂಗೆಯನ್ನು ಅಡಗಿಸಿದ ನಂತರ ಕೃಷ್ಣದೇವರಾಯನು ಆಕ್ರಮಿತ ಪ್ರದೇಶವನ್ನು ಗಂಗರಾಜನ ಮಗನಾದ ವೀರಪ್ಪ ಒಡೆಯನಿಗೆ ಬಿಟ್ಟುಕೊಟ್ಟಂತೆ ತೋರಿ ಬರುವುದಲ್ಲದೆ ಅವರನ್ನು ಶ್ರೀರಂಗಪಟ್ಟಣದಲ್ಲಿನ ವಿದ್ಯಮಾನಗಳನ್ನು ಇತ್ಯರ್ಥಪಡಿಸಿ ತನ್ನ ಆತ್ಮೀಯರಲ್ಲಿ ಒಬ್ಬನಾದ ವೀರಪ್ಪ ಒಡೆಯರ್‌ನ ಮಗಳನ್ನು ವಿವಾಹವಾದನೆಂದು ತೋರಿಬರುವುದು.

ಮೇಲುಕೋಟೆಯಲ್ಲಿ ದೊರಕಿರುವ ಕ್ರಿ.ಶ. 1551ರ ಒಂದು ದಾಖಲಾತಿಯಲ್ಲಿ ಕೃಷ್ಣದೇವರಾಯನು ಮೈಸೂರಿನ ಮೇಲೆ ದಾಳಿ ಮಾಡಿದ ಬಗ್ಗೆ ಉಲ್ಲೇಖವಿದೆ. ಈ ದಾಳಿಯನ್ನು ಅದು ಒಂದು ಅವತಾರಕ್ಕೆ ಹೋಲಿಸುತ್ತದೆ.[18]

ಕ್ರಿ.ಶ. 1512ರ ಒಂದು ತಾಮ್ರ ಫಲಕದಲ್ಲಿ ರಾಜನು ಹಿರಿಜತ್ತಿಗ (ಈಗಿನ ದೊಡ್ಡ ಜಾತಕದಲ್ಲಿ ಫಲಕವು ದೊರಕಿದೆ) ಎಂಬ ಹೆಸರಿನ ಶಿವಗಂಗೆ ಹಳ್ಳಿಯಲ್ಲಿನ ಗಂಗಾಧರನೆಂಬ ಹೆಸರುಳ್ಳ ಬ್ರಾಹ್ಮಣ ಪಂಡಿತನೊಬ್ಬನಿಗೆ ಬಳುವಳಿಯೊಂದನ್ನು ರಾಜನು ನೀಡಿದ ಬಗ್ಗೆ ದಾಖಲಿಸುತ್ತದೆಯಲ್ಲದೆ ಅವನ ಪ್ರೀತಿ ಪಾತ್ರ ರಾಣಿಯೊಬ್ಬಳಾದ ಚಿನ್ನದೇವಿಯ ಹೆಸರಿನಲ್ಲಿ ಈ ಹಳ್ಳಿಯನ್ನು ಚಿನ್ನದೇವಿಪುರವೆಂದು ಪುನರ್ ನಾಮಕರಣ ಮಾಡಿರುವುದು ತಿಳಿದುಬರುತ್ತದೆ.[19] ರಾಜನು ಉಮ್ಮತ್ತೂರನ್ನು ವಶಪಡಿಸಿಕೊಂಡ ನಂತರ ಅಲ್ಲಿ ವಾಸ್ತವ್ಯ ಹೂಡಿದ್ದಾಗ ಈ ಉಂಬಳಿಯನ್ನು ಮಾಡಿರುವ ಸಾಧ್ಯತೆಯಿದೆ. ಈ ಚಿನ್ನದೇವಿಯು ಶ್ರೀರಂಗಪಟ್ಟಣದ ವೀರಪ್ಪ ಒಡೆಯರ್‌ನ ಮಗಳೇ ಅಥವಾ ಅಲ್ಲವೇ ಎಂಬುದಕ್ಕಿಂತ ವಿಜಯನಗರ ಸಾಮ್ರಾಜ್ಯದ ಸಾಮ್ರಾಟನಾದ ಕೃಷ್ಣದೇವರಾಯನಿಗೆ ಪ್ರೀತಿಪಾತ್ರಳಾದ ಒಬ್ಬಳನ್ನು ಮೈಸೂರು ಒದಗಿಸಿಕೊಟ್ಟದ್ದು ಒಂದು ಅಭೂತಪೂರ್ವ ಘಟನೆ. ಕ್ರಿ.ಶ. 1517ರಲ್ಲಿ ಕೃಷ್ಣದೇವರಾಯನು ಮತ್ತೊಂದು ಉಂಬಳಿಯನ್ನು ಶ್ರೀರಂಗಪಟ್ಟಣ ರಾಜಧಾನಿಯಲ್ಲಿನ ಗಂಗಾಧರೇಶ್ವರ ದೇವಸ್ಥಾನಕ್ಕೆ ಮಾಡಿಕೊಟ್ಟ ವಿಷಯವು ತಿಳಿದುಬರುತ್ತದೆ.[20]

ಟಿಪ್ಪಣಿಗಳು

1. *ಎಕ,* ಸಂಪುಟ IV, 327; *ಮೈಸೂರು ಗೆಜೆಟಿಯರ್,* ಸಂಪುಟ II, ಭಾಗ III, ಪು. 1526; *ಮೈಆರಿ,* 1907-08, ಪ್ಯಾರಾ 52.
2. *ಎಕ,* ಸಂಪುಟ IV, ಚಾಮರಾಜ ನಗರ 372, ಗುಂಡ್ಲುಪೇಟೆ 78 (ಎರಡೂ ಕ್ರಿ.ಶ. 1422ಕ್ಕೆ ಸೇರಿದವು).
3. *ಅದೇ,* VII, 106.
4. *ಫರ್ದರ್ ಸೋರ್ಸಸ್,* ಪು. 158.
5. *ಅದೇ,* ಸಂಪುಟ I, ಪು. 182.
6. *ಅದೇ.*
7. *ಇಂಆರಿ,* 1908-09, ಪು. 173, ಅಡಿ ಟಿಪ್ಪಣಿ 4.
8. *ಫರ್ದರ್ ಸೋರ್ಸಸ್,* ಸಂಪುಟ I, ಪು. 198.
9. *ಅದೇ.*
10. *ಮೈಸೂರು ಗೆಜೆಟಿಯರ್,* ಸಂಪುಟ II, ಭಾಗ III, ಪು. 1787.
11. *ಫರ್ದರ್ ಸೋರ್ಸಸ್,* ಸಂಪುಟ I, ಪು. 199.
12. *ಅದೇ,* ಪು. 200.
13. *ಎ ಫರ್‌ಗಾಟನ್ ಎಂಪಾಯರ್,* ಪು. 269.
14. *ಅದೇ,* ಪು. 336.

15. ಅದೇ, ಪು. 269, ಅಡಿ ಟಿಪ್ಪಣಿ 1.

16. ಎಕ, V, ಮೈಸೂರು 116; ಎಕ, VI, ಶ್ರೀರಂಗಪಟ್ಟಣ 31.

17. *ಮೈಸೂರು ಗೆಜೆಟಿಯರ್*, ಪು. 1788.

18. ಅದೇ, ಪು. 1789.

19. ಅದೇ.

20. ಅದೇ.

22. ವಿಜಯನಗರ ಅರಸರು ಮತ್ತು ಚಿತ್ರದುರ್ಗ ನಾಯಕರು

ಎಚ್. ಶ್ರೀಶೈಲ ಆರಾಧ್ಯ

ಭಾರತದ ಅದರಲ್ಲೂ ಕರ್ನಾಟಕದ ಇತಿಹಾಸಾಭ್ಯಾಸಿಗೆ ವಿಜಯನಗರದ ಅರಸರು, ಅವರ ಆಳ್ವಿಕೆ, ಕಲೆ, ಸಾಹಿತ್ಯ, ಸಂಸ್ಕೃತಿಯ ಅಧ್ಯಯನ ಅನಿವಾರ್ಯ. ಸಾಮ್ರಾಜ್ಯಾರಂಭದಿಂದ ಹಿಡಿದು ಅದರ ಪತನದವರೆಗೆ ಕ್ರಿ.ಶ. 1336 ರಿಂದ ಕ್ರಿ.ಶ. 1565ರವರೆಗೆ ಒಟ್ಟು 229 ವರ್ಷಗಳವರೆಗೆ ಮಾತ್ರ ಇದರ ಪ್ರಭಾವ ಪರಿಣಾಮಗಳು ಸೀಮಿತವಾಗದೆ ಅಲ್ಲಿಂದ ಮುಂದಕ್ಕೂ ಕನ್ನಡ ನಾಡಿನ ದೊಡ್ಡ ಪಾಳೆಯಗಾರರಿಂದ ಸಣ್ಣಪುಟ್ಟ ಪಾಳೆಯಗಾರರವರೆಗೂ ಅದರ ವೈಭವ, ಪರಾಕ್ರಮ, ಸಂಪ್ರದಾಯ ಹಾಗೂ ಮೌಲ್ಯಗಳು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಮತ್ತೆ ಮತ್ತೆ ಸ್ಮರಣೆಗೊಂಡಿವೆ, ತಮ್ಮ ಇತಿಮಿತಿಗಳಲ್ಲಿ ಅವುಗಳ ಕಾರ್ಯಾನುಷ್ಠಾನಕ್ಕಾಗಿ ಪ್ರಯತ್ನಿಸಿರುವುದನ್ನು ಕಾಣಬಹುದು. ದಕ್ಷಿಣೋತ್ತರವಾಗಿ ಕೃಷ್ಣಾ ಗೋದಾವರೀ ನದಿಗಳವರೆಗೆ, ಪೂರ್ವಪಶ್ಚಿಮಗಳಲ್ಲಿ ಸಮುದ್ರಗಳ ಪರ್ಯಂತರ ಮೈಚಾಚಿದ ವಿಜಯನಗರ ಸಾಮ್ರಾಜ್ಯ ವಿಶಾಲತೆಯ ದೃಷ್ಟಿಯಿಂದ ಅನನ್ಯವಾಗಿತ್ತು. ಬೃಹತ್ತಾದಾಗ ಆಡಳಿತದಲ್ಲಿ ಬಿಗಿ, ಶಿಸ್ತು ಅಚ್ಚುಕಟ್ಟು ಕುಂಠಿತವಾಗುವುದು ಸಹಜ. ಆದರೆ ವಿಜಯನಗರದ ವಿಷಯದಲ್ಲಿ ಮಾತ್ರ ಇಂತಹ ನ್ಯೂನತೆ ಎದ್ದು ಕಾಣಲಿಲ್ಲ. ಇದಕ್ಕೆ ಮುಖ್ಯ ಕಾರಣ ಇಡೀ ಸಾಮ್ರಾಜ್ಯವನ್ನು ಆಡಳಿತಾನುಕೂಲಕ್ಕೆ ತಕ್ಕಂತೆ ಮಾಗಣೆ, ಪಟ್ಟಡಿ ಸೀಮೆಗಳನ್ನು ಮಾಡಿ ಅವುಗಳ ರಕ್ಷಣೆ, ಆಡಳಿತ, ಜನಪರ ಕಾರ್ಯಗಳು ರಾಜಾದಾಯಗಳನ್ನು ಸರಿಯಾಗಿ ನೋಡಿಕೊಳ್ಳಲೆಂದು ಸಮರ್ಥರೂ, ಪ್ರಾಮಾಣಿಕರೂ ಆದವರನ್ನು ನಾಯಕರನ್ನಾಗಿ, ಪ್ರತಿನಿಧಿಗಳನ್ನಾಗಿ ನೇಮಿಸಲಾಗುತ್ತಿತ್ತು. ಮುಖ್ಯವಾಗಿ ತಮ್ಮ ಶೌರ್ಯ ಪರಾಕ್ರಮಗಳ ನಿಮಿತ್ತವೇ ನಾಯಕರಾಗಿದ್ದವರಿಂದಲೇ ವಿಜಯನಗರ ಸಮೃದ್ಧಿಯಿಂದ, ಸುರಕ್ಷಿತವಾಗಿರಲು ಸಾಧ್ಯವಾಯಿತು.

ವಿಜಯನಗರದ ಅರಸರಿಗೂ ಮತ್ತು ಚಿತ್ರದುರ್ಗದ ನಾಯಕರಿಗೂ ಸಂಬಂಧ ಏರ್ಪಟ್ಟದ್ದು ನಾಯಕ ಪದವಿಯ ನಿಮಿತ್ತವಾಗಿಯೆ. ಚಿತ್ರದುರ್ಗದಲ್ಲಿ ನೆಲೆನಿಂತ ನಾಯಕರು ಮೂಲತಃ ದಿಲ್ಲಿಯ ನಾಡ ತಳವಾರರಾಗಿದ್ದು ಅಲ್ಲಿಯ ಬಾದಷಹಾನಿಂದ 'ಮದಕರಿ' ಯೆಂದು ಬಿರುದುಗೊಂಡು, ಅನಂತರದ ಘಟನೆಗಳ ಫಲವಾಗಿ ಈ ನಾಯಕರು ತೆಲುಗು ಸೀಮೆಯ ಜಡೆಕಲ್ಲುದುರ್ಗ ಮುಂತಾದ ಕಡೆಗಳಿಗೆ ವಲಸೆ ಬರುತ್ತಾ ಅನುಕೂಲವಾದ ಕಡೆ ಸ್ಥಿರವಾಗಿ ನಿಲ್ಲುವುದನ್ನು ಕಾಣುತ್ತೇವೆ.

ಆನೆಗೊಂದಿಯ ಪತನದ ಅನಂತರ ಕಂಪಿಲದೇವರಾಯನ ಮಗ ಕಾಟಣ್ಣ, ಅವನ ಮಗ ಚಿತ್ರನಾಯಕ ದಿಲ್ಲಿಯ ಬಾದಷಹಾನ ಬಂದಿಗಳಾಗಿ, ಅನಂತರ ನಂಬಿಕಸ್ಥ ವಜೀರರಾಗಿ ಮುಂದೆ ಅವರೇ ಚಿತ್ರದುರ್ಗದಲ್ಲಿ ನಾಯಕತನವನ್ನು ಆರಂಭಿಸಿದರೆಂದೂ ಉಲ್ಲೇಖವಿದೆ. ಇವರ ದಿಲ್ಲಿಯ ಸಂಬಂಧದ ಬಗೆಗೆ ಮತ್ತಷ್ಟು ಅಧ್ಯಯನವಾಗಬೇಕು. ಸಾಮಾನ್ಯವಾಗಿ ಆ ಕಾಲದ ಶೆಟ್ಟಿವರ್ತಕರು, ಒಕ್ಕಲಿಗರು, ರಾಜಕೀಯದವರೆಲ್ಲಾ ನಾವು ದಿಳ್ಳಿಯಿಂದ ಬಂದವರೆಂದೂ, ನಮ್ಮ ಪೌರುಷಕ್ಕೆ ಕುರುಬಿದ ನವಾಬ, ತಮ್ಮ ಮಗಳ ಸೌಂದರ್ಯಕ್ಕೆ ಮನಸೋತ ನವಾಬ ಹೆಣ್ಣು ಕೊಡಿರೆಂದು ಕೇಳಿದ, ಇಲ್ಲವೇ ರಾಜೀಕ, ಅವಾಂತರಗಳಾದುವು ಇಂಥ ಯಾವುದಾದರೊಂದು ಕಾರಣದಿಂದ ದಿಲ್ಲಿಯನ್ನು ಬಿಟ್ಟು ಈ ಸೀಮೆಗೆ ಬಂದು ಊರು ಕಟ್ಟಿದೆವೆಂದು ದಾಖಲೆಗಳನ್ನು ಬರೆಸಿಕೊಂಡಿದ್ದಾರೆ.

ರಾಜಕೀಯ ಮಹತ್ವದ ಸ್ಥಳವಾಗಿದ್ದ ದಿಲ್ಲಿಯ ಸಂಬಂಧ ದಿಟವಿರಬಹುದು, ಆಶಯವಾಗಿರಲೂಬಹುದು. ಸಬ್ಬಗಡಿ ಓಬನಾಯಕ, ಜಡವಿನಾಯಕ ಮತ್ತು ಬುಳ್ಳನಾಯಕರೆಂಬ ಸೋದರರು ತಮ್ಮ ಮನೆದೇವರು ಅಹೋಬಲ ನರಸಿಂಹನ ಪೆಟ್ಟಿಗೆ, ತುರು, ಕುರಿ, ಕೊಲ್ಲಾರ, ಕಂಪಳವನ್ನು ನಡೆಸಿಕೊಂಡು ದಿಲ್ಲಿಯಿಂದ ದಕ್ಷಿಣದ ಕಡೆ ಬಂದರು. ಇದು ಕ್ರಿ.ಶ. 1556 ರ ಸುಮಾರಿಗೆ ಜರುಗಿತೆಂದು ಉಲ್ಲೇಖವಿದೆ. ರಾಷ್ಟ್ರ ಪ್ರಸಿದ್ಧಿಯನ್ನು ಪಡೆದಿದ್ದ ಕನ್ನಡ ಅರಸೊತ್ತಿಗೆಯ ವಿಜಯನಗರಕ್ಕೆ ಬಂದ ಈ ನಾಯಕ ಸೋದರರು ವಿರೂಪಾಕ್ಷೇಶ್ವರನ ದರ್ಶನ, ಸೇವೆ ಮಾಡಿಕೊಂಡು ಮುಂದಕ್ಕೆ ಪ್ರಯಾಣಿಸುವಾಗ, ಆ ಗುಡಿಯಲ್ಲಿ ಮಂತ್ರ ಪುಷ್ಪದ ಕೆಲಸಕ್ಕಿದ್ದ ಇಬ್ಬರು ಬ್ರಾಹ್ಮಣ ಹುಡುಗರು ಕರೆ ಜೋಯಿಸ, ವಿರೂಪಾಕ್ಷ ಜೋಯಿಸರೆಂಬುವರು ಈ ನಾಡ ತಳವಾರರ ಬೆನ್ನು ಹತ್ತಿ ಬಂದರಂತೆ. ತಳವಾರರು ಚಿತ್ರದುರ್ಗ ಜಿಲ್ಲೆಯ ಬಿಳಿಚೋಡಿಗೆ ಬಂದು ಅಲ್ಲಿ ರೊಪ್ಪಹಾಕಿ ಕೊಂಡು ಮೂರು ತಿಂಗಳಿದ್ದು ಮುಂದಕ್ಕೆ ನೀರುತಡಿ ಗ್ರಾಮದ ಕಡೆ

ಹೊರಟರು. ಬಿಳಿಚೋಡು ಸ್ಥಳದ ಜೋಯಿಸರಿಗೆ ನಷ್ಟ ಸಂತಾನವಾಗಿದ್ದರಿಂದ ಈ ಇಬ್ಬರು ಬ್ರಾಹ್ಮಣ ಹುಡುಗರನ್ನು ಆ ಸ್ಥಳದ ಜೋಯಿಸರನ್ನಾಗಿ ಮಾಡಿಕೊಳ್ಳಿರೆಂದು ಅಲ್ಲಿನ ಗೌಡ, ಸೇನಭೋಗ, ನಾಯಕವಾಡಿಗಳನ್ನು ಕೇಳಿಕೊಂಡು, ಅಧಿಕಾರದ ಭೋಗ ಪಟ್ಟೆ ಬರೆಸಿಕೊಡುವಲ್ಲಿ ಈ ನಾಡ ತಳವಾರರು ಆಸಕ್ತಿ ವಹಿಸಿದರು.

ದಿಲ್ಲಿಯಿಂದ ಹೊರಟ ಮೂವರಲ್ಲಿ ಸಬ್ಬಗಡಿ ಓಬನಾಯಕನ ಮಗ ತಿಮ್ಮಣ್ಣ ನಾಯಕನು ಮತ್ತಿ ಗ್ರಾಮದಲ್ಲೂ ಜಡವಿನಾಯಕನ ಮಗ ಹಿರೇ ಹನುಮನಾಯಕನು ಶಾಗಲೆಯಲ್ಲೂ, ಬುಳ್ಳನಾಯಕನ ಮಕ್ಕಳಾದ ಚಿಕ್ಕಹನುಮನಾಯಕ ಮತ್ತು ಓಬಣ್ಣ ನಾಯಕರು ಬಿಳಿಚೋಡಿನಲ್ಲೂ ನೆಲೆನಿಂತರು. ಇವೆಲ್ಲಾ ಚಿತ್ರದುರ್ಗ ಜಿಲ್ಲೆಯೊಳಗಿರುವ ಗ್ರಾಮಗಳಾಗಿವೆ. ತಮ್ಮ ಶೌರ್ಯ, ಜನಪರ ಕೆಲಸ ಕಾರ್ಯಗಳಿಂದ ವಿಜಯನಗರದವರ ಕೃಪಾದೃಷ್ಟಿಗೆ ಪಾತ್ರರಾದ ಇವರುಗಳಲ್ಲಿ ಮತ್ತಿ ತಿಮ್ಮಣ್ಣ ನಾಯಕನಿಗೆ ವಿಜಯನಗರದ ಅರಸು ಅಚ್ಯುತರಾಯ ಕೃಷ್ಣರಾಯ ಸಂತತಿಯ ಸಾಳೋನರಸಿಂಗರಾಯನು ಕ್ರಿ.ಶ. 1560 ರಲ್ಲಿ ಹೊಳಲಕೆರೆ ಅನಂತರ ಹಿರಿಯೂರು, ಕೊನೆಗೆ ಚಿತ್ರದುರ್ಗದ ನಾಯಕತನವನ್ನು ನೀಡಿದನು. ವಿಜಯನಗರದವರಿಂದ ಮತ್ತಿ ತಿಮ್ಮಣ್ಣನು ನಾಯಕತನವನ್ನು ಪಡೆದ ಕಾಲ ಮಿತಿಯ ಬಗ್ಗೆ ಸ್ಥಳೀಯ ಮೂಲ ದಾಖಲೆಗಳಲ್ಲೇ ಸಾಕಷ್ಟು ಗೊಂದಲವಿದ್ದು 40, 50 ವರ್ಷಗಳಷ್ಟು ವ್ಯತ್ಯಾಸಗಳನ್ನು ಹೇಳುತ್ತಿವೆ. ಒಂದಂಶವಂತೂ ದಿಟ, ವಿಜಯನಗರದ ಕೊನೆಯ ಕಾಲಕ್ಕೆ ಇವನಿಗೆ ನಾಯಕತನವಾಯಿತು. ಸ್ವತಃ ಶೂರನೂ, ದೂರದೃಷ್ಟಿಯುಳ್ಳವನೂ ಆಗಿದ್ದ ತಿಮ್ಮಣ್ಣ ನಾಯಕ ಈ ಮೊದಲೇ ಸುಪ್ರಸಿದ್ಧವಾಗಿದ್ದ ಚಿತ್ರದುರ್ಗ ಬೆಟ್ಟವನ್ನಾಶ್ರಯಿಸಿ ಅಲ್ಲಿ ನೀರಿನ ಆಸರೆಗಳನ್ನು ನಿರ್ಮಿಸಿದ, ದೇವಾಲಯ ಜೀರ್ಣೋದ್ಧಾರ ಮಾಡಿಸಿದ, ರಕ್ಷಣೆಗಾಗಿ ಕೋಟೆ ಕೊತ್ತಳಗಳನ್ನು ಕಟ್ಟಲಾರಂಭಿಸಿದ. ಸನಿಹದ ಗೋನೂರು, ನನ್ನಿವಾಳ ಮುಂತಾದ ಗ್ರಾಮಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳತೊಡಗಿದ. ಇದೇನೇ ಮಾಡಿದರೂ ವಿಜಯನಗರದ ಅರಸರ ಅಂಕಿತದಲ್ಲೇ ಆಡಳಿತ ನಡೆಸುತ್ತಿದ್ದನೆಂಬುದು ಸತ್ಯ. ವಿಜಯನಗರದ ಕೊನೆ ಕೊನೆಯಲ್ಲಿ ಪಾಳೆಯಗಾರರು ತಮ್ಮ ತಮ್ಮಲ್ಲೇ ಒಬ್ಬರು ಮತ್ತೊಬ್ಬರನ್ನು ಹತ್ತಿಕ್ಕಲು ಹವಣಿಸುತ್ತಿದ್ದುದುಂಟು. ಆದರೆ ಚಿತ್ರದುರ್ಗದ ದಾಖಲೆಯೊಂದರ ಪ್ರಕಾರ ''ತಿಮ್ಮಣ್ಣ ನಾಯಕರು ಪ್ರಬಲಿಸಿದ್ದಾರೆ, ಇವರನ್ನು ಮುರಿಯಬೇಕೆಂದು ವಿಜಯನಗರ ಚಕ್ರವರ್ತಿಗಳು ಅಸೂಯೆಯಿಂದ ಸೇನಾಪತಿ ವೀರ ಸಾಳೋನರಸಿಂಗರಾಯರನ್ನು ಸೈನ್ಯ ಸಹಿತ ಹೋಗಿ ತಿಮ್ಮಣ್ಣ ನಾಯಕರನ್ನು ಕೈಸೆರೆ ಹಿಡಿದು ತಂದು ಒಪ್ಪಿಸಬೇಕಾಗಿ ಕಟ್ಟು ಆಜ್ಞೆಮಾಡಿ ಶಕ 1502 ನೇ ವಿಕ್ರಮ ಸಂವತ್ಸರದಲ್ಲಿ ಕಳುಹಿಸಿದರು. ಈ ದಂಡು ಚಿತ್ರದುರ್ಗಕ್ಕೆ ಬಂದಿಳಿಯಿತು. ಇದನ್ನು ತಿಳಿದು ತಿಮ್ಮಣ್ಣನಾಯಕರು ವಿಶೇಷ ಪರಾಕ್ರಮದಿಂದ ಜಯಿಸಿದರು. ಕಾಳಗ ಇಲ್ಲಿಗೆ ನಿಲ್ಲಲಿಲ್ಲ. ಸ್ವಲ್ಪ ಕಾಲಾನಂತರ ನರಸಿಂಗರಾಯ ಮತ್ತೆ ದಂಡಿನೊಡನೆ ದುರ್ಗಕ್ಕೆ ಠಾಣ್ಯ ಹಾಕಿದ. ಈ ಬಾರಿ ರಾತ್ರಿ ಮಲಗಿದ ಶತ್ರು ಪಾಳೆಯವನ್ನು ಹೊಕ್ಕ ಮತ್ತಿ ತಿಮ್ಮಣ್ಣನಾಯಕ ನರಸಿಂಗರಾಯನ ಖಾಸಾ ಕುದುರೆಯನ್ನೇ ಬಿಚ್ಚಿ ತರಲು ಪ್ರಯತ್ನಿಸುವನು. ..ಲಾಯದಲ್ಲಿ ಹೊಸ ಮನುಷ್ಯನನ್ನು ಕಂಡ ಕುದುರೆ ಕೆನೆಯುತ್ತದೆ. ನಿದ್ದೆ ಬಿಟ್ಟೆದ್ದ ಕಾಸ್ತಾರ ಕುದುರೆ ನೋಡಲು ಬರುವನು, ತಿಮ್ಮಣ್ಣನಾಯಕನಾದರೋ ಕುದುರೆಯ ಮುಂದೆ ಹರಡಿದ್ದ ಹುಲ್ಲಿನೊಳಗೆ ಅಡಗುತ್ತಾನೆ. ಕಾಸ್ತಾರ ಕಬ್ಬಿಣದ ಗೂಟನ್ನು ಇರಿದು ಮತ್ತೊಂದೆಡೆ ನೆಟ್ಟು ನೆಲಕ್ಕೆ ಬಡಿದು ಕುದುರೆಯನ್ನು ಕಟ್ಟಿ ನಿದ್ದೆಗೆ ನಡೆಯವನು. ಕಬ್ಬಿಣದ ಗೂಟ ನಾಯಕನ ಬಲ ಅಂಗೈಯ್ಯನ್ನು ಹೊಕ್ಕು ನೆಲಕ್ಕೆ ಹೋಗಿತ್ತು. ಮರಣಾಂತಿಕವಾದ ನೋವನ್ನು ಸಹಿಸುತ್ತಾ ಸುಮ್ಮನಿದ್ದ ನಾಯಕ ತನ್ನ ಸೊಂಟದ ಬಾಕಿನಿಂದ ತನ್ನ ಬಲ ಅಂಗೈಯ್ಯನ್ನೇ ಕತ್ತರಿಸಿಕೊಂಡು, ಆ ಗಾಯಕ್ಕೆ ತನ್ನ ಉತ್ತರಿಯವನ್ನೇ ಕಟ್ಟಿ ಕುದುರೆಯೇರಿ ಶರವೇಗದಲ್ಲಿ ಬೆಟ್ಟವನ್ನು ಸೇರಿದ! ಶತ್ರು ಪಾಳೆಯದಲ್ಲಿ ಕೋಲಾಹಲ, ಮರುದಿನವಾದರೂ ಸೇನಾಪತಿಯ ಆನೆ ನೀರು ಕುಡಿಯಲೆಂದು ಕೆರೆಗೆ ಇಳಿದಾಗ ತನ್ನ ಎಡಗೈ ಮತ್ತು ಕಾಲುಗಳನ್ನೇ ಬಳಸಿ ಆ ಆನೆಯ ಭ್ರೂಮಧ್ಯಕ್ಕೆ ಬಾಣಬಿಟ್ಟು ಸಾಯಿಸಿದ ವೀರ ತಿಮ್ಮಣ್ಣ ನಾಯಕ! ಇಲ್ಲಿಂದ ಮುಂದೆ ಮೊಂಡುಗೈ ತಿಮ್ಮಣ್ಣನಾಯಕನೆಂದೇ ಪ್ರಸಿದ್ಧನಾಗುತ್ತಾನೆ. ದುರ್ಗವನ್ನು ಜಯಿಸಲಾಗದೆ ಹಿಂದಕ್ಕೆ ಹೋದ ದಂಡು ಕಲಬುರ್ಗಿಯವರ ಅವಾಂತರವನ್ನು ನಿಲ್ಲಿಸಲು ಆ ಕೋಟೆಗೆ ಮುತ್ತಿಗೆ ಹಾಕುತ್ತದೆ. ಆದರೇನು ತಿಂಗಳುಗಳು ಕಳೆದರೂ ಕೋಟೆಯನ್ನು ಕೈವಶಮಾಡಿಕೊಳ್ಳಲಾಗಲಿಲ್ಲವಂತೆ. ಆಗ ಆನೆಗೊಂದಿಯ ರಾಯರು ದುರ್ಗದ ತಿಮ್ಮಣ್ಣ ನಾಯಕನಿಗೆ ಪಂಥಾಹ್ವಾನ ನೀಡಿ ಕಲುಬರ್ಗಿಯನ್ನು ಕೈವಶಮಾಡಿಕೊಡಿರೆಂದು ನಿರೂಪ ಕಳಿಸುವರು. ಮೊಂಡುಗೈ ತಿಮ್ಮಣ್ಣನಾಯಕ ತನ್ನ ಮಗ ಓಬಣ್ಣನಾಯಕ, ತಮ್ಮ ಗುಲುಪಿನಾಯಕ, ಅಣ್ಣಗಾರ ಓಬಣ್ಣ ಮತ್ತು 2000 ಮಂದಿ ವೀರರೊಡನೆ ಕಲಬುರ್ಗಿಗೆ ತೆರಳಿ ತಮ್ಮ ಪರಾಕ್ರಮ ಸಮಯ ಪ್ರಜ್ಞೆಗಳಿಂದ ಕೋಟೆಯನ್ನು ವಶಪಡಿಸಿಕೊಂಡು ಕಗ್ಗೊಲೆಗೈದರಂತೆ.

ಕಲಬುರ್ಗಿಯ ಕೋಟೆ ಠಾಣ್ಯವಾದ ಸಂಗತಿ ತಿಳಿದ ವಿಜಯನಗರದ ಅರಸರು ನಾಯಕನನ್ನು ಕರೆಸಿ ಬಹು ಪ್ರೀತಿಯಿಂದ ಮೂರು ತಿಂಗಳಿನವರೆಗೂ ತಮ್ಮ ಅತಿಥಿಯಾಗಿಟ್ಟುಕೊಂಡು,

ಚಿನ್ನದ ಮುಲಾಮಿನ ಶಂಖು ಚಕ್ರದ ಜೊತೆ,
ಅಂದಳ ಮತ್ತು ಮೊಸಳಿ ಬಾಯಿ ಜೋಡು.
ಫಿರಂಗಿ
ಶ್ವೇತ ಛತ್ರಿ
ಚಿನ್ನದ ಹಸ್ತ
ಹಗಲ ದೀವಟಿಗೆ.

ವಸ್ತ್ರಾಭರಣಗಳನ್ನು ನೀಡಿ 'ಹಗಲು ಕಗ್ಗೊಲೆ ಮಾನ್ಯಾ' ಎಂದು ಹೊಗಳಲು ಭಟರನ್ನು ಕೊಟ್ಟು ದುರ್ಗಕ್ಕೆ ಕಳುಹಿಸಿದರಂತೆ. ವಿಜಯನಗರದ ಸಾರ್ವಭೌಮರು ತಿಮ್ಮಣ್ಣನಾಯಕನಿಗೆ ಈ ಬಿರುದು, ಗೌರವಗಳನ್ನು ನೀಡಿದ್ದು ಮತ್ತಷ್ಟು ಶಕ್ತಿ, ಉತ್ಸಾಹಗಳನ್ನು ನೀಡಿದಂತಾಯಿತು. ಇಲ್ಲಿಂದ ಮುಂದೆ ಶ್ರೀಮನ್‌ಮಾಹಾನಾಯಕಾಚಾರ್ಯ ಕಾಮಗೇತಿ ಕಸ್ತೂರಿ, ಹಗಲು ಕಗ್ಗೊಲೆ ಮಾನ್ಯ ಎಂಬ ಬಿರುದುಗಳನ್ನು ಧರಿಸಿ ತಮ್ಮ ಸೀಮೆಯಲ್ಲಿ ಗ್ರಾಮ ನಿರ್ಮಾಣ, ದೇವಾಲಯ, ಜಲಾಶಯ ನಿರ್ಮಾಣ ಇಲ್ಲವೇ ಪುನರುದ್ಧಾರದಂತಹ ಕೆಲಸಗಳೊಡನೆ ತಮ್ಮ ಕೋಟೆ ಕೊತ್ತಳಗಳನ್ನು ಭದ್ರಪಡಿಸಿಕೊಂಡು ಆಡಳಿತವನ್ನು ವಿಸ್ತರಿಸಿದನು.

ಮತ್ತಿ ತಿಮ್ಮಣ್ಣನಾಯಕನು ಬೆದ್ದಲು, ನೀರಾರಂಭ, ಕಾಡಾರಂಭಗಳ ತಾರತಮ್ಯಾನುಸಾರ ಉತ್ಪತ್ತಿಯ ಮೇಲೆ ಕಂದಾಯ ನಿಗದಿ ಮಾಡಿದ. ಮಾರ್ಗದ ಸುಂಕ, ಹುಲ್ಲುಬನ್ನಿ, ತಂಬಾಕು, ಗಾಂಜಾ, ಷರಾಬು, ಉಪ್ಪಿನ ಮಾಳಿ, ಆಚಾರ ಕಾಣಿಕೆಗಳನ್ನು ನಿರ್ಧರಿಸಿದ. ರೈತರ ಉತ್ಪತ್ತಿಯಲ್ಲಿ ಮೂರರಲ್ಲೊಂದು ಭಾಗ ಅರಮನೆಗೆ ಬರುತ್ತಿತ್ತು. ಇವನ ಕಾಲಕ್ಕೆ ಸುವರ್ಣಾದಾಯವು 25000 ಸಾವಿರ ದುರ್ಗಿ ವರಹಗಳಷ್ಟಿತ್ತು. ತಮ್ಮ ಸೀಮೆಯ 13 ಗಡಿಗಳನ್ನು ಪಟ್ಟಡಿ, ಫಿರ್ಕಾಗಳೆಂದು ವಿಭಾಗಿಸಿ ಪ್ರತಿ ಪಟ್ಟಡಿಯೂ 7, 8, 10, 12 ಗ್ರಾಮಗಳನ್ನು ಹೊಂದುವಂತೆ ವಿತರಿಸಲಾಯಿತು. ಇವುಗಳಿಗೆ ಗೌಡ, ಶಾನುಭೋಗರನ್ನು ನೇಮಿಸಿ ಆಡಳಿತ ಮಾಡಲಾಗುತ್ತಿತ್ತು. ಶತ್ರುಗಳ ಗಾಗಳ ಆಗದಂತೆ ಪ್ರತಿ ಪಟ್ಟಡಿಗೂ ಫೌಜನ್ನು ಕೊಡಲಾಗುತ್ತಿತ್ತು.

ಚಿತ್ರದುರ್ಗದ ನಾಯಕರ ಮೇಲೆ ಮತ್ತೆ ಚಾಡಿ ಛಿದ್ರಗಳು ವಿಜಯನಗರದವರೆಗೆ ಹೋದಾಗ ಅರಸರು ಉಪಾಯಾಂತರದಿಂದ ತಿಮ್ಮಣ್ಣನಾಯಕ ಹಾಗೂ ಅಣ್ಣಗಾರ ಓಬಣ್ಣನಾಯಕ, ದಾದಿನಾಯಕರನ್ನು ಕರೆಸಿ ತಮ್ಮ ನಜರಿನಲ್ಲಿಟ್ಟರು. ಚಿತ್ರದುರ್ಗದಲ್ಲಿ ಸಿದ್ಧಮಹಾಪುರುಷರು ಆಶೀರ್ವದಿಸಿ ಅನುಗ್ರಹಿಸಿದ್ದ ಅನರ್ಘ್ಯವೂ, ಪವಿತ್ರವೂ ಆದ ದೆಸೆಕಟ್ಟಿನ ವಿಭೂತಿ, ಬಿಲ್ಲು, ಕೈ ಅಂಬುಗಳನ್ನು ತನ್ನವರಿಗೆ ನೀಡಿ ಅವರು ಸೆರೆಯಿಂದ ತಪ್ಪಿಸಿಕೊಂಡು ಕಳ್ಳಗಿಂಡಿಯ ಮೂಲಕ ತೆರಳಲು ತಿಮ್ಮಣ್ಣನಾಯಕ ವ್ಯವಸ್ಥೆ ಮಾಡಿದ. ತನ್ನನ್ನು ಮಹಾನಾಯಕನೆಂದು, ಹಗಲು ಕಗ್ಗೊಲೆ ಮಾನ್ಯನೆಂದು ಆಶ್ರಯನೀಡಿ ಮೆರೆಸಿದ ವಿಜಯನಗರದ ಅರಸರಿಗೆ ಅವಿಧೇಯನಾಗಲಾರದೆ ರಾಜಾಜ್ಞೆಯ ಪ್ರಕಾರ ತಿಮ್ಮಣ್ಣನಾಯಕನು ಸೆರೆಯಲ್ಲೆ ಉಳಿದು ಕ್ರಿ.ಶ. 1588 ರಲ್ಲಿ ನಿಧನ ಹೊಂದಿದ. ತಂದೆಯ ಮರಣ ಕಾಲದಲ್ಲಿ ಹತ್ತಿರವಿದ್ದ ಮಗ ಓಬಣ್ಣನಾಯಕ ಶವವನ್ನು ದಹಿಸಿ, ಉತ್ತರ ಕ್ರಿಯಾದಿಗಳನ್ನು ಮಾಡಿ ಅಸ್ತಿಗಳನ್ನು ಜಂಕಾ ಓಬಯ್ಯನಿಂದ ತರಿಸಿಕೊಂಡು, ತಪ್ಪಿಸಿಕೊಂಡು ತನ್ನ ಹಿರಿಯರು ನೆಲೆಯೂರಿದ್ದ ಮತ್ತಿ ಗ್ರಾಮಕ್ಕೆ ಬಂದು ಅಲ್ಲಿ ಆ ಅಸ್ತಿಗಳನ್ನು ಸಮಾಧಿ ಮಾಡಿದ.

ಅಲ್ಲಿಂದ ಚಿತ್ರದುರ್ಗಕ್ಕೆ ಬಂದು ಪಟ್ಟಾಭಿಷೇಕ ಮಾಡಿಸಿಕೊಂಡು ಸ್ವತಂತ್ರ ದೊರೆಯಾದನು. ಇಷ್ಟು ಹೊತ್ತಿಗೆ ವಿಜಯನಗರದ ಅರಸರೂ ನಾಮ ಮಾತ್ರದವರಾಗಿದ್ದುದರಿಂದ ಸಂಬಂಧಗಳು ತುಟಿತವಾದುವು. ಚಿತ್ರದುರ್ಗದ ಏಳನೆಯ ದೊರೆ ಬಿಚ್ಚುಗತ್ತಿ ಭರಮಣ್ಣನಾಯಕನ ಕಾಲದಲ್ಲಿ ಮತ್ತೆ ವಿಜಯನಗರದ ಉಲ್ಲೇಖ ಬರುತ್ತದೆ. ವಿಜಯನಗರದ ಅರಸರ ಆಶ್ರಯದಲ್ಲಿದ್ದ ವೆಂಕಟಗಿರಿ ಜಟ್ಟಿಯೆಂಬುವ ಶಸ್ತ್ರವಿದ್ಯಾ ನಿಪುಣ ದುರ್ಗದ ದೊರೆಗಳ ಆಶ್ರಯ ಕೋರಿ ಬರುತ್ತಾನೆ. ಇವನು ಅಸ್ತ್ರಶಸ್ತ್ರಾಭ್ಯಾಸ, ಕುಸ್ತಿ,

ರಾಜದರ್ಬಾರುಗಳನ್ನೆಲ್ಲಾ ಸುವ್ಯವಸ್ಥೆಗೊಳಿಸಿದನಂತೆ. ಈ ವಂಶದ ಜಟ್ಟಿಗಳು ದುರ್ಗದ ಪತನದವರೆಗೂ ಇಲ್ಲಿಯ ಗರಡಿಗಳ ಮುಖ್ಯಸ್ಥರಾಗಿದ್ದರೆಂದು ಹೇಳಿಕೆಯಿದೆ.

ಕ್ರಿ.ಶ. 1721 ರಲ್ಲಿ ಪಟ್ಟಕ್ಕೆ ಬಂದ ಹಿರೇಮದಕರಿನಾಯಕನ ಇಬ್ಬರು ನಾಗತಿಯರಲ್ಲೊಬ್ಬಳು ಆನೆಗೊಂದಿ ನರಪತಿಗಳ ಮಗಳು ಗಂಡೋಬವ್ವ ಅಥವಾ ಗಂಡಿಲ ಓಬವ್ವ ಎಂದು ತಿಳಿದು ಬರುತ್ತದೆ. ಧರ್ಮಿಷ್ಠನೂ, ಪರಾಕ್ರಮಿಯೂ ಆಗಿದ್ದ ಈಕೆಯ ಪತಿ ಮಾಯ ಕೊಂಡದ ಘನಚಕ್ರ ಲಡಾಯಿಯಲ್ಲಿ ಹರಪನಹಳ್ಳಿಯವರ ವಿರುದ್ಧ ಹೋರಾಡಿ ಮೃತನಾದ, ಮಗ ಇಮ್ಮಡಿ ಕಸ್ತೂರಿ ರಂಗಪ್ಪನಾಯಕನಿಗೆ ಪಟ್ಟವಾಗಿ ಅವನೂ ಅಪುತ್ರಕನಾಗಿ ಮರಣ ಹೊಂದಲು ವಿಧವೆಯೂ, ಪುತ್ರ ವಿಯೋಗ ದುಃಖಿಯೂ ಆಗಿದ್ದ ಗಂಡೋಬವ್ವ ಕೆಲ ಕಾಲ ಚಿತ್ರದುರ್ಗದ ಆಡಳಿತವನ್ನು ನಡೆಸಿರಲು ಸಾಕು. ಕೊನೆಗೆ ಚಿತ್ರದುರ್ಗದ ದೊರೆತನಕ್ಕೆ ಯಾರೆಂಬ ವಿಷಯ ಚರ್ಚೆಗೆ ಬಂದಾಗ ರಾಜಗುರು ಮುರುಘರಾಜೇಂದ್ರ ಸ್ವಾಮಿಗಳು, ಅನೇಕ ಮುಖ್ಯರೆಲ್ಲರ ಮಾತನ್ನು ಒತ್ತರಿಸಿ ಜಾನಕಲ್ಲು ತೊದಲು ಭರಮಣ್ಣನಾಯಕನ ಮಗ ಮದಕರಿನಾಯಕನನ್ನು ಪಟ್ಟಕ್ಕೆ ತರುವಲ್ಲಿ ಗಂಡೋಬವ್ವ ಯಶಸ್ವಿಯಾದಳು. ಈ ನಾಗತಿಯ ಕಣ್ಣ ಮುಂದೆ ಅರಸನಾಗಿ ರೂಪುಗೊಂಡ ಮದಕರಿನಾಯಕ ಶತ್ರುಭಯಂಕರನಾಗಿ ಆಳಿ ಕೊನೆಗೆ ಹೈದರಾಲಿಯೊಡನೆ ಜರುಗಿದ ನಿರ್ಣಾಯಕ ಯುದ್ಧದಲ್ಲಿ ಕ್ರಿ.ಶ. 1779 ರ ಸುಮಾರಿಗೆ ಪರಾಜಿತನಾಗುತ್ತಾನೆ. ಇವನ ಕಾಲಕ್ಕೆ ಚಿತ್ರದುರ್ಗ ಸಂಸ್ಥಾನ ಅಸ್ತವಾಯಿತು.

ಸರಿಸುಮಾರು 30 ವರ್ಷಗಳವರೆಗೂ ವಿಜಯನಗರದ ಅಂಕಿತದಲ್ಲಿ ಸುಖಸಮೃದ್ಧಿಯಲ್ಲಿದ್ದ ಚಿತ್ರದುರ್ಗದ ಅನಂತರದ ಉತ್ತಮ ಆಡಳಿತ, ಸೈನ್ಯ, ಧರ್ಮ ಸಮನ್ವಯ ದೃಷ್ಟಿ ಎಲ್ಲಕ್ಕೂ ಆ ಮಹಾಸಾಮ್ರಾಜ್ಯದ ಸುವ್ಯವಸ್ಥೆಯನ್ನು ಅನುಸರಿಸಿದಂತೆ ಕಾಣುತ್ತದೆ. ಇಲ್ಲಿ ಚಾಲ್ತಿಯಲ್ಲಿದ್ದ ಬೆಳ್ಳಿ ಬಂಗಾರದ ನಾಣ್ಯಗಳಲ್ಲಿಯೂ ಕೂಡ ವಿಜಯನಗರದ ದೇವರಾಯಿ, ಅಚ್ಯುತರಾಯಿ, ರಾಮರಾಯಿ, ದುರ್ಗಿ ಮುಂತಾದುವುಗಳಿದ್ದವು.

ಗ್ರಂಥಾವಲೋಕನ

1. ಚಿತ್ರದುರ್ಗ ಜಿಲ್ಲೆಯ ಶಾಸನಗಳು - ಬಿ.ಎಲ್. ರೈಸ್.
2. ಚಿತ್ರದುರ್ಗದ ಪಾಳೆಯಗಾರರು - ಎಂ.ಎಸ್. ಪುಟ್ಟಣ್ಣ.
3. ಕನ್ನಡನಾಡಿನ ಚರಿತ್ರೆ - ಭಾಗ 1 - ಡಾ. ಬಿ.ಎ. ಸಾಲೆತ್ತೊರೆ, ಡಾ. ದೇಸಾಯಿ ಪಾಂಡುರಂಗರಾಯರು.
4. ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು - ಸಂ. ಲಕ್ಷ್ಮಣ ತೆಲಗಾವಿ, ಡಾ. ಎಂ.ವಿ. ಶ್ರೀನಿವಾಸ್.
5. ಚಿತ್ರದುರ್ಗದ ಕಾಮಗೇತಿ ಅರಸರು - ಬಿ.ಎಸ್. ಶ್ರೀನಿವಾಸನಾಯಕ.
6. ಚಿತ್ರದುರ್ಗದ ಪಾಳೆಯಗಾರರು - ಎಂ.ಜಿ. ವೆಂಕಟೇಶಯ್ಯ.
7. ಐತಿಹಾಸಿಕ ಚಿತ್ರದುರ್ಗ - ಸಂ. ಲಕ್ಷ್ಮಣ ತೆಲಗಾವಿ, ಕೆ. ವೆಂಕಣ್ಣಾಚಾರ್.
8. ದವನಸಿರಿ.
9. ಮರೆತು ಹೋಗಿರುವ ಸಾಮ್ರಾಜ್ಯ - ಅನು: ಡಾ. ಸದಾನಂದ ಕನವಳ್ಳಿ.
10. ಚಿತ್ರದುರ್ಗ ದೊರೆಗಳ ವಂಶವೃಕ್ಷ (ಅಪ್ರಕಟಿತ ಹಸ್ತಪ್ರತಿ) - ಶ್ರೀಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ, ಚಿತ್ರದುರ್ಗ.
11. ನಾಯಕರ ವಂಶಾವಳಿ (ಅಪ್ರಕಟಿತ ಹಸ್ತ ಪ್ರತಿ, ಪುಟಗಳು ತ್ರುಟಿತವಾಗಿವೆ) - ಟಿ. ಜಯಣ್ಣ, ಅಬಕಾರಿ ಜಿಲ್ಲಾಧಿಕಾರಿಯವರು, ಚಿತ್ರದುರ್ಗ.
12. ಒಂದು ಟಿಪ್ಪಣಿ (ಹಸ್ತ ಪ್ರತಿ) - ಸಿ.ಎಂ. ನರಸಿಂಹ ಜಟ್ಟಿ, ಚಿತ್ರದುರ್ಗ.

23. ವಿಜಯನಗರ - ಕೇರಳ ಸಂಪರ್ಕ: ಒಂದು ಅಧ್ಯಯನ

ಕೆ.ಜಿ. ವಸಂತ ಮಾಧವ

ಪೀಠಿಕೆ:

ವಿಜಯನಗರ ಸಾಮ್ರಾಜ್ಯದ ಸಂಸ್ಕೃತಿ ದಕ್ಷಿಣ ಭಾರತದ ಸಂಸ್ಕೃತಿಯ ಸಂಯೋಗವೆಂದು ಕೆಲವು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಸಾಮ್ರಾಜ್ಯ, ಪಶ್ಚಿಮ ಕರಾವಳಿಯ ದಕ್ಷಿಣ ತುದಿಯಲ್ಲಿರುವ ಕೇರಳದ ಮೇಲೆ ಹೇಗೆ ಪರಿಣಾಮವನ್ನುಂಟುಮಾಡಿತು ಎಂದು ತಿಳಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಇದಕ್ಕೆ ಆಕರ ಸಾಮಗ್ರಿಗಳು - ಕೆಲವು ಶಾಸನಗಳು (ಮುಖ್ಯವಾಗಿ ಈಗಿನ ಕಾಸರಗೋಡು ಜಿಲ್ಲೆ ಮತ್ತು ತಿರುವನಂತಪುರ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿರುವ ತಾಮ್ರ ಶಾಸನಗಳು), ಕನ್ನಡ ಸಾಹಿತ್ಯ ಕೃತಿ ಶಿವತತ್ವ ಚಿಂತಾಮಣಿ, ಜಾನಪದ ಸಾಹಿತ್ಯ ಮುಖ್ಯವಾಗಿ ತುಳುಪಾಡ್ದನ, ಸಂಸ್ಕೃತ ಭಾಷೆಯ ಕೃತಿ ಶಿವತತ್ವರತ್ನಾಕರ, ಮಲೆಯಾಳ ಭಾಷೆಯಲ್ಲಿರುವ ಅರೆ ಐತಿಹಾಸಿಕ ದಾಖಲೆಗಳು ಮುಖ್ಯವಾಗಿ ಕೇರಳೋತ್ಪತ್ತಿ ಮತ್ತು ಕೊಲಸ್ತೇರಿ ವಂಶದ ಕುರಿತಾದ ಮಾಹಿತಿಗಳು.[1] ಇವುಗಳಲ್ಲದೆ ಕೆಲವು ವಿದೇಶಿ ಆಕರಗಳನ್ನು ಈ ಸಂದರ್ಭದಲ್ಲಿ ಉಪಯೋಗಿಸಲಾಗಿದೆ.

ವಿಜಯನಗರ - ಕೇರಳ ಸಂಪರ್ಕ ರಾಜಕೀಯ ಮತ್ತು ರಾಜಕೀಯೇತರ ಎಂದು ವಿಶ್ಲೇಷಿಸಿ ತಿಳಿಸಲಾಗಿದೆ. ರಾಜಕೀಯ ಸಂಬಂಧದಲ್ಲಿ ವಿಜಯನಗರದ ಮತ್ತು ಕೇರಳದಲ್ಲಿ ಆಳಿಕೊಂಡಿದ್ದ ಅರಸು ಮನೆತನಗಳ ಯುದ್ಧ, ಒಪ್ಪಂದ, ಇದರಿಂದಾಗಿ ಗಡಿ ಹೊಂದಾಣಿಕೆಗಳ ವಿವರಗಳನ್ನೊಳಗೊಂಡಿದ್ದರೆ, ರಾಜಕೀಯೇತರ ಸಂಬಂಧದಲ್ಲಿ ವ್ಯಾಪಾರ, ವಾಣಿಜ್ಯ, ಕೃಷಿ, ಧಾರ್ಮಿಕ ಚಟುವಟಿಕೆಗಳು ಸೇರಿವೆ.

ರಾಜಕೀಯ ಸಂಪರ್ಕ:

ವಿಜಯನಗರ ಸಾಮ್ರಾಜ್ಯದ ನಕಾಶೆಯಲ್ಲಿ ಸಮಗ್ರ ಕೇರಳವನ್ನು ಸೇರಿಸಿದ್ದನ್ನು ಗಮನಿಸಿದಾಗ, ಈ ಸಾಮ್ರಾಜ್ಯ ಕೇರಳದಲ್ಲಿ ಸಮರ್ಪಕವಾಗಿತ್ತು ಎಂದು ಅಭಿಪ್ರಾಯ ಪಡಬಹುದು. ಆದರೆ ಕೇರಳದಲ್ಲಿ ಸಿಕ್ಕ ಐತಿಹಾಸಿಕ ದಾಖಲೆಗಳು ಇದಕ್ಕೆ ವ್ಯತಿರಿಕ್ತ ಅಭಿಪ್ರಾಯವನ್ನು ನೀಡುತ್ತವೆ. ಈ ದೃಷ್ಟಿಯಲ್ಲಿ ವಿಜಯನಗರ - ಕೇರಳ ಸಂಬಂಧವನ್ನು ಪುನರ್ವಿಮರ್ಶಿಸುವ ಅಗತ್ಯವಿದೆ. ವಿಜಯನಗರ ಸಾಮ್ರಾಜ್ಯ ಕೇರಳದಲ್ಲಿ ವಿಜಯ ಸಾಧಿಸಿತ್ತೆಂದು ತಿಳಿಸುವ ಪ್ರಥಮ ದಾಖಲೆ ಬೇಲೂರಿನ ಚೆನ್ನಕೇಶವ ದೇವಾಲಯದಲ್ಲಿ ಸಿಕ್ಕಿದ ತಾಮ್ರ ಶಾಸನ. ಇದರ ಕಾಲ ಶಕ 1304 (ಕ್ರಿ.ಶ. 1382). ಇದರಂತೆ ಬುಕ್ಕಮಹಾರಾಯನ ಮಗ ಎರಡನೆಯ ಹರಿಹರ ಚೋಳ, ಕೇರಳ ಮತ್ತು ಪಾಂಡ್ಯ ರಾಜರುಗಳನ್ನು ಸೋಲಿಸಿ ಈ ರಾಜ್ಯಗಳಲ್ಲಿ ತನ್ನ ಕೀರ್ತಿಯನ್ನು ಬೆಳಗಿಸಿದನು.[2] ಬಾರಕೂರಿನಲ್ಲಿ ಸಿಕ್ಕ ಶಾಸನದಲ್ಲಿ (ಕ್ರಿ.ಶ. 1392) ವಿಜಯನಗರ ಸಾಮ್ರಾಜ್ಯ ಹೈವ, ತುಳು, 'ಮಲ್ಲಹ'ವೆಂದು ತಿಳಿಸಿ 'ಈ ಮಲಹಾ,[3] ಮಲಬಾರು ಎಂದು ಅಭಿಪ್ರಾಯಪಡಲು ಅವಕಾಶವಿದೆ. ಆದರೆ ಕೇರಳದಲ್ಲಿರುವ ಪ್ರಚಲಿತ ದಾಖಲೆಯಂತೆ ವಿಜಯನಗರದ ಚಕ್ರವರ್ತಿಗಳು ತುಳುನಾಡನ್ನು ಗೆದ್ದ ನಂತರ ಕೊಲಸ್ತೇರಿ ಅರಸರೊಂದಿಗೆ ಘರ್ಷಣೆಗೆ ಬಂದು ಚಂದ್ರಗಿರಿಯ ಉತ್ತರಕ್ಕೆ ಇರುವ ಈ ಅರಸರು ತಮ್ಮ ರಾಜ್ಯದ ಭಾಗವನ್ನು ವಿಜಯನಗರದವರಿಗೆ ಒಪ್ಪಿಸಿದರು.[4] ವಿಜಯನಗರ ಅರಸರ ಉಲ್ಲೇಖವಿರುವ ಕನ್ನಡ ಭಾಷೆಯ ಶಾಸನಗಳು ಕಾಸರಗೋಡು ಜಿಲ್ಲೆಯ ದೇಲಂಪಾಡಿ, ಮಂಗಲಪಾಡಿ, ಮುಳಿಂಜ ಮತ್ತು ಸಿರಿಯಾದಲ್ಲಿ ಸಿಕ್ಕಿವೆ.[5] ಪಿರಿಷ್ಟನ ಅಭಿಪ್ರಾಯದಂತೆ ಮಲಬಾರಿನ ಅರಸುಗಳು ವಿಜಯನಗರ ಚಕ್ರವರ್ತಿಗಳಿಗೆ ಕಪ್ಪ ಕೊಟ್ಟು ಅವರ ಸಾಮಂತರಾಗಿದ್ದರು. ಇಷ್ಟಲ್ಲದೇ ವಿಜಯನಗರ ಆಸ್ಥಾನದಲ್ಲಿ ತಮ್ಮ ಪ್ರತಿನಿಧಿಗಳನ್ನು ಇರಿಸಿದ್ದರು.[6] ಒಟ್ಟಿನಲ್ಲಿ ವಿಜಯನಗರ ಸಾಮ್ರಾಜ್ಯದ ಪ್ರತ್ಯಕ್ಷ ಆಡಳಿತ ಕಣ್ಣಾನೂರಿನವರೆಗೆ ಹಬ್ಬಿತ್ತು ಎಂದು ಕೇರಳದ ಇತಿಹಾಸಗಾರರೊಬ್ಬರು[7] ಅಭಿಪ್ರಾಯ ಪಟ್ಟಿದ್ದನ್ನು ಇಲ್ಲಿ ಗಮನಿಸುವ ಅಗತ್ಯವಿದೆ.

ಇಮ್ಮಡಿ ದೇವರಾಯನ ಕಾಲದಲ್ಲಿ ಕಲ್ಲಿಕೋಟೆ ಜಾಮೋರಿನ ವಿಜಯನಗರ ಚಕ್ರವರ್ತಿಗಳಿಗೆ ಹೆದರಿಕೆಯಿಂದ ಗೌರವ ಸಲ್ಲಿಸುತ್ತಿದ್ದರೆಂದು ಪ್ರವಾಸಿ ಅಬ್ದುರ್ ರಜಾಕನು ತಿಳಿಸಿದ್ದಾನೆ. ಇನ್ನೊಬ್ಬ ಪ್ರವಾಸಿ ಮತ್ತು ಇತಿಹಾಸಗಾರ ನ್ಯೂನಿಜ (1536ರಲ್ಲಿ ಬಂದವ)ನ ಅಭಿಪ್ರಾಯದಂತೆ ಕ್ವಿಲಾನಿನ ರಾಜನು ವಾರ್ಷಿಕವಾಗಿ ಇಮ್ಮಡಿ ದೇವರಾಯನಿಗೆ ಕಪ್ಪವನ್ನು ಕೊಡುತ್ತಿದ್ದನು.[8] ಒಟ್ಟಿನಲ್ಲಿ ಕೇರಳದ ಅರಸರು ವಿಜಯನಗರ ಘನತೆಯನ್ನು ಒಪ್ಪಿಕೊಂಡು ತಮ್ಮ ರಾಜ್ಯಗಳನ್ನು ಆಳಿಕೊಂಡಿದ್ದರು ಎಂದು ಅಭಿಪ್ರಾಯ ಪಡಬಹುದು.

ಕರ್ನಾಟಕದಲ್ಲಿ ಸಿಕ್ಕ ಕೆಲವು ಶಾಸನಗಳು ಕೃಷ್ಣದೇವರಾಯನು ಕೇರಳವನ್ನು ಗೆದ್ದು ತನ್ನ ಆಡಳಿತವನ್ನು ಸ್ಥಾಪಿಸಿದನೆಂದು ತಿಳಿಸಿವೆ. ಆದರೆ ಕೇರಳದಲ್ಲಿ ಸಿಕ್ಕ ಐತಿಹಾಸಿಕ ದಾಖಲೆಗಳು ಇದನ್ನು ಸಮರ್ಥಿಸುವುದಿಲ್ಲ. ಇಲ್ಲಿ ಪ್ರಚಲಿತವಿದ್ದ ಕೇರಳೋತ್ಪತ್ತಿಯಂತೆ ಆನೆಗುಂದಿ ಕೃಷ್ಣದೇವರಾಯನು ಕೇರಳದಲ್ಲಿ ತನ್ನ ಪರವಾಗಿ ಆಳಲು ಆದಿರಾಯ ಪೆರುಮಾಳ, ಪಂಡಿ ಪೆರುಮಾಳ ಮತ್ತು ಚೇರನ್ ಪೆರುಮಾಳರನ್ನು ನೇಮಿಸಿದ್ದನು. ಇವರುಗಳ ಆಡಳಿತ ನಿರ್ಧಿಷ್ಟ ವರ್ಷವಾಗಿತ್ತು. ಆದರೆ ಇವರಲ್ಲಿ ಒಬ್ಬನಾದ ಚೇರನ್ ಪೆರುಮಾಳ್ ನಂಬೂದರಿಗಳ ಮೆಚ್ಚುಗೆ ಪಡೆದು ನಿರ್ಧಿಷ್ಟ ವರ್ಷ ಕಳೆದ ನಂತರವೂ ತನ್ನ ಅಧಿಕಾರವನ್ನು ತ್ಯಜಿಸಿ ರಾಜಧಾನಿಗೆ ಮರಳಲಿಲ್ಲ. ಇಷ್ಟಲ್ಲದೇ ತನ್ನ ಸ್ಥಾನವನ್ನು ಇಲ್ಲಿ ಭದ್ರಪಡಿಸಿಕೊಂಡನು. ಇದರಿಂದ ಕುಪಿತಗೊಂಡ ಕೃಷ್ಣದೇವರಾಯನು ಬಲವಾದ ಸೈನ್ಯವನ್ನು ಚೇರನ್ ಪೆರುಮಾಳನ ವಿರುದ್ಧ ಕಳುಹಿಸಿದನು. ಈ ಸೈನ್ಯವನ್ನು ಚೇರನ್ ಪೆರುಮಾಳನು ಸೋಲಿಸಿದನು.[10] ಇಲ್ಲಿ ತಿಳಿಸಿದ ಸಂಗತಿಗಳಲ್ಲಿ ಕೆಲವು ಅತಿಶಯೋಕ್ತಿಗಳಿದ್ದರೂ ಕೃಷ್ಣದೇವರಾಯನ ಪ್ರತ್ಯಕ್ಷ ಆಡಳಿತ ಹೇರುವ ಪ್ರಯತ್ನವು ಕೇರಳದಲ್ಲಿ ವಿಫಲವಾಗಿಲ್ಲವೆಂದು ಅಭಿಪ್ರಾಯಪಡಬಹುದು. ಆದರೂ ಕೇರಳದ ಅರಸರು ವಿಜಯನಗರ ಚಕ್ರವರ್ತಿಗಳ ಹಿತಾಸಕ್ತಿಗೆ ವಿರುದ್ಧವಾಗಿ ವರ್ತಿಸಲಿಲ್ಲ. ನ್ಯೂನಿಜನ ಅಭಿಪ್ರಾಯದಂತೆ ಕಲ್ಲಿಕೋಟೆಯ ಜಾಮೋರಿನ ಕೃಷ್ಣದೇವರಾಯನಿಗೆ ವಾರ್ಷಿಕವಾಗಿ ಕಪ್ಪವನ್ನು ಕೊಟ್ಟು ತನ್ನ ರಾಜ್ಯವನ್ನು ಆಳಿಕೊಂಡಿದ್ದನು.[11]

ಪೋರ್ಚುಗೀಜ ರಾಜಕಾರಿಣಿ ಅಲ್ಬುಕರ್ಕ್‌ನು ಗೋವೆಯನ್ನು ಗೆಲ್ಲುವ ಪೂರ್ವದಲ್ಲಿ ಕೃಷ್ಣದೇವರಾಯನ ಹತ್ತಿರ ಕಲ್ಲಿಕೋಟೆ ರಾಜನ ಮೇಲೆ ಧಾಳಿ ನಡೆಸಲು ಸಹಾಯ ಕೇಳಿದನು. ಆದರೆ ತನ್ನ ಸಾಮಂತನಾಗಿದ್ದ ಜಾಮೋರಿನನ ವಿರುದ್ಧ ಸಹಾಯ ನೀಡಲು ಕೃಷ್ಣದೇವರಾಯನು ನಿರಾಕರಿಸಿದನು. ಇದನ್ನು ಪೋರ್ಚುಗೀಜ ಇತಿಹಾಸಗಾರ ಕೆಸ್ಟೆಂಡಾ ತಿಳಿಸುತ್ತಾನೆ. ಕೃಷ್ಣದೇವರಾಯನ ನಂತರ ದಕ್ಷಿಣ ಕೇರಳದಲ್ಲಿ (ವೆನಾಡ) ತಿರುವಾಂಕೂರು, ವಿಜಯನಗರ ಸಾಮ್ರಾಜ್ಯದ ಹಿತಾಸಕ್ತಿಗೆ ವಿರುದ್ಧವಾದ ಕೆಲವು ಘಟನೆಗಳು ನಡೆದವು. ಉದಾ: ಕ್ರಿ.ಶ. 1535ರಲ್ಲಿ ವೆನಾಡಿನ ಅರಸ ಭೂತಳ ವೀರ ಉದಯ ಮಾರ್ತಾಂಡವರ್ಮ ವಿಜಯನಗರ ಚಕ್ರವರ್ತಿ ಅಚ್ಯುತರಾಯನ ವಿರುದ್ಧ ದಂಗೆ ಹೂಡಿದ ಚೆಲ್ಲಪ್ಪ ನಾಯಕನಿಗೆ ಆಶ್ರಯ ಕೊಟ್ಟು ಚಕ್ರವರ್ತಿಯ ಅತೃಪ್ತಿಗೆ ಕಾರಣನಾದನು. ಅಚ್ಯುತರಾಯನು ಸಂಕಾಜಿ ತಿರುಮಲನ ನೇತೃತ್ವದಲ್ಲಿ ಪ್ರಬಲವಾದ ಸೈನ್ಯವನ್ನು ಕಳುಹಿಸಿ ವೆನಾಡಿನ ಅರಸನನ್ನು ಸೋಲಿಸಿ, ಸೋತ ರಾಜನು ವಿಜಯನಗರದ ಸಾರ್ವಭೌಮತೆಯನ್ನು ಒಪ್ಪಿಕೊಳ್ಳುವಂತೆ ಮಾಡಿದನು.[12]

ಈ ಘಟನೆಯ ಹತ್ತು ವರ್ಷಗಳ ನಂತರ ವೆನಾಡಿನ ಇನ್ನೊಬ್ಬ ಅರಸ ಶ್ರೀ ವೀರಕೇರಳವರ್ಮನು ವಿಜಯನಗರದ ಅಧೀನವಿದ್ದ ''ಕಾಯಲ್'' ರಾಜ್ಯದ ಮೇಲೆ ಧಾಳಿ ಮಾಡಿ ವಿಜಯನಗರ ಚಕ್ರವರ್ತಿ ಸದಾಶಿವರಾಯನ ಅಸಮಾಧಾನಕ್ಕೆ ಕಾರಣನಾದನು. ಇಷ್ಟಲ್ಲದೆ ಸಲ್ಲಿಸುತ್ತಿರುವ ವಾರ್ಷಿಕ ಕಪ್ಪವನ್ನು ನಿಲ್ಲಿಸಿದನು. ಈ ಪ್ರತಿಭಟನೆಯನ್ನು ಹತ್ತಿಕ್ಕಲು ವಿಜಯನಗರ ಸೈನ್ಯವು ವಿಠಲ ಮತ್ತು ತಿರುಮಲನ ನೇತೃತ್ವದಲ್ಲಿ ವೆನಾಡಿನ ಮೇಲೆ ಧಾಳಿ ಮಾಡಿತು. ಅಲ್ಲಿನ ಅರಸರ ದಂಗೆಯನ್ನು ಹತ್ತಿಕ್ಕುವಲ್ಲಿ ವಿಜಯನಗರ ಸೈನ್ಯವು ಯಶಸ್ಸು ಪಡೆಯಿತು. ಸಂತ ಪ್ರಾನ್ಸಿಸ್ ಜೇವಿಯರ್ (St. Francis Xavier) ಮಧ್ಯಸ್ಥಿಕೆಯಲ್ಲಿ ವೆನಾಡಿನ ರಾಜನು ವಿಜಯನಗರಕ್ಕೆ ಕೊಡುವ ವಾರ್ಷಿಕ ಕಪ್ಪವನ್ನು ಸಲ್ಲಿಸಲು ಒಪ್ಪಿಕೊಂಡನು ಮತ್ತು ತಿನ್ನವೆಲ್ಲಿಯನ್ನು ವಿಯನಗರಕ್ಕೆ ಬಿಟ್ಟುಕೊಟ್ಟನು.[13]

ಶಿವತತ್ವ ರತ್ನಾಕರ ಕಾವ್ಯದ ಅಧ್ಯಯನವು ತುಳು ಮಲೆಯಾಳ ಅರಸರುಗಳು ವಿಜಯನಗರದ ಹಿತಾಸಕ್ತಿಗೆ ವಿರುದ್ಧವಾಗಿ ನಡೆದುಕೊಂಡರೆಂದು ಸೂಚಿಸುತ್ತದೆ. ಇದನ್ನು ಹತ್ತಿಕ್ಕಲು ಕ್ರಿ.ಶ. 1550ರಲ್ಲಿ ವಿಜಯನಗರದ ಸದಾಶಿವರಾಯನು ಕೆಳದಿ ಸದಾಶಿವ ನಾಯಕನ ನೇತೃತ್ವದಲ್ಲಿ ಸೈನ್ಯ ಕಳುಹಿಸಿದನು. ಕೆಳದಿ ಸದಾಶಿವನಾಯಕನು ತುಳು ಮಲೆಯಾಳ ಅರಸುಗಳನ್ನು ಸೋಲಿಸಿ ಅವರು

ವಿಜಯನಗರದ ಸಾಮ್ರಾಜ್ಯಕ್ಕೆ ಕಪ್ಪವನ್ನು ಸಲ್ಲಿಸುವಂತೆ ಮಾಡಿದನು.[14] ಕ್ರಿ.ಶ. 1558ರಲ್ಲಿ ವೆನಾಡಿನ ಅರಸನು ವಿಜಯನಗರದ ಸಾರ್ವಭೌಮತೆಯನ್ನು ಅಲ್ಲಗಳೆದು ಸ್ವತಂತ್ರನೆಂದು ಘೋಷಿಸಿಕೊಂಡನು.

ರಾಜಕೀಯೇತರ ಸಂಪರ್ಕ

ವಾಣಿಜ್ಯ, ಕೃಷಿ, ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳಲ್ಲಿ ವಿಜಯನಗರ ಮತ್ತು ಕೇರಳ ನಿಕಟ ಸಂಪರ್ಕಕ್ಕೆ ಬಂದವು. ಇದರಿಂದಾಗಿ ಜನಾಂಗ ಚಲಾವಣೆ ಈ ಎರಡು ಪ್ರದೇಶಗಳಲ್ಲಿ ನಡೆಯಿತು. ಕೃಷಿ, ವ್ಯಾಪಾರ ಮತ್ತು ಇನ್ನಿತರ ಉದ್ಯೋಗ ಪಡೆಯಲು ಕೇರಳದಿಂದ ವಿಜಯನಗರ ರಾಜ್ಯಕ್ಕೆ ವಲಸೆ ಬಂದರು. ಇದನ್ನು ಕದ್ರಿ, ಬಾರಕೂರು, ಮೂಡಬಿದ್ರೆ, ಕುಂದಾಪುರದ ಒಡೆರ ಹೋಬಳಿ, ಕೊಲ್ಲೂರು, ಉಪ್ಪುಂದ, ಭಟ್ಕಳದಲ್ಲಿ ಸಿಕ್ಕ ಶಾಸನಗಳು[15] ತಿಳಿಸುತ್ತವೆ. ಪ್ರವಾಸಿ ಬಾರ್ಬೋಸಾ ಮತ್ತು ಪೋರ್ಚುಗೀಜ ಇತಿಹಾಸಗಾರ ಗೆಸ್ಪರಕೊರೆಯಾ ಬರಹಗಳಿಂದ[16] ಮಲೆಯಾಳಿಗಳು ಮಿರ್ಜಾನ, ಹೊನ್ನಾವರ, ಭಟ್ಕಳ, ಬಸ್ರೂರು, ಮಂಗಳೂರು ಮತ್ತು ಕುಂಬಳ ರೇವುಗಳಲ್ಲಿ ಉತ್ತಮ ರೀತಿಯಲ್ಲಿ ವ್ಯಾಪಾರ ಮಾಡಿಕೊಂಡಿದ್ದರೆಂದು ತಿಳಿಸಿದ ಸಂಗತಿ ಗಮನಾರ್ಹ. ಇದೇ ರೀತಿಯಲ್ಲಿ ಕನ್ನಡ ಕರಾವಳಿಯಿಂದ ಗೌಡಸಾರಸ್ವತ ವ್ಯಾಪಾರಿಗಳು ಕೇರಳದ ಕನ್ನಾನೂರು, ಕೊಡಂಗಲೂರು, ಕೊಚ್ಚಿ, ಮದ್ದಚೇರಿಗಳಲ್ಲಿ ವ್ಯಾಪಾರ ನಡೆಸುತ್ತಿದ್ದರೆಂಬುದನ್ನು ಕೊಚ್ಚಿಯ ವಸ್ತು ಸಂಗ್ರಹಾಲಯದಲ್ಲಿಯ ಕ್ರಿ.ಶ. 1542 ರ ಒಂದು ಶಾಸನವು ತಿಳಿಸುತ್ತದೆ. ಕರ್ನಾಟಕದ ವಣಿಕ ಸಂಘದ ಕೇಂದ್ರಗಳು ಕೇರಳದ ರೇವುಗಳಲ್ಲಿದ್ದವು. ಧಾರ್ಮಿಕ ಚಟುವಟಿಕೆಗಳಲ್ಲಿ ವಿಜಯನಗರ ಸಾಮ್ರಾಜ್ಯ ಮತ್ತು ಕೇರಳದ ಸಂಪರ್ಕ ವೃದ್ಧಿಹೊಂದಿತು. ಕೇರಳದಿಂದ 'ನಂಬಿ' ಬ್ರಾಹ್ಮಣರು ಕರಾವಳಿಯಲ್ಲಿರುವ ಶೈವ ದೇವಾಲಯಗಳಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದ್ದರು. ಉದಾ: ಕ್ರಿ.ಶ. 1455[17] ರ ಹಾಲಾಡಿ ಶಾಸನದಂತೆ ಕೇರಳದ 'ನಂಬಿ' ಗಳು ಸ್ಥಾನಪತಿಗಳಾಗಿ ದೇವಾಲಯದಲ್ಲಿ ಕಾರ್ಯ ನಡೆಸುತ್ತಿದ್ದರು. ಕೇರಳದ ದೇವಾಲಯಗಳ ದಾಖಲೆಗಳಂತೆ ತಾರನೂತ್ತೂರು ನಂಬುದರಿ ಪಾಡ ಮನೆತನದವರು ನೇತ್ರಾವತಿಯ ದಕ್ಷಿಣದಿಂದ ಚಂದ್ರಗಿರಿಯ ಉತ್ತರದವರೆಗಿನ ದೇವಾಲಯಗಳಲ್ಲಿ ತಾಂತ್ರಿಕ ಕೆಲಸ ನಡೆಸುವ ಹಕ್ಕನ್ನು ಹೊಂದಿದ್ದರು.[18] ಕೇರಳದ ಕಲ್ಲಿಕೋಟೆ, ತಿರುವಾಡಿ ಮತ್ತು ತಿರುವಾರು ಶೈವ ಕೇಂದ್ರಗಳಾಗಿದ್ದು ಕರ್ನಾಟಕದ ಶೈವರು ಈ ಸ್ಥಳಗಳ ಶೈವ ಕೇಂದ್ರಗಳೊಂದಿಗೆ ಭಾವನಾತ್ಮಕ ಸಂಪರ್ಕವನ್ನು ಹೊಂದಿದ್ದರು.[19] ಕನ್ನಡ ಕರಾವಳಿಯ ದೈವ, ಭೂತ, ಸರ್ಪಾರಾಧನೆ ಕೇರಳದಲ್ಲೂ ಪ್ರಭಾವವನ್ನು ಬೀರಿದ್ದವು. ಭೂತ ಮತ್ತು ದೇವ, ದೇವಿಗಳು ಕನ್ನಡ ಕರಾವಳಿ ಮತ್ತು ಕೇರಳಗಳೊಳಗೆ ಚಲಾವಣೆ ನಡೆಸಿದ್ದು ವಿಜಯನಗರದ ಆಳ್ವಿಕೆಯ ಅಂತ್ಯಕಾಲದಲ್ಲಿ.[20] ಕರ್ನಾಟಕದ ವೈಷ್ಣವ ಪಂಥದ ಪ್ರಭಾವವು ಕೇರಳದ ವೈಷ್ಣವ ಪಂಥದ ಮೇಲೆ ಪರಿಣಾಮವನ್ನು ಬೀರಿತ್ತು. ಕರ್ನಾಟಕದ ವೈಷ್ಣವ ಸಂತರು ಕೇರಳದ ವೈಷ್ಣವ ದೇವಾಲಯಗಳಿಗೆ ಯಾತ್ರ ನಡೆಸಿ ಅಲ್ಲಿನ ಪೂಜಾಕ್ರಮಗಳಲ್ಲಿ ಬದಲಾವಣೆ ತಂದದ್ದು ಮಧ್ವಾಚಾರ್ಯ ಮತ್ತು ವಾದಿರಾಜರ ಬರಹಗಳಿಂದ ತಿಳಿದುಬರುತ್ತದೆ. ಕೇರಳ ಮತ್ತು ವಿಜಯನಗರದ ನಿಕಟ ಸಂಪರ್ಕದಿಂದ ಗಡಿ ಪ್ರದೇಶದಲ್ಲಿ ವಿಶಿಷ್ಟವಾದ ಲಿಪಿ ಬಳಕೆ ಬಂತು. ಅದೇ ಲಿಪಿ ತಿಗಳಾರಿ. ಈ ಲಿಪಿಯಲ್ಲಿ ಬರೆದ ಬರಹಗಳು ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆಯ ಕೆಲವು ಸ್ಥಗಳಲ್ಲಿ ಸಿಕ್ಕಿವೆ.

ಉಪಸಂಹಾರ:

1. ಹಲವಾರು ಐತಿಹಾಸಿಕ ದಾಖಲೆಗಳು ವಿಜಯನಗರದ ಪ್ರತ್ಯಕ್ಷ ಆಡಳಿತ ಕಾಸರಗೋಡಿನಲ್ಲಿತ್ತೆಂದು ತಿಳಿಸುತ್ತವೆ. ಇನ್ನುಳಿದ ಕೇರಳದ ಪ್ರದೇಶಗಳಲ್ಲಿ ವಿಜಯನಗರ ಘನತೆಯು ಇತ್ತು. ಇಲ್ಲಿನ ರಾಜರು ಹೆಚ್ಚು ಕಡಿಮೆ ಸ್ವತಂತ್ರವಾಗಿಯೇ ಆಡಳಿತ ನಡೆಸಿಕೊಂಡು ಬಂದಿದ್ದರು.

2. ವಿಜಯನಗರ ಸಾಮ್ರಾಜ್ಯದ ಇರುವಿಕೆಗೆ ಕೇರಳದಿಂದ ಬಂದ ವಿಪತ್ತನ್ನು ಎದುರಿಸಲು ವಿಜಯನಗರ ಅರಸರು ಯಶಸ್ಸು ಪಡೆದರೂ, ಅವರ ಪ್ರತ್ಯಕ್ಷ ಆಡಳಿತ ನಡೆಸುವ ಪ್ರಯತ್ನ ಇಲ್ಲಿ ವಿಫಲವಾಯಿತು.

3. ರಾಜಕೀಯೇತರಗಳಲ್ಲಿ ವಿಜಯನಗರ ಮತ್ತು ಕೇರಳಗಳೊಳಗೆ ನಿಕಟ ಸಂಪರ್ಕವಿದ್ದಿತು. ಇದು ಜನಾಂಗ ಚಲಾವಣೆಗೆ ಪ್ರೋತ್ಸಾಹವನ್ನು ನೀಡಿತು. ಇದರಿಂದಾಗಿ ವಿಶಿಷ್ಟ ಸಂಸ್ಕೃತಿಯು ವಿಜಯನಗರ ಮತ್ತು ಕರ್ನಾಟಕದ ಗಡಿಯಲ್ಲಿ ಬೆಳೆದು ಬಂತು. ಒಟ್ಟಿನಲ್ಲಿ ಕೇರಳ ಸಂಸ್ಕೃತಿಯ ಮೇಲೆ ವಿಜಯನಗರದ ಸಾಂಸ್ಕೃತಿಕ ಪ್ರಭಾವ ಬೀರಿದ್ದನ್ನು ಕೆಲವು ದಾಖಲೆಗಳು ಸೂಚಿಸುತ್ತವೆ. ಈ ವಿಚಾರದಲ್ಲಿ ಇನ್ನಷ್ಟು ಆಳವಾದ ಅಧ್ಯಯನ ನಡೆಸುವ ಅವಶ್ಯಕತೆಯಿದೆ.

ಟಿಪ್ಪಣಿಗಳು

1. ಕೇರಳದಲ್ಲಿರುವ ಅರೆ ಐತಿಹಾಸಿಕ ದಾಖಲೆಗಳಲ್ಲಿ ಕೇರಳೋತ್ಪತ್ತಿ ಮತ್ತು ಕೊಲೆಸ್ತೇರಿ ಅರಸರ ವಿವರ ತಿಳಿಸುವ ಮೂಸಿಕಾವಂಶ ಪ್ರಮುಖವಾಗಿವೆ. ಕೇರಳೋತ್ಪತ್ತಿ ಗ್ರಂಥ 17ನೇ ಶತಮಾನದ ಅಂತ್ಯದಲ್ಲಿ ರಚಿತವಾಗಿರಬೇಕು. ಇದರಲ್ಲಿ ಹಲವಾರು ಐತಿಹಾಸಿಕ ಸಂಗತಿಗಳು ವಿರುದ್ಧವಾಗಿ (Contradict) ತಿಳಿಸಿದರೂ ಅಲ್ಲಲ್ಲಿ ಕೆಲವು ಐತಿಹಾಸಿಕ ಸಂಗತಿಗಳು ತೇಲಿಕೊಂಡಿವೆ. ಮೂಸಿಕ ವಂಶ ಹದಿನಾರನೇ ಶತಮಾನದಲ್ಲಿ ರಚಿತವಾಗಿರಬೇಕು. ಈ ಗ್ರಂಥಗಳಲ್ಲಿ ತಿಳಿಸಲಾದ ಐತಿಹಾಸಿಕ ಸಂಗತಿಗಳನ್ನು ಕುಂಜನ್ ಮತ್ತು ಪಿಳ್ಳೆಯರ *ಸ್ಟಡೀಸ್ ಇನ್ ಕೇರಳ ಹಿಸ್ಟರಿ*, ಎ. ಶ್ರೀಧರರ ಮೆನನ್‌ರ *ಎ ಸರ್ವೆ ಆಫ್ ಕೇರಳ ಹಿಸ್ಟರಿ*, ಪಿ.ಕೆ. ರಾಜರ *ಮೆಡಿವಲ್ ಕೇರಳ* ಮತ್ತು ಲೋನನ್‌ರ *ಮಲಬಾರ್* ಗ್ರಂಥಗಳಿಂದ ಎರವು ಪಡೆದುಕೊಳ್ಳಲಾಗಿದೆ.

2. *ಎಕ*, V (ಪರಿಷ್ಕೃತ), ಬೇಲೂರು 17.

3. *ಸೌಇಂಇ*, VII, ಸಂ. 344. ನೋಡಿ ಹೆಚ್ಚಿನ ವಿವರ ಕೆ.ವಿ. ರಮೇಶ್, *ಎ ಹಿಸ್ಟರಿ ಆಫ್ ಸೌತ್ ಕೆನರ*, ಪು. 158.

4. ಕೊಲೆಸ್ತೇರಿ ರಾಜ್ಯ 13ನೇ ಶತಮಾನದ ಅಂತ್ಯದಲ್ಲಿ ಪ್ರಾಬಲ್ಯಕ್ಕೆ ಬಂತು. ಇವರ ರಾಜ್ಯದಲ್ಲಿ ಕಾಸರಗೋಡಿನ ನೀಲೇಶ್ವರ, ಕಾಸರಗೋಡು, ಕುಂಬಳ ಪ್ರದೇಶಗಳು ಒಳಗೊಂಡಿದ್ದವು. ಕುಂಜನ್ ಪಿಳ್ಳೆ, *ಪೂರ್ವೋಕ್ತ*, ಪು. 193. ಆದರೆ ಕೊಲೆಸ್ತೇರಿ ರಾಜ್ಯದ ಗಡಿ ಮಂಗಳೂರಿನವರೆಗೆ ಇತ್ತೆಂಬ ಈ ದಾಖಲೆಯ ಅಭಿಪ್ರಾಯವನ್ನು ಸಮರ್ಥಿಸುವ ಸಮಕಾಲೀನ ದಾಖಲೆ ಇನ್ನೂ ನಮಗೆ ಸಿಕ್ಕಿಲ್ಲ.

5. ಹೆಚ್ಚಿನ ವಿವರ ನೋಡಿ ಉಪ್ಪಂಗಳ ರಾಮಭಟ್ಟ, 1994, *ಗಡಿನಾಡು ಕಾಸರಗೋಡು*, ಉಡುಪಿ, ಪು. 143-44.

6. *ದಿ ರೈಜ್ ಆಫ್ ಮಹಮದನ್ ಪಾವರ್ ಇನ್ ಇಂಡಿಯ*, ಕಲ್ಕತ್ತ, 1910, II, ಪು. 337.

7. ಕೆ.ಎಂ. ಪಣಿಕ್ಕರ್, 1921, *ಮಲಬಾರ್ ಆಂಡ್ ದಿ ಪೋರ್ತುಗೀಜ್*, ಬಾಂಬೆ, ಪು. 12.

8. ರಾಬರ್ಟ್ ಸಿವೆಲ್, 1991, *ಎ ಫಾರ್‌ಗಾಟನ್ ಎಂಪಾಯರ್*, ಪು. 87, 302.

9. *ಎಕ*, V, ಬೇಲೂರು 172. ಇದು ಸಾಳುವ ನರಸಿಂಹರಾಯನು ಕೇರಳವನ್ನು ಗೆದ್ದುದನ್ನು ತಿಳಿಸುತ್ತದೆ.

10. ಕುಂಜನ್ ಪಿಳ್ಳೆ, *ಪೂರ್ವೋಕ್ತ*, ಪು. 189.

11. ಸಿವೆಲ್, *ಪೂರ್ವೋಕ್ತ*, ಪು. 122, 374, 388.

12. *ತ್ರಾವಂಕೋರ್ ಆರ್ಕಿಯಾಲಜಿಕಲ್ ಸೀರೀಸ್* (ತ್ರಿವಂದ್ರಮ್ 1988), ಪು. 103; ಎನ್. ವೆಂಕಟರಮಣಯ್ಯ, *ಸ್ಟಡೀಸ್ ಇನ್ ಥರ್ಡ್ ಡೈನಾಸ್ಟಿ ಆಫ್ ವಿಜಯನಗರ*, ಪು. 78-79; ಎ. ಶ್ರೀಧರ ಮೆನನ್, *ಸರ್ವೆ ಆಫ್ ಕೇರಳ ಹಿಸ್ಟರಿ*, ಪು. 78-79.

13. ಹೆರಾಸ, 1927, *ಅರವೀಡು ಡೈನಾಸ್ಟಿ ವಿಜಯನಗರ*, ಮದ್ರಾಸ್, ಪು. 162; ಶ್ರೀಧರ ಮೆನನ್, *ಪೂರ್ವೋಕ್ತ*, ಪು. 231.

14. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, 1927, *ಸೋರ್ಸಸ್ ಆಫ್ ವಿಜಯನಗರ ಹಿಸ್ಟರಿ*, ಮದ್ರಾಸ್, ಪು. 195.

15. *ಸೌಇಂಇ*, VII, ಸಂ. 190, 308, 321, 358; IX ii, ಸಂ. 430. ಕ್ರಿ.ಶ. 1387, 1528, 1563 ರ ತೇದಿಯ ಅಪ್ರಕಟಿತ ಮೂಡಬಿದ್ರೆ ಉಪ್ಪುಂದ ಮತ್ತು ಕೊಲ್ಲೂರಿನ ತಾಮ್ರ ಶಾಸನಗಳು, *ಕರ್ನಾಟಕ ಶಾಸನ*, ಸಂಪುಟ III, ನಂ. 9, *ಆರಿಸೌಇಂಎ*, 1932, ಸಂ. 320.

16. ಬಾರ್ಬೋಸ, *ದಿ ಬುಕ್ ಆಫ್ ಬಾರ್ಬೋಸ*, I, ಪು. 185, 186, 188, 194, 196, 197. ಹೆರಾಸ್, *ಪೂರ್ವೋಕ್ತ*, ಪು. 187.

17. *ಆರಿಸೌಇಂಎ*, 1932, ಸಂ. 313.

18. ಕುಂಜನ ಪಿಳ್ಳೆ, *ಪೂರ್ವೋಕ್ತ*, ಪು. 193. ಕರಾವಳಿ ಕರ್ನಾಟಕದ ಶಾಕ್ತ ಕೇಂದ್ರಗಳಲ್ಲಿ ಒಂದಾದ ಕೊಲ್ಲೂರಿನಲ್ಲಿ ಮಲೆಯಾಳಿ ತಾಂತ್ರಿಕರ ಪ್ರಭಾವವು ಇತ್ತು.

19. ಲಕ್ಕಣ ದಂಡೇಶ, *ಶಿವತತ್ವ ಚಿಂತಾಮಣಿ* (ಸಂ. ಎಸ್. ಬಸವಪ್ಪ, ಮೈಸೂರು 1960), ಪು. 78, 79, 616, 621. ಲಕ್ಕಣ ದಂಡೇಶ ನಾಯನಮಾರ ದೇವಾಲಯ ಕಟ್ಟಿಸಿದ್ದನ್ನು ಉಲ್ಲೇಖಿಸುವ ಶಾಸನಗಳಿವೆ.

20 ನೋಡಿ ಹೆಚ್ಚಿನ ವಿವರ ಸಾಲೆತ್ತೂರ, 1936, *ಎನ್ಸಿಯಂಟ್ ಕರ್ನಾಟಕ ಹಿಸ್ಟರಿ ಆಫ್ ತುಳುವಾಸ್*, I, ಪೂನ, ಪು. 299, 300, 371. ಮುಂದಾಳಪಾದ್ದನದಲ್ಲಿ ನಾಯನಮಾರರು ಕರಾವಳಿ ಕರ್ನಾಟಕಕ್ಕೆ ವಲಸೆ ಬಂದ ವಿವರದ ಕಥೆಯಿದೆ.

24. ಜಾರ್ಜ್ ವಿಲ್‌ಹೆಲ್ಮ್ ಫಿಡ್ರಿಚ್ ಹೆಗಲ್‌ನ (1770-1831) ಇತಿಹಾಸ ದರ್ಶನ ಮತ್ತು ವಿಜಯನಗರದ ಪರಂಪರೆ

ಕೆ.ಎಸ್. ಶಿವಣ್ಣ

ಇತಿಹಾಸವೆಂದರೆ ಕೇವಲ ಘಟನೆಗಳ ದಾಖಲೆಯೂ ಅಲ್ಲ ಅಥವಾ ಅವುಗಳ ವಿವರಣೆಗಳೂ ಅಲ್ಲ. ಇತಿಹಾಸ ಅಧ್ಯಯನ ಅರ್ಥಪೂರ್ಣವಾಗಬೇಕಾದರೆ ಘಟನೆಗಳ ಹಿಂದಿನ ಅರ್ಥವನ್ನು ಇತಿಹಾಸಕಾರ ಗ್ರಹಿಸಬೇಕು. ಇತಿಹಾಸ 'ಚಲನೆ'ಯಲ್ಲಿರುವ ಕ್ರಿಯೆ; ಸತ್ತು ಹೋದ ಕ್ರಿಯೆಯಲ್ಲ. ಏಕೆಂದರೆ 'ಗತ' ಕಾಲ 'ವರ್ತ'ಮಾನ ಕಾಲದಲ್ಲಿ ಬದುಕಿರುತ್ತದೆ. ಅಂತೆಯೇ ವರ್ತಮಾನ ಕಾಲ 'ಭವಿಷ್ಯ'ದತ್ತ ಸಾಗಿ ಒಂದು ದಿವಸ ಅದೂ ಸಹ ವರ್ತಮಾನವಾಗುತ್ತದೆ; ವರ್ತಮಾನವಾದದ್ದು ಗತಕಾಲವಾಗುತ್ತದೆ. ಇಂತಹ 'ಚಲನೆ' (motion)ಯನ್ನು ಸ್ಪಷ್ಟವಾಗಿ ಗುರುತಿಸುವ ಕಾರ್ಯವನ್ನು ಮಾಡಿರುವ ದಾರ್ಶನಿಕರಲ್ಲಿ ಜರ್ಮನ್ ದೇಶದ ಹೆಗಲ್ ಒಬ್ಬನಾಗಿದ್ದಾನೆ.

ಅವನು ಒಬ್ಬ ಆದರ್ಶವಾದಿ ದಾರ್ಶನಿಕನಾಗಿದ್ದು, ಇತಿಹಾಸದ ಚಾಲನೆಯಲ್ಲಿ ''ಸಂಘರ್ಷ - ಸಂಯೋಜನೆ'' (dialectic scheme) ಎಂಬ ಸಿದ್ಧಾಂತವನ್ನು ಮಂಡಿಸಿದ್ದಾನೆ. ಅವನ ಪ್ರಕಾರ ಇತಿಹಾಸದ ಮತ್ತು ಭಾವನೆಗಳ (ideas) ಪ್ರಗತಿಯಾಗುವುದು ಸ್ಥಾಪಿತವಾದ ಒಂದು ನಿರ್ದಿಷ್ಟ ಸ್ವರೂಪದ ಪರಿಕಲ್ಪನೆಯಿಂದ ಆರಂಭವಾಗಿ ಅದರ ವಿರುದ್ಧವಾಗಿ ಹುಟ್ಟುವ ಪ್ರತಿ ಭಾವನೆಯೊಡನೆ ನಡೆಯುವ ಸಂಘರ್ಷದಿಂದ. ಇಂತಹ ಸಂಘರ್ಷ(dialectic) ದಿಂದ ಒಂದು ಸಂಸ್ಕೃತಿ ಅಥವಾ ಸಮಾಜ ಕೆಳ ಹಂತದಿಂದ ಮೇಲಿನ ಹಾಗೂ ಹೆಚ್ಚು ಶ್ರೀಮಂತವಾದ ಸಂಯೋಜಿತ - ಸಂಕೀರ್ಣವಾದ (synthesis) ಭಾವನೆಯಲ್ಲಿ ಪರ್ಯಾವಸಾನಗೊಳ್ಳುತ್ತದೆ. ಈ ಕ್ರಿಯೆಯೇ ಪುನರಾವರ್ತನೆಗೊಳ್ಳುತ್ತಾ ಸಾಗುತ್ತದೆ. ಮಾನವ ಹೆಚ್ಚು ಹೆಚ್ಚು ಪ್ರಗತಿಯನ್ನು ಭಾವನೆಗಳ ಹಂತದಲ್ಲಿ ಸಾಧಿಸುತ್ತಾ ಸಾಗುತ್ತಾನೆ. ಮನುಷ್ಯನ ಮನಸ್ಸು ಅಥವಾ ಬುದ್ಧಿಯು ಕೇವಲ ಪ್ರಜ್ಞೆಯಿಂದ, ಸ್ವಯಂ ಅಥವಾ ಅಹಂ-ಪ್ರಜ್ಞೆ, ತರ್ಕ, ಚೇತನ, ಧರ್ಮಗಳನ್ನು ಹಾದು ಪೂರ್ಣ ಜ್ಞಾನದತ್ತ ಸಾಗಿದೆ ಎಂಬುದನ್ನು ತನ್ನ ಗ್ರಂಥದಲ್ಲಿ ವಿವರಿಸಿದ್ದಾನೆ. (The Phenomenology of mind ಮತ್ತು Science of Logic).

ಇವನ ಇತಿಹಾಸ ದರ್ಶನವನ್ನು ವಿಜಯನಗರದ ಇತಿಹಾಸಕ್ಕೆ ಅನ್ವಯಿಸಿ ನೋಡುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ. 14ನೇ ಶತಮಾನದಲ್ಲಿ ವಿಜಯನಗರ ಸ್ಥಾಪನೆಯಾದಾಗ ಇದ್ದ ಹಿನ್ನೆಲೆ ಯಾವುದು? ಇದು ಬಹಳ ಮುಖ್ಯ. ವಿಜಯನಗರದ ಅರಸರು ಹಿಂದಿನಿಂದ ಬಂದಿದ್ದ ಪರಂಪರೆಯನ್ನು ಒಪ್ಪಿಕೊಂಡು ಕಾಲಕ್ಕೆ ತಕ್ಕಂತೆ ಸೂಕ್ತವಾದ ಬದಲಾವಣೆಗಳನ್ನು ಮಾಡಿ, ಅದನ್ನು ಬೆಳಸಿ, ರಕ್ಷಿಸಿಕೊಂಡು ಬರಬೇಕಾದ ಜವಾಬ್ದಾರಿಯನ್ನು ನಿರ್ವಹಿಸಬೇಕಾಯಿತು. ಇಂತಹ ಸಂದರ್ಭದಲ್ಲಿ ವಿಜಯನಗರದ ಇತಿಹಾಸದ ''ಚಾಲನೆ''ಯಲ್ಲಿದ್ದ 'ಸ್ಥಾಪಿತ' ಭಾವನೆ (Thesis) ಅದಕ್ಕೆ ವಿಪುಲವಾದ ಭಾವನೆ (Antithesis)ಗಳು ಯಾವುವು ಮತ್ತು ಅವುಗಳ ಸಂಘರ್ಷದಿಂದ (dialectic)ಹೇಗೆ ''ಸಮನ್ವಯ'' (Synthesis) ಉಂಟಾಗಿ ಆ ಮೂಲಕ ಸಮಗ್ರ ಸಮಾಜ ಒಂದು ರೀತಿಯಲ್ಲಿ ''ಪ್ರಗತಿ'' ಯನ್ನು ಸಾಧಿಸಲು ಪ್ರಯತ್ನಿಸಿತು. ಈ ಪ್ರಬಂಧದಲ್ಲಿ ವಿಜಯನಗರದ ಸ್ಥಾಪನೆಯ ಹಿನ್ನೆಲೆಗೆ ಸಂಬಂಧಿಸಿದ ವಿಷಯವನ್ನು ಮಾತ್ರ ಚರ್ಚಿಸಲಾಗಿದೆ. ಮುಂದೆ ಉಳಿದ ವಿಷಯಗಳನ್ನು ಕೈಗೆತ್ತಿಕೊಳ್ಳಲಾಗುವುದು.

ವಿಜಯನಗರದ ಸ್ಥಾಪನೆಯ ಕಾಲ 1336 ಎಂದು ಅನೇಕ ಇತಿಹಾಸಕಾರರು ಭಾವಿಸುತ್ತಾರೆ. 1296-1336ರ ನಡುವಣ ದಕ್ಷಿಣ ಭಾರತದ ಇತಿಹಾಸ ಒಂದು ಪ್ರಮುಖ ಘಟ್ಟ. ಈ ಅವಧಿಯಲ್ಲಿ ಅತ್ಯಂತ ಪ್ರಮುಖವಾದ ಭಾವನೆಗಳು ಘಟನೆಗಳ ಮೂಲಕ ವ್ಯಕ್ತಗೊಂಡು ಘರ್ಷಣೆಗೆ ದಾರಿಮಾಡಿಕೊಟ್ಟಿತು. ಟರ್ಕ್-ಆಫ್ಘನ್ ಜನಾಂಗದ ಮೂಲದ ವಂಶಗಳ ದೆಹಲಿ ಸಾಮ್ರಾಜ್ಯದ ಸುಲ್ತಾನರಾಗಿದ್ದ ಅಲ್ಲಾಉದ್ದೀನ್ ಖಿಲ್ಜಿ ಮತ್ತು ಮಹಮದ್-ಬಿನ್-ತೊಗಲಕ್‌ರು ದಕ್ಷಿಣ ಭಾರತದ ಮೇಲೆ ಅನೇಕ ದಾಳಿಗಳನ್ನು ನಡೆಸಿದ್ದೂ ಈ ಘಟ್ಟದ ಪ್ರಮುಖ ಘಟನೆ. ಈ ಘಟನೆಯ ಪರಿಣಾಮವಾಗಿ ಅಂದು ಅಸ್ತಿತ್ವದಲ್ಲಿದ್ದ ನಾಲ್ಕು ಪ್ರಮುಖ ರಾಜ್ಯಗಳಾದ ಓರಂಗಲ್ಲಿನ ಕಾಕತೀಯರು, ದೇವಗಿರಿಯ ಯಾದವರು, ದೋರಸಮುದ್ರದ ಹೊಯ್ಸಳರು ಮತ್ತು ಮಧುರೆಯ ಪಾಂಡ್ಯರು ಕಣ್ಮರೆಯಾದರು. ಅಂದರೆ ರಾಜಕೀಯವಾಗಿ ಒಂದು ರೀತಿಯ ಶೂನ್ಯ ವಾತಾವರಣ ಏರ್ಪಟ್ಟಿತು.

ಹೆಗಲ್‌ನ ಸಿದ್ಧಾಂತದ ಪ್ರಕಾರ, ಒಂದು ರಾಜ್ಯದ ಅಸ್ತಿತ್ವ, ಜೀವನದ ಉಳಿದೆಲ್ಲಾ ಪ್ರಗತಿಗೆ ಬಹಳ ಮುಖ್ಯ. ದಕ್ಷಿಣ ಭಾರತದ ಸಂದರ್ಭದಲ್ಲಿ ಈ ರಾಜ್ಯಗಳ ಪತನ ಒಂದು ರೀತಿಯಲ್ಲಿ ಇಲ್ಲಿನ ಸಂಸ್ಕೃತಿಯ ರಕ್ಷಣೆಗೆ ಅಡ್ಡಿಯಾಯಿತು. ಅಷ್ಟೆ ಅಲ್ಲ, ಆ ಸಂಸ್ಕೃತಿಯು ರಾಜ್ಯದ ಪತನದ ದೃಷ್ಟಿಯಿಂದ ನಾಶವಾಗಬಹುದಾದ ಪರಿಸ್ಥಿತಿಯನ್ನು ತಲುಪಿತು. ಅಂದರೆ ಹೆಗಲ್‌ನ ವಾದವಾದ ರಾಜ್ಯದ ಪಾತ್ರ ಇಲ್ಲಿ ಸ್ಪಷ್ಟವಾಗುತ್ತದೆ. ಅದಲ್ಲದೆ ಈ ಪ್ರದೇಶದ ಮೇಲೆ ದಾಳಿ ನಡೆಸಿದವರು ಪರಕೀಯವಾದ ಒಂದು ಧರ್ಮ ಮತ್ತು ಸಂಸ್ಕೃತಿಗೆ ಸೇರಿದವರಾಗಿದ್ದವರು ಎಂಬುದನ್ನು ಹಾಗೂ ಈ ರಾಜ್ಯಗಳ ನಾಶಕ್ಕೆ ಇಲ್ಲಿನ ರಾಜರೇ ಐಕ್ಯಮತ್ಯವಿಲ್ಲದೆ ಪರಕೀಯರಿಗೆ ಸಹಾಯಮಾಡಿ ತಮ್ಮ ಅಂತಿಮ ರಾಜಕೀಯನಾಶಕ್ಕೆ ಕಾರಣರಾಗಿದ್ದರೆಂಬುದನ್ನು ಮರೆಯುವಂತಿಲ್ಲ. ಹೀಗಾಗಿ ಈ ದಾಳಿಗಳು ಸಾಮಾನ್ಯ ಮಿಲಿಟರಿ ದಾಳಿಗಳಂತೆ ಅಂದಿನವರಿಗೆ ಕಾಣಲಿಲ್ಲ.

ಆರ್ಥಿಕ ಸಂಪತ್ತಿನ ಲೂಟಿಯ ಜೊತೆ ಜೊತೆಗೆ ಈ ದಾಳಿಗಳು ಸಂಸ್ಕೃತಿಯ ಅಭಿವ್ಯಕ್ತಿಯ ವಿನಾಶದ ಭಯವನ್ನು ಉಂಟುಮಾಡಿದವು. ಆದುದರಿಂದ ಪ್ರಾಣ, ಮಾನ, ಧನಗಳ ರಕ್ಷಣೆಯ ಸಂಗಡವೇ ಈ ದಾಳಿಗಳು 'ಅಭಿವ್ಯಕ್ತಿ'ಯನ್ನು ಕಾಪಾಡಿಕೊಳ್ಳಬೇಕಾದ ಸಮಸ್ಯೆಯನ್ನು ತಂದೊಡ್ಡಿದವು. ಇದರ ಫಲವಾಗಿ ಅಂದಿನ ಐತಿಹಾಸಿಕ ವಾತಾವರಣದಲ್ಲಿ dialectic (ಹೆಗಲ್ ಹೇಳುವ) ಅಥವ ದ್ವಂದ್ವದ ಸಂಘರ್ಷ ಉಂಟಾಗುವಂತಾಯಿತು. ಭಾವನೆಗಳ ಮಟ್ಟದಲ್ಲಿ ಇದನ್ನು ಗುರುತಿಸುವುದು ಮುಖ್ಯ. ಏಕೆಂದರೆ ಹೆಗಲ್‌ನ ಸಿದ್ಧಾಂತ ಹೇಳುವುದು ಅದನ್ನೇ; ಭಾವನೆಗಳನ್ನು ಹೆಕ್ಕಿ ತೆಗೆಯಬೇಕು, ಘಟನೆಗಳಿಂದ.

ಈ ಅರ್ಥದಲ್ಲಿ ಇಲ್ಲಿ dialectic ಯಾವುದು? ಅದು ಹೇಗೆ ವಿಜಯನಗರದ ಸ್ಥಾಪನೆಗೆ ಪೂರಕವಾಯಿತು ಎಂಬುದನ್ನು ಪರಿಶೀಲಿಸಬಹುದು. ಪರಂಪರೆಯಿಂದ ಸ್ಥಾಪಿತವಾಗಿದ್ದ ಹಾಗೂ ದಕ್ಷಿಣದ ರಾಜ್ಯಗಳು ಇಲ್ಲಿಯವರೆಗೆ ರಕ್ಷಿಸಿಕೊಂಡು ಬಂದಿದ್ದ ಬಹು ಮೂಲಭೂತವಾದ ಭಾವನೆಯೆಂದರೆ ವೈವಿಧ್ಯತೆಯನ್ನು ಗೌರವಿಸುವುದು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಎನ್ನಬಹುದು. ರಾಜಕೀಯ ಸಾರ್ವಭೌಮತ್ವಕ್ಕಾಗಿ ಹಾಗೂ ಅಧಿಕಾರಕ್ಕಾಗಿ ಭಿನ್ನ ಭಿನ್ನ ರಾಜವಂಶಗಳು ತಮ್ಮ ತಮ್ಮಲ್ಲೇ ಈ ಮುನ್ನ ಕಾದಾಡುತ್ತಿದ್ದರೂ ಸಹ, ಅವುಗಳೆಲ್ಲಾ ಒಂದು ದೃಷ್ಟಿಯಿಂದ ಏಕಮುಖವಾದ ಧೋರಣೆಯನ್ನು ಅನುಸರಿಸುತ್ತಿದ್ದವು. ಅದೆಂದರೆ ಮೇಲೆ ಸೂಚಿಸಿದ ವೈವಿಧ್ಯತೆಯನ್ನು ಗೌರವಿಸುವುದು ಹಾಗೂ ಅಭಿವ್ಯಕ್ತಿಯ ಸ್ವಾತಂತ್ರ್ಯವನ್ನು ರಕ್ಷಿಸುವುದು.

ಆದರೆ ಉತ್ತರದ ದೆಹಲಿ ಸುಲ್ತಾನರ 1296-1336 ರ ನಡುವಣ ದಾಳಿಗಳಲ್ಲಿ ಈ ಮೌಲ್ಯಗಳ ವಿರುದ್ಧವಾದ ಭಾವನೆಗಳನ್ನು ಪ್ರಕಟಿಸುವಂತಿದ್ದವು. ಏಕ ರೀತಿಯ ಧರ್ಮ ಸಂಸ್ಕೃತಿಗಳನ್ನು ಬಲದ ಮೂಲಕವಾದರೂ ಸರಿಯೇ ಹರಡಬೇಕೆಂಬ ಛಲ ಟರ್ಕೋ-ಆಫ್ಘನರಿಗಿದ್ದಂತೆ ಕಾಣಬರುತ್ತದೆ. ಮೊದಲನೆಯದಾಗಿ ಹೆಗಲ್‌ನ ಸಿದ್ಧಾಂತದ thesis ಆದರೆ ಎರಡನೆಯದಾಗಿ ಅವನ ಸಿದ್ಧಾಂತದ anti-thesis ಪರಿಕಲ್ಪನೆ ಎನಿಸಿಕೊಳ್ಳುತ್ತದೆ. ಒಟ್ಟಿನಲ್ಲಿ ಈ ದಾಳಿಗಳಿಂದ ಹೊಸ ದೃಷ್ಟಿಕೋನ ಹೊಂದಿರುವ ನವೀನ ರಾಜ್ಯದ ಅವಶ್ಯಕತೆ ಉಂಟಾಯಿತು. ಏಕೆಂದರೆ ಹೆಗಲ್‌ನ ಪ್ರಕಾರ ರಾಜ್ಯ ಮಾತ್ರ ಎಲ್ಲಾ ರೀತಿಯ ಹಿತಾಸಕ್ತಿಗಳನ್ನು ಸಮನ್ವಯಗೊಳಿಸುವ ಶಕ್ತಿಯನ್ನು ಹೊಂದಿರುತ್ತವೆ. ಈ ಹಿನ್ನೆಲೆಯಲ್ಲಿ ನಾವು 14ನೇ ಶತಮಾನದಲ್ಲಿ ಹರಿಹರ ಬುಕ್ಕರಿಂದ ಮತ್ತು ವಿದ್ಯಾರಣ್ಯರ ಸಹಕಾರದಿಂದ ಸ್ಥಾಪಿತವಾದ ವಿಜಯನಗರದ ಹಿಂದಿನ ಪರಿಕಲ್ಪನೆಯನ್ನು ಗುರಿಪಡಿಸಬೇಕು.

ಹರಿಹರ ಮತ್ತು ಬುಕ್ಕರು ಒಂದು ಕಡೆ, ವಿದ್ಯಾರಣ್ಯರು ಮತ್ತೊಂದು ಕಡೆ ಅಂದಿನ thesis ಅಥವಾ ಸ್ಥಾಪಿತವಾಗಬೇಕಾದ ಭಾವನೆಯನ್ನು ಸಂಕೇತಿಸುತ್ತಾರೆ. ಹರಿಹರ ಮತ್ತು ಬುಕ್ಕರು ರಾಜ್ಯದ ದಂಡಶಕ್ತಿಗೆ ಸಂಕೇತವಾದರೆ, ವಿದ್ಯಾರಣ್ಯರು ಧರ್ಮದ ಭಾವನೆಗೆ ಸಂಕೇತವಾಗುತ್ತಾರೆ. ಹೀಗಾಗಿ ಧರ್ಮ ಮತ್ತು ದಂಡ ಸಮನ್ವಯಗೊಂಡು (synthesis ಆಗಿ) ಅಂದಿನ ಸವಾಲನ್ನು ಎದುರಿಸಬೇಕಾಗಿ ಬಂದದ್ದು ಅನಿವಾರ್ಯವಾಗುತ್ತದೆ. 14ನೇ ಶತಮಾನದ ಸಂದರ್ಭದಲ್ಲಿ ಸಂಘರ್ಷ (dialectic) ನಡೆದದ್ದು ಎರಡು ಭಾವನೆಗಳ ನಡುವೆ: ಒಂದು ಭಿನ್ನತೆಯನ್ನು ಅಳಿಸಿಹಾಕಿ ಏಕರೀತಿಯ ಸಂಸ್ಕೃತಿಯ ಪ್ರಚಾರ ಮಾಡುವುದು; ಎರಡು ಭಿನ್ನತೆಯನ್ನು ರಕ್ಷಿಸಿ ಸ್ವಾತಂತ್ರ್ಯದ ಅಭಿವ್ಯಕ್ತಿಯನ್ನು ಎತ್ತಿ ಹಿಡಿಯುವುದು. ವಿಜಯನಗರ ಎರಡನೆಯದನ್ನು ತನ್ನ ಸ್ಥಾಪನೆಯ ಕಾಲದಿಂದಲೂ ಒಪ್ಪಿಕೊಂಡು ಬಂದಂತೆ ಕಾಣುತ್ತದೆ. ಅಷ್ಟೇ ಅಲ್ಲದೆ ಪರಕೀಯವಾಗಿದ್ದ ಸಂಸ್ಕೃತಿಯು ಒಳ್ಳೆಯ ಅಂಶಗಳನ್ನು ಸಾಧ್ಯವಾದೆಡೆ ಹೀರಿಕೊಳ್ಳುವ ಅದರ ಪ್ರಯತ್ನಗಳು ಅದರ ಇತಿಹಾಸದ ಉದ್ದಕ್ಕೂ ಕಾಣುತ್ತದೆ. ಒಟ್ಟಿನಲ್ಲಿ ಹೆಗಲ್‌ನ ಸಿದ್ಧಾಂತದ ತಿಳಿ ಬೆಳಕಿನಲ್ಲಿ ವಿಜಯನಗರದ ಮೂಲಕ ಅರ್ಥ ಹೆಚ್ಚು ಸ್ಪಷ್ಟವಾಗುತ್ತದೆ.

25. ತೊಂದರೆಯ ಸಮಯ - ಪ್ರತಿಕ್ರಿಯೆ - ಒಂದು ವಿಮರ್ಶಾತ್ಮಕ ನೋಟ

ವೈ.ಆರ್. ಪಾಟೀಲ

ಇತಿಹಾಸಕಾರ ಅರ್ನಾಲ್ಡ್ ಟೈನಬಿ ನಾಗರೀಕತೆಗಳ ಉದಯ ಮತ್ತು ಅವಸಾನಗಳ ಬಗ್ಗೆ ವಿಶೇಷ ಅಧ್ಯಯನ ಮಾಡಿರುತ್ತಾನೆ. ಅವನ ಅಧ್ಯಯನವನ್ನು ಈ ರೀತಿ ಸಂಕ್ಷಿಪ್ತವಾಗಿ ಹೇಳಬಹುದು. ಸಾಮಾನ್ಯ ಸ್ಥಿತಿ - ತೊಂದರೆಯ ಸಮಯ - ಪ್ರತಿಕ್ರಿಯೆ - ಸಕಾರಾತ್ಮಕ ಪ್ರತಿಕ್ರಿಯೆ - ಅಭಿವೃದ್ಧಿ - ನಕಾರಾತ್ಮಕ ಪ್ರತಿಕ್ರಿಯೆ - ಅವನತಿ. ತೊಂದರೆ ಎದುರಿಸುವ ನಾಗರೀಕತೆಗಳು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದರೆ ಅಭಿವೃದ್ಧಿ ಹೊಂದುತ್ತವೆ. ನಕಾರಾತ್ಮಕವಾಗಿ ಪ್ರತಿಕ್ರಿಯಿಸಿದರೆ ನಾಗರೀಕತೆಗಳು ಅವನತಿ ಹೊಂದುತ್ತವೆ. ಈ ಹಿನ್ನೆಲೆಯಲ್ಲಿ ಭಾರತೀಯ ನಾಗರಿಕತೆಯು ಸಂಕಟ ಕಾಲದಲ್ಲಿ ಹೇಗೆ ಪ್ರತಿಕ್ರಿಯಿಸಿದೆ ಎಂಬುದನ್ನು ಇಲ್ಲಿ ವಿಶ್ಲೇಷಣಾತ್ಮಕವಾಗಿ ನೋಡೋಣ.

ಕ್ರಿ.ಪೂ. 10,000-3,000 ಅವಧಿ ನವ ಶಿಲಾಯುಗದ ಅವಧಿ. ಕ್ರಿ.ಪೂ. 3,000-2,000 ಅವಧಿ ಸಿಂಧೂ ನದಿಯ ನಾಗರೀಕತೆಯ ಅವಧಿ. ಕ್ರಿ.ಪೂ. 2,000-1,000 ಅವಧಿ ಮೊದಲನೇ ವೈದಿಕ ಅವಧಿ. ಈ ಅವಧಿಯಲ್ಲಿ ವರ್ಣಾಶ್ರಮ ವ್ಯವಸ್ಥೆ ಜಾರಿಗೆ ಬಂತು. ಈ ಅವಧಿಯಲ್ಲಿ ಒಂದೇ ಮನೆಯಲ್ಲಿ ಬ್ರಾಹ್ಮಣ-ಕ್ಷತ್ರಿಯ ಮತ್ತು ವೈಶ್ಯ ಇರಲಿಕ್ಕೆ ಸಾಧ್ಯವಿತ್ತು. ಆ ಅವಧಿಯಲ್ಲಿ ಉದ್ಯೋಗದಿಂದ ಜಾತಿ ನಿರ್ಣಯವಾಗುತ್ತಿತ್ತು. ಕ್ರಿ.ಪೂ. 800-500 ಅವಧಿ 2ನೇ ವೈದಿಕ ಅವಧಿ. ಈ ಅವಧಿಯಲ್ಲಿ ಹುಟ್ಟಿನಿಂದ ಜಾತಿಗಳು ನಿರ್ಣಯವಾಗತೊಡಗಿದವು.

1. ಭಾರತೀಯ ಸಂಸ್ಕೃತಿಯಲ್ಲಿ ಉಂಟಾದ ನಿಶ್ಚಲತೆ, ಹುಟ್ಟಿನಿಂದ ಜಾತಿ ನಿರ್ಣಯ ಮುಂತಾದ ನಕಾರಾತ್ಮಕ ಪ್ರತಿಕ್ರಿಯೆಗಳಿಂದಾಗಿ ಕ್ರಿ.ಪೂ. 6ನೇ ಶತಮಾನದಲ್ಲಿ ಬೌದ್ಧ ಮತ್ತು ಜೈನ ಧರ್ಮಗಳು ಉದಯವಾದವು. ಇದು ಧಾರ್ಮಿಕ ಪ್ರತಿಕ್ರಿಯೆ.

2. ಗ್ರೀಕ್ ದೇಶದ ದೊರೆ ಅಲೆಕ್ಸಾಂಡರ್ ಕ್ರಿ.ಪೂ. 326ರಲ್ಲಿ ಭಾರತ ದೇಶದ ಮೇಲೆ ಧಾಳಿ ಮಾಡಿದನು. ಈ ಧಾಳಿಯಿಂದಾಗಿ ಭಾರತದಲ್ಲಿ ರಾಜಕೀಯ ಮತ್ತು ಧಾರ್ಮಿಕ ಪ್ರತಿಕ್ರಿಯೆಗಳು ಉಂಟಾದವು. ಈ ಧಾಳಿಯ ನಂತರ ಭಾರತದಲ್ಲಿ ಮೌರ್ಯ ಸಾಮ್ರಾಜ್ಯ ಸ್ಥಾಪನೆಯಾಯಿತು. ಚಂದ್ರಗುಪ್ತನ ಕಾಲದಲ್ಲಿ ಉತ್ತರದಲ್ಲಿ ಭೀಕರ ಬರಗಾಲ ಬಿದ್ದಿತ್ತು. ಈ ಬರಗಾಲದ ಬವಣೆ ತಪ್ಪಿಸಿಕೊಳ್ಳಲು ಚಂದ್ರಗುಪ್ತನು ಕರ್ನಾಟಕದ ಶ್ರವಣಬೆಳಗೊಳಕ್ಕೆ ಬಂದಿದ್ದನು. ಚಂದ್ರಗುಪ್ತನು ಜೈನ ಮತಾವಲಂಬಿಯಾಗಿದ್ದನು. ಈತನ ಅವಧಿಯಲ್ಲಿ ಜೈನ ಧರ್ಮದಲ್ಲಿ ಶ್ವೇತಾಂಬರ ಮತ್ತು ದಿಗಂಬರ ಎಂಬ ಎರಡು ಮತಗಳು ಉದಯಿಸಿದವು. ಅಶೋಕನು ಮಹತ್ವಾಕಾಂಕ್ಷಿಯೂ ಮತ್ತು ಕ್ರೂರಿಯೂ ಆಗಿದ್ದನು. ಸಾಮ್ರಾಜ್ಯ ವಿಸ್ತರಣೆಗಾಗಿ ಕಳಿಂಗದ ಮೇಲೆ ಯುದ್ಧ ಮಾಡಿದನು. ಕಳಿಂಗ ಯುದ್ಧದಲ್ಲಿ ಉಂಟಾದ ಸಾವು ನೋವಿನಿಂದ ಮನನೊಂದು ಬೌದ್ಧ ಮತಕ್ಕೆ ಮತಾಂತರಗೊಂಡನು. ಬೌದ್ಧ ಧರ್ಮಕ್ಕೆ ರಾಜಾಶ್ರಯ ಕೊಟ್ಟನು. ತನ್ನ ಮಗ ಮತ್ತು ಮಗಳನ್ನು ಬೌದ್ಧ ಸನ್ಯಾಸಿಗಳನ್ನಾಗಿ ಮಾಡಿ ಧರ್ಮ ಪ್ರಚಾರ ಮಾಡಲು ಸಿಂಹಳಕ್ಕೆ ಕಳುಹಿಸಿದನು. ಬೌದ್ಧ ಮತ್ತು ಜೈನ ಧರ್ಮಗಳ ಶಾಂತಿ ಬೋಧನೆ ಜನರಲ್ಲಿ ಹೋರಾಟ ಪ್ರವೃತ್ತಿಯನ್ನು ಕ್ಷೀಣಿಸಿತು. ಅಶೋಕನ ಧರ್ಮ ಪರಾಯಣತೆ ಜನರ ಹೋರಾಟ ಪ್ರವೃತ್ತಿಯನ್ನು ಮತ್ತಷ್ಟು ಅಧೀರಗೊಳಿಸಿತು.

3. ಕ್ರಿ.ಶ. 1ನೇ ಶತಮಾನದಲ್ಲಿ ಕುಶಾಣರ ಸಾಮ್ರಾಜ್ಯ ಪ್ರವರ್ಧಮಾನಕ್ಕೆ ಬಂದಿತು. ಕನಿಷ್ಕನ ಸಮಯದಲ್ಲಿ ಹೀನಯಾನ ಮತ್ತು ಮಹಾಯಾನ ಎಂಬ ಪಂಥಗಳು ಬೌದ್ಧ ಧರ್ಮದಲ್ಲಿ ಉದಯಿಸಿದವು. ಬೌದ್ಧ ಸನ್ಯಾಸಿಗಳು ದಕ್ಷಿಣ ಪೂರ್ವ ಏಷ್ಯಾ ದೇಶಗಳಲ್ಲಿ ಬೌದ್ಧ ಧರ್ಮವನ್ನು ಪ್ರಚಾರ ಮಾಡಿದರು.

4) 3ನೇ ಮತ್ತು 4ನೇ ಶತಮಾನಗಳಲ್ಲಿ ಗುಪ್ತರ ಸಾಮ್ರಾಜ್ಯ ಪ್ರವರ್ಧಮಾನಕ್ಕೆ ಬಂದಿತು. ಗುಪ್ತರು ಬಲಿಷ್ಠವಾದ ರಾಜಕೀಯ ಶಕ್ತಿಯಾಗಿ ಬೆಳೆದರು. ಹಿಂದೂ ಧರ್ಮವು ಮತ್ತೆ ಭಾರತದಲ್ಲಿ ಪುನರುಜ್ಜೀವನಗೊಂಡಿತು. 5ನೇ ಶತಮಾನದಲ್ಲಿ (ಕ್ರಿ.ಶ. 467) ಗುಪ್ತರ ಸಾಮ್ರಾಜ್ಯದ ಅವಸಾನದ ನಂತರ ರುಜಕೀಯ ಇಚ್ಛಾಶಕ್ತಿ ಅಧಿಕವಾಯಿತು.

5. 8ನೇ ಶತಮಾನದಲ್ಲಿ ಸಮಕಾಲೀನರಾದ, ಉತ್ತರದಲ್ಲಿ ವರ್ಧನ ವಂಶದ ಹರ್ಷವರ್ಧನ ಮತ್ತು ದಕ್ಷಿಣದಲ್ಲಿ ಚಾಲುಕ್ಯ ವಂಶದ ಪುಲಕೇಶಿ ಪ್ರವರ್ಧಮಾನಕ್ಕೆ ಬಂದರು. ಭಾರತೀಯ ಸಂಸ್ಕೃತಿ ಪುನರುಜ್ಜೀವನಗೊಂಡಿತು. ಈ ಎರಡು ರಾಜಮನೆತನಗಳ ಅವಸಾನದ ನಂತರ ಭಾರತದಲ್ಲಿ ರಾಜಕೀಯ ಅಸ್ಥಿರತೆ ತಲೆದೋರಿ ಪರಕೀಯ ಧಾಳಿಗಳು ಆರಂಭವಾದವು. ಮುಸಲ್ಮಾನರ ಧಾಳಿಗಳು ಭಾರತೀಯ ಚರಿತ್ರೆಯ ದಿಕ್ಕನ್ನೇ ಬದಲಿಸಿದವು.

6. 8ನೇ ಶತಮಾನದಲ್ಲಿ ಆದಿಶಂಕರಾಚಾರ್ಯರು ಭಾರತದ ನಾಲ್ಕು ದಿಕ್ಕುಗಳಲ್ಲಿ ಸಂಚರಿಸಿ ಹಿಂದೂ ಧರ್ಮದ ಪುನರುಜ್ಜೀವನಕ್ಕೆ ಹೊಸ ಅಡಿಪಾಯ ಹಾಕಿದರು. ರಾಜಕೀಯ ಪ್ರಾಬಲ್ಯವಿರದ ಕಾರಣ ಧಾರ್ಮಿಕ ಪ್ರತಿಕ್ರಿಯೆಯ ಹೊಸ ಯುಗವೇ ಆರಂಭವಾಯಿತು ಎನ್ನಬಹುದು.

7. 8ನೇ ಶತಮಾನದ ನಂತರ ರಾಜಕೀಯ ಪ್ರಾಬಲ್ಯದ ಕೊರತೆಯಿಂದಾಗಿ ಭಾರತದ ಮೇಲೆ ಮುಸಲ್ಮಾನರ ಧಾಳಿಗಳ ಯುಗ ಆರಂಭವಾಯಿತು. ಮುಸಲ್ಮಾನರ ಧಾಳಿಗಳು ಭಾರತದ ಸಾಂಸ್ಕೃತಿಕ, ಧಾರ್ಮಿಕ ಮತ್ತು ರಾಜಕೀಯ ದಿಕ್ಕನ್ನೇ ಬದಲಿಸಿತು. ಉತ್ತರ ಭಾರತದಲ್ಲಿ ಸುಲ್ತಾನರ ಪ್ರಭುತ್ವ ಜಾರಿಗೆ ಬಂದಿತು. ಉತ್ತರ ಭಾರತದಲ್ಲಿ ಗಟ್ಟಿಯಾಗಿ ತಳಊರಿದ ಮುಸಲ್ಮಾನರು ದಕ್ಷಿಣ ಭಾರತದಲ್ಲಿ ತಮ್ಮ ಪ್ರಭಾವ ಬೀರಲು ಸತತ ಪ್ರಯತ್ನ ಮಾಡಿದರು.

8. ಉತ್ತರದ ಮುಸಲ್ಮಾನರ ಧಾಳಿಗಳನ್ನು ನಿಯಂತ್ರಿಸುವ ಜವಾಬ್ದಾರಿಯನ್ನು ವಿಜಯನಗರ ಸಾಮ್ರಾಜ್ಯ 250 ವರ್ಷಗಳ ಕಾಲ ಯಶಸ್ವಿಯಾಗಿ ಮಾಡಿತು. ಕೊನೆಗೆ 1570ರ ತಾಳಿಕೋಟೆಯ ಯುದ್ಧದಲ್ಲಿ ವಿಜಯನಗರ ಸಾಮ್ರಾಜ್ಯ ಅವಸಾನಗೊಂಡಿತು. ದಕ್ಷಿಣದಲ್ಲಿ ಶಾಹೀಗಳ ಆಡಳಿತ ನೆಲೆಯೂರಿ ದಕ್ಷಿಣ ಭಾರತದಲ್ಲೂ ಮುಸ್ಲಿಂ ಸಂಸ್ಕೃತಿ ಹರಡಿತು.

9. 1526ರಲ್ಲಿ ನಡೆದ ಮೊದಲ ಪಾನಿಪತ್ ಯುದ್ಧದಲ್ಲಿ ಸೋತ ಹಿಂದುಗಳ ಹೋರಾಟದ ಶಕ್ತಿ ಕ್ಷೀಣಿಸಿತು. 1556ರಲ್ಲಿ ನಡೆದ ಎರಡನೆ ಪಾನಿಪತ್ ಯುದ್ಧದಿಂದಾಗಿ ಉತ್ತರದಲ್ಲಿ ಮೊಗಲರ ಆಡಳಿತ ನೆಲೆಗೊಂಡಿತು. ಮೊಗಲರ ಸಾಮ್ರಾಜ್ಯ ವಿಸ್ತರಣೆ ನಿಯಂತ್ರಿಸಲು ರಜಪೂತರು ಮತ್ತು ಮರಾಠರು ಪ್ರಯತ್ನಿಸಿದರೂ ನಿರೀಕ್ಷಿತ ಯಶಸ್ಸು ಪಡೆಯಲಿಲ್ಲ. ಶಿವಾಜಿ ಮತ್ತು ಪೇಶ್ವೆಗಳ ಪ್ರಯತ್ನಗಳಿಗೆ ನಿರೀಕ್ಷಿತ ಯಶಸ್ಸು ಸಿಗಲಿಲ್ಲ. ಇಲ್ಲೇ ಭಾರತೀಯರ ಹೋರಾಟ ಶಕ್ತಿಯು - ರಣಜೀತ್ ಸಿಂಗ್, ಹೈದರ್ ಮತ್ತು ಟಿಪ್ಪುಸುಲ್ತಾನರ - ಪ್ರಯತ್ನ ಬಿಟ್ಟರೆ ಉಡುಗಿಹೋಗಿತ್ತು ಎನ್ನಬಹುದು.

10. 8ನೇ ಶತಮಾನದ ನಂತರ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದ ಧಾರ್ಮಿಕ ಪ್ರತಿಕ್ರಿಯೆ ಹೆಚ್ಚು ಪ್ರಖರವಾಗತೊಡಗಿತು. ಈ 12ನೇ ಶತಮಾನದಲ್ಲಿ ಶರಣರು, 13ನೇ ಶತಮಾನದಲ್ಲಿ ರಾಮಾನುಜಾಚಾರ್ಯ, ಮಧ್ವಾಚಾರ್ಯರು, 15ನೇ ಶತಮಾನದಲ್ಲಿ ಕಬೀರ ಮತ್ತು ಗುರುನಾನಕರು, 16ನೇ ಶತಮಾನದಲ್ಲಿ ಮೀರಾ ಮತ್ತು ತುಕಾರಾಮರು, 19ನೇ ಶತಮಾನದಲ್ಲಿ ರಾಜರಾಮ ಮೋಹನರಾಯ, ದಯಾನಂದ ಸರಸ್ವತಿ ಮತ್ತು 20ನೇ ಶತಮಾನದಲ್ಲಿ ರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದ ಇವರುಗಳು ಧಾರ್ಮಿಕವಾಗಿ ಪ್ರತಿಕ್ರಿಯಿಸಿ ಜಾಗೃತಿ ಉಂಟು ಮಾಡಿದರು.

11. 16ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ, 18ನೇ ಶತಮಾನದಲ್ಲಿ ಮೊಗಲರ ಪತನಾನಂತರ ಭಾರತದಲ್ಲಿ ರಾಜಕೀಯ ಇಚ್ಛಾಶಕ್ತಿ ಉಡುಗಿ ಹೋಗಿತ್ತು. ವ್ಯಾಪಾರಿಗಳಾಗಿ ಬಂದ ಯುರೋಪಿನವರು ಭಾರತದಲ್ಲಿ ವಸಾಹತು ಶಕ್ತಿಯಾಗಿ ಬೆಳೆದರು. ಸ್ಥಳೀಯ ಸಾಮಂತರುಗಳ ಒಳಜಗಳಗಳ ಉಪಯೋಗ ಪಡೆದು ಅವರನ್ನು ದಾಸ್ಯಕ್ಕೆ ಒಳಪಡಿಸಿದರು. ಪ್ಲಾಸಿಯ ಕಾಳಗ (1757)ದ ನಂತರ ಭಾರತದಲ್ಲಿ ಬ್ರಿಟಿಷರು ಗಟ್ಟಿಯಾಗಿ ತಳವೂರಿದರು. ಕ್ರಿ.ಶ. 1857ರ ಮೊದಲ ಸ್ವಾತಂತ್ರ್ಯ ಸಮರದಲ್ಲಿ ಭಾರತೀಯರು ಸೋತರು. ಈ ನಿರಾಶೆಯ ಪರಿಸ್ಥಿತಿಯಲ್ಲಿಯೂ ರಣಜಿತ್‌ಸಿಂಗ್, ಹೈದರ್ ಆಲಿ ಮತ್ತು ಟಿಪ್ಪು ಸುಲ್ತಾನರು ರಾಜಕೀಯವಾಗಿ ಪ್ರತಿಕ್ರಿಯಿಸಿದರೂ ಯಶಸ್ವಿಯಾಗಲಿಲ್ಲ.

12. ಕಳೆದ ಒಂದು ಸಾವಿರ ವರ್ಷದ ಭಾರತದ ದಾಸ್ಯದ ಇತಿಹಾಸದಲ್ಲಿ ರಾಜಕೀಯ ಪ್ರತಿಕ್ರಿಯೆ ಯಶಸ್ಸು ಕಾಣಲಿಲ್ಲ. ಅದಕ್ಕಾಗಿಯೇ ಧಾರ್ಮಿಕ ಪ್ರತಿಕ್ರಿಯೆ ಪ್ರಖರವಾಗತೊಡಗಿತು. ಗಣೇಶ ಉತ್ಸವಗಳ ಮೂಲಕ ರಾಜಕೀಯದಲ್ಲಿ ಧರ್ಮ ಸೇರಿಸುವ ಪ್ರಯತ್ನವನ್ನು ಬಾಲಗಂಗಾಧರ ತಿಲಕ್ ಮಾಡಿದರು. ಅನಕ್ಷರತೆ, ಮೂಢನಂಬಿಕೆ, ಬಡತನ ಮತ್ತು ಆಧುನಿಕ ಶಸ್ತ್ರಾಸ್ತ್ರಗಳ ಕೊರತೆ ಹಿನ್ನೆಲೆಯಲ್ಲಿ ಯುದ್ಧದ ಮೂಲಕ ಸ್ವಾತಂತ್ರ್ಯ ಪಡೆಯುವುದು ಅಸಾಧ್ಯವಾಗಿತ್ತು. ಇಂಥಾ ಅಸಾಧ್ಯ ಕೆಲಸವನ್ನು ಸತ್ಯ ಮತ್ತು ಅಹಿಂಸೆ ಎಂಬ ನಿರಾಕಾರ ಶಸ್ತ್ರಗಳನ್ನು ಉಪಯೋಗಿಸಿ ರಣರಂಗದಲ್ಲಿ, ರಕ್ತ ಸುರಿಸದೇ, ಸ್ವಾತಂತ್ರ್ಯ ತಂದುಕೊಟ್ಟ ಕೀರ್ತಿ ಗಾಂಧೀಜಿ ಅವರದ್ದು. ರಾಜಕೀಯದಲ್ಲಿ ಧರ್ಮವನ್ನು ಉಪಯೋಗಿಸಿದರೂ ಧರ್ಮಾಂಧತೆಯ ಆಪಾದನೆ ಮಹಾತ್ಮರಿಗೆ ತಗುಲಲಿಲ್ಲ.

13. ಭಾರತ ಈಗ ಸಂಕ್ರಮಣ ಕಾಲದಲ್ಲಿ ಇದೆ. ರಾಜಕೀಯ ಇಚ್ಛಾಶಕ್ತಿಯ ಕೊರತೆ ಕಂಡುಬರುತ್ತಿದೆ. ಈ ಸಂಕ್ರಮಣ ಕಾಲದಲ್ಲಿ ಭಾರತೀಯರು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದರೆ ಪ್ರಬಲ ರಾಜಕೀಯ ಶಕ್ತಿಯ ಉದಯ ಸಾಧ್ಯ. ನಕಾರಾತ್ಮಕವಾಗಿ ಪ್ರತಿಕ್ರಿಯಿಸಿದರೆ ರಾಜಕೀಯ ಅವನತಿಯತ್ತ ಹೋಗಲು ಸಾಧ್ಯ. ಬರಲಿರುವ ದಿನಗಳಲ್ಲಿ ಈಗಿನ ರಾಜಕೀಯ ಶಕ್ತಿಗಳು ಅಪ್ರಸ್ತುತ ಆದಾವು. ಬರಲಿರುವ ದಿನಗಳಲ್ಲಿ ರಾಜಕೀಯ ಶಕ್ತಿಗಳ ಮರುಧ್ರುವೀಕರಣವಾಗಿ ಜಾತ್ಯಾತೀತತೆ ನಂಬುವವರು ಒಂದು ಶಕ್ತಿ ಮತ್ತು ಅದನ್ನು ವಿರೋಧಿಸುವವರು ಇನ್ನೊಂದು ಶಕ್ತಿಯಾಗಿ ಹೊರಬೀಳುವ ಸಾಧ್ಯತೆ ಇರುತ್ತದೆ. ಭಾರತದ ಸಂಸ್ಕೃತಿಯ ಹಿನ್ನೆಲೆಯಲ್ಲಿ ಜನರು ಸಕಾರಾತ್ಮಕವಾಗಿ ಪ್ರತಿಕ್ರಿಯಿಸುತ್ತಾರೆ ಎನ್ನುವ ಆಶಾವಾದಿ ನಾನು. ನಿವು?

ತೊಂದರೆಯ ಸಮಯ - ಪ್ರತಿಕ್ರಿಯೆ - ಒಂದು ವಿಮರ್ಶಾತ್ಮಕ ನೋಟ

ಕ್ರಿ.ಪೂ. 10,000-3,000	ನವಶಿಲಾಯುಗ
ಕ್ರಿ.ಪೂ. 3,000-2,000	ಸಿಂಧೂ ಕೊಳ್ಳದ ಸಂಸ್ಕೃತಿ
ಕ್ರಿ.ಪೂ. 2,000-1,000	ಮೊದಲ ವೈದಿಕ ಅವಧಿ ವರ್ಣಾಶ್ರಮ ಧರ್ಮ ಉದ್ಯೋಗದಿಂದ ಜಾತಿ ನಿರ್ಣಯ.
ಕ್ರಿ.ಪೂ. 800-500	ಎರಡನೇ ವೈದಿಕ ಅವಧಿ ಹುಟ್ಟಿನಿಂದ ಜಾತಿ ನಿರ್ಣಯ

ಧಾರ್ಮಿಕ

1)	ಕ್ರಿ.ಪೂ. 6ನೇ ಶತಮಾನ	ಬೌದ್ಧ ಜೈನ ಧರ್ಮಗಳ ಉದಯ
2)	ಕ್ರಿ.ಪೂ. 299-236	ಮೌರ್ಯ ಸಾಮ್ರಾಜ್ಯ ಚಂದ್ರಗುಪ್ತ ಶ್ವೇತಾಂಬರ ಮತ್ತು ದಿಗಂಬರ ಪಂಥಗಳ ಉದಯ
3)	ಕ್ರಿ.ಪೂ. 273-266	ಅಶೋಕ, ಕಳಿಂಗಯುದ್ಧ ಅಶೋಕ ಬೌದ್ಧನಾದದ್ದು, ಮಕ್ಕಳು ಬೌದ್ಧ ಸನ್ಯಾಸಿಗಳು.

ರಾಜಕೀಯ

1)	ಕ್ರಿ.ಪೂ. 326	ಗ್ರೀಕ್ ದೇಶದ ಸಾಮ್ರಾಟ ಅಲೆಕ್ಸಾಂಡರನ ಧಾಳಿ
2)	ಕ್ರಿ.ಪೂ. 261	ಮೌರ್ಯ ಸಾಮ್ರಾಜ್ಯದ ಉದಯ ಚಂದ್ರಗುಪ್ತ - ವಿದೇಶಿ ಧಾಳಿಯನ್ನು ಹಿಮ್ಮೆಟ್ಟಿಸಿದ ಮತ್ತು ಭಾರತದ ಮೊದಲ ಮತ್ತು ಕೊನೆಯ ಸಾಮ್ರಾಟ
3)	ಕ್ರಿ.ಪೂ. 273-266	ಅಶೋಕ ಕಳಿಂಗ ಯುದ್ಧ ಯುದ್ಧದ ವಿಜಯ, ಮನನೊಂದು ಮತಾಂತರ ಹೋರಾಟ ಪ್ರವೃತ್ತಿಯ ಅಧೀರತೆ.

4)	ಕ್ರಿ.ಶ. 15-125	ಕನಿಷ್ಕ - ಹೀನಯಾನ ಮತ್ತು ಮಹಾಯಾನ ಪಂಥಗಳ ಉದಯ
5)	8ನೇ ಶತಮಾನ	ಆದಿ ಶಂಕರಾಚಾರ್ಯ ಹಿಂದೂಧರ್ಮದ ಪುನರುಜ್ಜೀವನ
6)	12ನೇ ಶತಮಾನ	ಶರಣರು
	13ನೇ ಶತಮಾನ	ರಾಮಾನುಜಾಚಾರ್ಯ ಮಧ್ವಾಚಾರ್ಯ
	15ನೇ ಶತಮಾನ	ಕಬೀರ ಮತ್ತು ಗುರುನಾನಕ್
	16ನೇ ಶತಮಾನ	ಮೀರಾ
	19ನೇ ಶತಮಾನ	ರಾಜಾರಾಮ ಮೋಹನರಾಯ ದಯಾನಂದ ಸರಸ್ವತಿ
	20ನೇ ಶತಮಾನ	ರಾಮಕೃಷ್ಣ ಪರಮಹಂಸ ವಿವೇಕಾನಂದ

4)	ಕ್ರಿ.ಶ. 78	ಕುಶಾಣ ಮನೆತನ ಅತಿಯಾದ ಧಾರ್ಮಿಕತೆ ಹೋರಾಟ ಪ್ರವೃತ್ತಿಯ ಅಧೀರತೆ.
5)	8ನೇ ಶತಮಾನ	ಉತ್ತರ - ವರ್ಧನವಂಶ - ಹರ್ಷವರ್ಧನ - ದಕ್ಷಿಣ - ಚಾಲುಕ್ಯ ಮನೆತನ. ಎರಡನೆಯ ಪುಲಕೇಶಿ. ನರ್ಮದಾ ಯುದ್ಧ ಭಾರತದಲ್ಲಿ ರಾಜಕೀಯ ಇಚ್ಛಾಶಕ್ತಿಯ ಕೊರತೆ - ಮುಸಲ್ಮಾನರ ಧಾಳಿಗಳ ಆರಂಭ.
6)	712-1526	ದಿಲ್ಲಿ ಸುಲ್ತಾನರ ಆಡಳಿತ ಉತ್ತರದಲ್ಲಿ ಮುಸಲ್ಮಾನರ ಸಂಸ್ಕೃತಿಗೆ ನೆಲೆ. ಗುಲಾಮವಂಶ, ಖಿಲಜಿ ವಂಶ ಮತ್ತು ತೊಗಲಕ್ ರಾಜ್ಯಗಳು.
7)	1336-1565	ವಿಜಯನಗರ ಸಾಮ್ರಾಜ್ಯ ಹಿಂದೂ ಸಂಸ್ಕೃತಿಯ ರಕ್ಷಣೆ. ತಾಳಿಕೋಟೆ ಯುದ್ಧ.
8)	1526-1761	ಮೊಗಲರ ಸಾಮ್ರಾಜ್ಯ 1526 ಮೊದಲ ಮತ್ತು 1556 2ನೇ ಪಾನಿಪತ್ ಯುದ್ಧ. ಉತ್ತರ ಭಾರತದಲ್ಲಿ ಮುಸಲ್ಮಾನ ಸಂಸ್ಕೃತಿಯ ಬಲವರ್ಧನೆ.
9)		ಛತ್ರಪತಿ ಶಿವಾಜಿ ಪೇಶ್ವೆ ಆಡಳಿತ. 1761 ಮೂರನೆ ಪಾನಿಪತ್ ಯುದ್ಧ. ಹಿಂದೂಗಳ ಪ್ರತಿರೋಧದ ಕೊನೆ. ಮೊಗಲ ಸಾಮ್ರಾಜ್ಯದ ಕೊನೆ.
10)		ರಾಜಕೀಯ ಇಚ್ಛಾಶಕ್ತಿಯ ಕೊರತೆ. ಯುರೋಪಿನ ವ್ಯಾಪಾರಿಗಳ ಆಗಮನ. ಸಾಮಂತರ ಒಡಕು - ಪ್ಲಾಸಿ ಕದನ. 1757 - ಬ್ರಿಟಿಷ್ ರಾಜ್ಯಶಕ್ತಿಯು ನೆಲೆಯೂರುವಿಕೆ. ಕ್ರಿ.ಶ. 1857 ಮೊದಲ ಸ್ವಾತಂತ್ರ್ಯ ಸಮರ - ಸ್ವಾತಂತ್ರ್ಯ ಹೋರಾಟಗಾರರ ಸೋಲು.
11)		ಮಹಾತ್ಮಾಗಾಂಧೀ - ಸತ್ಯ - ಅಹಿಂಸೆ - ರಾಜಕೀಯ - ಧರ್ಮಗಳ ಎರಕ - ಧರ್ಮಾಂಧತೆಯ ಆಪಾದನೆ ಇಲ್ಲ.
12)		ಧರ್ಮ ನಿರಪೇಕ್ಷತೆ - ಮತೀಯತೆ

26. ವಿಜಯನಗರ ಕಾಲದ ಗೀತೋಪದೇಶ ಶಿಲ್ಪ

ಸಿಂದಗಿ ರಾಜಶೇಖರ

ಕಥಾನಕ ಶಿಲ್ಪಗಳು ಕರ್ನಾಟಕದ ದೇವಾಲಯಗಳಲ್ಲಿ ಬಾದಾಮಿ ಚಾಲುಕ್ಯರ ಕಾಲದಿಂದಲೂ ಕಾಣಸಿಗುತ್ತವೆ. ಕ್ರಿ.ಶ. ಆರನೆಯ ಶತಮಾನದ ಮಧ್ಯ ಭಾಗಕ್ಕೆ ಸೇರಿದ ಇಂತಹ ಚಿಕಣಿ ಶಿಲ್ಪಗಳನ್ನು ಬಾದಾಮಿಯ ಗುಹಾಲಯಗಳಲ್ಲಿ ಹಾಗೂ ಕ್ರಿ.ಶ. ಎಂಟನೆಯ ಶತಮಾನದ ಮಧ್ಯ ಭಾಗಕ್ಕೆ ಸೇರಿದ ಪಟ್ಟದಕಲ್ಲಿನ ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇವಾಲಯಗಳಲ್ಲಿ ಕಂಡರಿಸಲಾಗಿದೆ. ಗುಹಾಲಯಗಳಲ್ಲಿ ಈ ಶಿಲ್ಪಗಳು ತೊಲೆಗಳ ಮೇಲೆ ಕೆತ್ತಲಾಗಿವೆ. ಪಟ್ಟದಕಲ್ಲಿನ ದೇವಾಲಯಗಳಲ್ಲಿ ಇವನ್ನು ಸಭಾಮಂಟಪದ ಕಂಬಗಳ ಮೇಲೆ ಕೊರೆಯಲಾಗಿದೆ. ಈ ರೀತಿ ಕಥಾನಕ ಶಿಲ್ಪಗಳನ್ನು ದೇವಾಲಯಗಳಲ್ಲಿ ಅಳವಡಿಸುವ ಪದ್ಧತಿ ಕರ್ನಾಟಕದಲ್ಲಿ ಬಾದಾಮಿ ಚಾಲುಕ್ಯರ ಕಾಲದಲ್ಲಿ ಆರಂಭಗೊಂಡು, ಮುಂದೆ ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯ, ಹೊಯ್ಸಳ ಮತ್ತು ವಿಜಯನಗರ ಅರಸರ ಆಳ್ವಿಕೆಯಲ್ಲಿ ಮುಂದುವರೆಯಿತು. ಹೊಯ್ಸಳರ ಕಾಲದ ಅನೇಕ ದೇವಾಲಯಗಳಲ್ಲಿ ಕಥಾನಕ ಶಿಲ್ಪಗಳನ್ನು ಅಧಿಷ್ಠಾನದ ಪಟ್ಟಿಕೆ ಭಾಗದಲ್ಲಿ ಕಡೆದಿರುವುದು ಸಾಮಾನ್ಯವಾಗಿದೆ. ಕೆಲವು ದೇವಾಲಯಗಳಲ್ಲಿ ಇಂಥಹ ಶಿಲ್ಪಗಳನ್ನು ಕಕ್ಷಾಸನದ ಹಿಂಭಾಗದಲ್ಲಿ ಅಲಂಕಾರಿಕವಾಗಿ ಕೆತ್ತಿರುವುದು ಕಂಡು ಬರುತ್ತದೆ. ಕಥಾನಕ ಶಿಲ್ಪಗಳನ್ನೊಳಗೊಂಡ ದೇವಾಲಯಗಳಿಗೆ ಹಳೆಬೀಡಿನ ಹೊಯ್ಸಳೇಶ್ವರ, ಅಮೃತಾಪುರದ ಅಮೃತೇಶ್ವರ, ಹೊಸಹೊಳಲಿನ ಲಕ್ಷ್ಮೀನಾರಾಯಣ ಮತ್ತು ಬಸರಾಳಿನ ಮಲ್ಲಿಕಾರ್ಜುನ ದೇವಾಲಯಗಳನ್ನು ಉದಾಹರಿಸಬಹುದು. ಕರ್ನಾಟಕದ ದೇವಾಲಯಗಳಲ್ಲಿ ಕಂಡುಬರುವ ಕಥಾನಕ ಶಿಲ್ಪಗಳು ರಾಮಾಯಣ, ಮಹಾಭಾರತ, ಅಮೃತಮಥನ, ಮಹಿಷಸಂಹಾರ, ಗಂಗಾವತರಣ ಮುಂತಾದ ಘಟನೆಗಳನ್ನು ಪ್ರತಿನಿಧಿಸುತ್ತವೆ. ಮಹಾಭಾರತದ ಕಥಾನಕ ಶಿಲ್ಪಗಳು ಸವಿಸ್ತಾರವಾಗಿ ಕಡೆಯಲ್ಪಟ್ಟದ್ದರೂ ಎಲ್ಲಿಯೂ ಶ್ರೀಕೃಷ್ಣನು ಅರ್ಜುನನಿಗೆ ಗೀತೆಯ ಉಪದೇಶವನ್ನು ಮಾಡುವ ದೃಶ್ಯವು ಕೆತ್ತದೆ ಇರುವುದು ಸ್ವಲ್ಪ ಆಶ್ಚರ್ಯದ ಸಂಗತಿಯೇ. ಏಕೆಂದರೆ ಗೀತೋಪದೇಶ ಮಹಾಭಾರತದ ಪ್ರಮುಖ ಘಟನೆಗಳಲ್ಲಿ ಒಂದು.



ಗೀತೋಪದೇಶ ದೃಶ್ಯ, ಸಂತಾನ ಮಲ್ಲೇಶ್ವರ ದೇವಾಲಯ, ಪುಷ್ಪಗಿರಿ

ಗೀತೆಯನ್ನು ಉಪದೇಶಿಸುತ್ತಿರುವ ದೃಶ್ಯವನ್ನೊಳಗೊಂಡ ಶಿಲ್ಪ ಅಪೂರ್ವವೆಂದೇ ಹೇಳಬಹುದು. ಇಂತಹ ಶಿಲ್ಪವೊಂದನ್ನು ಆಂಧ್ರಪ್ರದೇಶದ ಕಡಪ ಜಿಲ್ಲೆಯಲ್ಲಿರುವ ಪುಷ್ಪಗಿರಿಯಲ್ಲಿಯ ದೇವಾಲಯವೊಂದರಲ್ಲಿ ಕಾಣಬಹುದು. ಇಲ್ಲಿಯ ಸಂತಾನ ಮಲ್ಲೇಶ್ವರ ದೇವಾಲಯ ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯ. ಇದರ ಹೊರಗೋಡೆಗಳಲ್ಲಿ ಮಹಾಭಾರತಕ್ಕೆ ಸಂಬಂಧಿಸಿದ ಅನೇಕ ಘಟನೆಗಳನ್ನು ಕೆತ್ತಲಾಗಿದೆ. ಇವುಗಳಲ್ಲಿ ಒಂದು ಗೀತೋಪದೇಶಕ್ಕೆ ಸಂಬಂಧಿಸಿದ ದೃಶ್ಯವಾಗಿದೆ. ಈ ಶಿಲ್ಪದಲ್ಲಿ ಶ್ರೀಕೃಷ್ಣ ಮತ್ತು ಅರ್ಜುನರನ್ನು ತೋರಿಸಲಾಗಿದೆ. ಇಲ್ಲಿ ಚತುರ್ಭುಜನಾದ ಶ್ರೀಕೃಷ್ಣನು ಪೀಠವೊಂದರ ಮೇಲೆ ಅರ್ಧಪರ್ಯಂಕಾಸನದಲ್ಲಿ ಕುಳಿತಿದ್ದು, ಕೆಳಗಿನ ಎಡಗೈಯನ್ನು ಎಡಮೊಣಕಾಲಿನ ಮೇಲಿಟ್ಟಿದ್ದಾನೆ. ಕೆಳಗಿನ ಬಲಗೈ ವ್ಯಾಖ್ಯಾನ ಮುದ್ರೆಯಲ್ಲಿದೆ. ಮೇಲಿನ ಎಡಗೈಯಲ್ಲಿ ಶಂಖವನ್ನು ಹಿಡಿದಿದ್ದಾನೆ. ಮೇಲಿನ ಬಲಗೈಯಲ್ಲಿ ಚಕ್ರವನ್ನು ಹಿಡಿದಿದ್ದಾನೆ. ಕಿರೀಟ, ಕುಂಡಲ, ಹಾರ, ಕಂಕಣ ಮುಂತಾದ ಆಭರಣಗಳಿಂದ ಅಲಂಕೃತನಾಗಿದ್ದಾನೆ. ಶ್ರೀಕೃಷ್ಣನ ಮುಂದೆ ಸಮಭಂಗದಲ್ಲಿ ಅಂಜಲೀಹಸ್ತನಾಗಿ ಅರ್ಜುನನು ನಿಂತಿದ್ದಾನೆ. ಎಡಭುಜದ ಮೇಲೆ ಬಿಲ್ಲನ್ನು ಇಟ್ಟುಕೊಂಡಿದ್ದಾನೆ. ಬತ್ತಳಿಕೆಯಲ್ಲಿ ಬಾಣಗಳಿವೆ. ಇಲ್ಲಿ ಅರ್ಜುನನು ಶ್ರೀಕೃಷ್ಣನನ್ನು ತದೇಕಚಿತ್ತದಿಂದ ನೋಡುತ್ತಿದ್ದು, ಪರಮಾತ್ಮನು ಅರ್ಜುನನನ್ನುದ್ದೇಶಿಸಿ ಗೀತೆಯನ್ನು ಉಪದೇಶಿಸುತ್ತಿದ್ದಾನೆ.

ಇದೊಂದು ಅಪೂರ್ವವಾದ ಶಿಲ್ಪವೆಂದೇ ಹೇಳಬಹುದು. ಏಕೆಂದರೆ ಕ್ರಿ.ಶ. ಆರನೆಯ ಶತಮಾನದಿಂದ ಆರಂಭಗೊಂಡು ಮಹಾಭಾರತ ಯುದ್ಧಕ್ಕೆ ಸಂಬಂಧಿಸಿದ ದೃಶ್ಯಗಳನ್ನು ಸವಿಸ್ತಾರವಾಗಿ ಕರ್ನಾಟಕದ ಹಾಗೂ ದಕ್ಷಿಣ ಭಾರತದ ದೇವಾಲಯಗಳಲ್ಲಿ ಕೆತ್ತಿದ್ದರೂ, ವಿಜಯನಗರ ಕಾಲಕ್ಕೆ ಬರುವವರೆಗೂ ಎಲ್ಲಿಯೂ ಈ ಮಹಾಭಾರತ ಯುದ್ಧದ ದೃಶ್ಯಗಳಲ್ಲಿ ಗೀತೆಯನ್ನು ಉಪದೇಶಿಸುವ ದೃಶ್ಯ ಕಂಡು ಬಂದಿಲ್ಲ. ಹೀಗಾಗಿ ಸಂತಾನ ಮಲ್ಲೇಶ್ವರ ದೇವಾಲಯದ ಈ ಗೀತೋಪದೇಶದ ದೃಶ್ಯವಿರುವ ಶಿಲ್ಪ ಮಹತ್ವದ್ದೆಂದೇ ಹೇಳಬೇಕು.

COVER DESIGN : S. UMES
PRINTED AT GOOD TOUC